ಫೆಬ್ರವರಿ 2015 ಸಂಚಿಕೆ – 7 ಸಂಪುಟ – 30

# ಯೋಜನಾ

ಮುಖ್ಯ ಸಂಪಾದಕ
**ರಾಜೇಶ್ ಕೆ. ಝಾ**

ಹಿರಿಯ ಸಂಪಾದಕಿ
**ಬಿ.ಎಸ್. ಮೀನಾಕ್ಷಿ**

ಸಂಪಾದಕಿ
**ಬಿ.ಕೆ. ಕಿರಣ್ಮಯಿ**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : yojanakannada@yahoo.com

## ಈ ಸಂಚಿಕೆಯಲ್ಲಿ ..........

ಸಂಪಾದಕೀಯ .................................................................. 2

ಮನದ ಮಾತು .................................................................. 3

ವಿತ್ತೀಯ ಒಕ್ಕೂಟ ವ್ಯವಸ್ಥೆ ........................................... 10
**– ಡಾ. ಎಂ. ಎ. ಉಮ್ಮನ್**

ನೀತಿ ಆಯೋಗ ಮತ್ತು ಆರ್ಥಿಕ ಒಕ್ಕೂಟ ............................ 15
**– ನಿರ್ವಿಕಾರ್ ಸಿಂಗ್**

ಕಲಿತ ಮತ್ತು ಕಲಿಯದ ಪಾಠಗಳು ........................................ 18
**– ಬಲವೀರ್ ಅರೋರ**

ವೈವಿಧ್ಯತೆ : ಯಶಸ್ಸಿನ ಗುಟ್ಟು ........................................ 23
**– ಆಶ್ ನರೇನ್ ರಾಯ್**

ಚಲನಶೀಲ ಮಾರುಕಟ್ಟೆ – ಹಣಕಾಸು ಸಂಸ್ಥೆಗಳು .................. 28
**– ಅಲೋಕ್ ಶೀಲ್**

ಆಡಳಿತ ಸುಧಾರಣೆಗೆ ಡಿಜಿಟಲ್ ಇಂಡಿಯಾ ......................... 32
**– ಯೋಗೇಶ್ ಕೆ ದ್ವಿವೇದಿ, ನೃಪೇಂದ್ರ ರಾಣಾ, ಆಂಟೋನಿಸ್ ಸಿಮಿಂತಿರಸ್, ಬನಿತಾ ಲಾಲ್**

ಒಕ್ಕೂಟ ಮತ್ತು ರಾಜ್ಯಗಳ ಸಂಬಂಧ ... 37
**– ನ್ಯಾಯಮೂರ್ತಿ ಕೋ.ಚೆನ್ನಬಸಪ್ಪ**

ಭಾರತದಲ್ಲಿ ಸಂಘೀಯ ವ್ಯವಸ್ಥೆ ........................................... 39
**– ಪ್ರೊ. ಆರ್. ಎಲ್ ಎಂ. ಪಾಟೀಲ**

ಮಗಳನ್ನು ರಕ್ಷಿಸಿ ಮಗಳನ್ನು ಓದಿಸಿ ...................................... 43

ಕರ್ನಾಟಕದಲ್ಲಿ ಹೆಣ್ಣು ಮಕ್ಕಳ ಶಿಕ್ಷಣ .................................... 44
**– ಅಕ್ಕಿಮಂಗಲ ಸುರೇಶ**

ಕೃಷಿಕರನ್ನು ಸಬಲ ಮಾಡಲು ಬಂದಿದೆ 'ನಮ್ಮ ರೈತ' ............ 48
**– ಹರತೀಸುತ**

ಬಯಲು ಬಹಿರ್ದೆಸೆಗೆ 'ಬೈ' ................................................ 50
**– ತುಕಾರಾಂರಾವ್ ಬಿ.ವಿ.**

ನಿಮಗಿದು ತಿಳಿದಿದೆಯೇ? .................................................... 51

ವಾರ್ತಾ ವಿಶೇಷ ................................................................ 52

ಮುಖಪುಟ ವಿನ್ಯಾಸ : ಗಜಾನನ ಪಿ. ಧೋಪೆ

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 100.00 |
| ಎರಡು ವರ್ಷಗಳಿಗೆ | 180.00 |
| ಮೂರು ವರ್ಷಗಳಿಗೆ | 250.00 |

**ಚಂದಾ ಹಣವನ್ನು ಮನಿಯಾರ್ಡರ್ ಮೂಲಕವೇ ನಮ್ಮ ವಿಳಾಸಕ್ಕೆ ಕಳಿಸಿರಿ.**

**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ವಿಳಾಸಕ್ಕೆ ಕಳುಹಿಸಬೇಕು.**

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ. ಚಿತ್ರಗಳು ಸಾಂದರ್ಭಿಕ.**

ಮುಖ್ಯ ಸಂಪಾದಕರ ಲೇಖನಿಯಿಂದ

# ಸಹಬಾಳ್ವೆಯ ಸೊಗಸು




ಸರ್ಕಾರದ ವಿವಿಧ ಹಂತಗಳ ನಡುವೆ ಸಂಘಟನೆಯ ತತ್ವವಾಗಿ ಒಕ್ಕೂಟ ವ್ಯವಸ್ಥೆಯ ಪರಿಕಲ್ಪನೆ ಅನಾದಿಕಾಲದಿಂದಲೂ ಅಂತರ್ಗತವಾಗಿದೆ. ಗ್ರೀಕ್ ನಗರ ಆಡಳಿತದಲ್ಲಿ ಈ ವ್ಯವಸ್ಥೆ ಇತ್ತು. ಕ್ರಿಸ್ತಪೂರ್ವ ಆರನೆ ಶತಮಾನದಲ್ಲಿ ಮೆರೆದ ಉತ್ತರಭಾರತದ ಲಿಚ್ಛವಿ ಸಾಮ್ರಾಜ್ಯ ವೈಭವೋಪೇತ ಒಕ್ಕೂಟ ಗಣತಂತ್ರ ವ್ಯವಸ್ಥೆಯ ಸಶಕ್ತ ಉದಾಹರಣೆಯಾಗಿದೆ. ಆಧುನಿಕ ಜಗತ್ತಿನಲ್ಲಿ ಅಮೆರಿಕ, ಬ್ರೆಜಿಲ್, ಮೆಕ್ಸಿಕೊ ಭಾರತಗಳಂತಹ ದೊಡ್ಡ ದೇಶಗಳಲ್ಲಿ ಸಂಯುಕ್ತ / ಒಕ್ಕೂಟ ವ್ಯವಸ್ಥೆ ಅತಿ ಜನಪ್ರಿಯವಾಗಿ ಮುಂದುವರೆದಿದೆ. ಇದಕ್ಕೆ ಆರ್ಥಿಕ ವರ್ತುಲದಲ್ಲಿ ರಾಷ್ಟ್ರ-ರಾಷ್ಟ್ರಗಳ ನಡುವೆ ಗರಿಷ್ಠ ಮಟ್ಟದ ಲಾಭ ಪಡೆಯಲು ರಚಿಸಿಕೊಳ್ಳಲಾದ ಐರೋಪ್ಯ ಸಮುದಾಯ ಇತ್ತೀಚಿನ ಅತ್ಯುತ್ತಮ ಜ್ವಲಂತ ಮಾದರಿಯಾಗಿದೆ. ಇತ್ತೀಚೆಗೆ ಅಂದರೆ, 1990ರ ನಂತರ, ಯುದ್ಧ ಅಥವಾ ಇತರೆ ಕಾರಣಗಳಿಂದಾಗಿ ದೊಡ್ಡ ದೊಡ್ಡ ದೇಶಗಳಿಂದ ಸುಮಾರು ಮೂರು ಡಜನ್‌ಗಳಷ್ಟು ದೇಶಗಳು ಹುಟ್ಟಿಕೊಂಡಿವೆಯೆಂದರೆ, ಅಚ್ಚರಿಯೆನಿಸಬಹುದು. ಅನೇಕ ಪ್ರಕರಣಗಳಲ್ಲಿ ಒಕ್ಕೂಟ ವ್ಯವಸ್ಥೆಯ ಅಸಮರ್ಪಕ ಕಾರ್ಯನಿರ್ವಹಣೆ ಪರಿಣಾಮವಾಗಿ ಜನಾಂಗೀಯ ಮತ್ತು ರಾಷ್ಟ್ರಕ್ಕಾಗಿ ಸಂಘರ್ಷಗಳು ತಲೆದೋರಿ, ಹೊಸ ದೇಶಗಳ ಉಗಮಗಳಲ್ಲಿ ಪರ್ಯಾವಸಾನಗೊಂಡಿವೆ.

ವಿಶ್ವದಾದ್ಯಂತ ಒಕ್ಕೂಟ ವ್ಯವಸ್ಥೆ ಕಂಡು ಬಂದರೂ ಅದು ಒಂದೇ ಪ್ರಕಾರಕ್ಕೆ ಸೀಮಿತಗೊಂಡಿಲ್ಲ. ಇದು ತಜ್ಞರೇ ಎತ್ತಿ ತೋರಿಸಿದ ವಿಚಾರ. ಮೊಂಟೆಸ್ಕೆಯೂ ಸಾರ್ವಭೌಮ ನಗರಗಳಿಂದಾದ ಗಣತಂತ್ರ ಒಕ್ಕೂಟದ ಬಗ್ಗೆ ಹೇಳಿದರೆ, ಸಂಕುಚಿತ ಸ್ಥಳೀಯ ಹಿತಾಸಕ್ತಿಯನ್ನು ತೊಡೆದುಹಾಕುವ, ಬಲಾಢ್ಯ ಕೇಂದ್ರ ಸರ್ಕಾರವಿರುವ ಸಂಯುಕ್ತ ಗಣತಂತ್ರದ ಬಗ್ಗೆ ಜೇಮ್ಸ್ ಮ್ಯಾಡಿಸನ್‌ರಂತಹ ಒಕ್ಕೂಟವಾದಿಗಳು ಗಮನ ಹರಿಸಿದ್ದಾರೆ. ಸಂವಿಧಾನಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು, ಭಾರತದಂತಹ ಬಹು ಸಾಂಸ್ಕೃತಿಕ, ಬಹು ಜನಾಂಗೀಯ, ಬಹು ಭಾಷೆಗಳ ಅನೇಕತೆಯ ದೇಶಕ್ಕೆ ಒಕ್ಕೂಟ ವ್ಯವಸ್ಥೆ ಮುಖ್ಯವೆಂದು ನಂಬಿದ್ದರು. ಪಂಡಿತ್ ಜವಾಹರಲಾಲ್ ನೆಹರು, ಸರ್ದಾರ್ ಪಟೇಲ್ ಹಾಗೂ ಇನ್ನಿತರ ಧುರೀಣರು ಇದನ್ನೇ ಬೆಂಬಲಿಸಿದರು. ಪಂಚಾಯತ್‌ನ ಅತಿ ತಳಹಂತದ ವ್ಯವಸ್ಥೆಗೂ ಅಧಿಕಾರವಿರುವಂತೆ, ವಿಕೇಂದ್ರೀಕೃತ ಒಕ್ಕೂಟದ ವಿಚಾರ ಹೊಂದಿದ ಗಾಂಧೀಜಿಯವರ ಪರಿಕಲ್ಪನೆಗೆ ಇದು ವಿಭಿನ್ನವಾಗಿತ್ತು.

ಒಕ್ಕೂಟ ಪರಿಕಲ್ಪನೆ ಮೇಲೆ ಜಾಗತೀಕರಣವೂ ಅಗಾಧ ಪ್ರಭಾವ ಬೀರಿದೆ. ಒಕ್ಕೂಟದಲ್ಲಿ ಸಮಗ್ರತೆಯ ಬಿಗಿ ಹೆಚ್ಚಾದಂತೆಲ್ಲ ರಾಜ್ಯಗಳ ಮೇಲೆ ಬಾಹ್ಯ ಆರ್ಥಿಕ, ರಾಜಕೀಯ ಪ್ರಭಾವ ಹಾಗೂ ಈ ನಿಟ್ಟಿನಲ್ಲಿ ತೆಗೆದುಕೊಳ್ಳಬಹುದಾದ ಸ್ವಾತಂತ್ರ್ಯ ಮಿತಗೊಳ್ಳುತ್ತಾ ಬರುತ್ತದೆ. ಒಂದು ರೀತಿಯಲ್ಲಿ ಇದು ಸಾರ್ವಜನಿಕ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತದೆ. ಈ ಮಧ್ಯೆ ಸ್ಪರ್ಧಾತ್ಮಕ ಒಕ್ಕೂಟ ವ್ಯವಸ್ಥೆಯಲ್ಲಿ ಪ್ರಾದೇಶಿಕ ರಾಜ್ಯ ಸರ್ಕಾರಗಳು ತಮ್ಮ ಪ್ರಗತಿಗಾಗಿ ಹೊರದೇಶಗಳಿಂದ ಆಧುನಿಕ ತಂತ್ರಜ್ಞಾನ ಮಾತ್ರವಲ್ಲ ಬಂಡವಾಳ ಹೂಡಿಕೆ ಆಕರ್ಷಿಸಲು, ಕೇಂದ್ರ ಸರ್ಕಾರದೊಂದಿಗೆ ಸ್ಪರ್ಧಿಸುತ್ತಿರುವ ವಿದ್ಯಮಾನಗಳು ಗೋಚರವಾಗಿವೆ. ಈ ನಿಟ್ಟಿನಲ್ಲಿ ಭಾರತ ಕ್ರಮೇಣವಾಗಿ ಸಹಕಾರಿ ಒಕ್ಕೂಟದತ್ತ ಮುನ್ನಡೆಯುತ್ತಿದ್ದು ಆರ್ಥಿಕ ವಿಚಾರಗಳಲ್ಲಿ ರಾಜ್ಯಸರ್ಕಾರಗಳ ಮೇಲಿನ ಹಿಡಿತ ಕಡಿಮೆಗೊಳಿಸಿ, ನೀತಿ ನಿರ್ವಹಣೆಯತ್ತ ಕೇಂದ್ರ ಗಮನ ಹರಿಸಿದೆ.

ರಾಜ್ಯಶಾಸ್ತ್ರ ಪರಿಣತ ಟೋಕ್‌ವಿಲ್ಲೆ ಹೇಳಿದಂತೆ ಸಹಕಾರಿ ಒಕ್ಕೂಟ ಅನುಸರಣೆಯಿಂದ ರಾಜ್ಯಸರ್ಕಾರಗಳು ಕೇಂದ್ರಕ್ಕೆ ಹೋಲಿಸಿದ್ದಲ್ಲಿ ಗಾತ್ರದಲ್ಲಿ ಚಿಕ್ಕದಾಗಿರುವ ಮತ್ತು ಪ್ರಾದೇಶಿಕ ಹಿತಾಸಕ್ತಿ ಅವಲಂಬಿಸಿ ಹೆಚ್ಚಿನ – ವಿಭಿನ್ನ ಲಾಭ ಪಡೆದುಕೊಳ್ಳಬಹುದಾಗಿದೆ.

ಪ್ರಜಾತಂತ್ರದ ಹರವು, ಆಳ ಭದ್ರವಾಗಿದ್ದಲ್ಲಿ ಮಾತ್ರ ಒಕ್ಕೂಟ / ಗಣತಂತ್ರ ವ್ಯವಸ್ಥೆ ಫಲಪ್ರದವಾಗಬಲ್ಲದೆಂಬುದು ಇಲ್ಲಿ ಒತ್ತಿ ಹೇಳಬೇಕಾದ ವಿಚಾರ. ಭಾರತದಲ್ಲಿ ಭಾಷೆ, ಸಂಸ್ಕೃತಿ, ಜನ, ಧರ್ಮ ವೈವಿಧ್ಯಕ್ಕೆ ಸಲ್ಲುವ ಪರಸ್ಪರ ಗೌರವಾದರಗಳೇ ಸದೃಢ ಒಕ್ಕೂಟ / ಸಂಯುಕ್ತ ವ್ಯವಸ್ಥೆಯ ಮೂಲಾಧಾರಗಳಾಗಿವೆ. ಅದೇ ಶಕ್ತಿ ಭಾರತವನ್ನು ಮುನ್ನಡೆಸುತ್ತದೆ.

ಇಲ್ಲಿ ಇತಿಹಾಸದ ಒಂದು ಘಟನೆ ಪ್ರಸ್ತುತವೆನಿಸುತ್ತದೆ. ಐದನೆ ಕ್ರಿಸ್ತಪೂರ್ವ ಸಮಯ; ಲಿಚ್ಛವಿ ಮತ್ತು ಸಕ್ಯ ಗಣತಂತ್ರ ಒಕ್ಕೂಟದಲ್ಲಿ 'ಸಂಥಗರ' ಎನ್ನುವ ಸಾಂಸ್ಥಿಕ ವ್ಯವಸ್ಥೆ ಅಸ್ತಿತ್ವದಲ್ಲಿತ್ತು. ಇಲ್ಲಿ ವಿವಿಧ ರಾಜ್ಯಗಳ ನಡುವಿನ ವಿವಾದಗಳನ್ನು ಚರ್ಚಿಸಲಾಗುತ್ತಿತ್ತು. (ಬುದ್ಧ) ಸಿದ್ಧಾರ್ಥ ತನ್ನ 20ನೇ ವಯಸ್ಸಿನಲ್ಲಿ ಸಕ್ಯದಲ್ಲಿ 'ಸಂಥಗರ' ವ್ಯವಸ್ಥೆ ಜಾರಿಗೊಳಿಸಿದ. 28ನೇ ವಯಸ್ಸಿನಲ್ಲಿದ್ದಾಗ, ರೋಹಿಣಿ ನದಿ ವಿಚಾರದಲ್ಲಿ ಸಕ್ಯ – ಕೊಲಿಯಾ ನಡುವೆ ವಿವಾದ ತಲೆದೋರಿತು. ಸಕ್ಯದ ಸೇನಾಧಿಪತಿ, ಕೊಲಿಯಾ ಪರವಾಗಿದ್ದು, ಇದಕ್ಕೆ ಸಿದ್ಧಾರ್ಥನ ವಿರೋಧವಿತ್ತು. ಈ ಪ್ರಸ್ತಾಪವನ್ನು ಮತಕ್ಕೆ ಹಾಕಿದಾಗ ಸಿದ್ಧಾರ್ಥನ ನಿಲುವು ಸೋಲುಕಂಡಿತು; ಸಿದ್ಧಾರ್ಥ ನಿರ್ಗಮಿಸಬೇಕಾಯಿತು ಎನ್ನುವುದು ಬೇರೆ ವಿಚಾರ. ಆದರೆ ಶಕ್ತಿ ಪ್ರಯೋಗವಿಲ್ಲದೆ ವಿವಾದ ಇತ್ಯರ್ಥ ಪಡಿಸಿಕೊಳ್ಳಬೇಕೆಂದು ಕಂಡುಕೊಳ್ಳಲಾದ ಮಾರ್ಗೋಪಾಯ, ಮುಂದೆಲ್ಲಾ ಗಟ್ಟಿಯಾಗುತ್ತಾ ಬಂದು ಗಣತಂತ್ರ ಒಕ್ಕೂಟ ವ್ಯವಸ್ಥೆಗೆ ಮಾದರಿಯಾಯಿತು.

ಪರಸ್ಪರರ ನಿಲುವನ್ನು ಗೌರವಿಸಿ, ಸಹಬಾಳ್ವೆಯನ್ನು ಸೊಗಯಿಸುವ ಮೂಲಕ ಏಳಿಗೆ ಕಾಣುವ ನಮ್ಮ ಧರ್ಮ ನಿರಂತರವಾಗಲಿ. ❑

# ಮನದ ಮಾತು



ಪ್ರಧಾನ ಮಂತ್ರಿ
ಶ್ರೀ ನರೇಂದ್ರ ಮೋದಿ
ಹಾಗೂ
ಅಮೆರಿಕ ಅಧ್ಯಕ್ಷ
ಶ್ರೀ ಬರಾಕ್ ಒಬಾಮಾ
ಜನವರಿ 27 ರಂದು
ರೇಡಿಯೊ ಮೂಲಕ ಮಾಡಿದ
ಮನ್ ಕೀ ಬಾತ್
– ಮನದ ಮಾತು –
ಕಾರ್ಯಕ್ರಮದ
ಕನ್ನಡ ರೂಪಾಂತರ.

(ಗೌರವಾನ್ವಿತ ಶ್ರೀ ನರೇಂದ್ರ ಮೋದಿ)

ಮನ್ ಕೀ ಬಾತ್ – ಮನದ ಮಾತು – ವಿಶೇಷ ಕಾರ್ಯಕ್ರಮದಲ್ಲಿ ಇಂದು ಅಮೆರಿಕ ಅಧ್ಯಕ್ಷ ಶ್ರೀಮಾನ್ ಬರಾಕ್ ಒಬಾಮಾಜೀ ನಮ್ಮೊಡನಿದ್ದಾರೆ. ಕಳೆದ ಕೆಲವು ತಿಂಗಳಿನಿಂದ ನಿಮ್ಮೊಡನೆ ನಾನು ಮನದ ಮಾತುಗಳನ್ನಾಡುತ್ತಾ ಬಂದಿರುವೆ. ಆದರೆ ಇಂದು ದೇಶದ ಬೇರೆ ಬೇರೆ ಭಾಗಗಳಿಂದ ಬಹಳಷ್ಟು ಜನರು ಪ್ರಶ್ನೆಗಳನ್ನು ಕೇಳಿದ್ದಾರೆ.

ಅವರ ಬಹಳಷ್ಟು ಪ್ರಶ್ನೆಗಳು ರಾಜಕಾರಣಕ್ಕೆ, ವಿದೇಶಾಂಗ ನೀತಿಗೆ ಮತ್ತು ಆರ್ಥಿಕ ನೀತಿಗೆ ಸಂಬಂಧಿಸಿವೆ, ಕೆಲವು ಪ್ರಶ್ನೆಗಳಂತೂ ಮನಸ್ಸಿಗೆ ನಾಟುವಂತಹುಗಳಾಗಿವೆ. ನಾವು ಆ ಪ್ರಶ್ನೆಗಳನ್ನು ಪ್ರಸ್ತಾಪಿಸುವುದರ ಮೂಲಕ ದೇಶದ ಮೂಲೆ ಮೂಲೆಗಳಲ್ಲಿರುವ ಸಾಮಾನ್ಯ ಮನುಷ್ಯರನ್ನು ತಲುಪಲು ಸಾಧ್ಯವಾಗುತ್ತದೆ. ಪತ್ರಕರ್ತರು ಕೇಳುವ ಪ್ರಶ್ನೆಗಳು ಅಥವಾ ಸಭೆಗಳಲ್ಲಿ ಚರ್ಚೆಗೆ ಬರುವ ಪ್ರಶ್ನೆಗಳ ಬದಲಾಗಿ ಮನಸ್ಸಿನಿಂದ ಮೂಡಿಬರುವ ಮಾತುಗಳನ್ನು ನಾವೇನಾದರೂ ಪುನರುಚ್ಚರಿಸುವುದಾದರೆ, ಅವುಗಳನ್ನು ನಾವು ಮೆಲುಕು ಹಾಕುವೆವು. ಏಕೆಂದರೆ ಅದರಿಂದ ಹೊಸ ಚೈತನ್ಯ ದೊರಕುತ್ತದೆ ಮತ್ತು ನನ್ನ ದೃಷ್ಟಿಯಲ್ಲಿ ಈ ಪ್ರಶ್ನೆಗಳು ಹೆಚ್ಚು ಮುಖ್ಯ ಎಂದು ಅನ್ನಿಸುತ್ತದೆ. ಬರಾಕ್ ಎನ್ನುವುದರ ಅರ್ಥವೇನೆಂದು ಕೆಲವರ ಮನಸ್ಸಿನಲ್ಲಿ ಪ್ರಶ್ನೆ ಏಳಬಹುದು. ಬರಾಕ್ ಹೆಸರಿನ ಅರ್ಥವೇನೆಂದು ನಾನು ಸ್ವಲ್ಪ ಹುಡುಕಾಡುತ್ತಿದ್ದೆ. ಆಫ್ರಿಕಾ ದೇಶಗಳಲ್ಲಿ ಸ್ವಹಿಲಿ ಎಂಬ ಭಾಷೆ ಪ್ರಚಲಿತದಲ್ಲಿದೆ. ಸ್ವಹಿಲಿ ಭಾಷೆಯಲ್ಲಿ ಬರಾಕ್‌ನ ಅರ್ಥ, ಆಶೀರ್ವಾದ ಪ್ರಾಪ್ತಿಯಾದವ ಎಂಬುದಾಗಿದೆ. One who is blessed. ಬರಾಕ್ ಎಂಬ ಹೆಸರೇ ಅವರಿಗೆ ಅವರ ಕುಟುಂಬದಿಂದ ಬಂದ ಒಂದು ದೊಡ್ಡ ಉಡುಗೊರೆ ಎಂದು ನನಗನ್ನಿಸುತ್ತದೆ.

ಆಫ್ರಿಕದ ಮಹಾನ್ ಉಬಂತು ಅವರ ಪ್ರಾಚೀನ ವಿಚಾರವನ್ನು ಅನುಸರಿಸುತ್ತಾ ಬರಲಾಗುತ್ತಿದೆ. ಮಾನವತೆಯನ್ನು ಒಗ್ಗೂಡಿಸುವುದೇ ಈ ವಿಚಾರವಾಗಿದೆ. ಅವರು ಹೇಳುತ್ತಾರೆ I am because we are ಅಂದರೆ ನಾನಿರುವೆ ಏಕೆಂದರೆ ನಾವಿದ್ದೇವೆ, ನನಗನ್ನಿಸುತ್ತದೆ ಕಾಲದ ಅಂತರವಿದೆ, ಸೀಮೆಗಳ ಅಂತರವಿದೆ, ಇವುಗಳ ಹೊರತಾಗಿಯೂ ಇದೇ ಭಾವನೆಯನ್ನು ಭಾರತದಲ್ಲಿ ನಾವು ವಸುಧೈವ ಕುಟುಂಬಕಂ ಎಂದು ಹೇಳುತ್ತೇವೆ. ಅದೇ ಭಾವನೆ ದೂರ ದೂರದ ಆಫ್ರಿಕದ ಕಾಡುಗಳಲ್ಲಿ ಮೊಳಕೆಯೊಡೆಯುತ್ತದೆ. ಹಾಗಾದರೆ ನಮ್ಮ ಮನುಷ್ಯ ಜಾತಿಯ ಬಳಿ ದೊಡ್ಡ ಪರಂಪರೆ ಇದೆ. ಅದು ನಮ್ಮನ್ನು ಜೋಡಿಸುತ್ತದೆ. ನಾವು ಮಹಾತ್ಮ ಗಾಂಧಿಯವರ ಬಗ್ಗೆ ಚರ್ಚಿಸುವಾಗ ನಮಗೆ ಮಹಾತ್ಮಗಾಂಧಿ Disobedience ಕಲಿತ ಹೆನ್ರಿ ಥೊರೊ ಮಾತು ನೆನಪಿಗೆ ಬರುತ್ತದೆ ಹಾಗೂ ನಾವು ಮಾರ್ಟಿನ್ ಲೂಥರ್ ಕಿಂಗ್ ಅವರನ್ನು ಕುರಿತು ಮಾತನಾಡುವಾಗ ಅಥವಾ ಒಬಾಮಾ ಅವರನ್ನು ಕುರಿತು ಮಾತನಾಡುವಾಗ ಅವರ ಬಾಯಿಗಳಿಂದಲೂ ಮಹಾತ್ಮಗಾಂಧಿಯ ಕುರಿತು ಉಲ್ಲೇಖ ಆಗಿರುವುದನ್ನು ನಾವು ಕಾಣಬಹುದು. ಈ ಮಾತುಗಳೇ ಜಗತ್ತನ್ನು ಜೋಡಿಸುವಂತಹವು. ಇಂದು ಬರಾಕ್ ಒಬಾಮಾ ನಮ್ಮ ಸಂಗಡ ಇದ್ದಾರೆ. ಮೊದಲು ಅವರು ಸ್ವಲ್ಪ ಮಾತನಾಡಬೇಕೆಂದು ಅವರಲ್ಲಿ ಕೋರಿಕೊಳ್ಳುವೆ ನಂತರ ಪ್ರಶ್ನೆಗಳು ಏನು ಬಂದಿವೆ, ಅವುಗಳಲ್ಲಿ ನನಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರವನ್ನು

ಕೃಪೆ : ಪ್ರಸಾರ ಭಾರತಿ.

ನಾನು ನೀಡುವೆ ಹಾಗೂ ಬರಾಕ್ ಅವರಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಬರಾಕ್ ಅವರು ಉತ್ತರ ನೀಡುವರು. ಹಾಗಾದರೆ ಈಗ ಮಾತನಾಡುವಂತೆ ಒಬಾಮಾ ಅವರನ್ನು ಕೋರುವೆ.

(ಗೌರವಾನ್ವಿತ ಶ್ರೀ ಬರಾಕ್ ಒಬಾಮಾ)

ನಮಸ್ತೆ! ಪ್ರಧಾನಮಂತ್ರಿ ನರೇಂದ್ರ ಮೋದಿ, ನಿಮ್ಮೊಲವಿನ ಮಾತುಗಳಿಗೆ ನಿಮಗೆ ವಂದನೆ ಹಾಗೂ ನೀವು ನನಗೆ ಹಾಗೂ ನನ್ನ ಪತ್ನಿ ಮಿಶೆಲ್‌ಗೆ ನಮ್ಮ ಈ ಭೇಟಿ ಸಂದರ್ಭದಲ್ಲಿ ತೋರಿದ ಅಭೂತ ಪೂರ್ವ ಆತಿಥ್ಯಕ್ಕೆ ಧನ್ಯವಾದಗಳು. ಗಣರಾಜ್ಯೋತ್ಸವ ದಿನದಂದು ನಿಮ್ಮೊಡನಿರುವ ಅಮೆರಿಕದ ಮೊದಲ ಅಧ್ಯಕ್ಷ ನಾನು ಎಂಬ ಗೌರವ ತೋರಿದ್ದೀರಿ ಇದಕ್ಕಾಗಿ ಭಾರತದ ಜನತೆಗೆ ಧನ್ಯವಾದ ಹೇಳ ಬಯಸುವೆ ಹಾಗೂ ಅಮೆರಿಕದ ಅಧ್ಯಕ್ಷ ಮತ್ತು ಭಾರತದ ಪ್ರಧಾನಮಂತ್ರಿ ಮಾಡುತ್ತಿರುವ ಮೊಟ್ಟ ಮೊದಲ ರೇಡಿಯೊ ಭಾಷಣ ಇದು ಎಂದು ನನಗೆ ತಿಳಿಸಲಾಗಿದ್ದು, ಅಲ್ಪಾವಧಿಯಲ್ಲೇ ನಾವು ಇತಿಹಾಸವನ್ನು ನಿರ್ಮಿಸುತ್ತಿದ್ದೇವೆ ಈಗ ಈ ಮಹಾನ್ ರಾಷ್ಟ್ರದ ಉದ್ದಗಲಕ್ಕೂ ಇರುವ ಭಾರತದ ಜನತೆಯಾದ ನಿಮ್ಮೊಂದಿಗೆ ನೇರವಾಗಿ ಮಾತನಾಡುವುದೇ ಒಂದು ಸೊಗಸು.

ಇದೀಗ ತಾನೆ ನಾವು ಮಾತುಕತೆ ಮುಗಿಸಿ, ಹೊರ ಬರುತ್ತಿದ್ದು, ಅಲ್ಲಿ ಭಾರತ–ಅಮೆರಿಕದ ಸಹಜ ಪಾಲುದಾರರು ನಾವು ಎಂದು ಪುನರುಚ್ಚರಿಸಿದ್ದೇವೆ; ಏಕೆಂದರೆ ಅಷ್ಟು ಸಾಮ್ಯ ನಮ್ಮ ನಡುವೆ ಇದೆ. ನಾವು ಎರಡು ಮಹಾನ್ ಪ್ರಜಾಪ್ರಭುತ್ವಗಳು, ಎರಡು ಅನ್ವೇಷಣಾತ್ಮಕ ಅರ್ಥ ವ್ಯವಸ್ಥೆಗಳು, ವ್ಯಕ್ತಿಗಳನ್ನು ಸಬಲಗೊಳಿಸಲು ಸಂಕಲ್ಪ ತೊಟ್ಟ ಎರಡು ವೈವಿಧ್ಯಮಯ ಸಮಾಜಗಳು. ಭಾರತದಲ್ಲಿ ಈಗಲೂ ಕುಟುಂಬ ಹೊಂದಿರುವ, ಇಲ್ಲಿನ ಸಂಪ್ರದಾಯ



ರೂಢಿಸಿಕೊಂಡಿರುವ ಮಿಲಿಯಗಟ್ಟಲೆ ಸಂಖ್ಯೆಯ ಹೆಮ್ಮೆಯ ಭಾರತೀಯ ಅಮೆರಿಕನ್‌ರೊಂದಿಗೆ ನಾವಿಬ್ಬರೂ ನಂಟು ಹೊಂದಿದ್ದೇವೆ. ನಮ್ಮ ಈ ಎರಡೂ ದೇಶಗಳ ನಡುವಿನ ಸಂಬಂಧ ಬಲಪಡಿಸಲು ಪ್ರಧಾನಿಯಾದ ತಾವು ತೋರುತ್ತಿರುವ ಉತ್ಕಟ ವೈಯಕ್ತಿಕ ಬದ್ಧತೆ ಬಗ್ಗೆ ನನಗೆ ಅದೆಷ್ಟು ಮೆಚ್ಚುಗೆ ಎಂಬುದನ್ನೂ ಹೇಳ ಬಯಸುವೆ. ಕಡು ಬಡತನ ತಗ್ಗಿಸಲು ಹಾಗೂ ಅವರನ್ನು ಮೇಲೆತ್ತಲು, ಮಹಿಳೆಯರ ಸಬಲೀಕರಣಕ್ಕೆ, ವಿದ್ಯುತ್, ಸ್ವಚ್ಛ ಇಂಧನ ಸೌಕರ್ಯ ಒದಗಿಸಲು ಮತ್ತು ಮೂಲಸೌಕರ್ಯ ಮತ್ತು ಶಿಕ್ಷಣ ವ್ಯವಸ್ಥೆಯಲ್ಲಿ ಹೂಡಿಕೆ ತರುವುದರ ಮೂಲಕ ಪ್ರಧಾನಮಂತ್ರಿ ಮೋದಿಯವರು ಈ ದೇಶದಲ್ಲಿ ನಡೆಸುತ್ತಿರುವ ಪ್ರಯತ್ನಗಳ ಬಗ್ಗೆ ಅವರ ಉತ್ಸಾಹ ಕುರಿತು ಅಮೆರಿಕದಲ್ಲಿ ಜನ ಅತಿ ಉತ್ತೇಜಿತರಾಗಿದ್ದಾರೆ ಹಾಗೂ ಈ ಎಲ್ಲ ವಲಯಗಳಲ್ಲಿ ನಾವು ಪಾಲುದಾರರಾಗ ಬಯಸುತ್ತೇವೆ. ಏಕೆಂದರೆ ಅಮೆರಿಕದೊಳಗೆ ಯುವ ಜನರು ಸಾಧ್ಯವಿರುವ ಉತ್ತಮ ಶಿಕ್ಷಣ ಪಡೆಯಲು, ಸಾಮಾನ್ಯ ಜನರು ಅವರ ಶ್ರಮಕ್ಕೆ ತಕ್ಕಂತೆ ಪರಿಹಾರ ದೊರಕಿ, ವೇತನಗಳು ಲಭಿಸುವಂತೆ ಅವರೆಲ್ಲರಿಗೂ ಉದ್ಯೋಗ ಖಾತರಿ ಮತ್ತು ಆರೋಗ್ಯ ರಕ್ಷಣೆಗೆ ನಾನು ಅನೇಕ ಪ್ರಯತ್ನಗಳನ್ನು ನಡೆಸುತ್ತಿರುವೆ. ಇದೇ ತೆರನಾದ ವಿಷಯಗಳ ಬಗ್ಗೆ ಪ್ರಧಾನಮಂತ್ರಿ ಮೋದಿ ಅವರೂ ಬಹಳ ಆಳವಾದ ಕಾಳಜಿ ಹೊಂದಿದ್ದಾರೆ. ನನಗನ್ನಿಸುತ್ತದೆ, ಈ ವಿಷಯಗಳಲ್ಲಿ ಒಂದು ಏಕಸೂತ್ರವಿದೆ ಎಂದು. ಗಾಂಧೀಜಿಯವರು ನಮಗೆ ನೆನಪು ಮಾಡಿಕೊಟ್ಟ ವಿಷಯಗಳಿಗೆ ನಮ್ಮ ಬದ್ಧತೆಯನ್ನು ಪುನರುಚ್ಚರಿಸಲು ಇದೊಂದು ಅವಕಾಶ ಒದಗಿಸುತ್ತದೆ. ಅದು ನಮ್ಮ ಬದುಕಿನ ಪ್ರಮುಖ ಗುರಿಯಾಗಿರಬೇಕು; ಭಗವಂತ ಎಲ್ಲರಲ್ಲೂ ಇರುವುದರಿಂದ ಮಾನವತೆಗೆ ಸೇವೆ ಸಲ್ಲಿಸುವುದರ ಮೂಲಕ ನಾವು ಭಗವಂತನನ್ನು ಕಾಣುವ ಪ್ರಯತ್ನ ಮಾಡಬೇಕು; ಆದುದರಿಂದ ಈ ಹಂಚಿಕೊಂಡ ಮೌಲ್ಯಗಳು ಹಾಗೂ ಈ ಬದ್ಧತೆಗಳಿಂದಾಗಿಯೇ ಈ ಬಾಂಧವ್ಯಕ್ಕೆ ನಾನು ಬಹುವಾಗಿ ಬದ್ಧನಾಗಿರುವುದು. ಈ ಮೌಲ್ಯಗಳ ಸುತ್ತ ವಿಶ್ವ ರಂಗಸ್ಥಳದಲ್ಲಿ ಭಾರತ, ಅಮೆರಿಕ ಕೈ ಜೋಡಿಸಿದರೆ ಕೇವಲ ನಮ್ಮ ಜನರು ಮಾತ್ರವಲ್ಲ, ಇಡೀ ವಿಶ್ವ ಹೆಚ್ಚು ಸಮೃದ್ಧ ಹಾಗೂ ಹೆಚ್ಚು ಶಾಂತಿಯುತ ಮತ್ತು ಭವಿಷ್ಯಕ್ಕೆ ಹೆಚ್ಚು ಸುರಕ್ಷಿತ ಆಗಿರುತ್ತದೆ ಎಂದು ನಾನು ನಂಬಿರುವೆ. ಆದುದರಿಂದ



ಮಾನ್ಯ ಪ್ರಧಾನಮಂತ್ರಿಯವರೆ ಈ ದಿನ ನಿಮ್ಮೊಡನಿರಲು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ನಿಮಗೆ ಧನ್ಯವಾದಗಳು.

(ಗೌರವಾನ್ವಿತ ಶ್ರೀ ನರೇಂದ್ರ ಮೋದಿ)

ಬರಾಕ್ ನಿಮಗೆ ಮೊದಲ ಪ್ರಶ್ನೆ ಮುಂಬೈನ ರಾಜ್ ಅವರಿಂದ. ಅವರ ಪ್ರಶ್ನೆ ನಿಮ್ಮ ಪುತ್ರಿಯರ ಬಗ್ಗೆ ನೀವು ಹೊಂದಿರುವ ಸ್ನೇಹ ಬಾಂಧವ್ಯ ಇಡೀ ಜಗತ್ತಿಗೇ ಗೊತ್ತಿದೆ, ನಿಮ್ಮ ಪುತ್ರಿಯರಿಗೆ ಭಾರತ ಕುರಿತಾದ ನಿಮ್ಮ ಅನುಭವವನ್ನು ಹೇಗೆ ತಿಳಿಸುವಿರಿ. ಇಲ್ಲಿಂದ ಅವರಿಗಾಗಿ ಏನಾದರೂ ಖರೀದಿಸುವ ಉದ್ದೇಶ ನಿಮಗಿದೆಯೇ?

(ಗೌರವಾನ್ವಿತ ಶ್ರೀ ಬರಾಕ್ ಒಬಾಮಾ)

ಮೊಟ್ಟ ಮೊದಲಿಗೆ ಹೇಳುವುದಾದರೆ ಅವರಿಗೂ ಇಲ್ಲಿಗೆ ಬರಲು ಬಹಳ ಆಸೆ ಇತ್ತು. ಅವರು ಭಾರತದ ಬಗ್ಗೆ ಬಹಳವೇ ಆಕರ್ಷಿತರಾಗಿದ್ದಾರೆ. ಪ್ರತಿಸಾರಿ ನಾನು ಇಲ್ಲಿಗೆ ಭೇಟಿ ಕೊಟ್ಟಾಗಲೆಲ್ಲ ಅವರಿಗೆ ಶಾಲೆ ಇರುತ್ತದೆ ಮತ್ತು ಅವರಿಗೆ ಶಾಲೆ ಬಿಟ್ಟು ಬರಲಾಗುವುದಿಲ್ಲ. ನಿಜ ಹೇಳುವುದಾದರೆ ಇತ್ತೀಚೆಗೆ ತಾನೆ ತನ್ನ ಹಿರಿಯ ಮಗಳು ಮಾಲಿಯಾಗೆ ಪರೀಕ್ಷೆಗಳು ನಡೆದವು. ನನಗನ್ನಿಸುತ್ತದೆ, ನನ್ನ ಪ್ರಭಾವದಿಂದಾಗಿ ಅವರು ಭಾರತದ ಚರಿತ್ರೆ ಹಾಗೂ ಸಂಸ್ಕೃತಿ ಬಗ್ಗೆ ಆಕರ್ಷಿತರಾಗಿದ್ದಾರೆ. ಭಾರತದ ಸ್ವಾತಂತ್ರ್ಯ ಹೋರಾಟ ಅವರ ಮೇಲೆ ಆಳ ಪ್ರಭಾವ ಬೀರಿದೆ ಹಾಗೂ ಭಾರತದಲ್ಲಿ ಮಾತ್ರವಲ್ಲದೆ, ಅಮೆರಿಕದಲ್ಲೂ ಅಹಿಂಸಾತ್ಮಕ ನಾಗರಿಕ ಹಕ್ಕುಗಳ ಹೋರಾಟದ ಮೇಲೂ ಗಾಂಧೀಜಿಯವರು ಅಳವಡಿಸಿಕೊಂಡ ಅಹಿಂಸಾತ್ಮಕ ಕಾರ್ಯತಂತ್ರ ಮೂಡಿಸಿರುವ ಪ್ರಭಾವ ಅವರ ಮೇಲೆ ಬೀರಿದೆ. ನಾನು ಹಿಂತಿರುಗಿದ ನಂತರ ಅವರು ಕಲ್ಪಿಸಿಕೊಂಡಂತೆಯೇ ಭಾರತ ಮಹಾನ್ ಎಂದು ಅವರಿಗೆ ತಿಳಿಸುವೆ; ನಾನು ಮುಂದಿನ ಸಲ ಭೇಟಿ ಕೊಟ್ಟಾಗ ಅವರೂ ನನ್ನ ಜತೆ ಬರಲು ಒತ್ತಾಯಪಡಿಸುತ್ತಾರೆ ಎಂಬುದು ನನ್ನ ಖಚಿತ ಅನಿಸಿಕೆ. ಮುಂದಿನ ಭೇಟಿ ನನ್ನ

ಅಧ್ಯಕ್ಷ ಅವಧಿಯಲ್ಲಿ ಆಗದೇ ಇರಬಹುದು, ಆದರೆ ಅದಾದ ನಂತರವಾದರೂ ಅವರು ಭೇಟಿ ಕೊಡಲು ಖಂಡಿತವಾಗಿಯೂ ಬಯಸುವರು. ಅವರಿಗಾಗಿ ನಾನೇ ಸ್ವತಃ ಅಂಗಡಿಗಳಿಗೆ ಹೋಗಿ ಏನನ್ನಾದರೂ ಖರೀದಿಸಲು ಸಾಧ್ಯವಾಗದೇ ಹೋದರೂ ನನ್ನ ಪರವಾಗಿ ನನ್ನ ತಂಡ ಅಂಗಡಿಗಳಿಗೆ ಹೋಗಿ ಅವರಿಗಾಗಿ ನಿಶ್ಚಿತವಾಗಿಯೂ ಕೆಲವೊಂದು ವಸ್ತುಗಳನ್ನು ಖರೀದಿಸಿಯಾರು. ಈ ಕುರಿತು ಅವರಿಗೇನು ಹಿಡಿಸುತ್ತದೆ ಎಂಬುದರ ಬಗ್ಗೆ ಪ್ರಾಯಶಃ ನನಗಿಂತ ಮಿಶೆಲ್‌ಗೆ ಚೆನ್ನಾಗಿ ಗೊತ್ತಿರುವುದರಿಂದ ಆಕೆಯಿಂದ ಸ್ವಲ್ಪ ಸಲಹೆ ಪಡೆದುಕೊಳ್ಳುವೆ.

**(ಗೌರವಾನ್ವಿತ ಶ್ರೀ ನರೇಂದ್ರ ಮೋದಿ)**

ಪುತ್ರಿಯರನ್ನು ಕರೆದುಕೊಂಡು ಬರುವುದಾಗಿ ಬರಾಕ್ ಹೇಳಿದರು. ನಿಮಗೆ ನನ್ನ ಆಹ್ವಾನವಿದೆ. ಅಧ್ಯಕ್ಷರ ಅವಧಿಯಲ್ಲಾಗಲಿ ಅಥವಾ ಅಧ್ಯಕ್ಷ ಅವಧಿ ಮುಗಿದ ನಂತರವಾಗಲಿ ಭಾರತಕ್ಕೆ ಬನ್ನಿ, ನಿಮ್ಮನ್ನು ಹಾಗೂ ನಿಮ್ಮ ಪುತ್ರಿಯರನ್ನು ಸ್ವಾಗತಿಸಲು ನಾನು ಕಾತುರನಾಗಿರುವೆ.

ನನಗೆ ಮಹಾರಾಷ್ಟ್ರದ ಪುಣೆಯಿಂದ ಸಾನಿಕಾ ದೀವಾನ್ ಒಂದು ಪ್ರಶ್ನೆ ಕೇಳಿದ್ದಾರೆ. ನೀವು ಮಗಳನ್ನು ಉಳಿಸಿ, ಮಗಳನ್ನು ಓದಿಸಿ ಎಂಬ ಅಭಿಯಾನ ಆರಂಭಿಸಿದ್ದೀರಿ, ಅಮೆರಿಕ ಅಧ್ಯಕ್ಷ ಒಬಾಮಾ ಅವರ ಸಹಾಯವನ್ನು ಅದರಲ್ಲೂ ನೀವು ಕೋರಿದ್ದೀರಾ ಎಂಬುದು ಅವರು ನನಗೆ ಕೇಳಿದ ಪ್ರಶ್ನೆಯಾಗಿದೆ.

ಸಾನಿಕಾ, ನೀವು ಒಳ್ಳೆಯ ಪ್ರಶ್ನೆ ಕೇಳಿದ್ದೀರಿ. ಭಾರತದಲ್ಲಿ ಲಿಂಗ ಅನುಪಾತ ವಿಷಯದಲ್ಲಿ ಒಂದು ದೊಡ್ಡ ಚಿಂತೆ ಕಾಡುತ್ತಿದೆ. ಒಂದು ಸಾವಿರ ಬಾಲಕರಿಗೆ ಪ್ರತಿಯಾಗಿ ಬಾಲಕಿಯರ ಸಂಖ್ಯೆ ಕಡಿಮೆ ಇದೆ ಹಾಗೂ ಇದರ ಮೂಲ ಕಾರಣ ಬಾಲಕರಿಗೆ ಹೋಲಿಸಿದಲ್ಲಿ ಬಾಲಕಿಯರನ್ನು ನೋಡುವ ದೃಷ್ಟಿಕೋನ ದೋಷಪೂರ್ಣವಾಗಿರುವುದು. ಅಧ್ಯಕ್ಷ ಒಬಾಮಾ ಅವರ ಸಹಾಯವನ್ನು ನಾನು ಪಡೆದುಕೊಳ್ಳಲಿ, ಬಿಡಲಿ ನನಗಂತೂ ಅವರ ಜೀವನವೇ ತಂತಾನೆ ಸ್ಫೂರ್ತಿದಾಯಕವಾಗಿದೆ. ಅವರು ತಮ್ಮ ಇಬ್ಬರು ಪುತ್ರಿಯರ ಲಾಲನೆ ಪಾಲನೆ ಮಾಡುತ್ತಿರುವ ವಿಧಾನ ಹಾಗೂ ತಮ್ಮಿಬ್ಬರು ಪುತ್ರಿಯರ ಕುರಿತು ಅವರಿಗಿರುವ ಹೆಮ್ಮೆಯೇ ಆ ಪ್ರೇರಣೆ. ನಮ್ಮ ದೇಶದಲ್ಲೂ ಕೆಲವು ಕಡೆ ಕೆಲವರನ್ನು ಭೇಟಿಯಾದಾಗ ಅಂತಹ ಕುಟುಂಬಗಳಲ್ಲಿ ಗಂಡು ಮಗು ಇರುವುದಿಲ್ಲ. ಬರೀ ಹೆಣ್ಣು ಮಕ್ಕಳಿರುತ್ತಾರೆ ಹಾಗೂ ಅದೆಷ್ಟು ಗೌರವದಿಂದ ತಮ್ಮ ಪುತ್ರಿಯರನ್ನು ದೊಡ್ಡವರನ್ನಾಗಿ ಮಾಡುತ್ತಾರೆ, ಅದೆಷ್ಟು ಗೌರವ ಅವರಿಗೆ ಕೊಡುತ್ತಾರೆ. ಅದೇ ದೊಡ್ಡ ಸ್ಫೂರ್ತಿ. ನನಗನ್ನಿಸುತ್ತದೆ, ಈ ಪ್ರಶ್ನೆ ಕೇಳಿದ್ದೀರಿ ಎಂದು ಹೇಳಬಯಸುವೆ. ಪುತ್ರಿ ಉಳಿಸಿ, ಪುತ್ರಿ ಓದಿಸಿ ಎನ್ನುವುದು ನಮ್ಮ ಸಾಮಾಜಿಕ ಕರ್ತವ್ಯವಾಗಿದೆ; ಸಾಂಸ್ಕೃತಿಕ ಕರ್ತವ್ಯವಾಗಿದೆ, ಮಾನವೀಯ ಜವಾಬ್ದಾರಿಯಾಗಿದೆ. ಇದನ್ನು ನಾವು ನಿಭಾಯಿಸಬೇಕು.

ಬರಾಕ್ ನಿಮಗೊಂದು ಪ್ರಶ್ನೆ; ಗುಜರಾತಿನ ಅಹಮದಾಬಾದ್‌ನ ವೈದ್ಯ ಡಾ. ಕಮಲೇಶ್ ಉಪಾಧ್ಯಾಯ ಇ ಮೇಲ್ ಮೂಲಕ ಅಧ್ಯಕ್ಷ ಒಬಾಮಾ ಅವರಿಗೆ 2ನೇ ಪ್ರಶ್ನೆ ಕೇಳಿದ್ದಾರೆ. ಅವರ ಪ್ರಶ್ನೆ ಎಂದರೆ ಸ್ಥೂಲಕಾಯ ಹಾಗೂ ಡಯಾಬಿಟಿಸ್‌ನಂತಹ ಆರೋಗ್ಯದ ಆಧುನಿಕ ಸವಾಲುಗಳನ್ನು ನಿವಾರಿಸಲು ನಿಮ್ಮ ಪತ್ನಿ ವ್ಯಾಪಕ ಸಾಮಾಜಿಕ ಕಾರ್ಯ ನಡೆಸುತ್ತಿದ್ದಾರೆ; ಭಾರತದಲ್ಲೂ ಈ ಸವಾಲುಗಳು ತ್ವರಿತವಾಗಿ ಹೆಚ್ಚುತ್ತಿವೆ, ಅಧ್ಯಕ್ಷ ಅವಧಿ ಮುಗಿದ ಮೇಲೆ ನೀವು ಹಾಗೂ ನಿಮ್ಮ ಪತ್ನಿ ಈ ಸವಾಲುಗಳನ್ನು ನಿವಾರಿಸಲು ಭಾರತಕ್ಕೇನಾದರೂ ಬರುವಿರಾ? ಬಿಲ್‌ಗೇಟ್ಸ್ ಹಾಗೂ ಮಿಲಿಂಡಾ ಗೇಟ್ಸ್ ಭಾರತದಲ್ಲಿ ಸ್ವಚ್ಛತೆ ಕುರಿತು ಕೈಗೊಂಡಿರುವ ಕಾರ್ಯಕ್ರಮದಂತೆ ನೀವು ಡಯಾಬಿಟಿಸ್ ಹಾಗೂ ಸ್ಥೂಲಕಾಯ ಕುರಿತು ಕೆಲಸ ಮಾಡುವಿರಾ?

**(ಗೌರವಾನ್ವಿತ ಶ್ರೀ ಬರಾಕ್ ಒಬಾಮಾ)**

ಸ್ಥೂಲಕಾಯ ಸಮಸ್ಯೆಯೂ ಸೇರಿದಂತೆ ವಿಶಾಲ ಸಾರ್ವಜನಿಕ ಆರೋಗ್ಯ ವಿಷಯಗಳ ಸುತ್ತ ಭಾರತದಲ್ಲಿ ಕೆಲಸ ಮಾಡುತ್ತಿರುವ ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳೊಡನೆ ಪಾಲುದಾರರಾಗಲು ನಾವು ಬಹಳವೇ ಆಸಕ್ತರಾಗಿದ್ದೇವೆ; ಈ ವಿಷಯ ಕುರಿತು ಮಿಶೆಲ್ ಮಾಡಿರುವ ಕೆಲಸದ ಬಗ್ಗೆ ನನಗೆ ಬಹಳ ಹೆಮ್ಮೆ ಇದೆ. ಸ್ಥೂಲಕಾಯ ಒಂದು ವಿಶ್ವವ್ಯಾಪಿ ಪಿಡುಗಾಗಿರುವುದನ್ನು ನಾವು ನೋಡುತ್ತಿದ್ದೇವೆ; ಹಲವಾರು ಪ್ರಕರಣಗಳಲ್ಲಿ ಇದು ಯುವ ವಯಸ್ಸಿನಲ್ಲೇ ಆರಂಭವಾಗುತ್ತಿದೆ; ಇದಕ್ಕೆ ಭಾಗಶಃ ಕಾರಣ ಸ್ವಾಭಾವಿಕವಾಗಿ ತಯಾರಿಸಿದ ಆಹಾರ ಪದಾರ್ಥಗಳಿಗಿಂತ ಸಂಸ್ಕರಿಸಿದ ಆಹಾರ



ಬಳಕೆ ಹೆಚ್ಚಿರುವುದು ಕಾರಣವಾದರೆ, ಅನೇಕ ಮಕ್ಕಳಿಗೆ ಚಟುವಟಿಕೆಯ ಕೊರತೆಯೇ ಇನ್ನೊಂದು ಕಾರಣವಾಗಿದೆ. ಒಮ್ಮೆ ಅವರು ಈ ಹಾದಿ ತುಳಿದರೆಂದರೆ ಅದು ಜೀವನಪರ್ಯಂತ ಆರೋಗ್ಯ ಸವಾಲುಗಳಿಗೆ ಎಡೆ ಮಾಡಬಹುದು; ಆದುದರಿಂದ ಭಾರತವು ಸೇರಿದಂತೆ ಅಂತಾರಾಷ್ಟ್ರೀಯವಾಗಿ ನಾವು ಕೆಲಸ ಮಾಡಬಯಸುವ ವಿಷಯ ಇದಾಗಿದೆ ಹಾಗೂ ಜಾಗತಿಕ ಆರೋಗ್ಯದ ಸುತ್ತ ವಿಷಯಗಳ ವಿಶಾಲ ವ್ಯಾಪ್ತಿಯಲ್ಲಿ ಒಂದು ಭಾಗವಾಗಿ ಇದನ್ನು ನಾವು ನಿಭಾಯಿಸಬೇಕಾಗಿದೆ. ಉದಾಹರಣೆಗೆ ಪ್ರಧಾನಮಂತ್ರಿ ಹಾಗೂ ನಾನು ಸೋಂಕು ರೋಗಗಳಂತಹ ಆರೋಗ್ಯ ವಿಷಯಗಳ ಕುರಿತು ಚರ್ಚಿಸಿದ್ದೇವೆ; ಎಬೊಲಾ ಅಥವಾ ಮಾರಣಾಂತಿಕ ಜ್ವರ ವೈರಾಣು ಅಥವಾ ಪೋಲಿಯೊ ಕಾಣಿಸಿಕೊಂಡರೆ ಅವನ್ನು ಶೀಘ್ರ ಪತ್ತೆ ಹಚ್ಚಿ ಅವುಗಳು ಹರಡದಂತೆ ತಕ್ಷಣವೇ ಚಿಕಿತ್ಸೆ ಕೈಗೊಳ್ಳಲು ಸಾಧ್ಯವಾಗುವ ಬಗ್ಗೆ ನಾವು ಉತ್ತಮ ಕೆಲಸ ಮಾಡಬಹುದೆಂದು ನಾವಿಬ್ಬರೂ ಚರ್ಚಿಸಿದ್ದೇವೆ; ವಿಶ್ವದೆಲ್ಲೆಡೆ ಸಾರ್ವಜನಿಕ ಆರೋಗ್ಯ ಮೂಲ ಸೌಕರ್ಯ ಸುಧಾರಿಸುವ ಅಗತ್ಯವಿದೆ. ಭಾರತದಲ್ಲಿ ಈ ವಿಷಯಗಳ ಮೇಲೆ ಗಮನ ಕೇಂದ್ರೀಕರಿಸುವ ಮಹಾನ್ ಕೆಲಸವನ್ನು ಪ್ರಧಾನಮಂತ್ರಿ ಮಾಡುತ್ತಿದ್ದಾರೆ ಎಂದು ನನಗನ್ನಿಸುತ್ತದೆ. ಸಾರ್ವಜನಿಕ ಆರೋಗ್ಯ ವಲಯ ಸುಧಾರಣೆಯಲ್ಲಿ ಇಷ್ಟು ತೀವ್ರವಾಗಿ ಮುನ್ನಡೆಯದೇ ಇರುವ ಅನೇಕ ದೇಶಗಳಿಗೆ ಹೇಳಿಕೊಡಲು ಭಾರತದ ಬಳಿ ಬಹಳಷ್ಟಿದೆ ಎಂದು ನನಗನ್ನಿಸುತ್ತದೆ. ಇದು ಎಲ್ಲದರ ಮೇಲೂ ಪರಿಣಾಮ ಬೀರುತ್ತದೆ. ಏಕೆಂದರೆ ಮಕ್ಕಳು ಅನಾರೋಗ್ಯ ಪೀಡಿತರಾದರೆ ಅವರು ಶಾಲೆಯಲ್ಲಿ ಓದಿನ ಕಡೆ ಗಮನ ಕೇಂದ್ರೀಕರಿಸಲು ಸಾಧ್ಯವಾಗುವುದಿಲ್ಲ ಹಾಗೂ ಅವರು ಹಿಂದೆ ಬೀಳುತ್ತಾರೆ. ಸಂಬಂಧಪಟ್ಟ ದೇಶಗಳ ಆರ್ಥಿಕತೆ ಮೇಲೂ ಇದು ಭಾರಿ ಪರಿಣಾಮ ಬೀರುತ್ತದೆ. ಆದುದರಿಂದ

ಇಲ್ಲಿ ಸಾಧಿಸಬೇಕಾದ್ದು ಬಹಳವಿದೆ ಎಂದು ನಮಗನ್ನಿಸುತ್ತದೆ. ಹಾಗೂ ನನ್ನ ಅಧಿಕಾರಾವಧಿ ನಂತರವೂ ಈ ಕೆಲಸ ಮಾಡುವ ಸಾಧ್ಯತೆಗಳ ಬಗ್ಗೆ ನಾನು ಬಹಳವೇ ಉತ್ಸಾಹಿತನಾಗಿದ್ದೇನೆ.

**(ಗೌರವಾನ್ವಿತ ಶ್ರೀ ನರೇಂದ್ರ ಮೋದಿ)**

ಶ್ರೀಮಾನ್ ಅರ್ಜುನ್ ಅವರು ನನಗೊಂದು ಪ್ರಶ್ನೆ ಕೇಳಿದ್ದಾರೆ. ಹಾಗೂ ಅದು ಬಹಳ ಸ್ವಾರಸ್ಯಕರ ಪ್ರಶ್ನೆಯಾಗಿದೆ. ಅವರು ಕೇಳಿದ್ದಾರೆ, ನೀವು ಶ್ವೇತಭವನದ ಮುಂದೆ ಪ್ರವಾಸಿಯ ರೂಪದಲ್ಲಿ ನಿಂತಿರುವ ನಿಮ್ಮ ಹಳೆಯ ಒಂದು ಭಾವಚಿತ್ರವನ್ನು ನಾನು ನೋಡಿದ್ದೇನೆ, ನೀವು ಕೆಲವು ದಿನಗಳ ಹಿಂದೆ ಸೆಪ್ಟೆಂಬರ್‌ನಲ್ಲಿ ಅಲ್ಲಿಗೆ ಹೋದಾಗ ನಿಮ್ಮ ಹೃದಯವನ್ನು ಸ್ಪರ್ಶಿಸಿದ್ದು ಯಾವ ಮಾತು ಎಂದು ಅರ್ಜುನ್ ಕೇಳಿದ್ದಾರೆ.

ಅದೇನೋ ನಿಜ, ನಾನು ಮೊದಲ ಬಾರಿಗೆ ಅಮೆರಿಕಾಕ್ಕೆ ಹೋದಾಗ ಶ್ವೇತಭವನದ ಒಳಗೆ ಹೋಗುವ ಅದೃಷ್ಟ ನಮ್ಮದಾಗಿರಲಿಲ್ಲ. ಶ್ವೇತಭವನದ ಹೊರಗೆ ದೂರದಲ್ಲಿ ಉಕ್ಕಿನ ಬೇಲಿ ಹಾಕಲಾಗಿದೆ. ಆಗ ಆ ಬೇಲಿಯ ಹೊರಗೆ ನಿಂತು ಛಾಯಾಚಿತ್ರ ತೆಗೆಸಿಕೊಂಡಿದ್ದೆ. ಹಿಂಬದಿಗೆ ಶ್ವೇತಭವನ ಕಾಣಿಸುತ್ತದೆ ಹಾಗೂ ಪ್ರಧಾನಮಂತ್ರಿಯಾದ ಮೇಲೆ ಆ ಭಾವಚಿತ್ರ ಜನಪ್ರಿಯವಾಗಿಬಿಟ್ಟಿದೆ. ಆದರೆ ನನ್ನ ಜೀವನದಲ್ಲೂ ಎಂದಾದರೂ ಶ್ವೇತಭವನದ ಒಳಗೆ ಹೋಗುವ ಅವಕಾಶ ನನಗೆ ಸಿಗುತ್ತದೆ ಎಂದು ನಾನು ಭಾವಿಸಿಯೇ ಇರಲಿಲ್ಲ. ಆದರೆ ಈಗ ಶ್ವೇತಭವನಕ್ಕೆ ನಾನು ಹೋದಾಗ ನನ್ನ ಮನಸ್ಸಿನಲ್ಲಿ ಒಂದು ಮಾತಂತೂ ನಾಟಿತು. ಅದನ್ನು ಎಂದಿಗೂ ಮರೆಯಲಾರೆ. ಬರಾಕ್ ನನಗೊಂದು ಪುಸ್ತಕ ಕೊಟ್ಟರು. ಅವರು ಅದನ್ನು ಬಹಳ ಕಷ್ಟಪಟ್ಟು ಪತ್ತೆ ಹಚ್ಚಿ ತಂದಿದ್ದರು. ಹಾಗೂ 1894ರಲ್ಲಿ ಪ್ರಸಿದ್ಧವಾದ ಪುಸ್ತಕವದು. ಸ್ವಾಮಿ ವಿವೇಕಾನಂದರು ನನ್ನ ಜೀವನದ ಸ್ಫೂರ್ತಿ. ಅವರು ಚಿಕಾಗೊಗೆ ಹೋಗಿದ್ದರು. ವಿಶ್ವಧರ್ಮ ಸಮ್ಮೇಳನಕ್ಕೆ ಹೋಗಿದ್ದರು.



ಹಾಗೂ ವಿಶ್ವಧರ್ಮ ಸಮ್ಮೇಳನದಲ್ಲಿ ಆದ ಭಾಷಣಗಳ ಸಂಗ್ರಹ ಆ ಪುಸ್ತಕವಾಗಿತ್ತು. ಹುಡುಕಾಡಿ ನನಗಾಗಿ ಆ ಪುಸ್ತಕ ತಂದಿದ್ದರು. ಅದು ನನ್ನ ಹೃದಯ ಸ್ಪರ್ಶಿಸುವಂತಿತ್ತು. ಆದರೆ ಅಷ್ಟೇ ಅಲ್ಲ. ಆ ಪುಸ್ತಕವನ್ನು ತೆರೆದು ಪುಟ ಪುಟದಲ್ಲೂ ಅದರಲ್ಲೇನು ಬರೆದಿದೆ ಎನ್ನುವುದನ್ನು ಅವರು ನನಗೆ ತೋರಿಸಿದರು. ಅಂದರೆ, ಅವರು ಇಡೀ ಪುಸ್ತಕವನ್ನು ನೋಡಿದ್ದರು ಎಂದಾಯಿತು. ಹಾಗೂ ಅವರು ಬಹಳ ಹೆಮ್ಮೆಯಿಂದ, ಸ್ವಾಮಿ ವಿವೇಕಾನಂದರು ಭೇಟಿ ನೀಡಿದ್ದ ಚಿಕಾಗೊದಿಂದ ನಾನೂ ಬಂದಿರುವವನು ಎಂದು ಹೇಳಿದರು. ಹೀಗಾಗಿ ಯಾವಾಗಲೋ ಶ್ವೇತಭವನದ ಮುಂದೆ ದೂರ ನಿಂತು ಭಾವಚಿತ್ರ ತೆಗೆಸಿಕೊಳ್ಳುವುದು ಹಾಗೂ ಆಮೇಲೆ ಶ್ವೇತಭವನದ ಒಳಕ್ಕೆ ಹೋಗಿ ನನಗೆ ಯಾರ ಜೀವನದ ಬಗ್ಗೆ ಶ್ರದ್ಧಾ ಗೌರವಗಳಿವೆಯೊ ಅವರ ಜೀವನ ಕುರಿತ ಪುಸ್ತಕ ಪಡೆದುಕೊಳ್ಳುವುದು ನನ್ನ ಮನಸ್ಸಿಗೆ ಅದೆಷ್ಟು ಹೃದಯಸ್ಪರ್ಶಿ ಆಗಿತ್ತು ಎಂಬುದನ್ನು ನೀವೇ ಊಹಿಸಿಕೊಳ್ಳಬಹುದಾಗಿದೆ.

ಬರಾಕ್, ನಿಮಗಾಗಿ ಒಂದು ಪ್ರಶ್ನೆ ಬಂದಿದೆ. ಪಂಜಾಬ್‌ನ ಲೂಧಿಯಾನಾದಿಂದ ಹಿಮಾನಿ ಕೇಳಿದ್ದಾರೆ. ಪ್ರಶ್ನೆ ನಿಮಗೆ.

**(ಗೌರವಾನ್ವಿತ ಶ್ರೀ ಬರಾಕ್ ಒಬಾಮಾ)**

ಇಂದು ನೀವಿಬ್ಬರೂ ತಲುಪಿರುವ ಹುದ್ದೆಗಳಿಗೆ ನೀವೇರುವ ಕಲ್ಪನೆ ನಿಮಗೆ ಎಂದಾದರೂ ಬಂದಿತ್ತೆ ಎನ್ನುವುದು ಆ ಪ್ರಶ್ನೆಯಾಗಿದೆ. ಮಾನ್ಯ ಪ್ರಧಾನಮಂತ್ರಿಯವರೆ, ನೀವು ಮೊದಲ ಬಾರಿಗೆ ಶ್ವೇತಭವನದ ಬಳಿಗೆ ಭೇಟಿ ನೀಡಿದ್ದನ್ನು ಹಾಗೂ ಉಕ್ಕಿನ ಬೇಲಿಯ ಹೊರಗೆ ನಿಂತಿದ್ದನ್ನು ಕುರಿತು ನೀವು ಮಾತನಾಡುತ್ತಿರುವುದು ಬಹಳ ಆಸಕ್ತಿದಾಯಕವಾಗಿದೆ. ಅದು ನನ್ನ ವಿಚಾರದಲ್ಲೂ ಅಷ್ಟೇ ಸತ್ಯ. ನಾನು ಮೊದಲ ಬಾರಿಗೆ ಶ್ವೇತ ಭವನದ ಬಳಿ ಹೋದಾಗ ನಾನು ಕೂಡ ಅದೇ ಬೇಲಿಯ ಹೊರಗೆ ನಿಂತೆ, ಒಳನೋಡಿದೆ ಹಾಗೂ ನಾನು ಎಂದಾದರೂ ಅಲ್ಲಿಗೆ ಹೋಗುವೆ ಅಷ್ಟೇ ಅಲ್ಲ, ಅಲ್ಲಿ ವಾಸ ಮಾಡುವೆ ಎಂದು ಖಂಡಿತವಾಗಿಯೂ ಊಹಿಸಿಕೊಂಡಿರಲಿಲ್ಲ. ನನಗನ್ನಿಸುತ್ತದೆ ನಾವಿಬ್ಬರೂ ತೀರಾ ಸಾಮಾನ್ಯ ಬದುಕಿನೊಡನೆ ಆರಂಭ ಮಾಡಿ ಅಸಾಧಾರಣ ಅವಕಾಶದಿಂದ ಆಶೀರ್ವಾದ ಪಡೆದವರಾಗಿದ್ದೇವೆ ಎಂದರು. ಹಾಗೂ



ಅಮೆರಿಕದಲ್ಲಿ ಯಾವುದು ಉತ್ತಮ ಹಾಗೂ ಭಾರತದಲ್ಲಿ ಯಾವುದು ಉತ್ತಮ ಎಂದು ನಾನು ಯೋಚಿಸಿದಾಗಲೆಲ್ಲ ಚಹಾ ಮಾರುವನೊಬ್ಬ ಅಥವಾ ನನ್ನಂತೆ ತಾಯೊಬ್ಬಳಿಗೆ ಹುಟ್ಟಿದವನೊಬ್ಬ ನಮ್ಮ ದೇಶಗಳ ನಾಯಕ ಸ್ಥಾನಕ್ಕೆ ಮೇಲೇರಬಹುದೆಂಬುದೇ ವಿಚಾರ ನಮ್ಮ ದೇಶಗಳೊಳಗೆ ಇರುವ ಅವಕಾಶಗಳ ಅಸಾಧಾರಣ ನಿದರ್ಶನವಾಗಿದೆ ಹಾಗೂ ನನಗೆ ಹಾಗೂ ನಿಮಗೆ ಪ್ರೇರಣೆ ನೀಡುವ ಅಂಶದ ಒಂದು ಭಾಗವೆಂದರೆ ಒಂದೇ ತೆರನಾದ ಸಾಮರ್ಥ್ಯವಿರುವ ಲಕ್ಷಾಂತರ ಮಕ್ಕಳಿದ್ದಾರೆ. ಆದರೆ ಅವರೆಲ್ಲರಿಗೂ ಒಂದೇ ತೆರನಾದ ಶಿಕ್ಷಣ ದೊರಕಿಲ್ಲದಿರಬಹುದು ಎಂಬುದು ಹಾಗೂ ಒಂದೇ ರೀತಿಯ ಅವಕಾಶಗಳು ತೆರೆದುಕೊಳ್ಳದೇ ಹೋಗಿರಬಹುದು ಎಂಬುದಾಗಿದೆ. ಪ್ರತಿಭೆ ಇರುವ ಯುವಕರಿಗೆ ಉಮೇದು ಹಾಗೂ ದುಡಿಯುವ ಅಭಿರುಚಿ ಇದ್ದರೆ ಯಶಸ್ಸು ಗಳಿಸಲು ಸಾಧ್ಯ. ಆದುದರಿಂದಲೇ ನಮ್ಮ ಕೆಲಸದ ಭಾಗವಾಗಿ ನಮ್ಮ ಸರ್ಕಾರಗಳ ಕೆಲಸದ ಭಾಗವಾಗಿ ನಾವು ಶಾಲಾ ಹಾಗೂ ಉನ್ನತ ಶಿಕ್ಷಣಕ್ಕೆ ಒತ್ತಾಸೆ ನೀಡುತ್ತಿರುವುದು, ಮಕ್ಕಳು ಆರೋಗ್ಯವಂತರಾಗಿರುವಂತೆ ನೋಡಿಕೊಳ್ಳುವುದರ ಕಡೆ ಗಮನ ಹರಿಸಿರುವುದು ಹಾಗೂ ಅಂತಹ ಅವಕಾಶಗಳು ಎಲ್ಲ ಹಿನ್ನೆಲೆಯ ಮಕ್ಕಳಿಗೆ, ಬಾಲಕ – ಬಾಲಕಿಯರಿಗೆ, ಸಕಲ ಧರ್ಮಗಳ ಜನರಿಗೆ ಮತ್ತು ಅಮೆರಿಕದ ಎಲ್ಲ ಜನಾಂಗಗಳವರಿಗೆ ದೊರಕುವಂತೆ ನೋಡಿಕೊಳ್ಳುವುದು ಮುಖ್ಯವಾಗಿದೆ. ಏಕೆಂದರೆ ಭಾರತದ ಮುಂದಿನ ಪ್ರಧಾನಿ ಯಾರು ಅಥವಾ ಅಮೆರಿಕದ ಮುಂದಿನ ಅಧ್ಯಕ್ಷರು ಯಾರು ಎಂಬುದು ನಮಗೆಲ್ಲಿ ಗೊತ್ತು. ಅದೇ ಮುಖ್ಯ. ಅವರು ಯಾವಾಗಲೂ ನೋಡುವುದಕ್ಕೆ ಪ್ರತಿಭಾವಂತರಂತೆ ಕಾಣದಿರಬಹುದು,

ಆದರೆ ಅವರಿಗೆ ನೀವು ಅವಕಾಶ ನೀಡಿದರೆ ಅವರು ನಿಮಗೆ ಅಚ್ಚರಿ ತಂದಾರು.

**(ಗೌರವಾನ್ವಿತ ಶ್ರೀ ನರೇಂದ್ರ ಮೋದಿ)**

ನಿಮಗೆ ಧನ್ಯವಾದ ಬರಾಕ್. ಪಂಜಾಬ್‌ನ ಲೂಧಿಯಾನದ ಹಿಮಾನಿ ನನಗೆ ಕೂಡ ಈ ಪ್ರಶ್ನೆ ಕೇಳಿದ್ದಾರೆ : ಈ ಹುದ್ದೆ ತಲುಪುವ ಕಲ್ಪನೆ ನಿಮಗೆ ಎಂದಾದರೂ ಬಂದಿತ್ತೆ?

ಇಲ್ಲ ನನಗೆ ಎಂದೂ ಆ ಕಲ್ಪನೆ ಮೂಡಿರಲಿಲ್ಲ. ಏಕೆಂದರೆ ಬರಾಕ್ ಹೇಳಿದಂತೆ ನಾನು ಅತಿ ಸಾಮಾನ್ಯ ಕುಟುಂಬದಿಂದ ಬಂದವನು. ಆದರೆ ನಾನು ಬಹಳ ಹಿಂದಿನಿಂದಲೂ ಒಂದು ಮಾತನ್ನು ಎಲ್ಲರಿಗೂ ಹೇಳುತ್ತಾ ಬಂದಿದ್ದೇನೆ, ಏನಾದರಾಗುವ ಕನಸು ಕಾಣದಿರಿ ಎಂದು. ಆದರೆ, ನೀವು ಕನಸು ಕಾಣುವುದೇ ಆದರೆ ಏನಾದರೂ ಮಾಡುವ ಕನಸು ಕಾಣಿ. ನಾವು ಏನಾದರೂ ಸ್ವಲ್ಪ ಮಾಡಿದರೆ ಅದರಿಂದ ಸಂತೋಷವೂ ಸಿಗುತ್ತದೆ ಹಾಗೂ ಹೊಸದಾಗಿ ಮಾಡುವುದಕ್ಕೆ ಸ್ಫೂರ್ತಿಯೂ ದೊರಕುತ್ತದೆ. ಕೇವಲ ಆಗುವ ಕನಸು ನೋಡಿದರೆ ಏನೂ ಆಗುವುದಿಲ್ಲ. ಆದರೆ ಅದರಿಂದ ನಿರಾಸೆ ಬಿಟ್ಟು ಮತ್ತೇನೂ ಕೈಗೆ ಸಿಗುವುದಿಲ್ಲ. ಆದುದರಿಂದ ನಾನು ಜೀವನದಲ್ಲಿ ಎಂದೂ ಏನಾದರೂ ಆಗುವ ಕನಸು ಕಾಣಲಿಲ್ಲ ಮತ್ತು ಈಗಲೂ ಏನಾದರಾಗುವ ಕನಸು ನನ್ನ ಮನಸ್ಸಿನಲ್ಲಿಲ್ಲ. ಆದರೆ ಏನಾದರೂ ಮಾಡುವ ಕನಸು ಖಂಡಿತವಾಗಿಯೂ ಇದೆ, ಭಾರತ ಮಾತೆಯ ಸೇವೆ ಮಾಡಬೇಕು, 125 ಕೋಟಿ ದೇಶವಾಸಿಗಳ ಸೇವೆ ಮಾಡಬೇಕು, ಇದಕ್ಕಿಂತ ದೊಡ್ಡದಾದ ಕನಸೇನುಂಟು. ಅದನ್ನೇ ಮಾಡಬೇಕು. ನಾನು ಹಿಮಾನಿ ಅವರಿಗೆ ಬಹಳವೇ ಆಭಾರಿಯಾಗಿದ್ದೇನೆ.

ಬರಾಕ್ ಅವರಿಗೆ ರಾಜಾಸ್ಥಾನದ ಝುಂಝುನ್‌ವಿನ ವಾಸಿಯಾದ, ಓಂ ಪ್ರಕಾಶ್ ಅವರ ಪ್ರಶ್ನೆ ಒಂದಿದೆ. ಓಂ ಪ್ರಕಾಶ್ ಅವರು ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಅಧ್ಯಯನಗಳ ಕುರಿತ ವಿಶೇಷ ಕೇಂದ್ರದ ಸಂಚಾಲಕರಾಗಿದ್ದಾರೆ.



**(ಗೌರವಾನ್ವಿತ ಶ್ರೀ ಬರಾಕ್ ಒಬಾಮಾ)**

ಒಳ್ಳೆಯದು, ಇದೊಂದು ಸ್ವಾರಸ್ಯಕರ ಪ್ರಶ್ನೆ. ಹೊಸ ಪೀಳಿಗೆಯ ಯುವಕರು ಜಾಗತಿಕ ಪೌರರು. ಅವರಿಗೆ ಸಮಯ ಅಥವಾ ಗಡಿಗಳ ಮಿತಿಗಳಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ನಾಯಕತ್ವದ ಸರ್ಕಾರಗಳ ಹಾಗೂ ಸಮಾಜಗಳ ಧೋರಣೆ ಏನಾಗಿರಬೇಕು? ಇದು ಅವರ ಪ್ರಶ್ನೆಯಾಗಿದೆ.

ಇದು ಬಹಳ ಮುಖ್ಯವಾದ ಪ್ರಶ್ನೆ ಎಂದು ನನಗನ್ನಿಸುತ್ತದೆ. ಈಗ ಬೆಳೆಯುತ್ತಿರುವ ಪೀಳಿಗೆಯನ್ನು ನಾನು ನೋಡಿದಾಗ ನನಗನ್ನಿಸುತ್ತದೆ, ನಾವು, ನೀವು ಕಲ್ಪಿಸಿಕೊಳ್ಳಲೂ ಸಾಧ್ಯವಾಗದ ವಿಧಗಳಲ್ಲಿ ಅವರು ವಿಶ್ವಕ್ಕೆ ತೆರೆದುಕೊಂಡಿದ್ದಾರೆ. ಅವರ ಕೈ ಬೆರಳುಗಳ ತುದಿಯಲ್ಲಿ ಅಕ್ಷರಶಃ ವಿಶ್ವ ಇದೆ. ಅವರು ತಮ್ಮ ಮೊಬೈಲ್ ಫೋನ್ ಬಳಸಬಹುದು. ವಿಶ್ವದೆಲ್ಲೆಡೆಯಿಂದ ಮಾಹಿತಿ ಹಾಗೂ ಚಿತ್ರಗಳನ್ನು ಪಡೆದುಕೊಳ್ಳಬಹುದು ಹಾಗೂ ಅದು ಅಸಾಧಾರಣವಾಗಿ ಸಶಕ್ತ. ನನಗನಿಸಿದ ಮಟ್ಟಿಗೆ ಅದು ಏನನ್ನು ಅರ್ಥೈಸುತ್ತದೆ, ಸರ್ಕಾರಗಳಾಗಲಿ ನಾಯಕರಾಗಲಿ ಮೇಲಿಂದ – ಕೆಳಗೆ ಕಾರ್ಯತಂತ್ರದ ಮೂಲಕ ಮಾತ್ರವೇ ಆಳುವುದು ಅಥವಾ ಆಡಳಿತ ನಡೆಸುವುದು ಸಾಧ್ಯವಿಲ್ಲ. ಆದರೆ ಜನರ ಬಳಿಗೆ ಒಳಗೊಳ್ಳುವಿಕೆ ಮಾರ್ಗದಲ್ಲಿ ಮತ್ತು ಮುಕ್ತವಾಗಿ, ಪಾರದರ್ಶಕವಾಗಿ ಹೋಗಬೇಕಾಗುತ್ತದೆ; ತಮ್ಮ ದೇಶದ ದಿಕ್ಸೂಚಿ ಬಗ್ಗೆ ಅವರು ನಾಗರಿಕರೊಡನೆ ಸಂವಾದದಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ. ಭಾರತ ಹಾಗೂ ಅಮೆರಿಕಗಳಿಗೆ ದೊರಕಿರುವ ಮಹಾನ್ ಅನುಕೂಲಗಳಲ್ಲಿ ಒಂದು ನಾವಿಬ್ಬರೂ ಮುಕ್ತ ಸಮಾಜಗಳಾಗಿರುವುದು ಹಾಗೂ ನಾಗರಿಕರ ಬಳಿ ಮಾಹಿತಿ ಇದ್ದಾಗ ಮತ್ತು ಕೆಲವೊಮ್ಮೆ ಪ್ರಜಾಪ್ರಭುತ್ವ ಹತಾಶದಾಯಕವಾಗಿದ್ದರೂ ಚೈತನ್ಯ ಶೀಲ ಚರ್ಚೆಯಾಗುವುದರಿಂದ ಅತ್ಯುತ್ತಮ ನಿರ್ಧಾರಗಳು ಹಾಗೂ ಅತಿ ಸ್ಥಿರ ಸಮಾಜಗಳು ಹೊರಹೊಮ್ಮುತ್ತವೆ. ಅತಿ ಸಮೃದ್ಧ ಸಮಾಜಗಳು ಹೊರಹೊಮ್ಮುವುದರೊಡನೆ ಹೊಸ ವಿಚಾರಗಳ ನಿಯತ ವಿನಿಮಯವಾಗುತ್ತದೆ. ತಂತ್ರಜ್ಞಾನ ಇಂದು ದೇಶದೊಳಗೆ ಮಾತ್ರವಲ್ಲದೆ ದೇಶ ದೇಶಗಳ ನಡುವೆಯೂ ಅದಕ್ಕೆ ಅನುಕೂಲ ಕಲ್ಪಿಸಿಕೊಡುತ್ತದೆ. ಇಂದಿನ ನೂತನ ಮಾಹಿತಿ ಯುಗದಲ್ಲಿ ನಾಗರಿಕರು ಪಡೆದುಕೊಳ್ಳುವ ಮಾಹಿತಿಯನ್ನು ನಿಯಂತ್ರಿಸಲು ಪ್ರಯತ್ನಿಸುವ ಮುಚ್ಚಿದ ಸಮಾಜಗಳಿಗಿಂತ ಮುಕ್ತ ಮಾಹಿತಿ ಸಮಾಜಗಳಾದ ಭಾರತ ಮತ್ತು ಅಮೆರಿಕ ಯಶಸ್ವಿಯಾಗುವುದರಲ್ಲಿ ನನಗೆ ಹೆಚ್ಚಿನ ವಿಶ್ವಾಸವಿದೆ. ಆದರೆ, ಮುಚ್ಚಿದ ಸಮಾಜಗಳು ಇನ್ನು ಮುಂದೆ ಸಾಧ್ಯವಿಲ್ಲ. ಅನಿವಾರ್ಯವಾಗಿ ಒಂದಲ್ಲ ಒಂದು ವಿಧದಲ್ಲಿ ಮಾಹಿತಿ ಹರಿವು ಉಂಟಾಗುತ್ತದೆ. ಎಲ್ಲ ಜನರ ನಡುವೆ ಆರೋಗ್ಯ ಪೂರ್ಣ ಸಂವಾದ ಹಾಗೂ ಉತ್ತಮ ಮಾತುಕತೆ ಕಾಯ್ದುಕೊಳ್ಳಲು ನಾವು ಬಯಸುತ್ತೇವೆ.



**(ಗೌರವಾನ್ವಿತ ಶ್ರೀ ನರೇಂದ್ರ ಮೋದಿ)**

ಬರಾಕ್ ಅವರಿಗೆ ಕೇಳಿದ ಪ್ರಶ್ನೆಗೆ ನನ್ನದೂ ಕೆಲವು ಮಾತು ಹೇಳಬೇಕೆಂಬುದು ಓಂಪ್ರಕಾಶ್ ಅವರ ಅಪೇಕ್ಷೆಯಾಗಿದೆ.

ಬರಾಕ್ ಬಹಳ ಉತ್ತಮ ಉತ್ತರ ನೀಡಿದ್ದಾರೆ; ಅದು ಬಹಳವೇ ಸ್ಫೂರ್ತಿದಾಯಕವಾಗಿದೆ. ನಾನು ಇಷ್ಟನ್ನೇ ಹೇಳಬಲ್ಲೆ; ಒಂದು ಕಾಲದಲ್ಲಿ ವಿಶೇಷವಾಗಿ ಕಮ್ಯುನಿಸ್ಟ್ ವಿಚಾರಧಾರೆಯಿಂದ ಸ್ಫೂರ್ತಿ ಪಡೆದವರಿದ್ದರು. ಅವರು ಜಗತ್ತಿಗೆ ಕರೆ ನೀಡುತ್ತಿದ್ದರು. ವಿಶ್ವದ ಕಾರ್ಮಿಕರೇ ಒಂದಾಗಿ ಎಂದು. ಈ ಘೋಷಣೆ ಹಲವಾರು ದಶಕಗಳವರೆಗೆ ನಡೆದಿತ್ತು. ನನಗನ್ನಿಸುತ್ತದೆ, ಇಂದಿನ ಯುವಕರ ಶಕ್ತಿ, ಇಂದಿನ ಯುವಕರ ದೃಷ್ಟಿ ನೋಡಿದರೆ ನಾನು ಇಷ್ಟೇ ಹೇಳಬಲ್ಲೆ. ಯುವಕರೇ ವಿಶ್ವವನ್ನು ಒಗ್ಗೂಡಿಸಿ ಎಂದು. ನನಗನ್ನಿಸುತ್ತದೆ ಅವರಲ್ಲಿ ಈ ಶಕ್ತಿ ಇದೆ ಹಾಗೂ ಅವರು ಇದನ್ನು ಮಾಡಬಲ್ಲರು ಎಂದು.

ಮುಂದಿನ ಪ್ರಶ್ನೆ ಸಿ.ಎ. ಪಿಕಾಶು ಮುಥಾ ಅವರದು. ಅವರು ಮುಂಬೈನಿಂದ ಕೇಳುತ್ತಿದ್ದಾರೆ. ಹಾಗೂ ನನಗೆ ಈ ಪ್ರಶ್ನೆ ಹಾಕಿದ್ದಾರೆ. ನಿಮಗೆ ಸ್ಫೂರ್ತಿ ನೀಡಿದ ಅಮೆರಿಕದ ನಾಯಕರು ಯಾರು? ಎಂಬುದು ಈ ಪ್ರಶ್ನೆ.

ಹಾಗೆ ನೋಡಿದರೆ ನಾವು ಚಿಕ್ಕವರಾಗಿದ್ದಾಗ ಭಾರತದ ಪತ್ರಿಕೆಗಳಲ್ಲಿ ಕೆನಡಿ ಅದರ ಭಾವಚಿತ್ರ ನೋಡುತ್ತಿದ್ದೆವು. ಅವರ ವ್ಯಕ್ತಿತ್ವ ಬಹಳವೇ ಆಕರ್ಷಕವಾಗಿತ್ತು. ಆದರೆ ನಿಮ್ಮ ಪ್ರಶ್ನೆ ನನಗೆ ಯಾರು ಸ್ಫೂರ್ತಿ ನೀಡಿದರು ಎಂಬುದಾಗಿದೆ. ನನಗೆ ಬಾಲ್ಯದಲ್ಲಿ ಓದುವುದರಲ್ಲಿ ಅಭಿರುಚಿ ಇತ್ತು ಹಾಗೂ ನನಗೆ ಬೆಂಜಮಿನ್ ಫ್ರಾಂಕ್ಲಿನ್ ಅವರ ಜೀವನ ಚರಿತ್ರೆ ಓದುವ ಅವಕಾಶ ದೊರಕಿತ್ತು. ಅವರದು 17ನೇ ಶತಮಾನದ ಸಮಯ. ಆದರೆ ಅವರು ಅಮೆರಿಕದ ಅಧ್ಯಕ್ಷರಾಗಿರಲಿಲ್ಲ. ಆದರೆ ಅವರ ಜೀವನ ಚರಿತ್ರೆ ಒಬ್ಬ ವ್ಯಕ್ತಿ ತನ್ನ ಜೀವನವನ್ನು ಬದಲಾಯಿಸಿಕೊಳ್ಳಲು ವಿವೇಕಪೂರ್ಣವಾಗಿ ಹೇಗೆ ಪ್ರಯತ್ನ ಪಡುತ್ತಾನೆ ಎಂಬುದಾಗಿತ್ತು.

ಹೆಚ್ಚು ನಿದ್ರೆ ಬರುವುದಾದರೆ ನಿದ್ರೆ ಕಡಿಮೆ ಮಾಡಿಕೊಳ್ಳುವ ಉಪಾಯಗಳೇನು?

ಹೆಚ್ಚು ಊಟ ಮಾಡಬೇಕು ಎಂದು ಮನಸ್ಸಾದರೆ ಕಡಿಮೆ ಊಟ ಮಾಡುವ ಕಡೆ ಮನಸ್ಸು ಹರಿಸಬೇಕಾದರೆ ಹೇಗೆ ಮಾಡಬೇಕು?

ಕೆಲಸ ಮಾಡುತ್ತಾ ಮಾಡುತ್ತಾ ನಮ್ಮ ಸಹೋದ್ಯೋಗಿಗಳು ಕೋಪಗೊಂಡರೆ ಅವರಿಗನಿಸುತ್ತದೆ ನೋಡು ಅವರೇನೂ ಮಾಡುವುದಿಲ್ಲ; ಭೇಟಿಯೂ ಆಗುವುದಿಲ್ಲ. ಹಾಗಾದರೆ ಈ ಸಮಸ್ಯೆಗೆ ಪರಿಹಾರ ಹೇಗೆ ಕಂಡುಕೊಳ್ಳುವುದು?

ಇಂತಹ ಸಣ್ಣ ಸಣ್ಣ ವಿಷಯಗಳ ಕುರಿತು ಅವರು ತಮ್ಮ ಜೀವನ ಚರಿತ್ರೆಯಲ್ಲಿ



ಬರೆದಿದ್ದಾರೆ. ಬೆಂಜಮಿನ್ ಫ್ರಾಂಕ್ಲಿನ್ ಅವರ ಜೀವನ ಚರಿತ್ರೆಯನ್ನು ಓದಬೇಕೆಂದು ನಾನು ಎಲ್ಲರಿಗೂ ಹೇಳುವೆ. ಇಂದಿಗೂ ಅವರು ನನಗೆ ಸ್ಫೂರ್ತಿ ನೀಡುತ್ತಾರೆ. ಬೆಂಜಮಿನ್ ಫ್ರಾಂಕ್ಲಿನ್ ಅವರದು ಬಹು ಆಯಾಮಿ ವ್ಯಕ್ತಿತ್ವ. ಅವರು ರಾಜನೀತಿಜ್ಞರಾಗಿದ್ದರು, ರಾಜಕೀಯ ವಿಚಾರಧಾರಕರಾಗಿದ್ದರು, ಸಾಮಾಜಿಕ ಕಾರ್ಯಕರ್ತರಾಗಿದ್ದರು ಹಾಗೂ ಕೂಟನೀತಿಜ್ಞರೂ ಆಗಿದ್ದರು. ಅಲ್ಲದೆ ಬಹಳವೇ ಸಾಮಾನ್ಯ ಕುಟುಂಬದಿಂದ ಬಂದವರಾಗಿದ್ದರು. ವಿದ್ಯಾಭ್ಯಾಸವೂ ಪೂರ್ಣಗೊಂಡಿರಲಿಲ್ಲ. ಆದರೆ ಅವರು ಇಂದಿಗೂ ಅಮೆರಿಕದ ಜೀವನದ ಮೇಲೆ ತಮ್ಮ ವಿಚಾರಗಳ ಛಾಪು ಬಿಟ್ಟು ಹೋಗಿದ್ದಾರೆ. ನನಗೆ ಅವರ ಜೀವನ ನಿಜವಾಗಿಯೂ ಪ್ರೇರಣಾದಾಯಕ ಹಾಗೂ ನಿಮಗೂ ಹೇಳುವೆ, ನೀವೂ ಅವರ ಜೀವನಚರಿತ್ರೆ ಓದಿದರೆ ನೀವು ನಿಮ್ಮ ಜೀವನದಲ್ಲಿ ಪರಿವರ್ತನೆ ತಂದುಕೊಳ್ಳಬಯಸಿದರೆ ಅದರಲ್ಲಿ ನಿಮಗೆ ಹಾದಿ ತೋರುತ್ತದೆ ಎಂದು. ಅವರು ಸಣ್ಣ ಸಣ್ಣ ವಿಷಯಗಳನ್ನೂ ಉದಾಹರಿಸಿದ್ದಾರೆ. ನನಗನ್ನಿಸುತ್ತದೆ ನನಗೆಷ್ಟು ಸ್ಫೂರ್ತಿ ದೊರಕಿತೊ, ನಿಮಗೂ ಅಷ್ಟೇ ಸ್ಫೂರ್ತಿ ದೊರಕುತ್ತದೆ ಎಂದು.

ಬರಾಕ್ ಅವರಿಗೆ ಮೋನಿಕಾ ಭಾಟಿಯಾ ಅವರಿಂದ ಒಂದು ಪ್ರಶ್ನೆ.

**(ಗೌರವಾನ್ವಿತ ಶ್ರೀ ಬರಾಕ್ ಒಬಾಮಾ)**

ಪ್ರಶ್ನೆ ಎಂದರೆ ಎರಡು ಪ್ರಮುಖ ಅರ್ಥ ವ್ಯವಸ್ಥೆಗಳ ನಾಯಕರಾಗಿ ನಿಮಗೆ ಆದಾವ ಸ್ಫೂರ್ತಿ ಹಾಗೂ ಕಠಿಣ ದುಡಿಮೆಯ ದಿನದ ನಂತರ ಅದು ಹೇಗೆ ನೀವು ನಗುಮುಖ ತೋರುವಿರಿ?

ಇದೊಂದು ಒಳ್ಳೆಯ ಪ್ರಶ್ನೆ. ಉಳಿದವರೂ ಬಗೆಹರಿಸಲಾರದೇ ಹೋದ ಸಮಸ್ಯೆಗಳು ಮಾತ್ರ ನನ್ನ ಮೇಜಿಗೆ ಬರುತ್ತವೆ ಎಂದು ನಾನು ಕೆಲವೊಮ್ಮೆ ಹೇಳುವೆ. ಅವು ಸುಲಭ ಪ್ರಶ್ನೆಗಳಾಗಿದ್ದರೆ ಅವು ನನ್ನ ಬಳಿಗೆ ಬರುವ ಮುನ್ನವೇ ಮತ್ತಾರೂ ಅವನ್ನು ಬಗೆಹರಿಸಿಬಿಡುತ್ತಿದ್ದರು. ಆದುದರಿಂದ ಕೆಲವು ದಿನಗಳು ಬಹಳ ಕಠಿಣತಮ ಹಾಗೂ ಹತಾಶಾದಾಯಕ. ಇದು ವಿದೇಶ ವ್ಯವಹಾರ ಮತ್ತು ಆಂತರಿಕ ವ್ಯವಹಾರಗಳಲ್ಲೂ ನಿಜ. ಆದರೆ ನನಗೆ ಸ್ಫೂರ್ತಿ ನೀಡುವುದು ಯಾವುದು ಎಂದು



ಹೇಳುವೆ. ಮಾನ್ಯ ಪ್ರಧಾನಮಂತ್ರಿಯವರೇ ನೀವು ನನ್ನ ವಿಚಾರದೊಡನೆ ಸಹಮತ ಹೊಂದಿರುವಿರೋ ಇಲ್ಲವೋ ನಾನು ಕಾಣೆ, ನನ್ನ ಜೀವನದಲ್ಲಿ ಇಂದು ನೀವು ವ್ಯತ್ಯಾಸ ತಂದಿದ್ದೀರಿ ಎಂದು ಹೇಳುವ ಒಬ್ಬರಲ್ಲ ಒಬ್ಬರನ್ನು ನಾನು ಹೆಚ್ಚೂ ಕಡಿಮೆ ಪ್ರತಿನಿತ್ಯ ಭೇಟಿಯಾಗುವೆ.

ನೀವು ಅಂಗೀಕರಿಸಿದ ಆರೋಗ್ಯ ರಕ್ಷಣೆ ಕಾಯಿದೆ ಆರೋಗ್ಯ ವಿಮೆ ಇಲ್ಲದ ನನ್ನ ಮಗುವನ್ನು ಉಳಿಸಿತು ಎಂದು ಅವರು ಹೇಳುವರು. ವೈದ್ಯರೊಬ್ಬರಿಂದ ತಪಾಸಣೆ ಮಾಡಿಸಿಕೊಳ್ಳಲು ಸಾಧ್ಯವಾಗಿ ಆರಂಭದ ಟ್ಯೂಮರ್ ಪತ್ತೆಯಾಗಿ ಈಗ ಅವರು ಆರೋಗ್ಯವಾಗಿದ್ದಾರೆ.

ಅಥವಾ ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ ನನ್ನ ಮನೆ ಉಳಿಸಿಕೊಳ್ಳಲು ನೀವು ಸಹಾಯ ಮಾಡಿದಿರಿ ಎನ್ನುತ್ತಾರೆ.

ಇನ್ನೂ ಕೆಲವರು ಹೇಳುತ್ತಾರೆ, ನನಗೆ ಕಾಲೇಜು ಪ್ರವೇಶ ಸಾಧ್ಯವಿರಲಿಲ್ಲ. ಆದರೆ ನೀವು ಆರಂಭಿಸಿದ ಕಾರ್ಯಕ್ರಮದಿಂದ ನಾನು ವಿಶ್ವ ವಿದ್ಯಾಲಯಕ್ಕೆ ಹೋಗುವುದು ಸಾಧ್ಯವಾಯಿತು ಎನ್ನುತ್ತಾರೆ.

ಕೆಲವೊಮ್ಮೆ ನಾಲ್ಕೈದು ವರ್ಷಗಳ ಹಿಂದೆ ನೀವು ಮಾಡಿರಬಹುದಾದ ಕೆಲಸಕ್ಕೆ ಅವರು ಆಭಾರ ವ್ಯಕ್ತಪಡಿಸುತ್ತಾರೆ. ಇನ್ನೂ ಕೆಲವೊಮ್ಮೆ ನಿಮಗೆ ನೆನಪಿರದ ವಿಚಾರಗಳಿಗೂ ಅವರು ವಂದನೆ ಹೇಳುವರು ಅಥವಾ ಅದನ್ನು ಆ ದಿನ ನೀವು ಯೋಚಿಸಿಯೇ ಇರಲಾರಿರಿ. ಆದರೆ ಮೊದಲು ನೀವು ಹೇಳಿದ ಮಾತಿಗೆ ಅದು ನೆನಪಿಸುವಂತಹ ಸಂಗತಿಯಾಗಿದೆ. ಕೇವಲ ಅಧಿಕಾರ ಹಿಡಿದುಕೊಳ್ಳುವುದೋ ಅಥವಾ ಅಧಿಕಾರ ಕಾಯ್ದುಕೊಳ್ಳುವುದಕ್ಕೆ ಕೆಲಸಗಳನ್ನು ನೀವು ಮಾಡಿದಿರಾದರೆ ನಿಮಗೆ ಸಿಗುವ ತೃಪ್ತಿ ಅನುಪಮ. ಸೇವೆ ಕುರಿತು ಹೇಳುವುದಾದರೆ ಅದನ್ನು ಯಾರು ಬೇಕಾದರೂ ಮಾಡಬಹುದು.

ನೀವು ಇತರರಿಗೆ ಸಹಾಯ ಮಾಡುತ್ತಿದ್ದರೆ ಅದರಿಂದ ನಿಮಗೆ ದೊರಕುವ ತೃಪ್ತಿ ಉಳಿದೆಲ್ಲ ಕೆಲಸಗಳನ್ನೂ ಮಾಡಿದ್ದರಿಂದ ಸಿಗುವ ಫಲಿತಾಂಶಕ್ಕಿಂತ ಮೇರೆ ಮೀರಿದ್ದು. ಅದೇ ಸಾಮಾನ್ಯವಾಗಿ ಇನ್ನೂ ಹೆಚ್ಚು ಕೆಲಸ ಮಾಡಲು ಸ್ಫೂರ್ತಿ ನೀಡುತ್ತದೆ. ಹಾಗೂ ನಾವೆಲ್ಲರೂ ಎದುರಿಸಲು ಸವಾಲು ಹಾಗೂ ಕಷ್ಟಗಳನ್ನು ದಾಟಲು ನಮಗೆ ನೆರವಾಗುತ್ತದೆ. ಹಾಗೂ ಸ್ಫೂರ್ತಿ ನೀಡುತ್ತದೆ. ಏಕೆಂದರೆ ಕೆಲಸ ಮಾಡುವಾಗ ಕಷ್ಟ ಎದುರಾಗುವುದು ನಮಗೆ ಮಾತ್ರವೇನಲ್ಲ. ಎಲ್ಲರಿಗೂ ಇದು ಗೊತ್ತು. ವ್ಯತ್ಯಾಸವೇನೆಂದರೆ ನೀವು ಅದರ ಮೂಲಕವೇ ಕಾರ್ಯತತ್ಪರರಾಗಿರುತ್ತೀರಿ.

**(ಗೌರವಾನ್ವಿತ ಶ್ರೀ ನರೇಂದ್ರ ಮೋದಿ)**

ನಿಜವಾಗಿಯೂ ಬರಾಕ್ ಮನದಾಳದ ಮಾತು ಆಡಿದ್ದಾರೆ. ನಾವು ಯಾವುದೇ ಹುದ್ದೆಯಲ್ಲಿ ಇದ್ದರೂ ನಾವೂ ಕೂಡ ಮನುಷ್ಯರೇ. ಇಂತಹ ಸಣ್ಣ ಸಣ್ಣ ವಿಷಯಗಳೇ ನಮಗೆ ಸ್ಫೂರ್ತಿ ನೀಡುವುದು. ನನ್ನ ಜೀವನದ ಒಂದು ಘಟನೆಯನ್ನು ಹೇಳಲು ನನಗೂ ಮನಸ್ಸಾಗುತ್ತಿದೆ. ನಾನು ಜೀವನದಲ್ಲಿ ಬಹಳ ವರ್ಷಗಳವರೆಗೆ ಒಂದು ವಿಧದ ಪರಿವ್ರಾಜಕನಾಗಿದ್ದೆ. ಜನರ ಮನೆಗಳಿಂದ ನನಗೆ ಊಟ ಸಿಗುತ್ತಿತ್ತು. ಯಾರಾದರೂ ಕರೆಯುತ್ತಿದ್ದರು, ಊಟ ಹಾಕುತ್ತಿದ್ದರು.

ಒಂದು ಕುಟುಂಬ ನನ್ನನ್ನು ಪದೇ ಪದೇ ಒಮ್ಮೆ ನಮ್ಮ ಮನೆಗೆ ಬನ್ನಿ ಊಟ ಮಾಡಿ ಎಂದು ಕರೆಯುತ್ತಿದ್ದರು. ಆದರೆ ನಾನು ಹೋಗುತ್ತಿರಲಿಲ್ಲ. ಅವರು ಬಹಳ ಬಡಕುಟುಂಬದವರೆಂದು ನಾನು ಹೋಗುತ್ತಿರಲಿಲ್ಲ. ನಾನು ಅವರ ಮನೆಗೆ ಭೋಜನಕ್ಕೆ ಹೋದರೆ ಅವರಿಗೆ ಹೊರೆಯಾಗುವೆ ಎಂದು ನನಗನ್ನಿಸುತ್ತಿತ್ತು. ಆದರೆ ಅವರ ಪ್ರೀತಿ ಎಷ್ಟಿತ್ತೆಂದರೆ, ಅವರ ಆಗ್ರಹ ಎಷ್ಟಿತ್ತೆಂದರೆ ಕೊನೆಗೂ ನಾನು ಮಣಿಯಲೇಬೇಕಾಯಿತು. ನಾನು ಅವರ ಮನೆಗೆ ಭೋಜನಕ್ಕೆ ಹೋದೆ, ಅದೊಂದು ಅತಿ ಸಣ್ಣ ಗುಡಿಸಲಾಗಿತ್ತು. ನಾವು ಊಟಕ್ಕೆ ಕುಳಿತಾಗ ನನಗೆ ಸಜ್ಜೆ ರೊಟ್ಟಿ ಹಾಗೂ ಹಾಲು ನೀಡಿದರು. ಆದರೆ ಅವರ ಪುಟ್ಟ ಮಗು ಆ ಹಾಲಿನ ಕಡೆ ನೋಡುತ್ತಿತ್ತು. ಆ ಮಗು ಎಂದೂ ಹಾಲನ್ನೇ ನೋಡಿಲ್ಲವೇನೋ ಎಂದು ಅನ್ನಿಸುತ್ತಿತ್ತು. ತಕ್ಷಣವೇ ನಾನು ಆ ಹಾಲಿನ ಲೋಟ ಆ ಮಗುವಿಗೆ ಕೊಟ್ಟು ಬಿಟ್ಟೆ. ಒಂದೆರಡು ಕ್ಷಣದಲ್ಲೆ ಆ ಮಗು ಹಾಲು ಕುಡಿದುಬಿಟ್ಟಿತು. ಮಗು ಹಾಲು ಕುಡಿದದ್ದಕ್ಕೆ ಮನೆಯವರು ಬಹಳ ಕೋಪಿಸಿಕೊಂಡರು. ನನಗೆ ಅನ್ನಿಸಿತು ಆ ಮಗು ಪ್ರಾಯಶಃ ತನ್ನ ತಾಯಿಯ ಹಾಲು ಬಿಟ್ಟು ಬೇರೆ ಹಾಲನ್ನು ಕುಡಿದಿರಲಿಕ್ಕಿಲ್ಲ ಎಂದು. ಅವರು ನನಗೆಲೆಂದೇ ಹಾಲು ತಂದಿದ್ದರು ಎಂದು ಅನಿಸಿತು.



ಗುಡಿಸಲಿನಲ್ಲಿ ವಾಸಿಸುವ ಬಡ ವ್ಯಕ್ತಿಯೂ ಕೂಡ ನನ್ನ ಬಗ್ಗೆ ಅದೆಷ್ಟು ಕಾಳಜಿ ತೋರಿಸುತ್ತಾನೆ ಎಂಬ ಈ ಸಂಗತಿ ನನಗೆ ಮನಸ್ಸಿನಲ್ಲಿ ಪ್ರೇರಣೆ ಉಂಟು ಮಾಡಿತು. ಆದುದರಿಂದ ಇಂತಹ ಜನರಿಗಾಗಿ ನನ್ನ ಜೀವನ ಮುಡಿಪಾಗಿಡಬೇಕೆಂದು ಅನಿಸಿತು. ಇವೇ ಸಂಗತಿಗಳು ಸ್ಫೂರ್ತಿ ನೀಡುತ್ತವೆ. ಅದೇ ರೀತಿ ಬರಾಕ್ ಸಹ ಸಾಮಾನ್ಯ ಜನರ ಮನಸ್ಸಿನಲ್ಲಿ ಯಾವ ರೀತಿ ಉಂಟಾಗುವ ಅನಿಸಿಕೆಗಳನ್ನು ನಮ್ಮ ಮುಂದೆ ವಿವರಿಸಿದ್ದಾರೆ.

ಇಷ್ಟು ಸಮಯ ನೀಡಿದ್ದಕ್ಕಾಗಿ ನಾನು ಬರಾಕ್ ಅವರಿಗೆ ಬಹಳವೇ ಆಭಾರಿ. ಹಾಗೆಯೇ ಮನದಾಳದ ಮಾತನ್ನು ಕೇಳಿದ ದೇಶವಾಸಿಗಳಿಗೂ ಆಭಾರಿಯಾಗಿರುವೆ. ನನಗೆ ಗೊತ್ತು ಭಾರತದಲ್ಲಿ ರೇಡಿಯೊ ಪ್ರತಿಯೊಂದು ಮನೆಮನೆಗೂ, ಪ್ರತಿಯೊಂದು ಬೀದಿಗೂ ತಲುಪಿದೆ ಎಂದು. ಈ ಬಾನುಲಿ ಮನದಾಳದ ಮಾತು ವಿಶೇಷ ಮನದಾಳದ ಮಾತು, ಈ ಧ್ವನಿ ಸದಾ ಕಾಲ ಗುಂಯ್ ಗುಟ್ಟುತ್ತಿರುತ್ತದೆ.

ನನಗೊಂದು ವಿಚಾರ ಹೊಳೆದಿದೆ. ನಿಮ್ಮ ಮುಂದೆ ಅದನ್ನು ಇಡುವೆ. ನನ್ನ ಹಾಗೂ ಬರಾಕ್ ನಡುವೆ ಇಂದು ನಡೆದ ಮಾತುಕತೆಯ ಇ ಪುಸ್ತಕ ಸಿದ್ಧಪಡಿಸಬೇಕು. ಈ ಮನದ ಮಾತು ವ್ಯವಸ್ಥೆ ಮಾಡಿರುವ ಜನರು ಈ ಪುಸ್ತಕವನ್ನು ಹೊರತರಲಿ ಹಾಗೂ ಈ ಮನದ ಮಾತು ಕೇಳಿದ ಶ್ರೋತೃಗಳೂ ಸಹ ಇದರಲ್ಲಿ ಭಾಗವಹಿಸಿ ಎಂದು ಕೋರುವೆ ಹಾಗೂ ಅವುಗಳ ಪೈಕಿ ಅತ್ಯುತ್ತುಮವಾದ ಒಂದು ನೂರು ವಿಚಾರಗಳನ್ನೂ ನನ್ನ ಹಾಗೂ ಬರಾಕ್ ಅವರ ಇ ಪುಸ್ತಕದೊಡನೆ ಸೇರಿಸಿ ಒಂದು ಇ ಪುಸ್ತಕ ತರೋಣ, ನೀವೇನಾದರೂ ಟ್ವೀಟರ್, ಫೇಸ್ ಬುಕ್, ಆನ್‌ಲೈನ್‌ಗಳಲ್ಲಿ ಏನಾದರೂ ಬರೆಯಲು ಬಯಸುವುದಾದರೆ #YesWeCan, ಟ್ಯಾಗ್ ಜತೆ ನಮಗೆ ಬರೆಯಿರಿ.

- Eliminate Poverty - #YesWeCan
- Quality Healthcare to All - #YesWeCan
- Youth empowered with Education - #YesWeCan
- Jobs for All - #YesWeCan
- End to Terrorism - #YesWeCan
- Global Peace and Progress - #YesWeCan

ಈ ಟ್ಯಾಗ್ ಲೈನ್ ಜತೆ ನೀವೂ ಸಹ ಮನದ ಮಾತು ಕೇಳಿದ ಮೇಲೆ ನಿಮ್ಮ ವಿಚಾರ, ನಿಮ್ಮ ಅನುಭವ, ಭಾವನೆಗಳನ್ನು ತಲುಪಿಸಿ. ಅವುಗಳಲ್ಲಿ ಅತ್ಯುತ್ತಮವಾದ ಒಂದು ನೂರನ್ನು ನಾವು ಆಯ್ಕೆ ಮಾಡುತ್ತೇವೆ ಹಾಗೂ ನಾನು ಹಾಗೂ ಬರಾಕ್ ಏನು ಮಾಡಲಿದ್ದೇವೆಂಬುದನ್ನು ಆ ಪುಸ್ತಕದಲ್ಲಿ ಸೇರಿಸುತ್ತೇವೆ; ಹಾಗೂ ನನಗನ್ನಿಸುತ್ತದೆ ಇದು ಎಲ್ಲರ ಮನದ ಮಾತಾಗುತ್ತದೆ ಎಂದು.

ಮತ್ತೊಮ್ಮೆ ಬರಾಕ್ ಅವರಿಗೆ ಬಹಳ ಬಹಳ ಆಭಾರಿ, ನಿಮಗೂ ಸಹ ಬಹಳ ಬಹಳ ಆಭಾರಿ. ಹಾಗೂ ಜನವರಿ 26ರ ಪವಿತ್ರ ದಿನದ ಸಂದರ್ಭದಲ್ಲಿ ಬರಾಕ್ ಇಲ್ಲಿಗೆ ಬಂದದ್ದು ನನಗಂತೂ ಹೆಮ್ಮೆಯ ಸಂಗತಿಯಾಗಿದೆ. ದೇಶಕ್ಕೂ ಕೂಡ ಹೆಮ್ಮೆಯ ಸಂಗತಿ, ಬಹಳ ಬಹಳ ಧನ್ಯವಾದ. ❑



# ವಿತ್ತೀಯ ಒಕ್ಕೂಟ ವ್ಯವಸ್ಥೆ

**ಡಾ. ಎಂ. ಎ. ಉಮ್ಮನ್**
**ಕನ್ನಡಕ್ಕೆ : ಸೋಮಶೇಖರ್**



**ಹೊಸತಾಗಿ ರಚನೆಯಾಗಿರುವ ನೀತಿ ಆಯೋಗದ ರೂಪುರೇಷೆಗಳು ಇನ್ನೂ ಸಿದ್ಧಗೊಳ್ಳದಿದ್ದರೂ ಅದು ತಳಮಟ್ಟದಿಂದಲೇ ಯೋಜನೆ ಸಿದ್ಧಪಡಿಸುವ ಬಗ್ಗೆ ಈಗಾಗಲೇ ಸೂಚನೆಗಳು ಸಿಕ್ಕಿವೆ. ಅದರ ಮಹತ್ವ ಮತ್ತು ಪ್ರಾಮುಖ್ಯತೆಯನ್ನು ಅದು ಅರಿತುಕೊಂಡಿದೆ.**

ಸರ್ಕಾರದ ವ್ಯವಸ್ಥೆಯಲ್ಲಿ ಒಕ್ಕೂಟ (ಫೆಡರೇಷನ್) ಎಂದರೆ ಹಲವು ಆಡಳಿತ ವ್ಯವಸ್ಥೆಗಳ ಒಕ್ಕೂಟ. ಅದೇ ರೀತಿ ವಿತ್ತೀಯ ವ್ಯವಸ್ಥೆಯಲ್ಲಿ ಕೂಡ ಇದೇ ಮಾದರಿ ಇದೆ. ಅವುಗಳೆಂದರೆ ಖರ್ಚು–ವೆಚ್ಚದ ಹೊಣೆಗಾರಿಕೆಗಳು, ವಿತ್ತೀಯ ಕಾರ್ಯನಿಯೋಜನೆ, ಸರ್ಕಾರದೊಳಗಿನ ವರ್ಗಾವಣೆ ವ್ಯವಸ್ಥೆಗಳು ಮತ್ತು ಒಕ್ಕೂಟದ ಒಳಗೇ ಇರುವಂಥ ಹಣಕಾಸು ಸಂಬಂಧಗಳ ನಿರ್ವಹಣೆ. ಸರ್ಕಾರದ ವಿವಿಧ ಸ್ತರಗಳಿಗೆ ಅನುಕೂಲವಾಗುವಂತೆ ಪಾರದರ್ಶಕ, ಪರಿಣಾಮಕಾರಿಯಾಗಿ ಸಂಪನ್ಮೂಲಗಳನ್ನು ಒದಗಿಸಿಕೊಡುವುದೇ ಅದರ ಮೂಲ ಆಶಯ ಮತ್ತು ಹೊಣೆಗಾರಿಕೆಯಾಗಿದೆ. ಮೂಲಭೂತವಾಗಿ ಹೇಳುವುದಾದರೆ ನಮ್ಮ ದೇಶದ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯಗಳು ಎಂಬ ಎರಡು ರಚನೆಗಳಿವೆ. ಆದರೆ ಸಂವಿಧಾನಕ್ಕೆ 73 ಮತ್ತು 74ನೇ ತಿದ್ದುಪಡಿ ತಂದ ಬಳಿಕ ಮೂರನೇ ವ್ಯವಸ್ಥೆ ಸೇರ್ಪಡೆಯಾಯಿತು. ಅಂದರೆ ಮೂರು ಹಂತಗಳಿರುವ ಪಂಚಾಯತ್ ರಾಜ್ ವ್ಯವಸ್ಥೆ ಜಾರಿಗೆ ಬಂದಿತು.

ಹೀಗಾಗಿ ನಮ್ಮ ದೇಶದಲ್ಲಿ ಬಹುಸ್ತರದ ಹಣಕಾಸು ವ್ಯವಸ್ಥೆ ಜಾರಿಗೆ ಬಂದಿದೆ.ಸಂವಿಧಾನಕ್ಕೆ ತಿದ್ದುಪಡಿ ತಂದು 20 ವರ್ಷಗಳೇ ಕಳೆದಿವೆ. 1994ರಲ್ಲಿ ಎಲ್ಲ ರಾಜ್ಯ ಸರ್ಕಾರಗಳೂ ಇದೇ ವ್ಯವಸ್ಥೆಯ ಜಾರಿಗೆ ಮುಂದಾದವು. ದೇಶದ ವಿತ್ತೀಯ ಒಕ್ಕೂಟದಲ್ಲಿ ಪ್ರಜಾಸತ್ತಾತ್ಮಕವಾದ ಅಧಿಕಾರ ವಿಕೇಂದ್ರೀಕರಣದ ದಿಕ್ಕಿನಲ್ಲಿ ಅದೊಂದು ನಿಜಕ್ಕೂ ಅಭೂತಪೂರ್ವವಾದ ನಿರ್ಧಾರವಾಗಿತ್ತು. ಇಂಥ ನಿರ್ಧಾರದ ಮೂಲಕ ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಆರ್ಥಿಕವಾಗಿ ಸದೃಢಗೊಳಿಸುವುದೇ ಆಗಿದೆ. ಇಲ್ಲಿ ಉದ್ಭವಿಸುವ ಪ್ರಮುಖ ಪ್ರಶ್ನೆಯೇನೆಂದರೆ ಸಂವಿಧಾನದ 243ಜಿ ಮತ್ತು 243ಡಬ್ಲ್ಯೂ ವಿಧಿಯಲ್ಲಿ ಉಲ್ಲೇಖಿಸಿರುವಂತೆ ಆರ್ಥಿಕ ಮತ್ತು ಸಾಮಾಜಿಕ ನ್ಯಾಯವನ್ನು ನೀಡುವಲ್ಲಿ ಸ್ಥಳೀಯಾಡಳಿತ ಸಂಸ್ಥೆಗಳು ನಿಜಕ್ಕೂ ಸ್ವಯಮಾಡಳಿತ ಸಂಸ್ಥೆಗಳಾಗಿವೆಯೇ ಎನ್ನುವುದನ್ನು ಕಂಡುಕೊಳ್ಳಬೇಕಿದೆ. ಇದೀಗ ಬದಲಾಗಿರುವ ವ್ಯವಸ್ಥೆಯಲ್ಲಿ ಸಂವಿಧಾನೇತರ ಸಂಸ್ಥೆಯಾಗಿದ್ದ ಹಿಂದಿನ ಯೋಜನಾ ಆಯೋಗ ರದ್ದು ಮಾಡಿ ಈ ವರ್ಷದ ಜನವರಿಯಿಂದ ಭಾರತೀಯ ರಾಷ್ಟ್ರೀಯ ತಾಂತ್ರಿಕ ಬದಲಾವಣೆ ಸಂಸ್ಥೆ (ನೀತಿ) ಆಯೋಗ ರಚಿಸಲಾಗಿದೆ. ಹೀಗಾಗಿ ಸಂವಿಧಾನ 243ಜಿಡಿಯಲ್ಲಿ ಹೇಳಿರುವಂತೆ ಜಿಲ್ಲಾ ಯೋಜನಾ ಸಮಿತಿ ರಚನೆ ಮಾಡಲಾಗುತ್ತದೆಯೇ ಎಂಬ ಪ್ರಶ್ನೆಯೂ ಉಂಟಾಗುತ್ತಿದೆ. ಅಧಿಕಾರ ಹಸ್ತಾಂತರಿಸುವಲ್ಲಿ ಯಾವ ರೀತಿಯ ವಿಚಾರಗಳನ್ನು ಅನುಸರಿಸಲಾಗುತ್ತದೆ, ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಅನುಕೂಲವಾಗುವಂತೆ ವಿತ್ತೀಯ ಒಕ್ಕೂಟ ವ್ಯವಸ್ಥೆಯಲ್ಲಿ ಹೇಳಿರುವಂತೆ ಅದನ್ನು ಹೊಸ ದೃಷ್ಟಿಕೋನದಿಂದ ನೋಡಬೇಕಾಗಿದೆ. ಈ ಲೇಖನದಲ್ಲಿ ಇಂಥ ವಿಚಾರಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಗುತ್ತದೆ. ತಪ್ಪು ಉತ್ತರಗಳನ್ನು ಕೊಡುವ ಬದಲು ಸರಿಯಾದ ರೀತಿಯಲ್ಲಿ ಸಂದೇಹಗಳನ್ನು ಪರಿಹರಿಸಿಕೊಳ್ಳುವುದೇ ಉತ್ತಮ.

ಮಾಜಿ ಅಧ್ಯಕ್ಷರು, ನಾಲ್ಕನೇ ರಾಜ್ಯ ಹಣಕಾಸು ಆಯೋಗ, ಕೇರಳ. **email : maoommen09@gmail.com**

ಸಹಕಾರ ಒಕ್ಕೂಟ ವ್ಯವಸ್ಥೆ ಎನ್ನುವುದು ಸದ್ಯ ಕೇಂದ್ರದಲ್ಲಿರುವ ಹೊಸ ಸರ್ಕಾರದ ಆಶಯ. ಅದರಲ್ಲೇ ಅದು ನಂಬಿಕೆಯನ್ನಿರಿಸಿಕೊಂಡಿದೆ ಕೂಡ. ಅದಕ್ಕೆ ಸಮನಾದ ವ್ಯವಸ್ಥೆ ವಿಶ್ವದ ಇತರ ರಾಷ್ಟ್ರಗಳಲ್ಲಿಯೂ ಇಲ್ಲ ಎಂಬ ನಂಬಿಕೆ ಸರ್ಕಾರದ್ದು. ಉದಾಹರಣೆಗೆ ಹೇಳುವುದಿದ್ದರೆ ಜರ್ಮನಿ ಮತ್ತು ದಕ್ಷಿಣ ಆಫ್ರಿಕಗಳಲ್ಲಿ ಒಕ್ಕೂಟ ಸರ್ಕಾರಗಳಿದ್ದು, ಅವುಗಳೇ ಪ್ರಮುಖ ನಿರ್ಣಯಗಳನ್ನು ಕೈಗೊಳ್ಳುತ್ತವೆ. ಅವುಗಳನ್ನು ಸರ್ಕಾರದ ವಿವಿಧ ಇಲಾಖೆಗಳು ಅನುಷ್ಠಾನಗೊಳಿಸುತ್ತವೆ. ಇದೇ ವ್ಯವಸ್ಥೆ ಬ್ರೆಜಿಲ್‌ನಲ್ಲಿ ಕೊಂಚ ಬದಲಾವಣೆಯಲ್ಲಿ ಅಲ್ಲಿನ ಸರ್ಕಾರದ ಎಲ್ಲ ಮೂರು ವಿಭಾಗಗಳಿಗೆ ಸ್ವಾಯತ್ತೆ ಇದೆ. ಜತೆಗೆ ನೀತಿ–ನಿಯಮಗಳನ್ನು ರೂಪಿಸುವುದು ಮತ್ತು ಅನುಷ್ಠಾನದಲ್ಲಿ ಪರಸ್ಪರ ಸಹಕಾರ ನೀಡುತ್ತವೆ. ಹಾಗಿದ್ದರೆ ನಮ್ಮ ದೇಶದಲ್ಲಿ ಮೂರು ಸ್ತರಗಳ ಪಂಚಾಯತ್ ರಾಜ್, ರಾಜ್ಯ ಮತ್ತು ಕೇಂದ್ರ ಸರ್ಕಾರ ಹೀಗೆ ಮೂರು ಹಂತಗಳ ವ್ಯವಸ್ಥೆ ಇದೆ. ಇದರ ಹೊರತಾಗಿಯೂ ಮಾರ್ಬಲ್ ಕೇಕ್ ಮಾಡೆಲ್ ಎಂದು ಕರೆಯುವ ಹಾಗಿಲ್ಲ. ಏಕೆಂದರೆ ನಮ್ಮ ಸರ್ಕಾರಿ ವ್ಯವಸ್ಥೆಯ ಹಲವು ಇಲಾಖೆಗಳು ಒಂದೇ ರೀತಿಯ ಹೊಣೆ ಮತ್ತು ನೀತಿ ರೂಪಣೆಯನ್ನು ಅನುಷ್ಠಾನಗೊಳಿಸುವ ಹೊಣೆ ಹೊಂದಿವೆ ಮತ್ತು ಸಮಾನ ಪಾಲುದಾರಿಕೆಯನ್ನು ಹೊಂದಿವೆ. ವಾಸ್ತವಾಗಿ ನಮ್ಮ ದೇಶದ ಒಕ್ಕೂಟದ ವ್ಯವಸ್ಥೆಯಲ್ಲಿ ಹೆಚ್ಚಿನ ಹೊಣೆಗಾರಿಕೆ ಕೇಂದ್ರಕ್ಕೇ ಇರುವಂತಿದೆ. ರಾಜ್ಯ ಮತ್ತು ಸ್ಥಳೀಯ ಮಟ್ಟದಲ್ಲಿ ಸಂಪನ್ಮೂಲಗಳ ಹಂಚಿಕೆಯಲ್ಲಿ ಭಾರೀ ವ್ಯತ್ಯಾಸ ಇದೆ. ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಸಂಸ್ಥೆಗಳು (ಅದರಲ್ಲಿ ಮೂರು ಹಂತದ ಪಂಚಾಯತ್ ವ್ಯವಸ್ಥೆ ಮತ್ತು ನಗರ ಸ್ಥಳೀಯ ಸಂಸ್ಥೆಗಳು)ಇರುವುದರಿಂದ ಅಧಿಕಾರ ಹಸ್ತಾಂತರ ಮಾಡುವಲ್ಲಿ ಹಲವು ಸಂಸ್ಥೆಗಳು ಇರುವುದರಿಂದ ಇಂಥ ಸಮಸ್ಯೆ ಉಂಟಾಗುತ್ತದೆ.

**ಪೂರಕ ತತ್ವ ಮತ್ತು ಭಾರತದ ಸಹಕಾರ ಒಕ್ಕೂಟ ವ್ಯವಸ್ಥೆ**

ಸಹಕಾರ ಒಕ್ಕೂಟ ವ್ಯವಸ್ಥೆ ಅನುಷ್ಠಾನ ಮತ್ತು ಜಾರಿಯಲ್ಲಿ ಪ್ರಮುಖ ವಿಚಾರಗಳನ್ನು ಚರ್ಚಿಸಬೇಕಾಗಿದೆ. ಸುಗಮ ಮತ್ತು ಸ್ಪಂದನಶೀಲ ವಿತ್ತೀಯ ಒಕ್ಕೂಟ ವ್ಯವಸ್ಥೆ ಜಾರಿಯಾಗಬೇಕಾದರೆ ಯಾರು ಯಾವ ಹೊಣೆಗಾರಿಕೆ ನಿರ್ವಹಿಸಬೇಕು ಎಂಬ ವಿಚಾರ ಮೊದಲು ನಿರ್ಣಯಿಸಬೇಕು. ಜತೆಗೆ ಯಾವ ಕ್ಷೇತ್ರಕ್ಕೆ ತೆರಿಗೆಯನ್ನು ಯಾರು ಹಾಕಬೇಕು ಎಂಬ ಜವಾಬ್ದಾರಿ ನಿಗದಿಮಾಡಬೇಕು. ಭಾರತದಲ್ಲಿ ಇಂಥ ವಿಚಾರಗಳ ಬಗ್ಗೆ ಚರ್ಚೆಯೇ ನಡೆದಿಲ್ಲ ಮಾತ್ರವಲ್ಲ ಒಂದು ವೇಳೆ ಕೇಳಿದ್ದರೂ ಸಮಾಧಾನಕರವಾದ ಉತ್ತರ ದೊರಕಿರುವ ಸಾಧ್ಯತೆ ಕಡಿಮೆಯೇ. ಈ ಹಿನ್ನೆಲೆಯಲ್ಲಿ ಅತ್ಯಂತ ಸರಳವಾಗಿ ಕೆಲಸದ ಹೊಣೆಗಾರಿಕೆಯನ್ನು ನೀಡಬೇಕಾಗುತ್ತದೆ. ಖರ್ಚು–ವೆಚ್ಚದ ಹೊಣೆಗಾರಿಕೆ, ಕಂದಾಯ ವಸೂಲು ಮಾಡುವ ಅಧಿಕಾರ ಮತ್ತು ನಿಯಂತ್ರಣ ವ್ಯವಸ್ಥೆಗೆ ಪೂರಕವಾಗಿ ಇರಬೇಕಾಗುತ್ತದೆ. ಅದಕ್ಕಾಗಿ ಅತ್ಯಂತ ಸುಲಭವಾಗಿ ಯಾವುದನ್ನು ಮಾಡಬಹುದು ಎಂಬ ಪ್ರಶ್ನೆ ಉಂಟಾಗುತ್ತದೆ (ಕನಿಷ್ಠ ವೆಚ್ಚ ಮತ್ತು ವ್ಯವಹಾರದಲ್ಲಿ).ಇಲ್ಲದಿದ್ದಲ್ಲಿ ಸರ್ಕಾರದ ಪ್ರತಿಯೊಂದು ಉನ್ನತ ಮಟ್ಟದಲ್ಲಿಯೂ ಹೊಣೆಗಾರಿಕೆಯನ್ನು ನಿಗದಿ ಮಾಡುವಂಥ ವ್ಯವಸ್ಥೆ ಜಾರಿಗೆ ತರಬೇಕಾಗುತ್ತದೆ. ವೇದಗಳ ಕಾಲದಲ್ಲಿಯೂ ಪಂಚಾಯತ್ ರಾಜ್ ವ್ಯವಸ್ಥೆ ಇತ್ತು. ಅದೇ ರೀತಿ ಬ್ರಿಟಿಷರು ತಮ್ಮ ಅವಧಿಯಲ್ಲಿಯೂ ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದರು. ಜತೆಗೆ ಅವುಗಳಿಗೆ ಸ್ವಯಮಧಿಕಾರ ನೀಡುವ ಇರಾದೆ ಹೊಂದಿದ್ದರು. ಭಾರತ ಸರ್ಕಾರ ಕಾಯ್ದೆ 1935ರಲ್ಲೂ ಗ್ರಾಮ ಪಂಚಾಯತ್ ಮತ್ತು ಪುರಸಭೆಗಳನ್ನು ರಚಿಸುವ ಮೂಲಕ ಅದಕ್ಕೆ ಒತ್ತು ನೀಡಲಾಗಿತ್ತು. ದೇಶದ ಸ್ವಾತಂತ್ರ್ಯ ಹೋರಾಟಕ್ಕೂ ಗ್ರಾಮ ಪಂಚಾಯತ್ ವ್ಯವಸ್ಥೆಗೂ ಅವಿನಾಭಾವ ಸಂಬಂಧ ಇದೆ. ರಾಷ್ಟ್ರಪಿತ ಮಹಾತ್ಮ ಗಾಂಧಿಯವರೂ ಕೂಡ ತಮ್ಮ ಹೋರಾಟದ ಸಂದರ್ಭದಲ್ಲಿ ಗ್ರಾಮ ಸ್ವರಾಜ್ಯ ಎನ್ನುವುದನ್ನೇ ಪ್ರಮುಖವಾಗಿ ಪ್ರಸ್ತಾಪಿಸುತ್ತಿದ್ದರು. ಸಂವಿಧಾನದ 40ನೇ ವಿಧಿಯಲ್ಲಿ ಮಾತ್ರ ಗ್ರಾಮ ಪಂಚಾಯತ್‌ಗಳ ಬಗ್ಗೆ ವಿಶೇಷವಾಗಿ ಉಲ್ಲೇಖಿಸಲಾಗಿದೆ. ಇದರ ಜತೆಗೆ ಸಂವಿಧಾನದ ರಾಜ್ಯ ಆಡಳಿತ ನೀತಿಯ ನಿರ್ದೇಶಕ ತತ್ವಗಳಲ್ಲಿಯೂ ಈ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸಲಾಗಿದೆ. ಹೀಗಾಗಿ ಅದು ಕಾನೂನು ಮೂಲಕ ಜಾರಿಯಾಗುವಂಥ ನಿಯಮವಾಗಿ ಪರಿವರ್ತನೆಯಾಗಿರಲಿಲ್ಲ. ಅಷ್ಟೇ ಏಕೆ ಇದೇ ವಿಚಾರಕ್ಕೆ ಸಂಬಂಧಿಸಿದಂತೆ 1884ರಲ್ಲಿ ಲಾರ್ಡ್ ರಿಪ್ಪನ್ ಅಂಗೀಕರಿಸಿದ್ದ ಗೊತ್ತುವಳಿಯನ್ನು ಕೂಡ ಮಾನ್ಯ ಮಾಡಿರಲಿಲ್ಲ. ಅಂತಿಮವಾಗಿ ಸಂವಿಧಾನಕ್ಕೆ ಮಾಡಲಾದ ಐತಿಹಾಸಿಕ 73 ಮತ್ತು 74 ತಿದ್ದುಪಡಿ ಬಳಿಕ ದೇಶದಲ್ಲಿ ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಸಾಂವೈಧಾನಿಕ ಮಾನ್ಯತೆ ಸಿಕ್ಕಿತು.


THE CONSTITUTION OF INDIA

WE, THE PEOPLE OF INDIA, having solemnly resolved to constitute India into a SOVEREIGN DEMOCRATIC REPUBLIC and to secure to all its citizens:

JUSTICE, social, economic and political;

LIBERTY of thought, expression, belief, faith and worship;

EQUALITY of status and of opportunity;

and to promote among them all

FRATERNITY assuring the dignity of the individual and the unity of the Nation;

IN OUR CONSTITUENT ASSEMBLY this twenty-sixth day of November, 1949, do HEREBY ADOPT, ENACT AND GIVE TO OURSELVES THIS CONSTITUTION.

ಭಾರತದ ಸಂವಿಧಾನದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗಾಗಿ ಮೂರು ರೀತಿಯ ಪ್ರತ್ಯೇಕ ತೆರಿಗೆ ವ್ಯವಸ್ಥೆಗಳಿವೆ. (ಪ್ರತ್ಯೇಕವಾಗಿ ಆರನೇ ಷೆಡ್ಯೂಲ್ ನಲ್ಲಿ) ಕೇಂದ್ರ ಪಟ್ಟಿ(ಕೇಂದ್ರ ಸರ್ಕಾರಕ್ಕೆ), ರಾಜ್ಯ ಪಟ್ಟಿ (ರಾಜ್ಯ ಸರ್ಕಾರಕ್ಕೆ) ಮತ್ತು ಸಹವರ್ತಿ (ಕನ್ ಕರೆಂಟ್) ಪಟ್ಟಿ (ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ) ಎಂದು ವರ್ಗೀಕರಿಸಲಾಗಿದೆ. ಸಂವಿಧಾನ ರಚನೆಕಾರರು ಸಂವಿಧಾನ ರಚನೆ ವೇಳೆ ಹೆಚ್ಚಿನ ಅಂಶಗಳನ್ನು ಭಾರತ ಸರ್ಕಾರ ಕಾಯ್ದೆ 1935ರ ಕೆಲ ಅಂಶಗಳನ್ನು ಅನುಸರಿಸಿದ್ದರು. ಹೀಗಾಗಿ ಪೂರಕ ತತ್ವಗಳನ್ನು ಅನುಸರಿಸುವ ಬದಲು ತಾತ್ಕಾಲಿಕ ವ್ಯವಸ್ಥೆಗಳನ್ನು ರೂಪಿಸಿದ್ದರು. ಹೀಗಾಗಿ 73 ಮತ್ತು 74ನೇ ತಿದ್ದುಪಡಿಯಿಂದಾಗಿ ಮೂರು ಹಂತದ ಆಡಳಿತ ವ್ಯವಸ್ಥೆ (ಪಂಚಾಯತ್) ಬಗ್ಗೆ ಹೊಸ ದೃಷ್ಟಿಕೋನದಿಂದ ನೋಡುವ ಮತ್ತು ಅವುಗಳಿಗಾಗಿ ಒಂದು ಪ್ರಬಲವಾದ ಹಣಕಾಸು ವ್ಯವಸ್ಥೆ ರೂಪಿಸಲು ಅವಕಾಶ ಸಿಕ್ಕಿದಂತಾಯಿತು. ಆದರೆ ಅದರ ಬದಲಾಗಿ ಷೆಡ್ಯೂಲ್ 11ರ ವ್ಯಾಪ್ತಿಯಲ್ಲಿ ಬರುವ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಎರಡು ಹೊಸ ತಿದ್ದುಪಡಿಗಳನ್ನು ಸೇರ್ಪಡೆಗೊಳಿಸಿದಂತಾಯಿತು. ರಾಜ್ಯ ಪಟ್ಟಿ ಮತ್ತು ಸಹವರ್ತಿ ಪಟ್ಟಿಯಲ್ಲಿದ್ದ ವಿಚಾರಗಳನ್ನು ತೆಗೆದು ಹಾಕಲಾಯಿತು. ಹೀಗಾಗಿ ಸ್ಥಳೀಯ ಆಡಳಿತ ವ್ಯವಸ್ಥೆ ಎನ್ನುವುದು ಎಲ್ಲರಿಗೂ ಹುಲುಸಾಗಿ ಮೇಯುವ ಹುಲ್ಲುಗಾವಲಾಗಿ

ಪರಿವರ್ತನೆಯಾಯಿತು. ಅದಕ್ಕಿಂತ ಹೆಚ್ಚಾಗಿ ಅವುಗಳಿಗೆ ಇರುವ ಹಣಕಾಸು ವ್ಯವಸ್ಥೆ,ಸೌಲಭ್ಯದ ಬಗ್ಗೆ ಯಾವುದೇ ರೀತಿಯಲ್ಲಿ ಸ್ಪಷ್ಟವಾಗಿ ಉಲ್ಲೇಖವಿರಲಿಲ್ಲ. 73 ಮತ್ತು 74ನೇ ತಿದ್ದುಪಡಿಗಳಲ್ಲಿ ಉಲ್ಲೇಖಿಸಿದ್ದ ಅಂಶಗಳನ್ನು ಪರಿಗಣಿಸಿದ ಕೇರಳ ರಾಜ್ಯ ಸರ್ಕಾರ ಅದನ್ನು ಅನುಷ್ಠಾನಗೊಳಿಸುವಲ್ಲಿ ಉಂಟಾಗುವ ಪ್ರಾಯೋಗಿಕ ಅಡಚಣೆಗಳನ್ನು ಮನಗಂಡು ಷೆಡ್ಯೂಲ್ 11 ಮತ್ತು 12ರಲ್ಲಿ ಉಲ್ಲೇಖಿತವಾದ ಸ್ಥಳೀಯ ಸಂಸ್ಥೆಗಳ ಚಟುವಟಿಕೆಗಳಲ್ಲಿ ಕೆಲವೊಂದು ಸ್ಪಷ್ಟತೆ ತರಲು ಮುಂದಾಯಿತು. 2004ರಲ್ಲಿ ಆರಂಭವಾದ ಪಂಚಾಯತ್ ರಾಜ್ ಸಚಿವಾಲಯ ಇಂಥ ತೊಡಕುಗಳನ್ನು ಸಂಪೂರ್ಣವಾಗಿ ತೊಡೆದು ಹಾಕಲು ಕ್ರಮ ಕೈಗೊಂಡಿತು. ವಿಳಂಬವಾಗಿಯಾದರೂ ಎಚ್ಚೆತ್ತುಕೊಂಡ ಕೇರಳ ಸರ್ಕಾರ ಯಾವ ಸಂಸ್ಥೆಗಳು ಯಾವ ರೀತಿಯ ಆಡಳಿತಾತ್ಮಕ ಕೆಲಸ, ಚಟುವಟಿಕೆಗಳನ್ನು ನಡೆಸಬೇಕು ಎಂದು ಅಧ್ಯಯನ ನಡೆಸಿದ್ದರಿಂದ ಆರ್ಥಿಕ ಸಂಪನ್ಮೂಲಗಳನ್ನು ಸರಿಯಾದ ದಿಕ್ಕಿನಲ್ಲಿ ವಿಕೇಂದ್ರೀಕರಿಸಲು ನೆರವಾಯಿತು.

(ಕೇರಳ ಸರ್ಕಾರದ ಅಧಿಕಾರ ವಿಕೇಂದ್ರೀಕರಣ ಸಮಿತಿಗೆ 1996–1999 ಸುಬ್ರತೋ ಸೇನ್ ಅಧ್ಯಕ್ಷರಾಗಿದ್ದರು. ಹೀಗಾಗಿ ಕೇರಳದಲ್ಲಿ ಸೇನ್ ಸಮಿತಿ ವರದಿ ಎಂದೇ ಜನಜನಿತವಾಗಿದೆ. ಸ್ಥಳೀಯ ಸಂಸ್ಥೆಗಳಿಗೆ ಯಾವ ರೀತಿಯಲ್ಲಿ ವಿಕೇಂದ್ರೀಕರಣಯುಕ್ತ ಅಧಿಕಾರ ಸಂಬಂಧ, ಹಣಕಾಸು, ಆಡಳಿತಾತ್ಮಕ ಸ್ವಾಯತ್ತೆ ನೀಡಬಹುದು ಎಂಬ ಬಗ್ಗೆ ಸಮರ್ಪಕವಾಗಿ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಸೂಚಿಸಲಾಗಿತ್ತು. ಈ ಲೇಖಕ ಕೂಡ ಸಮಿತಿಯಲ್ಲಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು)

ಪ್ರಜಾಸತ್ತಾತ್ಮಕ ಅಧಿಕಾರ ವಿಕೇಂದ್ರೀಕರಣದ ವಿರುದ್ಧ ಅಭಿಪ್ರಾಯ ಹೊಂದಿರುವವರಿಗೆ ಸಹ್ಯವಾಗದ ಮತ್ತು ತಪ್ಪು ಎನಿಸುವ ವಿಚಾರ ಈ ವಿಭಾಗದಲ್ಲಿ ಇದೆ ಎಂದು ತಿಳಿಯಪಡಿಸಲು ಇಚ್ಛಿಸುತ್ತೇನೆ. ಸಂವಿಧಾನದ ರಾಜ್ಯ ಪಟ್ಟಿಯಲ್ಲಿರುವ 5ನೇ ಸೂಚಿಯಲ್ಲಿ ಈ ಮುಂದಿನಂತೆ ಹೇಳಲ್ಪಟ್ಟಿದೆ.

“ಸ್ಥಳೀಯ ಆಡಳಿತವೆಂದರೆ ಪುರಸಭೆಗಳು, ಅಭಿವೃದ್ಧಿ ಟ್ರಸ್ಟ್‌ಗಳು ಜಿಲ್ಲಾ ಮಂಡಳಿಗಳು, ಗಣಿ ಪುನರ್ವಸತಿ ಪ್ರಾಧಿಕಾರ ಮತ್ತು ಆಯಾ ಸ್ಥಳೀಯ ಪ್ರದೇಶಗಳ ಅಧಿಕಾರಕ್ಕಾಗಿ ರಚನೆಯಾಗಿರುವ ಸ್ವಯಮಾಡಳಿತ ಸಂಸ್ಥೆಗಳು ಅಥವಾ ಗ್ರಾಮ ಆಡಳಿತ ಸಂಸ್ಥೆ.” (ಸಂವಿಧಾನದ ಏಳನೇ ಷೆಡ್ಯೂಲ್‌ನ ಎರಡನೇ ಪಟ್ಟಿಯಲ್ಲಿ ರಾಜ್ಯ ವಿಭಾಗ). ಸದ್ಯ ಕೇಂದ್ರದ ಸರ್ಕಾರ ಉತ್ತಮ ಆಡಳಿತ ನೀಡಬೇಕೆಂಬ ಸಂಕಲ್ಪ ಮಾಡಿದೆ. ಹೀಗಾಗಿ ಹಾಲಿ ವ್ಯವಸ್ಥೆಯನ್ನು ತೆಗೆದುಹಾಕಿ ಸಂವಿಧಾನದ 11 ಮತ್ತು 12ನೇ ಷೆಡ್ಯೂಲ್‌ನಲ್ಲಿ ಪ್ರಸ್ತಾಪಿರುವಂತೆ ಸ್ಥಳೀಯ ಸಂಸ್ಥೆಗಳು ನಿರ್ವಹಿಸಬೇಕಾಗಿರುವ ಆಡಳಿತಾತ್ಮಕ ಕೆಲಸ ಮತ್ತು ಚಟುವಟಿಕೆಗಳನ್ನು ಹೊಸತಾಗಿ ನಿರೂಪಿಸಬೇಕು.

### ಒಕ್ಕೂಟ ವ್ಯವಸ್ಥೆಯಲ್ಲಿ ನೀತಿ ಆಯೋಗ– ಹಲವು ಪ್ರಶ್ನೆಗಳು

ಸದ್ಯ ತೆರೆಯ ಮರೆಗೆ ಸರಿದಿರುವ ಹಿಂದಿನ ಯೋಜನಾ ಆಯೋಗ ಬೃಹದಾಕಾರವಾಗಿ ಬೆಳೆದು, ದೇಶದ ಅಭಿವೃದ್ಧಿಗೆ ಗುರುತರ ಕೊಡುಗೆ ನೀಡಿದೆ. ಆದರೆ ಕೆಲವೊಂದು ವಿಚಾರಗಳಲ್ಲಿ ಅದು ವಿಫಲವಾಯಿತು ಎಂದೇ ಹೇಳಬೇಕಾಗುತ್ತದೆ. ಹೀಗಾಗಿ ಸುಧಾರಣೆ ಎಂಬ ವಿಚಾರ ಆ ಭಾಗದಿಂದಲೇ ಆರಂಭವಾಗಬೇಕಾಗುತ್ತದೆ. ಮೊದಲನೆಯದಾಗಿ ಅದು ಅರ್ಥ ವ್ಯವಸ್ಥೆ ಮತ್ತು ದೇಶಕ್ಕಾಗಿ ಪಂಚವಾರ್ಷಿಕ ಯೋಜನೆ ಎಂಬ ಅಭಿವೃದ್ಧಿಯ ನೀಲ ನಕ್ಷೆಯನ್ನು ರೂಪಿಸುತ್ತಿತ್ತು. ಅದಕ್ಕಾಗಿ ಅದು ವಿಸ್ತೃತ ರೂಪದ ಪರಿಶೀಲನೆ ಮತ್ತು ಅಧ್ಯಯನ ನಡೆಸುತ್ತಿತ್ತು. ಇದೀಗ ನೀತಿ ಆಯೋಗ ಬಂದಿದೆ. ಹೀಗಿದ್ದರೂ ಹಳೆಯ ಪದ್ಧತಿಯೇ ಯಾಕೆ ಮುಂದುವರಿಯಬೇಕು? ಎರಡನೆಯದಾಗಿ ಸಂವಿಧಾನ ದೇಶದಲ್ಲಿ ಜಾರಿಗೆ ಬಂದ ದಿನದಿಂದ ಸರಿಸಮಾನವಾಗಿ ಯೋಜನಾ ಆಯೋಗ ಕೂಡ ರಚನೆಯಾಗಿ ಕಾರ್ಯನಿರ್ವಹಿಸುತ್ತಾ ಸಂಪನ್ಮೂಲಗಳನ್ನು ಒದಗಿಸುವಂಥ ಸಂಸ್ಥೆಯಾಗಿ ಕರ್ತವ್ಯ ನಿರ್ವಹಿಸುತ್ತಾ ಬರುತ್ತಿತ್ತು.

ಸ್ವಾತಂತ್ರ್ಯ ಸಿಕ್ಕಿದ ಆರಂಭದ ದಿನಗಳಲ್ಲಿ ನಮ್ಮ ದೇಶ ವಿವಿಧ ರೀತಿಯ ಹಣಕಾಸು, ಸಾಮಾಜಿಕ ಸಮಸ್ಯೆಗಳು, ಹಲವು ಪ್ರದೇಶಗಳು ಅಭಿವೃದ್ಧಿಯಲ್ಲಿ ಹಿಂದುಳಿದಿದ್ದವು. ಈ ಎಲ್ಲ ಕ್ಷೇತ್ರಗಳ ಅಭಿವೃದ್ಧಿಗಾಗಿ ಸಂವಿಧಾನದ 280ವಿಧಿಯಂತೆ ಕೇಂದ್ರ ಹಣಕಾಸು ಆಯೋಗ ರಚಿಸಲಾಗಿತ್ತು.ಈ ಮೂಲಕ ಕೇಂದ್ರ ಮತ್ತು ರಾಜ್ಯಗಳ ವಲಯದಲ್ಲಿ ಆಗಿರುವ ಮತ್ತು ಆಗಬೇಕಾಗಿರುವ ಅಭಿವೃದ್ಧಿಯಲ್ಲಾಗಿರುವ ಕೊರತೆಯ ತಪ್ಪುಗಳನ್ನು ನಿವಾರಿಸುವ ಯತ್ನ ನಡೆಸಲಾಗಿತ್ತು. ವಿಶೇಷ ಸಂದರ್ಭಗಳಲ್ಲಿ ಅನುದಾನ ಬಿಡುಗಡೆ ಮಾಡುವ ಬಹುಮುಖದ ಅಧಿಕಾರವನ್ನು ಸಂವಿಧಾನದ 282ನೇ ವಿಧಿಯನ್ವಯ ಪಡೆದುಕೊಂಡಿದೆ. ಅಂಥ ಅಧಿಕಾರಕ್ಕೆ ಸಾಂವಿಧಾನಿಕವಾಗಿ ಮಹತ್ವವೇನೂ ಇಲ್ಲ. ಸಂಪನ್ಮೂಲ ಹಂಚಿಕೆ ಎಂಬ ಇಂಥದೊಂದು ವಿಶೇಷ ಅಧಿಕಾರ ಎಂಬ ವಿಚಾರ ಜಾರಿಯಾದದ್ದು 1969ರ ನಂತರ. ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದ ಡಿ.ಆರ್.ಗಾಡ್ಗೀಳ್ ಈ ಸೂತ್ರ ರೂಪಿಸಿದ್ದವರು. ರಾಜ್ಯಗಳ ವಿರೋಧದ ನಡುವೆಯೂ ಈ ಕ್ರಮದಲ್ಲಿ ಹಲವಾರು ಬದಲಾವಣೆಗಳನ್ನು ಮಾಡಲಾಯಿತು. ಕೇಂದ್ರ ಹಣಕಾಸು ಆಯೋಗ (ಯುಎಫ್ ಸಿ)ಕ್ಕೆ ಸಮಾನವಾಗಿ ರಾಜ್ಯಗಳಲ್ಲಿ ಹಣಕಾಸು ಆಯೋಗ ರಚನೆ ಮಾಡುವ ನಿಟ್ಟಿನಲ್ಲಿ ಸಂವಿಧಾನದ 243ಐ ಮತ್ತು 243ವೈ ವಿಧಿಗಳು 73 ಮತ್ತು 74ನೇ ತಿದ್ದಿಪಡಿ ತರಲು ಸಹಾಯಕವಾದವು. ಈ ಆಯೋಗಗಳ ಮೂಲಕ ರಾಜ್ಯಗಳು ಮತ್ತು ಅದಕ್ಕಿಂತ ಕೆಳಗಿನ ಆಡಳಿತ ವ್ಯವಸ್ಥೆಯಲ್ಲಿದ್ದ ಅಸಮತೋಲನ ಸರಿಪಡಿಸಲು ಅದನ್ನು ಬಳಸಿಕೊಳ್ಳುವುದು ಉದ್ದೇಶವಾಗಿತ್ತು. ಈ ಎರಡು ತಿದ್ದುಪಡಿಗಳು ಸಂವಿಧಾನದ 280ನೇ ವಿಧಿಗೆ ತಿದ್ದುಪಡಿ ತಂದು ರಾಜ್ಯ ಹಣಕಾಸು ಆಯೋಗಗಳ ಶಿಫಾರಸಿನಂತೆ ಕೇಂದ್ರ ಹಣಕಾಸು ಆಯೋಗಗಳ (ಯುಎಫ್ ಸಿ) ಮೂಲಕ ಪಂಚಾಯತ್‌ಗಳು ಮತ್ತು ಪುರಸಭೆಗಳಿಗೆ ಪೂರಕ ಸಂಪನ್ಮೂಲಗಳನ್ನು ಒದಗಿಸಲು ಸಾಧ್ಯವಾಯಿತು. ದೇಶದ ವಿತ್ತೀಯ ಒಕ್ಕೂಟ ವ್ಯವಸ್ಥೆಯಲ್ಲಿ ಅದನ್ನು ಕಡೆಗಣಿಸುವಂತೆಯೇ ಇಲ್ಲ.



ಮೂರನೆಯದಾಗಿ ಯೋಜನಾ ಆಯೋಗ ನೀತಿ ನಿರೂಪಣೆಯಲ್ಲಿ, ಯೋಜನೆಯ ಮೌಲ್ಯಮಾಪನದಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಅದನ್ನೂ

ಯಾರೂ ಮರೆಯುವಂತಿಲ್ಲ. ಹೊಸತಾಗಿ ರಚನೆಯಾಗಿರುವ ನೀತಿ ಆಯೋಗ ಕೇವಲ ವಿಚಾರ ವೇದಿಕೆಯಾಗುವುದಿದ್ದರೆ ಅದು ಅತ್ಯಂತ ಉತ್ತಮ ಗುಣಮಟ್ಟದ ಸಂಶೋಧನೆ ಮತ್ತು ಚರ್ಚೆಯಲ್ಲಿ ತೊಡಗಿರಬೇಕು. ಆದರೆ ಇಂಥವುಗಳಿಗೆಲ್ಲ ಎಲ್ಲರ ಬೆಂಬಲ, ಸಹಕಾರವಿಲ್ಲದೆ ಅದನ್ನು ನಡೆಸಲು ಸಾಧ್ಯವಿಲ್ಲ.

**ತಳಮಟ್ಟದಿಂದಲೇ ಯೋಜನೆ**

ಹೊಸತಾಗಿ ರಚನೆಯಾಗಿರುವ ನೀತಿ ಆಯೋಗದ ರೂಪುರೇಷೆಗಳು ಇನ್ನೂ ಸಿದ್ಧಗೊಳ್ಳದಿದ್ದರೂ ಅದು ತಳಮಟ್ಟದಿಂದಲೇ ಯೋಜನೆ ಸಿದ್ಧಪಡಿಸುವ ಬಗ್ಗೆ ಈಗಾಗಲೇ ಸೂಚನೆಗಳು ಸಿಕ್ಕಿವೆ. ಅದರ ಮಹತ್ವ ಮತ್ತು ಪ್ರಾಮುಖ್ಯತೆಯನ್ನು ಅದು ಅರಿತುಕೊಂಡಿದೆ. ಸಂವಿಧಾನದ 243ಜಿ, 243ಡಬ್ಲ್ಯೂ, 43ಜೆಡ್ ಡಿ ಮತ್ತು 243ಜೆಡ್ ಇ ವಿಧಿಗಳಲ್ಲಿ ಹೇಳಿರುವಂತೆ ತಳಮಟ್ಟದ ಯೋಜನೆ ರೂಪಿಸುವುದು ಅನಿವಾರ್ಯವಾಗಿದೆ. 243ಜಿ, 243ಡಬ್ಲ್ಯೂಗಳಲ್ಲಿ ಪ್ರಸ್ತಾಪ ಮಾಡಿರುವಂತೆ ಗ್ರಾಮೀಣ ಮತ್ತು ನಗರ ಸ್ಥಳೀಯಾಡಳಿತ ಸಂಸ್ಥೆಗಳು ತಮ್ಮದೇ ಆದ ಕೊಡುಗೆಗಳನ್ನು ನೀಡಬೇಕಿವೆ.

ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ಅಧಿಕಾರ ಮತ್ತು ಹೊಣೆ ಅವುಗಳಿಗೆ ಇದೆ. 243ಜೆಡ್‌ಡಿಯ ಪ್ರಕಾರ ಎಲ್ಲ ರಾಜ್ಯಗಳು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಯೋಜನಾ ಸಮಿತಿ ಮತ್ತು ಮೆಟ್ರೊಪಾಲಿಟನ್ ವ್ಯಾಪ್ತಿಯಲ್ಲಿ ಮಹಾನಗರ ಯೋಜನಾ ಸಮಿತಿಗಳನ್ನು ರಚಿಸಬೇಕು. ಜಿಲ್ಲಾ ಯೋಜನಾ ಸಮಿತಿ ಗ್ರಾಮ ಮತ್ತು ಪುರಸಭೆಗಳು ರೂಪಿಸಿದ ಯೋಜನೆ ಆಧಾರದ ಮೇಲೆ ಜಿಲ್ಲೆಗೇ ಅನ್ವಯವಾಗುವಂತೆ ಸಮಗ್ರ ಪ್ರಾದೇಶಿಕ ಅಭಿವೃದ್ಧಿಗೆ ಕರಡು ಯೋಜನೆ ರೂಪಿಸಬೇಕು. ಇದರ ಜತೆಗೆ ಪಾಕೃತಿಕ ಸಂಪತ್ತನ್ನು ಮುಂದಿನ ದಿನಗಳಿಗೆ ಉಳಿಕೆಯಾಗುವಂತೆಯೂ ಅದರಲ್ಲಿ ಅಂಶಗಳನ್ನು ಸೇರ್ಪಡೆಗೊಳಿಸಬೇಕು. ಯೋಜನೆಯ ಕರಡು ಸಿದ್ಧತೆಯ ವೇಳೆಯಲ್ಲಿಯೇ ಕಾರ್ಯಕ್ರಮಗಳನ್ನು ನಿಗದಿತ ಸಮಯದಲ್ಲಿಯೇ ಜಾರಿಗೊಳಿಸಿ ಪೂರ್ತಿಗೊಳಿಸಬೇಕೆಂದು ಸ್ಥಳೀಯ ಆಡಳಿತ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಸಂಸ್ಥೆಗಳಿಗೆ ಕಟ್ಟುನಿಟ್ಟಾಗಿ ಸೂಚಿಸಬೇಕು.

ನಮ್ಮ ದೇಶದಲ್ಲಿ ಸುಮಾರು 2.5 ಲಕ್ಷ ಪಂಚಾಯತ್ ರಾಜ್ ಸಂಸ್ಥೆಗಳು, 3,842 ನಗರ ಸ್ಥಳೀಯ ಸಂಸ್ಥೆಗಳಿದ್ದು, ಅವುಗಳಲ್ಲಿ 30 ಲಕ್ಷ ಜನಪ್ರತಿನಿಧಿಗಳಿದ್ದಾರೆ. ವಿಶ್ವದ ಇತರ ರಾಷ್ಟ್ರಗಳಿಗೆ ಹೋಲಿಕೆ ಮಾಡಿದರೆ ಇಂಥ ಪ್ರಜಾಪ್ರಭುತ್ವ ವ್ಯವಸ್ಥೆಯೇ ಇರಲಾರದು. ಹೀಗಾಗಿ ಇಂಥ ವ್ಯವಸ್ಥೆ ಇರುವಾಗ ಯೋಜನೆ ರೂಪಿಸುವುದನ್ನು ತಳಮಟ್ಟದಿಂದಲೇ ಆರಂಭಿಸಿ ಅದನ್ನು ರಾಷ್ಟ್ರಮಟ್ಟದ ವರೆಗೆ ವಿಸ್ತರಿಸುವಂತೆ ಮಾಡಬೇಕು. ತಳಮಟ್ಟದ ಯೋಜನೆ ರೂಪಿಸುವ ನಿಟ್ಟಿನಲ್ಲಿಯೇ ಗ್ರಾಮ ಸಭೆ, ಜಿಲ್ಲಾ ಯೋಜನಾ ಸಮಿತಿ (ಡಿಪಿಸಿ), ರಾಜ್ಯ ಹಣಕಾಸು ಸಮಿತಿ (ಎಸ್ ಎಫ್ ಸಿ)ಮತ್ತು ಇತರ ಸಂಸ್ಥೆಗಳು ನೀತಿ ನಿರೂಪಣೆಯಲ್ಲಿ ಜನರು ಭಾಗವಹಿಸಲು ಅವಕಾಶಗಳಿವೆ. ರಾಜಕೀಯ ಇಚ್ಛೆ ಇದ್ದರೆ ಏನು ಬೇಕಾದರೂ ಸಾಧನೆ ಮಾಡಬಹುದು ಎನ್ನುವುದನ್ನು ಕೇರಳ ತೋರಿಸಿಕೊಟ್ಟಿದೆ. ತಳಮಟ್ಟದಲ್ಲಿ ಯೋಜನೆ ರೂಪಿಸುವುದನ್ನು ಆ ರಾಜ್ಯದಲ್ಲಿ ಆಂದೋಲನದ ರೂಪದಲ್ಲಿ ಕೈಗೊಳ್ಳಲಾಗಿತ್ತು. ಬಳಿಕ ಸೆನ್ ಸಮಿತಿ ಶಿಫಾರಸಿನಂತೆ ಅದನ್ನು ಕಾನೂನಲ್ಲಿ ಸೇರ್ಪಡೆಗೊಳಿಸಲಾಯಿತು. ಈಗಾಗಲೇ ಹೇಳಿರುವಂತೆ ಕೇರಳದಲ್ಲಿ ಗ್ರಾಮಮಟ್ಟದಿಂದ ಜಿಲ್ಲಾ ಮಟ್ಟದ ವರೆಗೆ ಸ್ಥಳೀಯರೇ ತಮಗೆ ಬೇಕಾದ ಆದ್ಯತೆಗಳನ್ನು ಅವರೇ ನಿರ್ವಹಿಸುತ್ತಿದ್ದಾರೆ. ಅದಕ್ಕೆ ಪೂರಕವಾಗಿ ಗ್ರಾಮ ಪಂಚಾಯಿತಿಗಳು ಮತ್ತು ಪುರಸಭೆಗಳು ತಮ್ಮ ಆದ್ಯತೆಯ ಯೋಜನೆಗಳ ಜಾರಿ ಬಗ್ಗೆ ವರದಿ ಪ್ರಕಟಿಸಿರುವುದು ಸಣ್ಣ ಸಾಧನೆಯೇನಲ್ಲ. ಅದರಲ್ಲಿ ಆಯಾ ಪ್ರದೇಶಕ್ಕೆ ಬೇಕಾದ ಯೋಜನೆಗಳು, ಅದನ್ನು ಪೂರೈಸಬೇಕಾದ ಸಂಪನ್ಮೂಲಗಳ ವಿವರಗಳನ್ನು ನೀಡಲಾಗಿದೆ. ಇದರ ಜತೆಗೆ ಆಯಾ ಕ್ಷೇತ್ರದಲ್ಲಿ ಸಲಹೆಗಳನ್ನು ನೀಡಲು ಕಾರ್ಯಪಡೆ ರಚಿಸಲಾಗಿತ್ತು (ಮುಂದಿನ ದಿನಗಳಲ್ಲಿ ಅವುಗಳನ್ನೇ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ 10–12 ಕಾರ್ಯಕಾರಿ ಸಮಿತಿಗಳನ್ನಾಗಿ ಪರಿವರ್ತನೆ ಮಾಡಲಾಯಿತು). ಅವುಗಳ ಮೂಲಕ ವಾರ್ಡ್ ಮಟ್ಟದಲ್ಲಿ ಅಭಿವೃದ್ಧಿ ಸಾಧಿಸುವ ಬಗ್ಗೆ ವಿಚಾರ ಸಂಕಿರಣ ಮತ್ತು ಅವುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಚರ್ಚಿಸಲಾಗುತ್ತದೆ. ಅತ್ಯಂತ ಸಣ್ಣಮಟ್ಟದಲ್ಲಿ ಯಶಸ್ವಿಯಾದ ಈ ಪ್ರಯೋಗಗಳನ್ನು ಗ್ರಾಮ ಮಟ್ಟದಲ್ಲಿ ಜಾರಿಗೊಳಿಸುವ ಬಗ್ಗೆ ಯೋಜಿಸಲಾಗುತ್ತದೆ (ಇಸಾಕ್ ಮತ್ತು



ಫ್ರಾಂಕೆ 2000; 105). ಸುಮಾರು 5 ಲಕ್ಷ ಜನರುಳ್ಳ ಗ್ರಾಮದಲ್ಲಿನ ಗ್ರಾಮ ಪಂಚಾಯತ್ ಸದಸ್ಯರು, ರಾಜಕೀಯ ಪಕ್ಷಗಳ ನಾಯಕರು, ಅಧಿಕಾರಿಗಳು, ಸ್ಥಳೀಯ ತಜ್ಞರು ಮತ್ತು ಸಂಪನ್ಮೂಲ ವ್ಯಕ್ತಿಗಳು ಮತ್ತು ಇತರರು ಅಭಿವೃದ್ಧಿ ವಿಚಾರ ಸಂಕಿರಣಗಳಲ್ಲಿ (ರಾಜ್ಯ ಯೋಜನಾ ಆಯೋಗ ಎಸ್ ಪಿ ಬಿ, 2000) ಭಾಗವಹಿಸಿದ್ದಾರೆ. ಇದರಿಂದಾಗಿ ವಿಕೇಂದ್ರೀಕರಣದ ಮೂಲಕ ಸಮಸ್ಯೆಗಳಿಗೆ ಸುಲಭವಾಗಿ ಪರಿಹಾರ ಕಂಡುಕೊಳ್ಳಬಹುದು ಎಂದು ಸಾಧಿಸಿತೋರಿಸಿದ್ದಾರೆ. ಆದರೆ ಎಲ್ಲ ಹಂತಗಳಲ್ಲಿ ಈ ಮಾದರಿ ಯಶಸ್ವಿಯಾಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಅದರಲ್ಲಿಯೂ ಕೆಲವೊಂದು ಕೊರತೆಗಳಿವೆ.

ಕೇರಳ ರಾಜ್ಯ ಯೋಜನಾ ಮಂಡಳಿ ಪ್ರಾರಂಭದ ದಿನಗಳಲ್ಲಿ ಮಲಯಾಳಂ ಭಾಷೆಯಲ್ಲಿ ವಿವರವಾದ ಕೈಪಿಡಿ ಪ್ರಕಟಿಸಿತ್ತು. ಇದರಿಂದ ಯೋಜನೆ ರೂಪಿಸಲು ಆಂದೋಲನ ರೂಪಿಸಲು ಸಹಾಯವಾಯಿತಲ್ಲದೆ, ಅದಕ್ಕೆ ಸಿದ್ಧಗೊಳ್ಳಲೂ ನೆರವಾಯಿತು. ಕೇರಳ ಸರ್ಕಾರ 2009ರಲ್ಲಿ ಸಿದ್ಧಪಡಿಸಿದ ಈ ಕೈಪಿಡಿಯಲ್ಲಿ ಜಿಲ್ಲಾ ಯೋಜನಾ ಪದ್ಧತಿ ಬಗ್ಗೆ ಪ್ರತ್ಯೇಕವಾದ ಅಧ್ಯಾಯವೇ ಇದೆ. ಅದರಲ್ಲಿ ಕೊಲ್ಲಂ ಜಿಲ್ಲೆಯಲ್ಲಿ ಸಾಧಿಸಲಾಗಿರುವ ಸಮಗ್ರ ಯೋಜನಾ ದಾಖಲೆಗಳು ಅತ್ಯುತ್ತಮ ಮಾರ್ಗಸೂಚಿಗಳನ್ನು ನೀಡುತ್ತದೆ.

ಇದು ಹೊಸ ಸರ್ಕಾರಕ್ಕೆ ತಳಮಟ್ಟದಲ್ಲಿ ಯೋಜನೆಗಳನ್ನು ರೂಪಿಸುವ ಬಗ್ಗೆ ಹೊಸ ಯೋಚನೆಗಳನ್ನು ರೂಪಿಸಲು ನೆರವಾಗುತ್ತದೆ. ಇದರ ಜತೆಗೆ ಇತರ ರಾಜ್ಯಗಳಲ್ಲಿಯೂ ವಿನೂತನವಾದ ಪದ್ಧತಿಗಳನ್ನು ಅನುಸರಿಸಲಾಗಿದೆ. ಉದಾಹರಣೆಗೆ ಹೇಳುವುದಾದರೆ ಪಶ್ಚಿಮ ಬಂಗಾಳ 2006–2007ರಲ್ಲಿ ಡಿಎಫ್ ಐಡಿ ಸಹಾಯದೊಂದಿಗೆ ಆಯ್ದ ಹಳ್ಳಿಗಳಲ್ಲಿ ತಳಮಟ್ಟದಲ್ಲಿ ಯೋಜನೆ ರೂಪಿಸುವ ಪದ್ಧತಿ ಜಾರಿಗೊಳಿಸಿತು.



ಸಂವಿಧಾನಾತ್ಮಕವಾಗಿ ಕಡ್ಡಾಯವಾಗಿ ಕಾರ್ಯಗತಗೊಳಿಸಬೇಕಾದ 'ಆರ್ಥಿಕ ಬೆಳವಣಿಗೆ ಮತ್ತು ಸಾಮಾಜಿಕ ನ್ಯಾಯ'ವನ್ನು ಪಂಚಾತ್ ರಾಜ್ ಸಂಸ್ಥೆಗಳು ಜಾರಿಗೊಳಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಮತ್ತು ನಗರ ಸ್ಥಳೀಯ ಸರ್ಕಾರಗಳ ತೀರ್ಮಾನಕ್ಕೆ ಬೇರೆಯದೇ ಮಹತ್ವ ಕೊಡಬೇಕಾಗುತ್ತದೆ.ಆದ್ದರಿಂದ ಈ ರೀತಿಯ ಸಮಗ್ರ ಪರಿಕಲ್ಪನೆಯ ಮತ್ತು ವಿಭಾಗೀಯ ಮಟ್ಟದ ಪರಿಕಲ್ಪನೆ ಅನುಷ್ಠಾನ ಸರಿಯಾದ ಕ್ರಮವಲ್ಲ. ಪಂಚಾಯತ್‌ಗಳಲ್ಲಿ ಯೋಜನೆಗಳಿಗೆ ಬೇಕಾದ ನೀಲನಕ್ಷೆ, ನಿಧಿ ಇಲ್ಲದಿದ್ದರೆ ತಳಮಟ್ಟದಲ್ಲಿ ಯೋಜನೆ ರೂಪಿಸಿದರೂ ಪರಿಣಾಮಕಾರಿಯಾಗಿರುವುದಿಲ್ಲ.

ಕರ್ನಾಟಕ ಮತ್ತು ಪಶ್ಚಿಮ ಬಂಗಾಳವನ್ನು ನೋಡುವುದಾದರೆ ಎಲ್ಲ ವಿಕೇಂದ್ರೀಕರಣಗಳಿಗೂ ನೀಲ ನಕ್ಷೆಯ ವರ್ಗಾವಣೆ ಆಧಾರದಲ್ಲಿ ಮಾಡಲಾಗಿದೆ. ಸ್ಥಳೀಯ ಸರ್ಕಾರಗಳು ತಮಗೆ ಬಿಡುಗಡೆಯಾದ ನಿರ್ದಿಷ್ಟ ನಿಧಿಯ ಬಗ್ಗೆ ತಿಳಿದಿರಬೇಕು. ಮಾತ್ರವಲ್ಲದೆ ಅವುಗಳಿಗೆ ತಮ್ಮದೇ ಆದ ಯೋಜನೆ ಮತ್ತು ಆದ್ಯತೆಗಳಿಗೆ ಸ್ವಾತಂತ್ರ್ಯವಿರಬೇಕು.

ಯೋಜನಾ ಆಯೋಗ 2008ರಲ್ಲಿ ಜಾರಿಗೊಳಿಸಿದ್ದ ಏಕೀಕೃತ ಯೋಜನೆ ಬಗ್ಗೆ ಹೊಸತಾಗಿ ರಚನೆಯಾಗಿರುವ ನೀತಿ ಆಯೋಗ ದೇಶಾದ್ಯಂತ ಅಧ್ಯಯನ ಮತ್ತು ಚರ್ಚೆ ನಡೆಸಿ ಬಳಿಕ ಒಂದು ಸಮಗ್ರ ಯೋಜನಾ ಚೌಕಟ್ಟು ರೂಪಿಸಬೇಕು. ನಂತರ ಸ್ಥಳೀಯ ವ್ಯತ್ಯಾಸಗಳಿಗೆ ಅನುಕೂಲವಾಗುವಂತೆ ಅದನ್ನು ಬದಲಾಯಿಸಿಕೊಳ್ಳಬೇಕು. ಒಂದು ವೇಳೆ ದೇಶದ ಎಲ್ಲ 640 ಜಿಲ್ಲೆಗಳು ದೀರ್ಘಕಾಲದ ದೂರದೃಷ್ಟಿಯನ್ನಿರಿಸಿಕೊಂಡು ಯೋಜನೆ ಸಿದ್ಧಪಡಿಸಿಕೊಂಡು ಜತೆಗೆ ಮಧ್ಯಮಾವಧಿಯ ಗುರಿ ಮತ್ತು ವಾರ್ಷಿಕ ಸಾಧನೆ ಮಾಡುವ ಗುರಿ ಹಾಕಿಕೊಂಡು ಜಾರಿಗೊಳಿಸಿದರೆ ನಮ್ಮ ದೇಶವು ವಿವಿಧತೆಯಲ್ಲಿ ಏಕತೆಯನ್ನು ಅಭಿವ್ಯಕ್ತಗೊಳಿಸಿದಂತಾಗುತ್ತದೆ.

ಸ್ಥಳೀಯ ಸರ್ಕಾರದ ಮಟ್ಟದಲ್ಲಿ ನಮ್ಮ ದೇಶ ಸಾಧನೆ ಮಾಡಿದೆ. ಆದರೆ ಅದೇ ರೀತಿಯ ಸಾಧನೆಯನ್ನು ಸ್ಥಳೀಯ ಮಟ್ಟದ ಭೌಗೋಳಿಕ ಮಾಹಿತಿ, ಅಂತರ್ಜಲ ಮಟ್ಟ, ಮಣ್ಣು,ಬೆಳೆ, ನದಿತೀರ ಜಲಾನಯನ ಪ್ರದೇಶ ಮೊದಲಾದ ವ್ಯವಸ್ಥೆಗಳ ಬಗ್ಗೆ ಮಾಹಿತಿ ಪಡೆಯುವ ವ್ಯವಸ್ಥೆಯಲ್ಲಿ ಪ್ರಗತಿ ಸಾಧಿಸಬೇಕು. ಅದನ್ನು ಸಾಧಿಸಿದರೆ ಸ್ಥಳೀಯ ಮಟ್ಟದಲ್ಲಿ ಯೋಜನೆಯನ್ನು ವೈಜ್ಞಾನಿಕವಾಗಿ ರೂಪಿಸುವುದು ಕನಸಿನ ಮಾತಾಗಿ ಖಂಡಿತವಾಗಿಯೂ ಉಳಿಯುವುದಿಲ್ಲ.

ಇದಕ್ಕೆ ಪೂರಕವಾಗಿ ಜನಗಣತಿ ಮತ್ತು ಮನೆಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯ ಬಗ್ಗೆ ಮಾಹಿತಿ ತಯಾರಿಸಿದರೆ ತಳ ಮಟ್ಟದ ಯೋಜನೆಗೆ ಆಧಾರವಾಗುತ್ತದೆ. (ಸ್ಥಳೀಯ ಶಾಲಾ ಬೋಧಕರನ್ನು ಅಂದಾಜು ಸಮೀಕ್ಷೆಗೆ ಉಪಯೋಗಿಸಿಕೊಳ್ಳಬಹುದು).

ಇಲ್ಲಿ ನಿಜವಾದ ಪ್ರಶ್ನೆ ಎಂದರೆ ಜಿಲ್ಲಾ ಯೋಜನಾ ಸಮಿತಿ (ಡಿಪಿಸಿ)ಗಳು 'ಆರ್ಥಿಕ ಬೆಳವಣಿಗೆ ಮತ್ತು ಸಾಮಾಜಿಕ ನ್ಯಾಯ' ಪಡೆಯಲು ರಾಜಕೀಯವಾಗಿ,ಕಾನೂನುಬದ್ಧವಾಗಿ ಮತ್ತು ತಾಂತ್ರಿಕವಾಗಿ ಶಕ್ತಿಯುತವಾಗಿದೆಯೇ ಎಂಬುದನ್ನು ಗಮನಿಸಬೇಕು. ನೀತಿ ಆಯೋಗವು ಅದರ ಬಗ್ಗೆ ಅಧ್ಯಯನ ಮಾಡಲು ಮನಸ್ಸು ಮಾಡಿದರೆ ಸ್ತುತ್ಯಾರ್ಹವಾಗುತ್ತದೆ.

**ಸಮರ್ಥ ವರ್ಗಾವಣೆ ವ್ಯವಸ್ಥೆ**

ಉತ್ತಮ ಒಕ್ಕೂಟ ವ್ಯವಸ್ಥೆಯಲ್ಲಿ ಹಣಕಾಸು ವ್ಯವಹಾರಗಳನ್ನು ಸಮರ್ಥವಾಗಿ ನಿಭಾಯಿಸುವುದು ಮತ್ತು ಸರಿಯಾದ ಕ್ರಮದ ವರ್ಗಾವಣೆ ವ್ಯವಸ್ಥೆ ಅಗತ್ಯವಾಗಿದೆ. ಇದರಿಂದಾಗಿ ಉತ್ತಮ ಸಹಕಾರ ಆಡಳಿತ ವ್ಯವಸ್ಥೆ ರೂಪಿಸಿದಂತಾಗುತ್ತದೆ. ಬಹು ವಾಹಿನಿಯೊಂದಿಗೆ ವಿವಿಧ ಉದ್ದೇಶ ಮತ್ತು ಷರತ್ತುಗಳು ಭಾರತದ ಆರ್ಥಿಕ ಒಕ್ಕೂಟಕ್ಕೆ ದೌರ್ಬಲ್ಯವಾಗಿ ಕಂಡುಬರುತ್ತವೆ. ಇದು ವಿರುದ್ಧವಾದ ಆದ್ಯತೆ ಮತ್ತು ಭಿನ್ನವಾದ ಫಲಿತಾಂಶಕ್ಕೆ ಕಾರಣವಾಗಿದೆ. ಯೋಜನಾ ಆಯೋಗ ನಿಯೋಜಿಸಿದ ಕಾರ್ಯಗಳನ್ನು ರದ್ದುಪಡಿಸುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಗಳಿಗೆ(ಸಿಎಸ್ ಎಸ್) ಹೆಚ್ಚಿನ ಮೊತ್ತ ನೀಡುವುದರಿಂದ ಅದರ ಪಾಲಿನ ಪ್ರಮಾಣ ಹೆಚ್ಚುತ್ತಿದೆ. ಬಿ.ಕೆ.ಚತುರ್ವೇದಿ ಸಮಿತಿ (2011) ಶಿಫಾರಸಿನ ನಂತರ ಸಂಖ್ಯೆ ಕಡಿಮೆಯಾಗಿದ್ದರೂ ಇವತ್ತಿಗೂ ಕೇಂದ್ರದ ಪಾಲು ಹೆಚ್ಚಾಗಿಯೇ ಇದೆ. ಅದನ್ನು ಪರಿಹರಿಸಿ ಕಾರ್ಯಸಾಧುವಾಗುವ ರೀತಿಯಲ್ಲಿ ಅನುಷ್ಠಾನಗೊಳಿಸಿದರೆ ಸಮರ್ಥನೀಯ ವರ್ಗಾವಣಾ ವ್ಯವಸ್ಥೆಯನ್ನು ದೇಶದಲ್ಲಿ ಜಾರಿಗೊಳಿಸಿದಂತಾಗುತ್ತದೆ.

ರಾಜ್ಯಗಳು ಈಗ ಹೊಂದಿಕೊಂಡಿರುವ ಪ್ರತಿ ಹಣಕಾಸಿನ ನೆರವು ಪದ್ಧತಿ ಅಂದರೆ ರಾಜ್ಯಗಳಲ್ಲಿ ಅನುಷ್ಠಾನವಾಗುವ ಕೇಂದ್ರ ಸರ್ಕಾರಿ ನೆರವಿನ ಯೋಜನೆಗಳ ಅನುಷ್ಠಾನ (ಸಿಎಸ್ ಎಸ್) ಅವುಗಳ ಮೂಲ ಉದ್ದೇಶವನ್ನೇ ಮರೆತಿವೆ. ಹೀಗಾಗಿ, ಜಾರ್ಖಂಡ್, ಒಡಿಶಾದಲ್ಲಿನ ಪರಿಸ್ಥಿತಿಯನ್ನು ದೇಶಕ್ಕೆ ಹೋಲಿಕೆ ಮಾಡಿದರೆ ಅವುಗಳು ರಾಷ್ಟ್ರೀಯ ವ್ಯಾಪ್ತಿಯಿಂದ ಹಿಂದುಳಿದಿವೆ. ಹೀಗಾಗಿ ರಾಜ್ಯಗಳ ಮೇಲೆ ಯೋಜನೆಗಳನ್ನು ಹೇರುವುದಕ್ಕಿಂತ ಅವುಗಳು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಆದ್ಯತೆ ನೀಡುವುದು ಉತ್ತಮ.

ವಿಶ್ವದಲ್ಲಿ ಭಾರತ ಅತ್ಯಂತ ದೃಢವಾದ ಮತ್ತು ಕೇಂದ್ರೀಕೃತ ಅರ್ಥ ವ್ಯವಸ್ಥೆ ಹೊಂದಿರುವ ರಾಷ್ಟ್ರ. ಕಮ್ಯೂನಿಸ್ಟ್ ಸರ್ಕಾರ ಹೊಂದಿರುವ ಚೀನಾದಲ್ಲಿ ಕೂಡ ಅಧಿಕಾರ ನಮ್ಮ ದೇಶಕ್ಕಿಂತ ಹೆಚ್ಚು ವಿಕೇಂದ್ರೀಕರಣಕೊಂಡಿದೆ. ಅಧಿಕಾರ ವರ್ಗಾವಣೆಯ ಹಿರಿಮೆ ಅಥವಾ ಇತಿಹಾಸಗಳನ್ನು ಗಮನಿಸಿದಾಗ ಅಸಮಾನತೆ ಇನ್ನೂ ಹಾಗೆಯೇ ಇದೆ. ಈ ತಪ್ಪಿಗೆ ಕೇವಲ ಕೇಂದ್ರ ಹಣಕಾಸು ಆಯೋಗವನ್ನು ಮಾತ್ರ ಹೊಣೆಗಾರನನ್ನಾಗಿ ಮಾಡಿದರೆ ಸಾಕೆ? ಈ ಹಿನ್ನೆಲೆಯಲ್ಲಿ ಕಳೆದ ಹಲವು ವರ್ಷಗಳಿಂದ ಭಾರತ ಸಾಧಿಸಿದ ಅಭಿವೃದ್ಧಿಯ ಪ್ರಮಾಣದ ಬಗ್ಗೆ ಪರೀಕ್ಷಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ನೀತಿ ಆಯೋಗದ ಉಪಾಧ್ಯಕ್ಷ ಶ್ರೀ ಅರವಿಂದ ಪನಗಾರಿಯಾ ಅವರು ಹೊಸ ಅಧ್ಯಯನ ನಡೆಸಬೇಕಾಗಿದ್ದು, ಈ ನಿಟ್ಟಿನಲ್ಲಿ ಅವರು ಗಮನ ಹರಿಸಬೇಕಾಗಿದೆ. ಇನ್ನೊಂದು ಅಂಶವೆಂದರೆ ಕೇವಲ ಊಹೆಯಿಂದ ಚಿಂತಕರ ಚಾವಡಿಗಳು ಅದನ್ನು ಅಧ್ಯಯನ

**(42ನೇ ಪುಟಕ್ಕೆ)**

# ನೀತಿ ಆಯೋಗ ಮತ್ತು ಆರ್ಥಿಕ ಒಕ್ಕೂಟ

**ನಿರ್ವಿಕಾರ್ ಸಿಂಗ್**
**ಕನ್ನಡಕ್ಕೆ : ಆರತಿ ಕೆ. ಪಟ್ರಮೆ**




**ಹೊಸ ನೀತಿ ಆಯೋಗವು ತನ್ನ ಪಾತ್ರವನ್ನು ಎಚ್ಚರಿಕೆಯಿಂದ ವ್ಯಾಖ್ಯಾನಿಸಬೇಕಾಗಿದೆ. ಉಪರಾಷ್ಟ್ರೀಯ ಸರಕಾರಗಳಿಗೆ ತೆರಿಗೆ ಅಧಿಕಾರವನ್ನು ಪುನರ್ ಯೋಚಿಸಲು, ಎಲ್ಲ ಹಂತಗಳಲ್ಲೂ ಸರ್ಕಾರಿ ವ್ಯಯದ ಕ್ಷಮತೆಯನ್ನು ಸುಧಾರಿಸಲು ಸಾಧ್ಯವಿರುವೆಡೆಗಳಲ್ಲೆಲ್ಲಾ ಅಧಿಕಾರ ವಿಕೇಂದ್ರೀಕರಣಗೊಳಿಸುತ್ತಾ ಅಂತರ್ ಸರ್ಕಾರಿ ವರ್ಗಾವಣೆಗಳ ವ್ಯವಸ್ಥೆಯನ್ನು ಮುಖ್ಯವಾಹಿನಿಗೆ ತರುವಲ್ಲಿ ತಳಹದಿಯಾಗಿ ಇದು ಕಾರ್ಯನಿರ್ವಹಿಸಬೇಕಿದೆ.**

ಮೇ 2014ರಲ್ಲಿ ಅಧಿಕಾರ ವಹಿಸಿಕೊಂಡ ಭಾರತದ ಹೊಸ ಕೇಂದ್ರ ಸರ್ಕಾರವು ನೀತಿ ಆಯೋಗವನ್ನು ರಚಿಸುವುದರೊಂದಿಗೆ ಮಹತ್ವದ ಹೆಜ್ಜೆಯೊಂದನ್ನು ಇರಿಸಿದೆ. ಈ ನಿರ್ಧಾರವನ್ನು ತೆಗೆದುಕೊಳ್ಳುವುದರ ಹಿಂದಿನ ಮುಖ್ಯ ಉದ್ದೇಶವೆಂದರೆ ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ರಾಜ್ಯಸರ್ಕಾರಗಳ ಪಾತ್ರವನ್ನು ಬಲಪಡಿಸುವುದಾಗಿದೆ. ಯೋಜನಾ ಆಯೋಗದ ಬದಲಾಗಿ ರೂಪುಗೊಂಡಿರುವ ನೀತಿ ಆಯೋಗದಲ್ಲಿ ರಾಜ್ಯಸರ್ಕಾರಗಳ ಪ್ರಾತಿನಿಧ್ಯ ಹಿಂದಿನದಕ್ಕಿಂತ ಬಲವಾಗಿದೆ. ಆದರೆ ನಿಜವಾದ ಬದಲಾವಣೆಯು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ವರ್ಗಾವಣೆ ಮಾಡುವ ರೀತಿಯಲ್ಲಿನ ಬದಲಾವಣೆಯೇ ಆಗಿದೆ. ಈ ಬದಲಾವಣೆ ಹೇಗಿರಬೇಕೆಂದರೆ, ರಾಜ್ಯ ಸರಕಾರಗಳ ಹೊಂದಾಣಿಕೆ ಮತ್ತು ನಿಯಂತ್ರಣವನ್ನು ಹೆಚ್ಚಿಸುವಂತಾಗಬೇಕು ಮತ್ತು ಅದೇ ವೇಳೆಗೆ ರಾಜ್ಯ ಸರಕಾರಗಳ ಜವಾಬ್ದಾರಿಗಳೂ ಹೆಚ್ಚುವಂತಾಗಬೇಕು. ಕೇಂದ್ರ– ರಾಜ್ಯಗಳ ವರ್ಗಾವಣೆಯಲ್ಲಿ ಸರಳತೆ, ಸಕಾಲಿಕತೆ, ಪಾರದರ್ಶಕತೆ, ನಿರ್ವಹಣೆ ಮತ್ತು ಮೌಲ್ಯಮಾಪನ ಎಲ್ಲದರಲ್ಲಿ ಸುಧಾರಣೆಯಾಗಬೇಕು. ಈ ಮೂಲಭೂತ ಬದಲಾವಣೆಗಳ ಹೊರತಾಗಿ ಯಾವುದೇ ಚಿಂತಕರ ಚಾವಡಿಯಾಗಲಿ ಅಥವಾ ಸಹಕಾರಿ ಸಂಯುಕ್ತ ವ್ಯವಸ್ಥೆಯ ಹಕ್ಕುಸಾಧನೆಯಾಗಲಿ ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಯಾವುದೇ ವ್ಯತ್ಯಾಸವನ್ನು ಮಾಡಲಾರದು. ಒಂದು ಸಂಯುಕ್ತ ವ್ಯವಸ್ಥೆಯಲ್ಲಿ ಶೃಂಗೀಯ ವರ್ಗಾವಣೆಗಳಿರುವುದು ಸಹಜವೇ ಆಗಿದೆ. ಕೇಂದ್ರ ಸರ್ಕಾರವು ತೆರಿಗೆಯ ಮೂಲಕ ನಿಧಿ ಸಂಗ್ರಹಿಸುವ ಅನುಕೂಲವನ್ನು ಹೊಂದಿದ್ದರೆ ರಾಜ್ಯ ಮತ್ತು ಸ್ಥಳೀಯ ಸರಕಾರಗಳು ಅನೇಕ ಬಗೆಯ ಸಾರ್ವಜನಿಕ ಸೇವೆ ಸರಕುಗಳಿಗಾಗಿ ವ್ಯಯ ಮಾಡುವ ಅನುಕೂಲಗಳನ್ನು ಹೊಂದಿವೆ. ತೆರಿಗೆ ವ್ಯವಸ್ಥೆಯಲ್ಲಿನ ದಕ್ಷತೆಯನ್ನು ಸುಧಾರಿಸುವಲ್ಲಿ ಭಾರತವು ಗಣನೀಯ ಸುಧಾರಣೆಗಳನ್ನು ಮಾಡಿದೆ ಮತ್ತು ಮಾಡುತ್ತಿದೆ. ಆದರೆ ವ್ಯಯ ಮತ್ತು ಅಂತರ್ ಸರ್ಕಾರೀ ವರ್ಗಾವಣೆಗಳ ವ್ಯವಸ್ಥೆಗಳಲ್ಲಿ ಮಾತ್ರ ಇನ್ನೂ ಪ್ರಮುಖ ಸುಧಾರಣೆಗಳ ಅವಶ್ಯಕತೆಯಿದೆ. ಕನಿಷ್ಠ ಮಿತಿಯ ಉಪರಾಷ್ಟ್ರೀಯ ವ್ಯಯಗಳಿಗೆ ಸಹಾಯಧನ ಒದಗಿಸುವ ವರ್ಗಾವಣಾ ವ್ಯವಸ್ಥೆಗಳಿಗೆ ಸಂಬಂಧಿಸಿದಂತೆ ಒಂದು ಸಾಮಾನ್ಯವಾದ ಸಮಸ್ಯೆಯಿದೆ (ಸಿಂಗ್ ಮತ್ತು ಶ್ರೀನಿವಾಸನ್, 2013). ಈ ಬಗೆಯ ಅಸಮರ್ಥ ವಿಧಾನಗಳಿಗೊಂದು ಉದಾಹರಣೆಯೆಂದರೆ ಕೊರತೆ ನೀಗಿಸುವ ವರ್ಗಾವಣೆಗಳು. ಇನ್ನೊಂದೆಡೆ, ಸಹಾಯ ಸ್ವೀಕರಿಸುವ ಸರಕಾರಗಳು ಕನಿಷ್ಠ ಮಿತಿಯ ವೆಚ್ಚಕ್ಕಾಗಿ ವ್ಯಯಿಸುವ ಮೊತ್ತವನ್ನು ಯಾವುದೇ ರೀತಿಯಿಂದಲೂ ಬಾಧಿಸದೇ ಇರುವಂಥಾ ವರ್ಗಾವಣೆಗಳು ತೊಂದರೆಗಳನ್ನು ಸೃಷ್ಟಿಸುವುದಿಲ್ಲ. ಉಪರಾಷ್ಟ್ರೀಯ ಆರ್ಥಿಕ ಸಾಮರ್ಥ್ಯವನ್ನು ಹೆಚ್ಚಿಸುವಂಥಾ ಗುರಿ ಹೊಂದಿರುವ ಸಂದರ್ಭಗಳು ಮತ್ತು ಉಪರಾಷ್ಟ್ರೀಯ ಹಿತ ಹಾಗೂ ರಾಷ್ಟ್ರೀಯ ಹಿತಗಳ ನಡುವೆ ಕವಲೊಡೆದಿರುವ ಸಂದರ್ಭಗಳನ್ನು ವರ್ಗೀಕರಿಸುವಲ್ಲಿ ಅತ್ಯಂತ ಎಚ್ಚರಿಕೆಯಿಂದಿರಬೇಕು. ಎರಡನೆಯ ಸಂದರ್ಭಕ್ಕೆ ಉದಾಹರಣೆಯಾಗಿ ರಾಜ್ಯ ಸೀಮೆಯುದ್ದಕ್ಕೂ ನಡೆಯುವ ರಾಜ್ಯ ಮಟ್ಟದ ಹೆಚ್ಚುವರಿ ಖರ್ಚುಗಳು ಅಂತಹ ಖರ್ಚಿನ ಕನಿಷ್ಠಮಿತಿಯನ್ನು ಬದಲಾಯಿಸಬಲ್ಲ ವರ್ಗಾವಣೆಗಳನ್ನು ಸಮರ್ಥಿಸುತ್ತವೆ.

ಆರ್ಥಿಕ ವಿಶ್ಲೇಷಕರು. email : boxjenk@ucsc.edu



ಬಾರಿ ವೆಯಿಂಗಾಸ್ಟ್ ಮತ್ತು ಅವರ ಸಹಲೇಖಕರು (2001) ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿನ ಇನ್ನೂ ಮುಖ್ಯವಾದ ವಿಷಯವೊಂದನ್ನು ವಿಶ್ಲೇಷಿಸಲು ಪ್ರಯತ್ನಿಸಿದ್ದಾರೆ. ಅದೆಂದರೆ ಕಂದಾಯ ಅಧಿಕಾರ ಮತ್ತು ಹಂಚಿಕೆಯ ನಿರ್ವಹಣೆ ಮಾಡುವ ಸಂಯುಕ್ತ ಸಂಸ್ಥೆಗಳ ಅಭಿವೃದ್ಧಿ ಪರಿಣಾಮಗಳು. ಅತಿ ಸರಳೀಕರಣದ ಅಪಾಯವಿದ್ದರೂ ನಾವು ಎರಡು ಬಗೆಯ ಪ್ರಶ್ನೆಗಳನ್ನು ಈ ಕೆಳಗಿನಂತೆ ವಿಂಗಡಿಸಬಹುದು. ಸಾರ್ವಜನಿಕ ಹಣಕಾಸಿನ ಪ್ರಶ್ನೆಯು ಉಪರಾಷ್ಟ್ರೀಯ ಅಧಿಕಾರ ವ್ಯಾಪ್ತಿಯ ಆದಾಯವನ್ನು ಪರಿಗಣಿಸುತ್ತದೆ ಮತ್ತು ತೆರಿಗೆ ನಿಯೋಜನೆಗಳು ಹಾಗೂ ವರ್ಗಾವಣೆಗಳ ಪ್ರೋತ್ಸಾಹ ಧನ ಪರಿಣಾಮವನ್ನು ಗಮನಿಸುತ್ತದೆ. ಅಭಿವೃದ್ಧಿ ದೃಷ್ಟಿಕೋನವು ಆದಾಯವನ್ನು ಹೆಚ್ಚಿಸುವಲ್ಲಿ ಪ್ರೋತ್ಸಾಹಧನದ ಮೇಲೆ ತೆರಿಗೆ ಮತ್ತು ವರ್ಗಾವಣೆ ವ್ಯವಸ್ಥೆಯ ಪರಿಣಾಮವನ್ನು ಪರೀಕ್ಷಿಸುತ್ತದೆ (ಉದಾಹರಣೆಗೆ ಸಾರ್ವಜನಿಕ ಅಥವಾ ಖಾಸಗಿ ಹೂಡಿಕೆಯ ಮೂಲಕ.) ಕರೇಗಾ ಮತ್ತು ವೆಯಿಂಗಾಸ್ಟ್ (2001) ವಿಶ್ಲೇಷಣೆಗೆ ಮತ್ತೊಂದು ಮಾದರಿಯನ್ನು ಬಳಸುತ್ತಾರೆ. ಅದರ ಪ್ರಕಾರ ಸರಕಾರದ ನಿರ್ಧಾರಗಳನ್ನು ಕೈಗೊಳ್ಳುವವರು ಬಾಡಿಗೆ ವಸೂಲಿ ಮಾಡಬಹುದು ಅಥವಾ ತಮ್ಮ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿನ ಆದಾಯವನ್ನು ಹೆಚ್ಚಿಸಬಹುದು ಮತ್ತು ತನ್ಮೂಲಕ ತಮ್ಮ ತೆರಿಗೆ ಮೂಲವನ್ನು ಹೆಚ್ಚಿಸಿಕೊಳ್ಳಬಹುದು. ಈ ದೃಷ್ಟಿಕೋನದೊಂದಿಗೆ, ಉಪರಾಷ್ಟ್ರೀಯ ತೆರಿಗೆ ಮೂಲದ ಮೇಲೆ ವಿಧಿಸಲಾಗಿರುವ ಎಲ್ಲಾ ತೆರಿಗೆಗಳ ಕನಿಷ್ಠ ಮಿತಿಯ ಉಪರಾಷ್ಟ್ರೀಯ ಧಾರಣಾ ಸಾಮರ್ಥ್ಯವು ಮುಖ್ಯವಾಗುತ್ತದೆ. ಈ ನಿಲುವಿನ ಪ್ರಕಾರ ಅಭಿವೃದ್ಧಿಯನ್ನು ಉತ್ತೇಜಿಸುವ ಸಂಯುಕ್ತ ವ್ಯವಸ್ಥೆಗಳು ಉನ್ನತ ಉಪರಾಷ್ಟ್ರೀಯ ಕನಿಷ್ಠಮಿತಿಯ ಧಾರಣಾ ಸಾಮರ್ಥ್ಯವನ್ನು ಹೊಂದಿರುತ್ತವೆ. ಭಾರತೀಯ ಸಂದರ್ಭದಲ್ಲಿ ಈ ಅಂಶವು ಧನ ಆಯೋಗ ವರ್ಗಾವಣೆ ಸೂತ್ರವನ್ನು ಪರಿವರ್ತಿಸಬಲ್ಲ ಸಂದರ್ಭವನ್ನು ಅನುಮೋದಿಸಬಹುದು. ಅಥವಾ ಲಂಬ ವರ್ಗಾವಣೆಗಳ ಗಾತ್ರವನ್ನು ಕುಗ್ಗಿಸಲು ಸರಕಾರದ ವಿವಿಧ ಹಂತಗಳುದ್ದಕ್ಕೂ ತೆರಿಗೆ ಅಧಿಕಾರಗಳ ನಿಯೋಜನೆಯನ್ನು ಬದಲಾಯಿಸಲೂಬಹುದು. ಭಾರತದಲ್ಲಿನ ಇತರ ವರ್ಗಾವಣಾ ವಾಹಿನಿಗಳ ಪಾತ್ರ ಮತ್ತು ಯಾಂತ್ರಿಕ ವ್ಯವಸ್ಥೆಯನ್ನು ಕುರಿತು ಪುನರ್ ಯೋಚಿಸಲು ಇದು ಪ್ರೇರಣೆ ನೀಡುತ್ತದೆ. ಸಿಂಗ್ ಮತ್ತು ಶ್ರೀನಿವಾಸನ್ (2013) ಅವರು ಭಾರತೀಯ ಆರ್ಥಿಕ ಸಂಯುಕ್ತ ಒಕ್ಕೂಟಗಳ ಇತ್ತೀಚಿನ ಚರ್ಚೆಗಳಲ್ಲಿ ಆವರ್ತಕ ಯೋಜನೆಗಳಿಗೆ ಮರು ಪ್ರಾಧಾನ್ಯ ನೀಡಿದ್ದಾರೆ. ಅದೆಂದರೆ, ಧನ ಆಯೋಗ ಮತ್ತು ಯೋಜನಾ ಆಯೋಗದ (ಈಗಿನ ನೀತಿ ಆಯೋಗ) ಮತ್ತು ಸಚಿವಾಲಯಗಳ ಮೂಲಕ ನಡೆಯುವ ಕೇಂದ್ರ ರಾಜ್ಯ ವರ್ಗಾವಣೆಗಳನ್ನೆಲ್ಲ ಒಂದು ಏಕೀಕೃತ ಚೌಕಟ್ಟಿನೊಳಗೆ ಕಾಣಬೇಕು. ಅನೇಕ ವಿವರಗಳನ್ನು ನಿರ್ಲಕ್ಷಿಸುವುದರೊಂದಿಗೆ ಮತ್ತು ತೀರಾ ಸರಳೀಕರಿಸುವುದರೊಂದಿಗೆ ಮುಖ್ಯವಾಗಿ ಮೂರು ವಿಧದ ವರ್ಗಾವಣೆಗಳನ್ನು ಗುರುತಿಸಬಹುದು: ಧನ ಆಯೋಗವು ನಿರ್ಧರಿಸುವ ಚಾಲ್ತಿಯ ಆದಾಯಗಳಿಂದ; ಹೂಡಿಕೆಗಾಗಿ ಮಾಡುವ ಬಂಡವಾಳದ ವರ್ಗಾವಣೆಗಳು (ಮೊದಲಿಗೆ ಇದು ಯೋಜನಾ ಆಯೋಗದ ವ್ಯಾಪ್ತಿಗೆ ಒಳಪಟ್ಟದ್ದಾಗಿತ್ತು); ಇತರ ರಾಜ್ಯಗಳ ಹಾಗೂ ದೇಶದ ಒಟ್ಟಾರೆ ಆರ್ಥಿಕತೆಯ ಮೇಲೆ ಪರಿಣಾಮ ಬೀರಬಲ್ಲ ಒಂದು ರಾಜ್ಯದ ಆರ್ಥಿಕ ಚಟುವಟಿಕೆಗಳನ್ನು ಆಂತರಿಕಗೊಳಿಸುವೆಡೆಗಿನ ವರ್ಗಾವಣೆಗಳು (ಪ್ರಸ್ತುತ ಕೇಂದ್ರ ಪ್ರಾಯೋಜಕತ್ವದ ಯೋಜನೆಗಳು). ಸಿಂಗ್ ಮತ್ತು ಶ್ರೀನಿವಾಸನ್ (2013) ಅವರನ್ನು ಅನುಸರಿಸಿ ಮುಂದುವರಿಸುವುದಾದರೆ ಈ ಮುಂದಿನ ಅಂಶಗಳನ್ನು ಚರ್ಚಿಸುವುದು ಇನ್ನೂ ಸಮರ್ಥನೀಯವಾಗುತ್ತದೆ.

1. ರಾಜ್ಯಗಳುದ್ದಕ್ಕೂ ವ್ಯಾಪಿಸುವ ಯೋಜನೆಗಳಿಗೆ ಬಂಡವಾಳ ಹೂಡಿಕೆ ಮತ್ತು ನಿರ್ವಹಣಾ ಮೊತ್ತವನ್ನು ಭರಿಸುವ ಸಂಪೂರ್ಣ ಜವಾಬ್ದಾರಿಯನ್ನು ಕೇಂದ್ರ ಸರಕಾರವು ತೆಗೆದುಕೊಳ್ಳಬೇಕು. ಅವುಗಳನ್ನು ಕಾರ್ಯಗತಗೊಳಿಸುವ ಜವಾಬ್ದಾರಿ ಕೇಂದ್ರದ್ದಾಗಿರಬಹುದು ಅಥವಾ ರಾಜ್ಯದ್ದಾಗಿರಬಹುದು. ಯೋಜನೆಯೊಂದರ ಹೂಡಿಕೆಯ ವೆಚ್ಚ ಮತ್ತು ಅದರ ನಿರ್ವಹಣಾ ವೆಚ್ಚವನ್ನು ಒಂದು ಸೀಮಿತ ಮಿತಿಯವರೆಗೆ ಕೇಂದ್ರವೇ ಭಾಗಶಃ ಅನುದಾನವನ್ನು ಒದಗಿಸುವ ವ್ಯವಸ್ಥೆಯಲ್ಲಿನ ಪ್ರಸ್ತುತ ಕೇಂದ್ರ ಅನುದಾನದ ಯೋಜನೆಗಳು ದುರದೃಷ್ಟಕರವಾದ ಪರಿಣಾಮಗಳನ್ನು ಹೊಂದಿವೆ. ಏಕೆಂದರೆ ಯೋಜನೆಗಳು ಆರಂಭವಾಗುತ್ತವೆ ಮತ್ತು ಸಂಪೂರ್ಣವಾಗುತ್ತವೆ. ಆದರೆ ಒಂದೊಮ್ಮೆ ಸಂಪೂರ್ಣವಾದ ಮೇಲೂ ಪೂರ್ಣ ಪ್ರಮಾಣದಲ್ಲಿ ಬಳಕೆಯಾಗುವುದಿಲ್ಲ. ಏಕೆಂದರೆ ಒಂದೊಮ್ಮೆ ಅವು ಸಂಪೂರ್ಣವಾಗಿ ರಾಜ್ಯದ ಜವಾಬ್ದಾರಿಯ ವ್ಯಾಪ್ತಿಗೊಳಪಟ್ಟ ಮೇಲೆ ಅವುಗಳ ನಿರ್ವಹಣೆಗೆ ಅವಶ್ಯವಿರುವ ಮೊತ್ತವನ್ನು ರಾಜ್ಯಸರಕಾರಗಳಿಗೆ ನೀಡಲಾಗುವುದಿಲ್ಲ. ಒಂದು ವೇಳೆ ಕೇಂದ್ರವೇ ಹಣಕಾಸಿನ ಪೂರ್ತಿ ಹೊಣೆ ಹೊತ್ತರೆ ಈ ಬಗೆಯಲ್ಲಿ ಹಣ ವ್ಯರ್ಥವಾಗುವುದನ್ನು ತಪ್ಪಿಸಬಹುದು.

2. ನೀತಿ ಆಯೋಗವು ಕೇಂದ್ರ–ರಾಜ್ಯಗಳೆರಡಕ್ಕೂ ಸಾರ್ವಜನಿಕ ಹೂಡಿಕೆಗೆ ನಿಧಿ ಎಂಬುದಾಗಿ ಸೇವೆ ಸಲ್ಲಿಸಬಹುದು. ಇದರ ಷೇರುದಾರರು ರಾಜ್ಯ ಮತ್ತು ಕೇಂದ್ರ ಸರಕಾರಗಳೆರಡೂ ಆಗಿರುತ್ತವೆ. ಬಹುಪಕ್ಷೀಯ ಅಭಿವೃದ್ಧಿ ಬ್ಯಾಂಕಿನಂತಿರುವ ಈ ಬಂಡವಾಳವು ಅವುಗಳ ಆರ್ಥಿಕ ಮತ್ತು ಸಾಮಾಜಿಕ ಲಾಭಗಳಿಗಾಗಿ ಸೂಚಿತವಾಗಿರುವ ಯೋಜನೆಗಳ ಮೌಲ್ಯಗಳನ್ನು ನಿರ್ಧರಿಸುತ್ತವೆ. ಇದರೊಂದಿಗೆ ಸೂಚಿತವಾದ ಬಂಡವಾಳ ಪೂರೈಕೆಯ ಶಕ್ಯತೆ ಮತ್ತು ಸಾಮರ್ಥ್ಯಗಳ ಮೌಲ್ಯವನ್ನು ನಿರ್ಧರಿಸುತ್ತದೆ. ಆದಾಗ್ಯೂ ಭಾರತೀಯ ಆರ್ಥಿಕ ಒಕ್ಕೂಟದ ಇನ್ನೂ ಅನೇಕ ರಚನೆಗಳನ್ನು ಪರಿಗಣಿಸಲು ನೀತಿ ಆಯೋಗವು ತನ್ನ ಪಾತ್ರವನ್ನು ಮೀರಿ ಯೋಚಿಸಬೇಕಾಗಿದೆ. ವೆಯಿಂಗಾಸ್ಟ್ ಅವರು ಮಾರ್ಕೆಟ್ ಪ್ರಿಸರ್ವಿಂಗ್ ಫೆಡರಲಿಸಮ್ ಮಾರುಕಟ್ಟೆ ಸಂರಕ್ಷಣಾ ಒಕ್ಕೂಟವಾದವನ್ನು (ಎಂಪಿಎಫ್) ಪರಿಚಯಿಸಿದ್ದು ಇದು ಐದು ಅಂಶಗಳಿಂದ ನಿರೂಪಿತವಾಗಿದೆ.

1. ರೂಪಿಸಿದ ಅಧಿಕಾರಗಳೊಂದಿಗೆ ಸರಕಾರಗಳ ಕ್ರಮಾಗತ ಅಧಿಕಾರ ವ್ಯವಸ್ಥೆ (ಸಂಯುಕ್ತ ವ್ಯವಸ್ಥೆಯ ಮೂಲ)
2. ಉಪರಾಷ್ಟ್ರೀಯ ಸರಕಾರಗಳಿಗೆ ಸ್ಥಳೀಯ ಆರ್ಥಿಕತೆ ಮೇಲೆ ಪ್ರಾಥಮಿಕ ಅಧಿಕಾರ

3. ರಾಷ್ಟ್ರೀಯ ಸರಕಾರದಿಂದ ಕಾರ್ಯಗತವಾಗುವ ಒಂದು ಸಾಮಾನ್ಯ ರಾಷ್ಟ್ರೀಯ ಮಾರುಕಟ್ಟೆ
4. ಕಠಿಣವಾದ ಉಪರಾಷ್ಟ್ರೀಯ ಸರಕಾರದ ವಾರ್ಷಿಕ ಆಯವ್ಯಯದ ಅಂದಾಜುಪಟ್ಟಿಯ ನಿರ್ಬಂಧಗಳು
5. ರಾಜಕೀಯ ಅಧಿಕಾರದ ಸಾಂಸ್ಥೀಕೃತ ಹಂಚಿಕೆ

ಆರಂಭದಲ್ಲಿ ಸಹಕಾರಿ ಆರ್ಥಿಕ ಒಕ್ಕೂಟಗಳ ಪರಿಕಲ್ಪನೆಯು (ವೆಯರ್, 1953) ವಿವಿಧ ಉಪರಾಷ್ಟ್ರೀಯ ಅಧಿಕಾರ ವ್ಯಾಪ್ತಿಗೊಳಪಟ್ಟ ಪ್ರದೇಶಗಳು ಪರಸ್ಪರ ಪ್ರಯೋಜನಗಳನ್ನು ಪಡೆದುಕೊಳ್ಳಬಹುದೆಂಬುದನ್ನು ಅಲ್ಲದೇ ಉಪರಾಷ್ಟ್ರೀಯ ಹಾಗೂ ರಾಷ್ಟ್ರೀಯ ಸರಕಾರಗಳು ಸಹಕಾರದಿಂದ ಕೆಲಸ ಮಾಡಬಹುದೆಂಬುದಕ್ಕೆ ಪ್ರಾಧಾನ್ಯತೆ ನೀಡಿತ್ತು. ಅದೇ ರೀತಿ ರಿಕರ್ (1964) ಸಂಯುಕ್ತ ಒಕ್ಕೂಟಗಳನ್ನು ಭದ್ರತೆಯನ್ನು ಮತ್ತು ಸುಸ್ಥಿರತೆಯನ್ನು ಹೆಚ್ಚಿಸುವುದಕ್ಕೆ ಇರುವ ಸಾಂವಿಧಾನಿಕ ಚೌಕಾಶಿಗಳೆಂದು ಪರಿಭಾವಿಸಿದರು. ಇದಕ್ಕೆ ಪರ್ಯಾಯವಾದ ವಿಧಾನವು ಉಪರಾಷ್ಟ್ರೀಯ ಘಟಕಗಳ ನಡುವೆ ಹಾಗೂ ರಾಷ್ಟ್ರೀಯ ಮತ್ತು ಉಪರಾಷ್ಟ್ರೀಯ ಸರಕಾರಗಳ ನಡುವೆ ಸ್ಪರ್ಧೆಗಳ ಪ್ರಯೋಜನಗಳಿಗೆ ಪ್ರಾಧಾನ್ಯತೆ ನೀಡುತ್ತದೆ. ತಮ್ಮ ಕ್ಷೇತ್ರದ ಹಿತಾಸಕ್ತಿಯಲ್ಲಿ ತೊಡಗಿಸಿಕೊಳ್ಳುವಲ್ಲಿ ರಾಜಕೀಯ ನಾಯಕರಿಗೆ ನೀಡುವ ಪ್ರೋತ್ಸಾಹ ಧನವನ್ನು ಹೆಚ್ಚಿಸುವ ಮೂಲಕ ಈ ಸ್ಪರ್ಧೆಯ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ (ಟ್ರೈ ಬೌಟ್ 1956, ಬ್ರೆನ್ನಾನ್ ಮತ್ತು ಬಚ್ ನಾನ್ 1980; ಬ್ರೆಟನ್ 1995). ಸರಕಾರಗಳ ನಡುವಿನ ಸ್ಪರ್ಧೆಯು ಅಸ್ಥಿರತೆಯನ್ನುಂಟು ಮಾಡಬಹುದು ಅಥವಾ ನ್ಯಾಯವಿರುದ್ಧವಾದ ಪರಿಣಾಮಗಳಿಗೆ ಎಡೆ ಮಾಡಿಕೊಡಬಹುದೆಂಬುದನ್ನು ಬ್ರೆಟನ್ ಗುರುತಿಸುತ್ತಾರೆ. ಹತೋಟಿಯಲ್ಲಿಲ್ಲದಿದ್ದರೆ ಸ್ಪರ್ಧೆಯೂ ಕೂಡಾ ಯಾವಾಗಲೂ ಅತ್ಯುತ್ತಮವಾಗಿರುವುದಿಲ್ಲ ಎಂಬುದನ್ನೂ ಅವರು ಗುರುತಿಸುತ್ತಾರೆ. ಎಂಪಿಎಫ್ ಸ್ಪರ್ಧಾತ್ಮಕ ಆರ್ಥಿಕ ಒಕ್ಕೂಟದ ಮುಖ್ಯ ಅಂಶಗಳನ್ನು ಒಳಗೊಳ್ಳುತ್ತದೆ. ಆದರೆ ಅನೇಕ ವಿಧಗಳಲ್ಲಿ ಅದರಿಂದ ಮಿಗಿಲಾಗಿ ಹೋಗುತ್ತದೆ. ಮುಖ್ಯವಾಗಿ ಷರತ್ತುಗಳಲ್ಲಿ 3ನೇ ಮತ್ತು 4ನೇ ನಿಬಂಧನೆಗಳಲ್ಲಿ. ಅದೇ ವೇಳೆ, ಮೂರನೇ ನಿಬಂಧನೆಯು ಒಳಗೊಂಡ ಪರಿಮಿತಿಗಳನ್ನು ಹೊರತುಪಡಿಸಿ ಎಂಪಿಎಫ್ ನ ದೃಷ್ಟಿಯಲ್ಲಿ ಸ್ಪರ್ಧೆಯು ಬ್ರೆಟನ್ ಗಿಂತ ಹೆಚ್ಚು ವಿಶ್ವಾಸಪೂರ್ಣವಾಗಿದೆ. ಸರಕಾರಗಳ ನಿಯಂತ್ರಣ ಅಧಿಕಾರದ ವಿಕೇಂದ್ರೀಕರಣ ಮತ್ತು ನಿಯಂತ್ರಣಗಳೆರಡನ್ನೂ ಇದು ಎತ್ತಿ ಹಿಡಿಯುತ್ತದೆ. ಅದೇ ರೀತಿ ಮಾರುಕಟ್ಟೆಯ ನಿಯಂತ್ರಣ ಕೂಡಾ. ಭಾರತದ ಮತ್ತು ಚೀನಾದ ಸಂದರ್ಭಗಳಲ್ಲಿ ಈ ಪರಿಕಲ್ಪನೆಗಳ ಯುಕ್ತತೆಯನ್ನು ಸಿಂಗ್ ಚರ್ಚಿಸಿದ್ದಾರೆ. ಭಾರತದಂತಹ ಸಂಯುಕ್ತ ಆರ್ಥಿಕ ವ್ಯವಸ್ಥೆಗಳಲ್ಲಿ ಅಧಿಕಾರ ನಿರ್ವಹಣೆಯ ಗುಣಮಟ್ಟದ ಸಾಮಾನ್ಯ ಸಂಗತಿಗಳು ಸರಕಾರಗಳ ಕ್ರಮಾಗತ ಅಧಿಕಾರ ನಿರ್ವಹಣೆ ಮತ್ತು ರಚನೆಗಳೊಂದಿಗೆ ಪರಸ್ಪರ ಹೆಣೆದುಕೊಂಡಿವೆ. ಎಂಪಿಎಫ್ ದೃಷ್ಟಿಕೋನವೆಂದರೆ ಮೂಲಭೂತವಾದ ಉತ್ತಮ ಅಧಿಕಾರ ನಿರ್ವಹಣೆಯನ್ನು ಒದಗಿಸಿದರೆ ಯಾವುದು ಮುಖ್ಯವಾಗುತ್ತದೆ ಎಂದರೆ ಮಾರುಕಟ್ಟೆಯಲ್ಲಿ ಅಸಮರ್ಥ ಸರಕಾರಿ ಹಸ್ತಕ್ಷೇಪವನ್ನು ನಿಯಂತ್ರಿಸುವುದು ಮತ್ತು ಇದನ್ನು ಸಾಧಿಸುವಲ್ಲಿ ಸಮರ್ಪಕವಾದ ಸಂಯುಕ್ತ ಸಂಸ್ಥೆಗಳು ಮುಖ್ಯವಾಗುತ್ತವೆ. ಈ ದೃಷ್ಟಿಯಿಂದ ಅಧಿಕಾರ ನಿರ್ವಹಣೆಯ ಕೆಲವು ವಿಧದ ವಿಕೇಂದ್ರೀಕರಣವು ಸರಕಾರ ಮತ್ತು ಮಾರುಕಟ್ಟೆಯ ನಡುವಿನ ಪರಿಮಿತಿಯನ್ನು ಪುನರ್ ರಚಿಸಬಲ್ಲ ಮಾರುಕಟ್ಟೆ ಪ್ರೇರಿತ ಸುಧಾರಣೆಗಳಿಗೆ ಪೂರಕವಾಗಿರುತ್ತವೆ. ಭಾರತದಲ್ಲಿ ಮೂಲಭೂತವಾಗಿ ಅಧಿಕಾರ ನಿರ್ವಹಣೆಯ ಸಮಸ್ಯೆಯೆಂದರೆ ಜವಾಬುದಾರಿಕೆ. ಭಾರತದ ಕೇಂದ್ರೀಕೃತ ಸಾಂಪ್ರದಾಯಿಕ ಜವಾಬ್ದಾರಿಕೆಯು, ಯಾಂತ್ರಿಕ ವ್ಯವಸ್ಥೆಗಳ ಕ್ರಮಾಗತ ರಾಜಕೀಯ ಮತ್ತು ಅಧಿಕಾರಶಾಹಿ ನಿಯಂತ್ರಣ ಹಾಗೂ ನಿರ್ವಹಣೆಯ ಮೇಲೆ ಅವಲಂಬಿತವಾಗಿರುವುದರಿಂದ ನಿಷ್ಪ್ರಯೋಜಕವಾಗಿವೆಯೆಂದು ಯಾರೇ ಆದರೂ ವಾದಿಸಬಹುದು (ರಾವ್ ಮತ್ತು ಸಿಂಗ್ 2003). ಅಧಿಕಾರ ನಿರ್ವಹಣೆಯ ಸಾಮರ್ಥ್ಯವನ್ನು ಹೆಚ್ಚಿಸುವ ಮಾರ್ಗವಾಗಿ ಉಪ ರಾಷ್ಟ್ರೀಯ ಹಂತದಲ್ಲಿ ರಾಜಕೀಯ ಜವಾಬ್ದಾರಿಯನ್ನು ಹೆಚ್ಚು ಸಮರ್ಥವಾಗಿ ವಿಸ್ತೃತಗೊಳಿಸುವುದು, ತನ್ಮೂಲಕ ಒಂದು ಹೆಚ್ಚು ದೃಢವಾದ ಸಂಯುಕ್ತ ಒಕ್ಕೂಟಗಳ ರಚನೆಯು ಮುಖ್ಯವಾಗುತ್ತದೆ. ಅದೇ ವೇಳೆ ಎಂಪಿಎಫ್ ದೃಷ್ಟಿಕೋನವು ಉಪರಾಷ್ಟ್ರೀಯ ಸರಕಾರಗಳ ಅದರಂತೆ ಮಾರುಕಟ್ಟೆಯ ಚಟುವಟಿಕೆಗಳ ಪರಿಮಿತಿಯ ಮೇಲೆ ಸರಿಯಾದ ನಿರ್ಬಂಧಗಳನ್ನು ಹೊಂದುವುದರ ಪ್ರಾಮುಖ್ಯತೆಗೆ ಪ್ರಾಧಾನ್ಯತೆ ನೀಡುತ್ತದೆ. ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿ ಸರಕಾರದ ವಿಕೇಂದ್ರೀಕರಣವು ಎಲ್ಲಾ ಉನ್ನತ ಹಂತದ ಸರ್ಕಾರೀ ನಿರ್ಲಕ್ಷ್ಯವನ್ನು ಅಳಿಸಿಹಾಕುವುದಿಲ್ಲ. ಕೆಲವು ವೈಯಕ್ತಿಕ ಹಕ್ಕುಗಳು ರಾಷ್ಟ್ರಮಟ್ಟದವಾಗಿದ್ದರೆ ಕೇಂದ್ರ ಸರಕಾರವು ತನ್ನ ಉಪರಾಷ್ಟ್ರೀಯ ಪೂರೈಕೆಗಳನ್ನು ನಿಯಂತ್ರಿಸಬಹುದು, ಆ ಮೂಲಕ ಅಲ್ಲಿ ಯಾವುದೇ ರೀತಿಯ ಪ್ರತ್ಯಕ್ಷ ಅಥವಾ ಪರೋಕ್ಷ ಹಸ್ತಕ್ಷೇಪಕ್ಕೆ ಆಸ್ಪದವಿಲ್ಲವೆಂಬುದನ್ನು ದೃಢೀಕರಿಸಬಹುದು. ಕೇಂದ್ರದ ಮೇಲೆ ಆಧಾರಿತವಾಗಿರುವ ಸ್ಥಳೀಯ ಸಾರ್ವಜನಿಕ ಸರಕುಗಳ (ಪ್ರಾಥಮಿಕ ಹಕ್ಕುಗಳನ್ನು ಒದಗಿಸಲು ಅಗತ್ಯ ಸರಕುಗಳನ್ನು ಸ್ವತಃ ಒದಗಿಸುವವು) ಮೇಲಿನ ವೆಚ್ಚಗಳು ಪ್ರಮುಖ ನಿಯಂತ್ರಣಕ್ಕಿಂತ ತೀರಾ ಭಿನ್ನವಾಗಿರಬಹುದು. ಹೀಗಾಗಿ ಕೆಲವು ಸರ್ಕಾರಿ ಅಧಿಕಾರಗಳ ವಿಕೇಂದ್ರೀಕರಣವು ಸ್ವಾತಂತ್ರ್ಯಾನಂತರದಲ್ಲಿ ಜನ ಗ್ರಹಿಸಿಕೊಂಡಂತೆ ಸ್ಥಳೀಯ ಸಮಾಜ ಶ್ರೇಷ್ಠರಿಂದ ಸ್ವಾಧೀನಕ್ಕೊಳಪಟ್ಟು ಶೋಷಣೆಗೆ ದಾರಿ ಮಾಡಿಕೊಡುವುದಿಲ್ಲ. ಸಿಂಗ್ ಮತ್ತು ಶ್ರೀನಿವಾಸನ್ (2013) ಅಧಿಕಾರ ನಿರ್ವಹಣೆಯಲ್ಲಿನ ಈ ಸುಧಾರಣೆಗಳ ಸಾಧ್ಯತೆಯನ್ನು 'ಒಕ್ಕೂಟ ತತ್ವವನ್ನು ಸಮೃದ್ಧಗೊಳಿಸುವ ಆಡಳಿತ' ಎಂದು ನಿರೂಪಿಸಿದ್ದಾರೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಹೊಸ ನೀತಿ ಆಯೋಗವು ತನ್ನ ಪಾತ್ರವನ್ನು ಎಚ್ಚರಿಕೆಯಿಂದ ವ್ಯಾಖ್ಯಾನಿಸಬೇಕಾಗಿದೆ. ಆದರೆ ಅದೇ ವೇಳೆಗೆ ಭಾರತೀಯ ಅರ್ಥವ್ಯವಸ್ಥೆಯಲ್ಲಿ ತನ್ನ ನೇರ ಹಸ್ತಕ್ಷೇಪವನ್ನು ಸೀಮಿತಗೊಳಿಸಬೇಕಿದೆ. ಉಪರಾಷ್ಟ್ರೀಯ ಸರಕಾರಗಳಿಗೆ ತೆರಿಗೆ ಅಧಿಕಾರವನ್ನು ಪುನರ್ ಯೋಚಿಸಲು, ಎಲ್ಲ ಹಂತಗಳಲ್ಲೂ ಸರ್ಕಾರಿ ವ್ಯಯದ ಕ್ಷಮತೆಯನ್ನು ಸುಧಾರಿಸಲು ಸಾಧ್ಯವಿರುವೆಡೆಗಳಲ್ಲೆಲ್ಲಾ ಅಧಿಕಾರ ವಿಕೇಂದ್ರೀಕರಣಗೊಳಿಸುತ್ತಾ ಅಂತರ್ ಸರ್ಕಾರಿ ವರ್ಗಾವಣೆಗಳ ವ್ಯವಸ್ಥೆಯನ್ನು ಮುಖ್ಯವಾಹಿನಿಗೆ ತರುವಲ್ಲಿ ತಳಹದಿಯಾಗಿ ಇದು ಕಾರ್ಯನಿರ್ವಹಿಸ ಬೇಕಿದೆ. ಈ ಪರಿಕಲ್ಪನೆಯ ಸುಧಾರಣಾ ಕಾರ್ಯಕ್ರಮವು ಮಹತ್ವಾಕಾಂಕ್ಷೆಯಿಂದ ಕೂಡಿದ್ದಾಗಿರಬಹುದು, ಆದರೆ ಅಧಿಕಾರ ನಿರ್ವಹಣೆಯ ಗುಣಮಟ್ಟವನ್ನು ಸುಧಾರಿಸಲು ಮತ್ತು ಆರ್ಥಿಕ ಅಭಿವೃದ್ಧಿಯನ್ನು ಹೆಚ್ಚಿಸಲು ಅತ್ಯಂತ ಪ್ರಯೋಜನಕಾರಿಯಾಗಲಿದೆ. ❑

# ಕಲಿತ ಮತ್ತು ಕಲಿಯದ ಪಾಠಗಳು

ಬಲವೀರ್ ಅರೋರ
ಕನ್ನಡಕ್ಕೆ : ಡಾ. ಎಚ್.ಎಸ್. ಭದ್ರಪ್ಪ



**ಸಹಕಾರಿ ಮತ್ತು ಪೈಪೋಟಿ ಸಂಯುಕ್ತ ವ್ಯವಸ್ಥೆಯು ರಾಜಕೀಯ ಚಿಂತನೆಯ ಹೊಸ ಪದಗಳಾಗುತ್ತಿರುವ ಸಂದರ್ಭದಲ್ಲಿ ಭಾರತೀಯ ಸಂಯುಕ್ತ ವ್ಯವಸ್ಥೆಯು ರಾಜ್ಯಗಳ ಮತ್ತು ಜಿಲ್ಲೆಗಳಲ್ಲಿ ಜೀವಿಸುತ್ತಿವೆ ಎಂದು ನೆನಪಿಸಿಕೊಳ್ಳುವುದು ಮುಖ್ಯ. ನಿಜವಾದ ಬದಲಾವಣೆಗಳಾಗದ ಹೊರತೂ ಭಾರತೀಯ ಸಂಯುಕ್ತ ಪ್ರಜಾಪ್ರಭುತ್ವ ವ್ಯವಸ್ಥೆಯ ಬಲವರ್ಧನೆ ಅಪೂರ್ಣ ಕೆಲಸವಾಗಿಯೇ ಉಳಿಯುತ್ತದೆ.**

ಕಳೆದ ಆರು ದಶಕಗಳಲ್ಲಿ ಭಾರತೀಯ ಒಕ್ಕೂಟ ಪ್ರಜಾಪ್ರಭುತ್ವವು ಅನೇಕ ಬದಲಾವಣೆಗಳನ್ನು ಹೊಂದಿದೆ. ನಾವಿಲ್ಲಿ ಅನುಭವ, ಹಿಂಜರಿಕೆಗಳು, ತಪ್ಪುಗಳು, ಸೋಲುಗಳು ಮತ್ತು ನವೋನ್ಮೇಷಣೆ, ಅತಿರೇಕಗಳು ಹಾಗೂ ಯಶಸ್ಸುಗಳನ್ನು ವ್ಯಾಖ್ಯಾನಿಸಬೇಕಿದೆ. ಕಳೆದ ಎರಡು ದಶಕಗಳಲ್ಲಿ ಇದು ಸಂಯುಕ್ತ ಒಕ್ಕೂಟ ವ್ಯವಸ್ಥೆಯ ಹೊಸ ಹಂತವನ್ನು ತಲುಪಿದೆ. ಹೊಸ ಬೆಳವಣಿಗೆಯ ಪ್ರಾರಂಭದಲ್ಲಿ ಸಾಂವೈಧಾನಿಕ ಶ್ರೇಷ್ಠತೆಯ ಪ್ರತಿಪಾದಕರನ್ನು ಆಘಾತಕ್ಕೀಡು ಮಾಡುವಂತಹ ಹಲವು ಸಾಂಪ್ರದಾಯಿಕ ತತ್ವಗಳನ್ನು ಕೈಬಿಡಬೇಕಾಯಿತು.

ಕಲಿಯದ ವಸಾಹತು ಏಕಾಧಿಪತ್ಯದ ಸಿದ್ಧಾಂತವು ಕಲಿಕಾ ಪ್ರಕ್ರಿಯೆಯ ಭಾಗವಾಗಿದ್ದು ಸಮಸ್ಯೆಗಳಿಗೆ ಪ್ರೇರಿತ ಪರಿಹಾರಗಳು ಈ ಹಿಂದೆ ಈ ರೀತಿಯಲ್ಲಿ ಎದುರಾಗಿರಲಿಲ್ಲ ಮತ್ತು ಇದೇ ಅವಧಿಯಲ್ಲಿ, ಏಕತೆಯ ಅವಶ್ಯಕತೆಯನ್ನು ತ್ಯಾಗ ಮಾಡದೆ, ವೈವಿಧ್ಯತೆಯನ್ನು ಎಷ್ಟು ಪ್ರಮಾಣದಲ್ಲಿ ಅಳವಡಿಸಿಕೊಳ್ಳಬಹುದೆಂಬುದರ ಬಗ್ಗೆ ಅನ್ವೇಷಣೆಯಲ್ಲಿ ತೊಡಗಿಕೊಳ್ಳಲಾಯಿತು.

ಇದು ಕೆಲವು ವಿಷಯಗಳಲ್ಲಿ ತೀಕ್ಷ್ಣವಾಗಿದ್ದರೂ, ಇನ್ನು ಕೆಲವು ವಿಷಯಗಳಲ್ಲಿ ಸಡಿಲವಾಗಿತ್ತು. ಇತ್ತೀಚಿನ ಉದಾರೀಕರಣದ ಜಾಗತಿಕ ಆರ್ಥಿಕ ಪ್ರಗತಿಯನ್ನು ಸರಕಾರದ ಅಸ್ತಿತ್ವದೊಂದಿಗೆ ಸಮೀಕರಿಸುವುದು ಅತೀ ಸರಳೀಕರಣವಾಗುತ್ತದೆ. ಪ್ರಪಂಚದಲ್ಲೇ ದೊಡ್ಡದಾದ ಭಾರತೀಯ ಪ್ರಜಾಪ್ರಭುತ್ವವು, ತನ್ನ ಪ್ರಜೆಗಳಿಗೆ ಅರ್ಥವತ್ತಾದ ಹಕ್ಕುಗಳನ್ನು ನೀಡುವುದರ ಮೂಲಕ ತನ್ನ ಅಸ್ತಿತ್ವವನ್ನು ಬಲಗೊಳಿಸಲು ನಿರಂತರವಾಗಿ ಪ್ರಯತ್ನಿಸುತ್ತಿದೆ. ಅದು ಸಂಯುಕ್ತ ವ್ಯವಸ್ಥೆಯಾದುದರಿಂದಲೇ ಉಳಿದುಕೊಂಡಿದೆ ಮತ್ತು ಉನ್ನತಿಗೆ ಏರಿದೆ.

ಭಾರತೀಯ ಒಕ್ಕೂಟದ ಅಭಿವೃದ್ಧಿಗೆ ಕಾರಣವಾದ ಮುಖ್ಯ ಅಂಶಗಳನ್ನು ಗುರುತಿಸಲು ಹಾಗೂ ಇದರಿಂದ ಯಾವುದಾದರೂ ಪಾಠಗಳನ್ನು ಕಲಿತಿದ್ದೇವೆಯೇ ಅಥವಾ ಇಲ್ಲವೇ ಎನ್ನುವ ಜಿಜ್ಞಾಸೆಯನ್ನು ಮಾಡಲು ಲೇಖನದಲ್ಲಿ ಪ್ರಯತ್ನಿಸಲಾಗಿದೆ.

**ಸೂಕ್ತ ಒಕ್ಕೂಟ ವ್ಯವಸ್ಥೆಯ ರಚನೆ : ಸವಾಲು**

ಸ್ವಾತಂತ್ರ್ಯಾನಂತರ ದೇಶದ ತುರ್ತಿನ ಅವಶ್ಯಕತೆ ರಾಜ್ಯಗಳ ಸುಸಂಘಟನೆಯಾಗಿತ್ತು. ಸಂವಿಧಾನ ರಚನಾ ಸಭೆಯ ಸ್ಥಾಪಕರ ಗುರಿ ನಿಸ್ಸಂಶಯವಾಗಿ ಸ್ಪಷ್ಟವಾಗಿತ್ತು. ಭಾರತೀಯ ಗಣರಾಜ್ಯ ವ್ಯವಸ್ಥೆ ಹೇಗಿರಬೇಕೆಂದು ತಾವು ಕಂಡಿದ್ದ ಆದರ್ಶದ ಕನಸಿನ ಸಾಕ್ಷಾತ್ಕಾರಕ್ಕಾಗಿ ತಮ್ಮ ಯಾವುದೇ ತತ್ವಗಳನ್ನಾಗಲಿ ಧ್ಯೇಯಗಳನ್ನಾಗಲಿ ಕೈಬಿಡದೆ ದೀರ್ಘ ಬಾಳಿಕೆಯ ಪ್ರಜಾಪ್ರಭುತ್ವಕ್ಕೆ ಅಡಿಪಾಯವನ್ನು ಹಾಕಲು ಮುಂದಾದರು.

ಏಕಾಧಿಪತ್ಯದ ಒತ್ತಾಸೆ ಬಲವಾಗಿದ್ದರಿಂದ ಮತ್ತು ಅಪಾಯಕಾರಿ ತಿರುವಿನ ರಕ್ಷಣೆಗೆ ಪರ್ಯಾಯ ಶಕ್ತಿಯಾಗಿ ಭಾರತವನ್ನು ಸೈದ್ಧಾಂತಿಕವಾಗಿ ಪ್ರತಿಬಿಂಬಿಸಬೇಕಾಯಿತು. ತೀವ್ರ ಚರ್ಚೆಯ ನಂತರ ಸಂವಿಧಾನ ರಚನಾ ಸಭೆ ಜಾತ್ಯಾತೀತ ಗಣತಂತ್ರವನ್ನು ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಯೊಂದಿಗೆ ಆಯ್ಕೆಮಾಡಿತು.

ಅಧ್ಯಕ್ಷರು, ಸೆಂಟರ್ ಫಾರ್ ಮಲ್ಟಿ ಲೆವೆಲ್ ಫೆಡರಲಿಸಮ್, ನವದೆಹಲಿ. email : balveerarora@gmail.com

ದೇಶವಿಭಜನೆಯ ಅವಘಡದಿಂದ ನಲುಗಿದ್ದ ಸಂವಿಧಾನ ರಚನಾ ಸಭೆಯು ಸಾಮಾನ್ಯವಾಗಿ ಹೊಸರಾಷ್ಟ್ರದ ಏಕತೆ ಮತ್ತು ಸಂಘಟನೆಗೆ ಪ್ರಾಮುಖ್ಯತೆಯನ್ನು ನೀಡಿತು. ಅಧಿಕ ಮತ್ತು ಹೊಸ ಗಣರಾಜ್ಯ ವ್ಯವಸ್ಥೆಗೆ ಧಕ್ಕೆಯನ್ನುಂಟು ಮಾಡಬಹುದಾದ ವಿಧ್ವಂಸಕ ಶಕ್ತಿಗಳನ್ನು ಗಮನಿಸಿ ಸಮಗ್ರತೆಗೆ ಒತ್ತು ನೀಡಲಾಯಿತು.

ಅಂತಿಮವಾಗಿ ಅಸ್ತಿತ್ವದಲ್ಲಿದ್ದ ಸಂಯುಕ್ತ ವ್ಯವಸ್ಥೆಯ ಎಲ್ಲಾ ಮಾದರಿಗಳಿಗೂ ದೂರವಾದ ವ್ಯವಸ್ಥೆಯನ್ನು ಅಳವಡಿಸಲಾಯಿತು. ಕಾಲದ ಅವಶ್ಯಕತೆ ಮತ್ತು ಸಂಯುಕ್ತ ಸಮಾಜಕ್ಕೆ ಅಗತ್ಯವಾದ ವ್ಯವಸ್ಥೆಯನ್ನು ಸಂವಿಧಾನ ರಚನಾ ಸಭೆ ರೂಪಿಸಿತು. ಸಂಯುಕ್ತ ಪ್ರಜಾಪ್ರಭುತ್ವದ ತತ್ವಾಧಾರಿತ ರಾಜಕೀಯ ಪ್ರಕ್ರಿಯೆಯು ಈ ಕೆಲಸವನ್ನು ಪೂರ್ಣಗೊಳಿಸಿತು.

ಆಗ ಅಸ್ತಿತ್ವದಲ್ಲಿದ್ದ ಅಧಿಕಾರಯುಕ್ತ ಮಾದರಿಗಳೊಂದಿಗೆ ಹೋಲಿಕೆ ಮಾಡುವ ದಾಖಲೆಗಳಾಗಲಿ ಅಥವಾ ನಂಬಲರ್ಹ ಮಾಪನಗಳಾಗಲಿ ಇಲ್ಲದ ಕಾರಣ ಈ ವ್ಯವಸ್ಥೆಯು ನಿಜವಾಗಿಯೂ ಸಂಯುಕ್ತ ರಚನೆಯೇ ಎಂದು ಒಪ್ಪಿಕೊಳ್ಳಲು ನ್ಯಾಯವೇತ್ತರಿಗೆ ಕಷ್ಟವಾಯಿತು. ಆದುದರಿಂದ ಇದನ್ನು 'ಅರೆ ಸಂಯುಕ್ತ ವ್ಯವಸ್ಥೆ' ಎಂದು ಕರೆಯಲಾಯಿತು. ಈಗ ಸಂಯುಕ್ತತೆಯ ತತ್ವಗಳು ಭಾರತೀಯ ನೆಲದ ಆಳಕ್ಕಿಳಿದಿರುವುದರಿಂದ, ಆ ಹೇಳಿಕೆಯು ಸರಿಯಾಗುವುದಿಲ್ಲ. ಈಗಿನ ಭಾರತೀಯ ರಾಜಕೀಯ ಸಂಸ್ಥೆಗಳನ್ನು ಸಂಯುಕ್ತತೆಯ ಮಿಶ್ರತಳಿಗಳೆಂದು ಪರಿಗಣಿಸಲಾಗುತ್ತದೆ. ಸ್ವನಿಯಮ ಮತ್ತು ಹಂಚಿಕೊಂಡ ನಿಯಮಗಳನ್ನು ಅಸಂಪ್ರದಾಯಕವಾಗಿ ಒಟ್ಟುಗೂಡಿಸಿರುವುದರಿಂದಲೇ ಭಾರತದ ಗಣತಂತ್ರವ್ಯವಸ್ಥೆಯು ಉಳಿದಿರುವುದು ಮಾತ್ರವಲ್ಲ, ತನ್ನ ವೈವಿಧ್ಯತೆಯೊಂದಿಗೆ ಉನ್ನತಿಯನ್ನು ತಲುಪಿದೆ. ಇದು ಉನ್ನತ ಸಿದ್ಧಾಂತವಾಗಿದೆ ಮತ್ತು ಭಾರತವು ಪ್ರಜಾಪ್ರಭುತ್ವಾಗಿ ಉಳಿಯಬೇಕಾದರೆ ಅದನ್ನು ಸಂರಕ್ಷಿಸಬೇಕಾಗುತ್ತದೆ.

### ರಾಜ್ಯಗಳ ಪುನರ್ಘಟನೆ

ಭಾಷಾವಾರು ಪ್ರಾಂತ್ಯಗಳನ್ನು ಗುರುತಿಸುವ ವಿಷಯವು ಸಂವಿಧಾನ ರಚನಾ ಸಭೆಯಲ್ಲಿ ಮುಖ್ಯ ಸಮಸ್ಯೆಯಾಯಿತು. ಇದು ರಾಷ್ಟ್ರೀಯಾಂದೋಲನದಲ್ಲಿ ತನ್ನ ಬೇರುಗಳನ್ನು ಹೊಂದಿದ್ದರೂ ಅನಂತರ ಆದ್ಯತೆಗಳನ್ನು ಮತ್ತು ಜನಪ್ರಿಯ ಭಾವನೆಗಳನ್ನು ತಪ್ಪಾಗಿ ಅರ್ಥೈಸಿದ್ದರಿಂದ ಮುಂದೂಡಲ್ಪಟ್ಟಿತು.

ಹಲವರಿಗೆ ಆಶ್ಚರ್ಯವಾಗುವಂತೆ ಚಲನಶೀಲ ಜ್ಯಾಮಿತಿ ಮತ್ತು ಚಲನಶೀಲ ರಾಜ್ಯ ಪರಿಗಣನಾ ಪ್ರಕ್ರಿಯೆಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು. ಅದು ಹೇಗೆ ಸಾಧ್ಯವಾಗುತ್ತದೆ? ನೈಜವಾಗಿ ಇದು ಸಾಧ್ಯವೇ ಎನ್ನುವುದನ್ನು ರಾಜಕೀಯ ಮತ್ತು ಸಾಂವೈಧಾನಿಕ ಪ್ರಕ್ರಿಯೆಯ ಮೂಲಕ ಅವಲೋಕಿಸಬೇಕು. ಈ ಪ್ರಕ್ರಿಯೆಯ ಕ್ಲಿಷ್ಟತೆಯನ್ನು ತೆಲಂಗಾಣ ರಾಜ್ಯದ ಉದಯಕ್ಕೆ ಸಂಬಂಧಿಸಿದ ಹಿಂಸಾತ್ಮಕ ಘಟನೆಗಳ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ.

ಸ್ವಾತಂತ್ರ್ಯಾ ನಂತರದ ಮೊದಲ ಎರಡು ದಶಕಗಳ ರಾಜಕೀಯ ಪ್ರಕ್ರಿಯೆಯು ಅಸ್ತಿತ್ವದ ರಾಜಕೀಯ ಮತ್ತು ಅಭಾವದ ರಾಜಕೀಯದಿಂದ ಗುರುತಿಸಲ್ಪಡುತ್ತದೆ. ಈ ಅವಧಿಯಲ್ಲಿ ಅಸ್ತಿತ್ವ, ಭಾಷೆ ಮತ್ತು ಗಡಿಗಳ ಸುತ್ತಲೇ ಉದ್ವಿಗ್ನತೆ ಸುಳಿದಾಡುತಿತ್ತು.

ಸಂವಿಧಾನ ರಚನಾ ಸಭೆಯು ವಿಚ್ಛಿನ್ನ ಹೊಂದಬಹುದಾದ ರಾಜ್ಯಗಳ ಅವಿಚ್ಛಿನ್ನ ಸಂಯುಕ್ತ ವ್ಯವಸ್ಥೆಯನ್ನು ಸೃಷ್ಟಿಸಿತು. ಪ್ರಾರಂಭಿಕ ವರ್ಷಗಳಲ್ಲಿ ಅಧಿವೇಶನಗಳು ಸ್ಥಗಿತಗೊಂಡವು ಆದರೆ ಸಾಂವಿಧಾನಿಕ ಚಲನಶೀಲತೆಯು ಪರಿಹಾರಗಳನ್ನು ಕಂಡು ಹಿಡಿಯಲು ಉತ್ತೇಜಿಸಿತು.

### ಭದ್ರ ಕೇಂದ್ರ ವ್ಯವಸ್ಥೆಯ ಪ್ರತಿರೋಧಕತೆ

ನವ ಉದಾರನೀತಿಯ ಕರೆಯಂತೆ ಆರ್ಥಿಕತೆಯಲ್ಲಿ ಸರ್ಕಾರ ಮಧ್ಯ ಪ್ರವೇಶಿಸುವುದಕ್ಕೂ ಭದ್ರ ಕೇಂದ್ರ ವ್ಯವಸ್ಥೆ ಪ್ರತಿರೋಧ ಶಕ್ತಿಯಾಗಿತ್ತು. ಅನಿಯಂತ್ರತೆ ಎಂದರೆ ನಿಯಂತ್ರಣ ರಹಿತ ಬೆಳವಣಿಗೆ ಅಲ್ಲ. ಹಳೆಯ ಸರಕಾರಿ ಕಾರ್ಯಭಾರವನ್ನು ಹೊಸ ಸ್ವತಂತ್ರ ನಿಯಂತ್ರಣ ವ್ಯವಸ್ಥೆಯು ಬದಲಾಯಿಸಿತು. ಈ ಹೊಸ ಸ್ವನಿಯಂತ್ರಿತ ಸಂಸ್ಥೆಗಳು ಪ್ರಜಾಪ್ರಭುತ್ವದ ಬದ್ಧತೆಗೊಳಪಡಲಿಲ್ಲ.

ಕೇಂದ್ರವು ಎಲ್ಲ ಬೃಹತ್ ಆರ್ಥಿಕ ವಲಯದ ಮೇಲೆ ನಿಯಂತ್ರಣವನ್ನು ಇಟ್ಟುಕೊಳ್ಳುತ್ತದೆ. ಕೆಲವು ಕ್ಷೇತ್ರಗಳ ಮೇಲಿನ




ಅನಿಯಂತ್ರಣವು ರಾಜ್ಯಗಳಿಗೆ ಹೆಚ್ಚಿನ ಅವಕಾಶವನ್ನು ನೀಡುತ್ತದೆ. ಆದರೆ ಕೇಂದ್ರದ ನಿಯಂತ್ರಣದ ಅವಶ್ಯಕತೆ ಕಡಿಮೆಯಾಗದೆ ಹೊಸಕ್ಷೇತ್ರಗಳಲ್ಲಿ ಮುಂದುವರೆದಿದೆ.

ಸಾಮಾಜಿಕ ವೈವಿಧ್ಯತೆಯನ್ನು ಪರಿಗಣಿಸಿದರೆ ಸಾಮಾಜಿಕ ಸಾಮರಸ್ಯಕ್ಕೆ ಬಲಿಷ್ಠ ಕೇಂದ್ರದ ಭಾಗವಹಿಸುವಿಕೆಯು ಅನಿವಾರ್ಯವಾಗುತ್ತದೆ.

ಭಾರತೀಯ ಸಂಯುಕ್ತ ವ್ಯವಸ್ಥೆಯ ಅಭಿವೃದ್ಧಿಯ ಪ್ರಾರಂಭಿಕ ಹಂತದಲ್ಲಿ ಸಹಕಾರ ಮತ್ತು ಸಹಯೋಗದ ಅವಶ್ಯಕತೆಗೆ ಸ್ಪಂದಿಸಲು ರಚಿಸಲಾಗಿದ್ದ ಸಾಂಸ್ಥಿಕ ಸಾಧನಗಳ ಬೆಳವಣಿಗೆಯು ಕುಂಠಿತವಾಗಿತ್ತು. ಏಕಪಕ್ಷದ ಪ್ರಾಬಲ್ಯ ಮುಂದಿನ ಸವಾಲುಗಳನ್ನು ಮುರುಟಿಹಾಕಿತ್ತು. ಬಲಿಷ್ಠವಾದ ಕೇಂದ್ರದ ವ್ಯವಸ್ಥೆಗೆ ಯಾವ ಸವಾಲು ಎದುರಾಗಲಿಲ್ಲ ಅಥವಾ ಸ್ವತಂತ್ರ ರಾಜ್ಯದ ಪ್ರತಿಪಾದಕರಿಂದ ಬದಲಾವಣೆಯ ಅಭಿಪ್ರಾಯವೇ ವ್ಯಕ್ತವಾಗಲಿಲ್ಲ. ಅವರು ಬಯಸಿದ್ದೇನೆಂದರೆ ಬಲಿಷ್ಠ ರಾಜ್ಯಗಳು ಮತ್ತು ಅದೇ ವ್ಯವಸ್ಥೆಯೊಳಗೆ ರಾಜ್ಯಗಳಿಗೆ ಹೆಚ್ಚಿನ ಸ್ವಾತಂತ್ರ್ಯ.

ಮೂಲ ವಿನ್ಯಾಸದಲ್ಲಿ ಹೆಚ್ಚಿನ ಶಾಸನಾತ್ಮಕ ಅಧಿಕಾರ ಮತ್ತು ಜವಾಬ್ದಾರಿಗಳನ್ನು ಪ್ರಮುಖ ಅಭಿವೃದ್ಧಿ ಚಟುವಟಿಕೆಗಳಿಗಾಗಿ ರಾಜ್ಯ ಸರಕಾರಗಳಿಗೆ ನೀಡಿದ್ದನ್ನು ನೆನಪಿಸಿಕೊಳ್ಳುವುದು ಮುಖ್ಯ. ಭಾರತೀಯ ಸಂವಿಧಾನವನ್ನು ಅಕ್ಷರಶಃ ಓದುವುದರಿಂದಲೂ ಅದರ ತತ್ವದ ಗ್ರಹಿಕೆ ಸಾಧ್ಯ. ನ್ಯಾಯಾಂಗ ವ್ಯವಸ್ಥೆಯಲ್ಲಿ ಮಾತ್ರವಲ್ಲದೆ ರಾಜ್ಯಗಳಿಗೆ ಪ್ರತ್ಯೇಕವಾಗಿ ವಹಿಸಲಾದ ಕ್ಷೇತ್ರಗಳಲ್ಲಿಯೂ ಸಹ ವಿಚಾರಗಳ ಬಹುಮುಖ ಪುನರಾವರ್ತನೆಗಳಾದವು.

ರಾಜ್ಯಗಳ ಹಣಕಾಸಿನ ಅಡಚಣೆಗಳಿಂದಾಗಿ ಕೇಂದ್ರ ಯೋಜನೆಗಳು ಮತ್ತು ರಾಷ್ಟ್ರೀಯ ನೀತಿಗಳು ವೃದ್ಧಿಯಾದವು.

ಪಟ್ಟಿ IIIರಲ್ಲಿ ಸೇರ್ಪಡೆಯಾದ ಸಾಮಾಜಿಕ ಮತ್ತು ಆರ್ಥಿಕ ಯೋಜನೆಯ 20 ಅಂಶಗಳಿಂದ ಮೊದಲ ಅವಧಿಯಲ್ಲಿ ಯೋಜಿತ ಅಭಿವೃದ್ಧಿಯ ಮಾದರಿಗೆ ಸಾಂವೈಧಾನಿಕ ಅಡಿಪಾಯ ದೊರೆಯಿತು.

ಪ್ರಾರಂಭಿಕ ಅವಧಿಯಲ್ಲಿದ್ದ ಕಾರ್ಯಸೂಚಿ ಬದಿಗೊತ್ತಲ್ಪಟ್ಟು ಅಧಿಕಾರ ಮತ್ತು ಜವಾಬ್ದಾರಿ ಹಂಚಿಕೆಯ ಹೊಸ ಅಂಶಗಳು ಪ್ರಾಮುಖ್ಯತೆಯನ್ನು ಗಳಿಸಿದವು.

ಸಂಯುಕ್ತ ರಾಜಕೀಯ ವ್ಯವಸ್ಥೆಯಲ್ಲಿ ಜವಾಬ್ದಾರಿ ಮತ್ತು ಅಧಿಕಾರದ ಹಂಚಿಕೆ ಸಾಮಾನ್ಯವಾಗಿ ಚರ್ಚೆಗೊಳಪಡುತ್ತಿದ್ದರೂ ಅವೆರಡರ ತೀವ್ರ ಅಸಮತೋಲನವು ಗಂಭೀರ ಉದ್ವಿಗ್ನತೆಗೆ ಕಾರಣವಾಗುತ್ತದೆ.

ರಾಜ್ಯಗಳೊಂದಿಗೆ ಮಾತುಕತೆಯು ಕೇಂದ್ರ ಆಡಳಿತಾತ್ಮಕ ಹಾಗೂ ತಾಂತ್ರಿಕ ನಿರ್ಣಯಗಳಿಗೆ ಸೀಮಿತವಾಗಿರುತ್ತದೆ. ಕೇಂದ್ರವು ಆಗಾಗ್ಗೆ ಒಂದು ನಿರ್ದಿಷ್ಟ ಕಾರ್ಯವಿಧಾನವನ್ನು ನಿರ್ಣಯಿಸಿ ಅನಂತರ ರಾಜ್ಯ ಸರ್ಕಾರಗಳ ಅಭಿಪ್ರಾಯವನ್ನು ಪಡೆಯುತ್ತದೆ.

ಸಹಮತವನ್ನು ಹೊಂದುವುದು ಚರ್ಚೆಯ ನಂತರವೇ ಹೊರತು ಮೊದಲಲ್ಲ. ಈ ರೀತಿಯ ನಿರ್ಣಯ ಕೈಗೊಳ್ಳುವಿಕೆ ಪ್ರಶ್ನಾರ್ಹವೆನಿಸಿದೆ. ಇಂದಿನ ಪರಿಸ್ಥಿತಿಯಲ್ಲಿ ಸಮಾಲೋಚನೆಯೊಂದೇ ಸಾಲದು. ಬೇಕಿರುವುದು ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಒಳಗೊಳ್ಳುವಿಕೆ.

ಸಾಧನೆಯ ದೃಷ್ಟಿಯಲ್ಲಿ ಅಸಮಾನ ರಾಜ್ಯಗಳಿಂದಾಗಿ ಅಸಮಾನತೆಯನ್ನು ಸಾಂವೈಧಾನಿಕವಾಗಿ ಪರಿಗಣಿಸುವ ಅಗತ್ಯವುಂಟಾಗುತ್ತದೆ. ಈ ಗ್ರಹಿಕೆಯಲ್ಲಿ ಸಮಗ್ರತೆಯನ್ನು ತ್ಯಾಗಮಾಡದೆ ಅಥವಾ ಏಕರೂಪತೆಯನ್ನು ಒತ್ತಾಯಿಸದೆ ವೈವಿಧ್ಯತೆಯನ್ನು ಸಂರಕ್ಷಿಸುವ ಉದ್ದೇಶ ರಾಜಕೀಯ ಸಂಯುಕ್ತ ರಚನೆ ಹಿಂದಿದೆ.



## ಅಸಮಸ್ಥಿತಿಯ ಸಂಯುಕ್ತತೆ

ಅಸಮಸ್ಥಿತಿಯ ಸಂಯುಕ್ತತೆ ಹೆಚ್ಚಿನ ಸಂವೇದನಾ ಮತ್ತು ಪಾಲ್ಗೊಳ್ಳುವಿಕೆಯ ಸಂಯುಕ್ತ ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದೆ. ರಾಜಕೀಯ ಮತ್ತು ಆರ್ಥಿಕ ಅಸಮಸ್ಥಿತಿಯು ಹೆಚ್ಚಿದಂತೆ ಅಸಮಸ್ಥಿತಿಯ ವ್ಯವಸ್ಥೆಗೆ ಶಾಸನಾತ್ಮಕ ಮನ್ನಣೆಯ ಬೇಡಿಕೆಯು ಜಾಸ್ತಿಯಾಗುತ್ತದೆ.

ಭಾರತದಲ್ಲಿ ರಾಜ್ಯಗಳ ನಡುವಿನ ಗಾತ್ರ ಅಸಮಾನತೆ ಮತ್ತು ರಾಜ್ಯಗಳ ಒಳಗಿನ ಅಸಮಾನತೆಗಳು ಸಾಮಾನ್ಯವಾಗಿ ಉದ್ವಿಗ್ನತೆ ಮತ್ತು ಅತೃಪ್ತಿಯನ್ನುಂಟುಮಾಡುತ್ತವೆ. ಅಸಮಸ್ಥಿತಿಯ ಸಂಯುಕ್ತತೆ ಮತ್ತು ವಿಶೇಷ ಸ್ಥಾನಮಾನದ ಕಾನೂನುಗಳು ಹಾಗೂ ವಿಶೇಷ ತೆರಿಗೆ ನಿಯಮಗಳು ಮತ್ತು ರಿಯಾಯಿತಿಗಳು ಈ ಸಮಸ್ಯೆಗಳಿಗೆ ಸ್ವಲ್ಪಮಟ್ಟಿಗಿನ ಪರಿಹಾರಗಳನ್ನು ನೀಡುತ್ತವೆ.

ವಿಶೇಷ ಸ್ಥಾನಮಾನದ ನಿಯಮಗಳನ್ನು ಐತಿಹಾಸಿಕ, ಭೌಗೋಳಿಕ ಮತ್ತು ಸಾಂಸ್ಕೃತಿಕ ವಿಷಯಗಳಿಂದ ಉಂಟಾದ ಪರಿಸ್ಥಿತಿಯನ್ನು ನಿವಾರಿಸಲು ಉಪಯೋಗಿಸಲಾಗುತ್ತದೆ. 370 ಮತ್ತು 371ನೇ ಪರಿಚ್ಛೇದಗಳು ಇದಕ್ಕೆ ಉತ್ತಮ ಉದಾಹರಣೆಗಳು. ವಿಶೇಷ ಸ್ಥಾನಮಾನದ ನಿಯಮಗಳ ಮೂಲಕ ಸಂವಿಧಾನ ರಚನೆಯಲ್ಲಿಯೇ ಅಳವಡಿಕೆಯಾಗಿದ್ದವು.

ಉಪ-ರಾಜ್ಯ ಸ್ವಾಯತ್ತ ರಚನೆಗಳು ಮತ್ತು ಸ್ವಾಯತ್ತ ಜಿಲ್ಲಾ ಮಂಡಳಿಗಳು ಮಿಶ್ರ ಹಿನ್ನೆಲೆಗಳನ್ನು ಹೊಂದಿವೆ. ಸ್ವನಿಯಮ ಮತ್ತು ಹಂಚಿಕೊಂಡ ನಿಯಮಗಳು ಹಲವು ವಿಧಗಳಲ್ಲಿರಬಹುದು. ವಿಚ್ಛಿನ್ನಗೊಂಡ ಮತ್ತು ನಿರ್ವಹಿಸಲು ಅಸಾಧ್ಯವಾದ ಘಟ್ಟಗಳನ್ನು ಸಂಯೋಜಿತ ಮತ್ತು ದೊಡ್ಡ ಪ್ರಮಾಣದ ಅನುಕೂಲಗಳೊಂದಿಗೆ ತುಲನೆ ಮಾಡಬೇಕು. ಈಶಾನ್ಯ ಪ್ರಾಂತ್ಯದ ರಾಜ್ಯಗಳ ರಚನೆಯು ಈ ಸಮಸ್ಯೆಯನ್ನು ಪ್ರತಿಬಿಂಬಿಸುತ್ತದೆ.

## ಹಣಕಾಸಿನ ಒಕ್ಕೂಟ: ಹೊಸ ಮಂತ್ರ

ಉದಾರೀಕರಣ ಮತ್ತು ಅನಿಯಂತ್ರತೆಯು ಕೇಂದ್ರವನ್ನು ಬಲಿಷ್ಠಗೊಳಿಸಿತೆ ಅಥವಾ ನಿಶಕ್ತಗೊಳಿಸಿತೆ? ಬದಲಾದ ಈ ಪರಿಸ್ಥಿತಿಯು ರಾಜಕೀಯ ಆಲೋಚನೆ ಮತ್ತು ಸಿದ್ಧಾಂತದ ಬೆಳವಣಿಗೆಯನ್ನು ಬಹಿರಂಗಗೊಳಿಸಿತೆ?



ಹೊಸ ಜಿಜ್ಞಾಸೆಯು 'ರಾಜ್ಯ' 'ಹಕ್ಕುಗಳು' ರಾಜಕೀಯ ಸ್ವಾಯುತ್ತತೆಯಿಂದ ಆರ್ಥಿಕ ಪರಿಕಲ್ಪನೆಗೆ ತಿರುಗಿದವೆ? ಇವುಗಳಿಗೆ ಉತ್ತರಗಳು ಸ್ಪಷ್ಟವಾಗಿಲ್ಲ.

ಭಾರತೀಯ ಸಂಯುಕ್ತ / ಒಕ್ಕೂಟ ವ್ಯವಸ್ಥೆಯ ರಚನೆಯಲ್ಲಿ ಅಭಿವೃದ್ಧಿ ಪ್ರಕ್ರಿಯೆಯ ಪ್ರಥಮ ಉದ್ದೇಶ ರಾಜಕೀಯ ಏಕತೆಯನ್ನು ಸಾಧಿಸುವುದು ಮತ್ತು ಸಾಮಾನ್ಯ ಹಣದ ಚಲಾವಣೆ, ಕೇಂದ್ರ ಬ್ಯಾಂಕು ಮತ್ತು ಆರ್ಥಿಕ ವ್ಯವಸ್ಥೆಯ ಮೇಲೆ ಕೇಂದ್ರ ಸರ್ಕಾರದ ನಿಯಂತ್ರಣವಿದ್ದುದರಿಂದ ಒಂದು ಸಾಮಾನ್ಯ ಮಾರುಕಟ್ಟೆಯನ್ನು ನಿರ್ಮಾಣ ಮಾಡುವುದು ಸುಲಭವೆಂದು ಪರಿಗಣಿಸಲಾಗಿತ್ತು.

ಆದರೆ ಹಣಕಾಸು ಒಕ್ಕೂಟ ವ್ಯವಸ್ಥೆಯಲ್ಲಿ ಏಕತೆಯ ಹಾದಿಯಲ್ಲಿ ಹೊಸ ಅಡಚಣೆಗಳನ್ನು ಸೃಷ್ಟಿಸಿದವು. ರಾಜ್ಯಗಳು ಅಧಿಕಾರದ ಕೇಂದ್ರಗಳಾಗಿ ಬೆಳೆದುದರಿಂದ, ಆದಾಯದ ಮೂಲವನ್ನು ಬಿಟ್ಟುಕೊಡುವಂತೆ ಸಂಕೀರ್ಣವಾದ ಮಾತುಕತೆ ಮೂಲಕ ಮನವೊಲಿಸಬೇಕಾಯಿತು. ಇದರಿಂದ ಅಂತಾರಾಜ್ಯ ತೆರಿಗೆ ನಿರ್ಬಂಧಗಳು ತಲೆದೋರಿದವು.

ಉದಾರೀಕರಣ ಮತ್ತು ಮಾರುಕಟ್ಟೆ ಶಕ್ತಿಗಳ ಪಾತ್ರಗಳು ಹೆಚ್ಚಾಗಿದ್ದರಿಂದಾಗಿ 1990ರ ದಶಕದ ಪ್ರಾರಂಭದಲ್ಲಿ ಹೊಸ ರಾಜಕೀಯ ಮತ್ತು ಆರ್ಥಿಕ ಅಭಿವೃದ್ಧಿಯ ಹಂತವು ಪ್ರಾರಂಭವಾಯಿತು. ಈ ಬದಲಾವಣೆಯಿಂದ ಮಾರುಕಟ್ಟೆ ನಿರ್ದೇಶಿತ ಆರ್ಥಿಕತೆ ಮತ್ತು ಜನಸಮೂಹದ ಸಮ್ಮತಿಯನ್ನಾಧರಿಸಿದ ರಾಜಕೀಯದ ನಡುವೆ ಹಲವು ವೈರುಧ್ಯಗಳು ಉದ್ಭವಿಸಿದವು.

ಪ್ರಾರಂಭದ ದಿನಗಳಲ್ಲಿ, ಇಂತಹ ಉದ್ವಿಗ್ನತೆಯನ್ನು ಶಮನಗೊಳಿಸುವಲ್ಲಿ ರಾಜ್ಯಗಳು ಪ್ರಾಥಮಿಕ ಪಾತ್ರವನ್ನು ಹೊಂದಿದ್ದವು. ಮಾರುಕಟ್ಟೆಯಿಂದ ಹೊರಹಾಕಲ್ಪಟ್ಟವರನ್ನು ರಾಜಕೀಯ ಪ್ರಜಾಪ್ರಭುತ್ವದ ಪ್ರಕ್ರಿಯೆ ಮತ್ತು ತತ್ವಗಳ

ಮೂಲಕ ಒಳಸೇರಿಸುವ ಪ್ರಯತ್ನಗಳು ನಡೆದವು.

ಭಾರತೀಯ ಒಕ್ಕೂಟವು ಆದಾಯದ ಅಸಮಾನತೆಯೊಂದಿಗೆ, ಅಗಾಧ ಪ್ರಾದೇಶಿಕ ಅಸಮಾನತೆಯನ್ನು ಸಹ ಹೊಂದಿದೆ. ಇಲ್ಲಿ, ಪುನಃ ಪ್ರಾದೇಶಿಕ ಅಸಮತೋಲನೆಯ ಅಭಿವೃದ್ಧಿಯ ದುಷ್ಪರಿಣಾಮಗಳನ್ನು ಕಡಿಮೆ ಮಾಡಲು ರಾಜ್ಯಗಳಿಗೆ ಪ್ರಧಾನ ಪಾತ್ರವನ್ನು ವಹಿಸಲಾಯಿತು.

ಆದುದರಿಂದ ಇಂದಿನ ಪರಿಸ್ಥಿತಿಗೆ ಎರಡು ಕಾರಣಗಳನ್ನು ಗುರುತಿಸಬಹುದು. ಆರ್ಥಿಕ ಉದಾರತೆಯ ಪರಿಹಾರ ಕಾರ್ಯತಂತ್ರಗಳು ಮತ್ತು ಪಕ್ಷ ರಾಜಕಾರಣದ ಸಂಯುಕ್ತ ರಚನೆ. ಅಸಮಾನತೆಯ ವೃದ್ಧಿ ಸಂಕೀರ್ಣವಾಗಿದೆ. ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳನ್ನು ಹೇಗೆ ಗ್ರಹಿಸಲಾಗುವುದೆಂಬುದೇ ರಾಜ್ಯದ ಹೊಸ ಪಾತ್ರದ ಬಗೆಗಿನ ಚರ್ಚೆಯ ಮುಖ್ಯ ವಿಷಯವಾಗಿದೆ.

ರಾಜ್ಯಗಳಿಗೆ ಬಂಡವಾಳವನ್ನು ಆಕರ್ಷಿಸುವ ಪೈಪೋಟಿಯ ಪರಿಣಾಮವನ್ನು ಎರಡು ಹಂತಗಳಲ್ಲಿ ಅವಲೋಕಿಸಬೇಕು. ಒಂದುಕಡೆ ರಾಜ್ಯಗಳು ಒಳ್ಳೆಯ ಆಡಳಿತವನ್ನು ನಡೆಸುವ ಮತ್ತು ಹಣಕಾಸಿನ ಸಮರ್ಥ ನಿರ್ವಹಣೆಯ ಒತ್ತಡದಲ್ಲಿರುತ್ತವೆ. ಇನ್ನೊಂದು ಕಡೆ, ಅವು ಈ ಸುಧಾರಣಾ ಕ್ರಮದಿಂದ ಚುನಾವಣಾ ಜನಪ್ರಿಯತೆಯ ಮೇಲೆ ಉಂಟಾಗುವ ದುಷ್ಪರಿಣಾಮಗಳ ಅರಿವನ್ನು ಹೊಂದಿರುತ್ತವೆ.

ಭಾರತೀಯ ಸಂಯುಕ್ತ ಅಭಿವೃದ್ಧಿಯಲ್ಲಿ ನಿರ್ವಾಹಕ ಸಂಯುಕ್ತತೆಯ ಬೆಳವಣಿಗೆಯು ಗಮನಿಸಬೇಕಾದ ಅಂಶವಾಗಿದೆ. ಅಧಿಕಾರಶಾಹಿಯು ಅಭಿವೃದ್ಧಿ ಯೋಜನೆಗಳ ವಿನ್ಯಾಸ, ಅಳವಡಿಕೆಯೊಂದಿಗೆ ಬೆಳೆದಿದೆ. ಆಡಳಿತದಲ್ಲಿ ಒಳಗೊಳ್ಳುವಿಕೆ ಮತ್ತು ಅಧಿಕಾರ ನೀಡಿಕೆಗಿಂತ ಯೋಜನೆಗಳ ಅಳವಡಿಕೆಯೇ



ಪ್ರಾಮುಖ್ಯವಾಗಿದೆ. ಸಂಸ್ಥೆಗಳನ್ನು ಅದಕ್ಕಾಗಿ ಅಭಿವೃದ್ಧಿಗೊಳಿಸಲಾಗಿದೆ.

**ಸ್ಥಳೀಯ ಆಕಾಂಕ್ಷೆಗಳ ಪರಿಗಣನೆ**

1990ರ ದಶಕವನ್ನು ಭಾರತೀಯ ರಾಜಕೀಯದ ಸಂಕ್ರಮಣ ಅವಸ್ಥೆ ಎನ್ನಬಹುದು. ಅದು ಸಂಯುಕ್ತ ವ್ಯವಸ್ಥೆಯನ್ನು ಹೊಂದಿದ ರಾಜಕೀಯ ವ್ಯವಸ್ಥೆಗೆ ದಾರಿ ಮಾಡಿಕೊಟ್ಟಿತು. ಸಂಯುಕ್ತ ಒಕ್ಕೂಟಗಳ ಮೂಲಕ ಹೊಸ ವಿಧಾನದ ಪಾಲ್ಗೊಳ್ಳುವಿಕೆ ಮತ್ತು ನಿರ್ಣಯಿಸುವಿಕೆಯು ಪ್ರಾರಂಭವಾಯಿತು. ಅದಕ್ಕೆ ಸಂಸದೀಯ ವ್ಯವಸ್ಥೆ ಮತ್ತು ಸಂವಿಧಾನವನ್ನು ವಿದ್ಯುಕ್ತವಾಗಿ ಮಾರ್ಪಡಿಸಬೇಕಿದೆ.

ಈ ಸಂಯುಕ್ತ ಒಕ್ಕೂಟದಿಂದ ರಾಜ್ಯಾದ್ಯಂತ ಪಕ್ಷಗಳು ರಾಷ್ಟ್ರೀಯ ನೀತಿ ನಿರೂಪಣೆ ಮತ್ತು ಕೇಂದ್ರ-ರಾಜ್ಯ ಸಂಬಂಧಗಳ ವಿಷಯಗಳಲ್ಲಿ ಹೆಚ್ಚಿನ ಅಧಿಕಾರ ಮತ್ತು ಪ್ರಭಾವವನ್ನು ಹೊಂದಿದವು. ಮುಖ್ಯವಾಗಿ ಒಂದೇ ರಾಜ್ಯ ಮತ್ತು ಹಲವು ರಾಜ್ಯ ಪಕ್ಷಗಳು ರಾಜಕೀಯ ಪ್ರಕ್ರಿಯೆಯಲ್ಲಿ ಅಸ್ತಿತ್ವಕ್ಕೆ ಬಂದವು. ಮತ್ತು ರಾಷ್ಟ್ರೀಯ ನೀತಿ ರೂಪಿಸುವಲ್ಲಿ ಹೆಚ್ಚಾಗಿ ಭಾಗವಹಿಸಲು ಪ್ರಾರಂಭಿಸಿದವು. ಅವುಗಳಿಗೆ ಹಿಂದೆ ಇರದ ಅವಕಾಶ ಈಗ ದೊರಕಿತು.

ಈ ಸಂಕ್ರಮಣಕ್ಕೆ ಮುಖ್ಯವಾಗಿ ಎರಡು ಕಾರಣಗಳನ್ನು ಕಾಣಬಹುದು ಮೊದಲನೆಯದು, ಜಾಗತೀಕರಣವು ರಾಜಕೀಯಕ್ಕೆ ಹೊಸ ರೂಪವನ್ನು ನೀಡಿತು. ಆರ್ಥಿಕ ಸುಧಾರಣೆಗಳು ರಾಜ್ಯಗಳಿಗೆ ಹೊಸ ಪಾತ್ರಗಳನ್ನು ಮತ್ತು ಜವಾಬ್ದಾರಿಗಳನ್ನು ಹೊರಿಸಿತು. ಎರಡನೆಯದು ಪಕ್ಷಾಧಾರಿತ ಸಂಯುಕ್ತ ವ್ಯವಸ್ಥೆಯು ಚಲನಶೀಲತೆಯನ್ನು ತಂದಿತು. ಇದರಲ್ಲುಂಟಾದ 'ಪೈಪೋಟಿ ನೀತಿ'ಯು ಅತಿಮುಖ್ಯ ಬೆಳವಣಿಗೆ.

ರಾಜ್ಯಾಧಾರಿತ ಪಕ್ಷಗಳ ಸ್ಥಳೀಯ ಆಕಾಂಕ್ಷೆ ಮತ್ತು ರಾಷ್ಟ್ರೀಯ ಸಹಕಾರದ ಪ್ರಾಮುಖ್ಯತೆಯ ನಡುವಿನ ತುಮುಲವೇ ಈ ಚರ್ಚೆಯ ಪ್ರಮುಖ ವಿಷಯ. ಬಹುಹಂತದ ಸಂಬಂಧವನ್ನೊಳಗೊಂಡ ಈ ವ್ಯವಸ್ಥೆ ಅಧಿಕಾರ ಹಂಚಿಕೆಯೇ ಈ ವ್ಯವಸ್ಥೆಯನ್ನು ಹಿಡಿದಿಟ್ಟಿರುವ ಮುಖ್ಯ ಅಂಶವಾಗಿದೆ.

ಈ ಅವಧಿಯಲ್ಲಿ ಉದ್ಭವಿಸಿದ ಇನ್ನೊಂದು ದೊಡ್ಡ ಆಲೋಚನೆಯನ್ನು



ಗಮನಿಸೋಣ. ಅದೇನೆಂದರೆ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಿಗೆ ಅಧಿಕಾರವು ವರ್ಗಾವಣೆಯಾಗುವುದು. ಇದು ಶಾಸನಾತ್ಮಕವಾಗಿದ್ದು ಸಂವಿಧಾನದ 73ನೇ ತಿದ್ದುಪಡಿಯಲ್ಲಿ. ಇದರಿಂದಾಗಿ ಸಂಯುಕ್ತ ವ್ಯವಸ್ಥೆಯ ಮೂರನೆ ಹಂತಕ್ಕೆ ಸಾಂವಿಧಾನಿಕ ಮನ್ನಣೆ ದೊರೆಯಿತು. (1992-95)

ಆದರೆ ಇದನ್ನು ಬಹುಹಂತದ ಒಕ್ಕೂಟ / ಸಂಯುಕ್ತ ವ್ಯವಸ್ಥೆಯ ವಾಸ್ತವಿಕತೆ ಎಂದು ಅಥೈಸಬಾರದು. ಬಹುಮುಖ್ಯವಾಗಿ ಗಮನಿಸಬೇಕಿರುವುದು ರಾಜ್ಯಗಳಲ್ಲಿರುವ ಶಕ್ತಿಯುತ ಆಸಕ್ತಿಗಳು, ಅವು ರಾಜಕೀಯ ವರ್ಗಗಳ ಒಳಗಡೆಯೂ ಇವೆ ಮತ್ತು ಅಧಿಕಾರಶಾಹಿಯಲ್ಲಿಯೂ ಇವೆ. ಅವು ಈ ವಿಕೇಂದ್ರೀಕರಣವನ್ನು ವಿರೋಧಿಸುತ್ತಿವೆ.

ನಾಗರಿಕ ಸಮಾಜ ಮತ್ತು ಸ್ವಯಂ-ಸೇವಾ ಕ್ಷೇತ್ರದೊಂದಿಗೆ ಕೆಲಸ ಮಾಡುತ್ತಲೇ ಕಾಲಕ್ರಮೇಣದಲ್ಲಿ ಅಭಿವೃದ್ಧಿಹೊಂದಿದ ಪಂಚಾಯಿತಿ ವ್ಯವಸ್ಥೆಯು ಸಂಯುಕ್ತ ವ್ಯವಸ್ಥೆಯ ಉಲ್ಲೇಖನೀಯ ಬೆಳವಣಿಗೆ. ಈ ಹಂತದಲ್ಲಿ ಉಂಟಾದ ಒತ್ತಡವು ಅಧಿಕಾರ ಕೇಂದ್ರಗಳಾಗಿ ಪರಿವರ್ತನೆಯಾಗಬಹುದಾದ ಅವಕಾಶಗಳನ್ನು ಹೊಂದಿದೆ. ಇದರಿಂದ ಸಾಂಸ್ಥಿಕ ವಿನ್ಯಾಸದಲ್ಲಿ ಬದಲಾವಣೆಗಳುಂಟಾಗುತ್ತವೆ.

**ಹೊಸ ಸಹಸ್ರಮಾನದ ಸವಾಲುಗಳು**

ಇಲ್ಲಿಯವರೆಗೆ ಭಾರತೀಯ ಒಕ್ಕೂಟ / ಸಂಯುಕ್ತ ವ್ಯವಸ್ಥೆಯ ಅವಲೋಕನವನ್ನು ಮಾಡಿದ ನಂತರ, ನಾವೀಗ ಹೊಸ ಸವಾಲುಗಳ ಕಡೆ ತಿರುಗುತ್ತೇವೆ. ಇತ್ತೀಚಿನ ಒಂದು ಲೇಖನದ ಪ್ರಕಾರ "ಅಧಿಕಾರ ಮತ್ತು ಪ್ರಭಾವವು ಕೇಂದ್ರದಿಂದ ರಾಜ್ಯದ ರಾಜಧಾನಿಗಳಿಗೆ ಮತ್ತು ಉಪ-ವಿಭಾಗಗಳಿಗೆ, ಜಿಲ್ಲೆ ಹಾಗೂ ಪಂಚಾಯಿತಿಗಳಿಗೆ ತಲುಪಿದೆಯೆ?" ಎಂಬ ಪ್ರಶ್ನೆಗೆ ದೊರೆತ ಉತ್ತರ ಏನೆಂದರೆ "ಪ್ರಾದೇಶಿಕ ಮತ್ತು

ಜಾತಿಯಾಧಾರಿತ ಪಕ್ಷಗಳ ಗಣನೀಯ ಏರಿಕೆ" ಮತ್ತು "ದೇಶದ ಹಲವು ಕಡೆ ಪ್ರತ್ಯೇಕ ರಾಜ್ಯಗಳ ಬೇಡಿಕೆ".

ಸಮಕಾಲಿನ ಬೆಳವಣಿಗೆಯಲ್ಲಿ ಈ ಬೇಡಿಕೆಗಳನ್ನು ಅವಲೋಕಿಸೋಣ : ಹೆಚ್ಚುತ್ತಿರುವ ಸಾಂಸ್ಕೃತಿಕ ಅಸಹನೆಯು ಬಹುಸಂಸ್ಕೃತಿಯ ಸಂಯುಕ್ತ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಪಾಯವನ್ನು ಒಡ್ಡುತ್ತಿದೆ. ರಾಜ್ಯ ಶಾಸನಗಳಿಗೆ ಸಮ್ಮತಿಯನ್ನು ತಡೆಹಿಡಿಯುವ ಗೌರ್ನರ್ ಅವರ ಅಧಿಕಾರವು ಪರಿಹಾರವಾದ ವಿಷಯವಾಗಿ ಮುಂದುವರೆಯುತ್ತಲೇ ಇದೆ. ಎರಡು ಮುಖ್ಯ ವಿಷಯಗಳಿಗೆ ಇನ್ನೂ ಪರಿಹಾರ ದೊರೆತಿಲ್ಲ.

ಮೊದಲು ಗುರುತು ಮಾನ್ಯತೆಗೆ ಸಂಬಂಧಿಸಿದ ವಿಷಯ : ಅವು ಎರಡನೆ ಎಸ್ಆರ್‌ಸಿಯ ಬೇಡಿಕೆಗಳಲ್ಲಿ ವ್ಯಕ್ತವಾಗಿವೆ. ಮತ್ತು ಸಂಯುಕ್ತ ವ್ಯವಸ್ಥೆಯ ಆಂತರಿಕ ಗಡಿಗಳನ್ನು ಪುನರ್ ನಿರ್ಧರಿಸುವುದಕ್ಕೆ ಸಂಬಂಧಿಸಿವೆ. ತೆಲಂಗಾಣ ಈಗಾಗಲೇ ಸೃಷ್ಟಿಯಾಗಿದೆ, ಆದರೆ ವಿದರ್ಭ ಮತ್ತು ಉತ್ತರ ಪ್ರದೇಶದ ಪುನಾರಚನೆ ಹಲವು ವಿಷಯಗಳೊಂದಿಗೆ ಇನ್ನೂ ಜೀವಂತವಾಗಿದೆ.

ಎರಡು ಸಂಪನ್ಮೂಲ ಸಂಬಂಧಿತ ಒತ್ತಡಗಳು : ಜಲಮೂಲ, ಬಹಳ ವರ್ಷಗಳಿಂದಲೂ ನಡೆದಿರುವ ಅಂತಾರಾಜ್ಯ ನದಿ ನೀರಿನ ವಿವಾದ (ಕಾವೇರಿ, ನರ್ಮದಾ) ಇದರ ಜೊತೆಗೆ ಹೆಚ್ಚಿನ ಸ್ವಾಯತ್ತತೆ ಮತ್ತು ಸಂಪನ್ಮೂಲದ ಮೇಲೆ ಸ್ವಯಂ ನಿಯಂತ್ರಣದ ಬೇಡಿಕೆಗಳು ಇದೆ.

ಇವು ಜೀವಂತ ಸಮಸ್ಯೆಗಳಾಗಿರುವಾಗಲೇ ಹೊರಹೊಮ್ಮುತ್ತಿರುವ ಇತರ ವಿಚಾರಗಳೆಂದರೆ ಹಣಕಾಸಿನ ಮೂಲಗಳ ಮರುಹಂಚಿಕೆ ಮತ್ತು ಆರ್ಥಿಕ ವ್ಯವಸ್ಥೆಯ ಸಮಗ್ರ ದುರಸ್ತೀಕರಣ. ರಾಜ್ಯ ಸರಕಾರಗಳಿಗಿಂತ ಕೇಂದ್ರ ಸರಕಾರದ ತೆರಿಗೆ ಆದಾಯದಲ್ಲಿ ಉಂಟಾದ ಮಹತ್ತರ ಬೆಳವಣಿಗೆಯು ಅದರ ಹಂಚಿಕೆಯ ವ್ಯವಸ್ಥೆಯ ಬಗ್ಗೆ ಗಮನವನ್ನು ಸೆಳೆಯುತ್ತದೆ. ಪ್ರಾದೇಶಿಕ ಪಕ್ಷಗಳು ರಾಜ್ಯಮಟ್ಟದಲ್ಲಿ ಅಧಿಕಾರಕ್ಕೆ ಬರುವ ಜೊತೆಗೆ ರಾಷ್ಟ್ರ ರಾಜಕೀಯದಲ್ಲೂ ನಿರ್ಣಾಯಕ ಪಾತ್ರ ವಹಿಸುತ್ತಿವೆ. ಇದರ ಪರಿಣಾಮವಾಗಿ ಸಂಯುಕ್ತ ಒಕ್ಕೂಟದಲ್ಲಿ ರಾಜ್ಯ ಪಕ್ಷಗಳಿಗೆ ಪಾಲ್ಗೊಳ್ಳುವ ಅವಕಾಶವು ಹೆಚ್ಚಾಗಿದೆ. ಹಿಂದೆ ರಾಜ್ಯ ಪಕ್ಷಗಳಿಗೆ ಯೋಜನಾ ಆಯೋಗ ಮತ್ತು ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಅಥವಾ ಅಂತರರಾಜ್ಯ ಮಂಡಳಿಗಳಲ್ಲಿ ಸಹ ಅವಕಾಶಗಳಿರುತ್ತಿರಲಿಲ್ಲ. ಈ ಪಾಲ್ಗೊಳ್ಳುವಿಕೆಯಿಂದ ಕೇವಲ ಸಮಾಲೋಚನೆಯಲ್ಲದೆ, ನ್ಯಾಯಬದ್ಧ ಆಸಕ್ತಿಯ ವಿಷಯಗಳಲ್ಲಿ ಸಹಮತಕ್ಕೆ ರಾಜ್ಯಗಳಿಗೆ ಅವಕಾಶ ದೊರೆಯುತ್ತಿದೆ.

ಈಗಿನ ಸವಾಲುಗಳೆಂದರೆ, ರಾಷ್ಟ್ರೀಯ ನೀತಿ ರಚನೆಯಲ್ಲಿ ರಾಜ್ಯಗಳನ್ನು ಪಾಲ್ಗೊಳ್ಳುವಂತೆ ಹೊಸ ಮಾರ್ಗಗಳನ್ನು ಕಂಡು ಹಿಡಿದು, ರಾಜ್ಯಗಳು ಮೂಲ ಸೌಕರ್ಯದ ಕ್ಷೇತ್ರಗಳಾದ ವಿದ್ಯುಚಕ್ತಿ, ರಸ್ತೆ ಮತ್ತು ನಾಗರಿಕ ಮೂಲ ಅವಶ್ಯಕತೆಗಳ ಯೋಜನೆಗಳನ್ನು ಅಳವಡಿಸುವಂತೆ ಪ್ರೇರೇಪಿಸುವುದು. ಬಹು ಪಕ್ಷ ಪದ್ಧತಿಯ ಈ ಸಂದರ್ಭದಲ್ಲಿ ರಾಷ್ಟ್ರೀಯ ಆಡಳಿತ ಸಂಯುಕ್ತ ಒಕ್ಕೂಟ ವ್ಯವಸ್ಥೆಗೆ ಇದು ಅವಶ್ಯಕವಾಗಿದೆ. ಸಂಯುಕ್ತ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ಪ್ರಜಾಪ್ರಭುತ್ವದ ಅಭಿವೃದ್ಧಿ ನೀತಿಯು ಹಲವು ರೀತಿಯ ಆಡಳಿತ ಪ್ರಯೋಗಕ್ಕೆ ಒಳಪಡುತ್ತದೆ. ಆದರೆ ಅವುಗಳು ಸಂವಿಧಾನದ ಮೂಲ ಅಂಶಗಳನ್ನು ಮತ್ತು ಮೌಲ್ಯಗಳನ್ನು ಗೌರವಿಸಬೇಕು. ಈ ಪ್ರಯೋಗವು ಆಡಳಿತ ವಿಧಾನ ಮತ್ತು ತಂತ್ರಗಳ ವಿಷಯಗಳಲ್ಲಿ ಭಾಗಶಃ ಯಶಸ್ಸನ್ನು ಗಳಿಸಿವೆ. ಹಲವು ರಾಜ್ಯಗಳಲ್ಲಿ ಉತ್ತಮ



ವಿಧಾನಗಳೂ ರೂಪುಗೊಂಡಿವೆ. ಉದಾ. ಶಾಲೆಗಳಲ್ಲಿ ಮಧ್ಯಾಹ್ನದ ಊಟದ ವ್ಯವಸ್ಥೆ ಮತ್ತು ನಗರದ ಭೂಮೌಲ್ಯ ಪದ್ಧತಿ. ಆದರೆ ಪ್ರಯೋಗಾತ್ಮಕವಾಗಿ ರಾಜ್ಯ ಸರಕಾರಗಳು ಅಭಿವೃದ್ಧಿಪಡಿಸಬಹುದಾದ ಪರ್ಯಾಯ ಮಾರ್ಗಗಳ ಯೋಜನೆಗಳ ಪ್ರತಿಫಲವನ್ನು ಕೇಂದ್ರಿಯ ಸಂಯುಕ್ತ ವ್ಯವಸ್ಥೆಯ ಚೌಕಟ್ಟಿನಲ್ಲಿ ಸೀಮಿತಗೊಳಿಸಲಾಗಿದೆ. ಬಹಳ ಬೇಸರದ ವಿಷಯವೆಂದರೆ 'ರಾಷ್ಟ್ರೀಯ ಪಕ್ಷಗಳ' ರಾಜಕೀಯ ಸಂಸ್ಕೃತಿ ಮತ್ತು ಆಚರಣೆಗಳನ್ನು ಪ್ರಾದೇಶಿಕ ಪಕ್ಷಗಳೂ ಸಹ ಪಾಲಿಸುತ್ತಿರುವುದು. ಅವು ಕೇಂದ್ರೀಯ ಸಂಯುಕ್ತ ವ್ಯವಸ್ಥೆಯಲ್ಲಿ ತಮ್ಮ ಪ್ರತಿಫಲವನ್ನು ಕೇಳುತ್ತಿರುವುದರಿಂದ, ತಾವೇ ಯಶಸ್ವಿಯಾಗಿ ಉರುಳಿಸಿದ ಪಕ್ಷಗಳ ಸಂಕ್ಷಿಪ್ತ ರೂಪಗಳಾಗುತ್ತಿವೆ. ನಿಜವಾಗಿ ನೀಡಲು ಅವುಗಳಲ್ಲಿ ಪರ್ಯಾಯಗಳೇ ಇಲ್ಲ. ಈ ದಿನಗಳಲ್ಲಿ ಸಹಕಾರಿ ಮತ್ತು ಪೈಪೋಟಿ ಸಂಯುಕ್ತ ವ್ಯವಸ್ಥೆಯು ರಾಜಕೀಯ ಚಿಂತನೆಯ ಹೊಸ ಪದಗಳಾಗುತ್ತಿರುವ ಸಂದರ್ಭದಲ್ಲಿ ಭಾರತೀಯ ಸಂಯುಕ್ತ – ಒಕ್ಕೂಟ ವ್ಯವಸ್ಥೆಯು ರಾಜ್ಯಗಳ ಮತ್ತು ಜಿಲ್ಲೆಗಳಲ್ಲಿ ಜೀವಿಸುತ್ತಿವೆ ಎಂದು ನೆನಪಿಸಿಕೊಳ್ಳುವುದು ಮುಖ್ಯ. ನಿಜವಾದ ಬದಲಾವಣೆಗಳಾಗದ ಹೊರತೂ ಭಾರತೀಯ ಒಕ್ಕೂಟ ಸಂಯುಕ್ತ ಪ್ರಜಾಪ್ರಭುತ್ವ ವ್ಯವಸ್ಥೆಯ ಬಲವರ್ಧನೆ ಅಪೂರ್ಣ ಕೆಲಸವಾಗಿಯೇ ಉಳಿಯುತ್ತದೆ. ❑

# ಯೋಜನಾ

## ಮಾರ್ಚ್ 2015 ವಿಶೇಷ ಸಂಚಿಕೆ ವಿಷಯ

# ಮುಂಗಡ ಪತ್ರ 2015–16

# ವೈವಿಧ್ಯತೆ : ಯಶಸ್ಸಿನ ಗುಟ್ಟು

ಆಶ್ ನರೇನ್ ರಾಯ್
ಕನ್ನಡಕ್ಕೆ : ಶಿವಕುಮಾರ



**ವಿವಿಧತೆಯಲ್ಲಿ ಏಕತೆಯೊಂದಿಗೆ ಒಟ್ಟಿಗೆ ದೀರ್ಘ ಕಾಲ ಬಾಳುವ ಜೀವನದ ಅನುಭವ ಸಾರವನ್ನು ಇಡೀ ಜಗತ್ತಿಗೆ ತಿಳಿಸಿಕೊಡುವ ಸಾಮರ್ಥ್ಯವನ್ನು ಭಾರತ ಹೊಂದಿದೆ. ಯಾವುದೇ ಬಿಕ್ಕಟ್ಟುಗಳು ಎದುರಾದರೂ ದೇಶದ ವೈವಿಧ್ಯಮಯ ಸಂಸ್ಕೃತಿ, ಸಾಮಾಜಿಕ ಜೀವನ ವ್ಯವಸ್ಥೆ ಬದಲಾಗಿಲ್ಲ.**

ಒಕ್ಕೂಟ ವ್ಯವಸ್ಥೆ ಈಗ ಹೊಸತನ ಪಡೆಯುತ್ತಿದೆ. ಕಳೆದ ಎರಡು ದಶಕಗಳಿಂದೀಚೆಗೆ ಈ ಒಕ್ಕೂಟ ವ್ಯವಸ್ಥೆ ಜಾಗತಿಕ ಮಟ್ಟದಲ್ಲಿ ವಿವಿಧೆಡೆ ಪುನರುಜ್ಜೀವನ ಕಂಡುಕೊಳ್ಳುತ್ತಿದೆ. ಸಮ್ಮಿಶ್ರ ಸರ್ಕಾರಗಳ ಆಡಳಿತದಿಂದಾಗಿ ಭಾರತದಲ್ಲಿ ಒಕ್ಕೂಟ ವ್ಯವಸ್ಥೆ ಪರಿವರ್ತನೆಯ ರೂಪ ಪಡೆದರೆ, ಬೆಲ್ಜಿಯಂನಲ್ಲಿ ಸಂವಿಧಾನಾತ್ಮಕ ಬದಲಾವಣೆ ತರುವ ನಿಟ್ಟಿನಲ್ಲಿ ಅಂತಿಮ ಹಂತ ತಲುಪಿದೆ. ವರ್ಣಭೇದ ನೀತಿ ದಕ್ಷಿಣ ಆಫ್ರಿಕಾದ ಒಕ್ಕೂಟ ಆಡಳಿತ ವ್ಯವಸ್ಥೆಯನ್ನು ದುರ್ಬಲಗೊಳಿಸಿದರೂ ಸಹ ದಕ್ಷಿಣ ಆಫ್ರಿಕಾದ ಪ್ರಜಾಪ್ರಭುತ್ವ ಆಡಳಿತದಲ್ಲಿ ಒಕ್ಕೂಟ ವ್ಯವಸ್ಥೆಯು ಭವಿಷ್ಯದಲ್ಲಿ ಉತ್ತಮ ವಾತಾವರಣ ಸೃಷ್ಟಿಸುವ ಭರವಸೆ ಮೂಡಿಸಿದೆ.

ಸ್ಪೇನ್, ಇಂಗ್ಲೆಂಡ್‌ನಂತಹ ಏಕೀಕೃತ ಒಕ್ಕೂಟ ರಾಷ್ಟ್ರಗಳು ಮತ್ತು ಒಕ್ಕೂಟವಲ್ಲದ ರಾಷ್ಟ್ರಗಳಲ್ಲಿ ಅಧಿಕಾರ ವಿಕೇಂದ್ರೀಕರಣ ನೀತಿಯು ಹೆಚ್ಚು ಮನ್ನಣೆ ಪಡೆಯುತ್ತಿರುವುದು ಅತಿ ಮುಖ್ಯವಾದುದು. ಯೆಮನ್‌ನಲ್ಲಿ ರಾಷ್ಟ್ರೀಯ ಮಟ್ಟದ ಹಲವು ಚರ್ಚೆ, ಸಂವಾದಗಳ ನಂತರ ಒಕ್ಕೂಟ ವ್ಯವಸ್ಥೆಗೆ ಆದ್ಯತೆ ನೀಡಿದರೆ ಒಳಿತು ಎಂಬ ಅನಿಸಿಕೆ ವ್ಯಕ್ತವಾಗಿದೆ. ಹಣದಿಂದಲೇ ಎಲ್ಲವನ್ನೂ ಅಳೆಯುವ ಅರಬ್ ರಾಷ್ಟ್ರಗಳಲ್ಲಿಯೂ ಒಕ್ಕೂಟ ವ್ಯವಸ್ಥೆಯ ಅನುಷ್ಠಾನ ಪ್ರಗತಿ ಕಾಣುತ್ತಿರುವುದು ಗಮನಾರ್ಹ. ಇರಾಕ್, ನೇಪಾಳ, ದಕ್ಷಿಣ ಸೂಡಾನ್ ಸೇರಿದಂತೆ ಇತರ ರಾಷ್ಟ್ರಗಳಲ್ಲಿ ಒಕ್ಕೂಟ ವ್ಯವಸ್ಥೆಯನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಇನ್ನೂ ಕೆಲವು ರಾಜಾಡಳಿತ ರಾಷ್ಟ್ರಗಳಲ್ಲಿಯೂ ಒಕ್ಕೂಟ ವ್ಯವಸ್ಥೆ ಬಗ್ಗೆ ಇತ್ತೀಚೆಗೆ ಆಸಕ್ತಿದಾಯಕ ವಾತಾವರಣ ನಿರ್ಮಾಣವಾಗುತ್ತಿದೆ. ಈಗ ಒಕ್ಕೂಟ ವ್ಯವಸ್ಥೆಯನ್ನು ಎಲ್ಲೆಡೆ ಜಾರಿಗೊಳಿಸುವ ಕಾಲ ಸನ್ನಿಹಿತವಾಗುತ್ತಿದೆ.

ಜಾಗತಿಕ ಮಟ್ಟದಲ್ಲಿ ಒಕ್ಕೂಟ ಅಥವಾ ಸಂಯುಕ್ತ ವ್ಯವಸ್ಥೆಯ ವಾತಾವರಣ ನಿರ್ಮಾಣವಾಗುತ್ತಿರುವುದು ಏಕೆ? ನಾಗರಿಕತೆಯ ಜೀವನದ ವೈವಿಧ್ಯತೆಯಲ್ಲಿ ಏಕತೆ ಕಾಣುವ ಗುಣ ಹೊಂದಿರುವುದು, ಜನಾಂಗೀಯ, ಭಾಷೆ ಮತ್ತು ಧಾರ್ಮಿಕ ಸ್ವಂತಿಕೆಯನ್ನು ಉಳಿಸಿಕೊಂಡು ವೈಯಕ್ತಿಕ ಅಭಿವೃದ್ಧಿ ಪಡೆಯಲು ಅವಕಾಶ ಕಲ್ಪಿಸಿಕೊಡುತ್ತಿರುವುದೇ ಇದಕ್ಕೆ ಕಾರಣ ಎನ್ನಲಾಗುತ್ತಿದೆ. ರಾಜಕೀಯ ಮತ್ತು ಆಡಳಿತ ವಿಕೇಂದೀಕರಣ ವ್ಯವಸ್ಥೆಯಲ್ಲಿ ಜನಸಾಮಾನ್ಯರು ಪಾಲ್ಗೊಳ್ಳಲು ಒಕ್ಕೂಟ ನೀತಿ ಅವಕಾಶ ಕಲ್ಪಿಸಿಕೊಡುತ್ತದೆ. ಅದಕ್ಕಾಗಿ ವಿಶ್ವದ ಎಲ್ಲೆಡೆ ಬಹುತೇಕ ರಾಷ್ಟ್ರಗಳು ಒಕ್ಕೂಟ ವ್ಯವಸ್ಥೆಯ ಮೌಲ್ಯಗಳ ಮತ್ತು ಅದರ ಪ್ರಯೋಜನಗಳ ಜಪ ಮಾಡುತ್ತಿವೆ. ಇದಕ್ಕೆ ಇನ್ನೂ ಒಂದು ಕಾರಣವಿದೆ. ಒಕ್ಕೂಟವು ಆಯಾ ಮಣ್ಣಿನ ಗುಣಕ್ಕೆ ತಕ್ಕಂತೆ ವಿಭಿನ್ನ ರೂಪದಲ್ಲಿ ಅಸ್ತಿತ್ವ ಪಡೆಯುತ್ತದೆ. ಒಕ್ಕೂಟ ವ್ಯವಸ್ಥೆಯ ನಮ್ಯತೆ, ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಳ್ಳುವ ಗುಣ ಇದರಲ್ಲಿದೆ. ಹೊಸ ಅಗತ್ಯಗಳಿಗೆ, ಸಂದರ್ಭ, ಸನ್ನಿವೇಶಗಳಿಗೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳುವ ಅಂಶಗಳೂ ಇದರಲ್ಲಿವೆ. ಒಕ್ಕೂಟ ವ್ಯವಸ್ಥೆಯ 25ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ

ನಿರ್ದೇಶಕರು, ಭಾರತೀಯ ಸಮಾಜ ವಿಜ್ಞಾನ ಸಂಸ್ಥೆ, ನವದೆಹಲಿ. email : ashnarainroy@gmail.co

ಇಂಥ ಸಮಾನತೆಯ ಅಂಶಗಳನ್ನು ಕಾಣಬಹುದಾಗಿದೆ. ಆದರೆ ಅವು ಅಧಿಕಾರ, ಆರ್ಥಿಕ ನೀತಿ ಮತ್ತು ಹಂಚಿಕೆಯ ಧೋರಣೆಯಲ್ಲಿ ವಿಭಿನ್ನವಾಗಿವೆ. ರಾಜಕೀಯ ನಿಲುವು, ನಿರ್ಧಾರ, ಸಂಸ್ಕೃತಿಯನ್ನು ಆಧರಿಸಿ ಒಕ್ಕೂಟ ವ್ಯವಸ್ಥೆಯ ಸಾಫಲ್ಯ ಮತ್ತು ವೈಫಲ್ಯ ನಿರ್ಧಾರವಾಗುತ್ತದೆ.

ಒಕ್ಕೂಟ ವ್ಯವಸ್ಥೆಯು ವಿವಿಧ ರಾಷ್ಟ್ರಗಳಲ್ಲಿ ವಿಭಿನ್ನವಾಗಿ ಬೆಳೆಯುತ್ತಿದೆ. ಎಲ್ಲ ದೇಶಗಳಲ್ಲಿ ಒಂದೇ ಮಾದರಿಯಲ್ಲಿ ರೂಪುಗೊಳ್ಳಲು ಸಾಧ್ಯವೇ ಇಲ್ಲ. ಒಂದೆಡೆ ಯಶಸ್ಸು ಪಡೆದಿದ್ದು ಇನ್ನೊಂದು ಕಡೆ ವಿಫಲವಾಗಬಹುದು. ಆದರೆ ಅವುಗಳ ಪ್ರಯೋಗ, ಅನುಭವ ಹೊಸ ವಿಚಾರಗಳನ್ನು ಕಲಿಸಿಕೊಡುತ್ತದೆ. ಈ ಅನುಭವ, ವಿಚಾರಗಳು ಸದೃಢ ಒಕ್ಕೂಟ ವ್ಯವಸ್ಥೆಯ ನಿರ್ಮಾಣಕ್ಕೂ ಸಹಾಯಕವಾಗುತ್ತಿವೆ. ಆದರೆ ಯಾವುದೇ ಒಕ್ಕೂಟ ವ್ಯವಸ್ಥೆ ನಿರ್ದಿಷ್ಟ ಮಾದರಿ, ವಿನ್ಯಾಸ, ಶೈಲಿಯನ್ನು ಅಳವಡಿಸಿಕೊಳ್ಳುವುದಿಲ್ಲ. ಯಾವುದನ್ನೂ ಸಂಶೋಧಿಸಿ ನಿಗದಿಪಡಿಸಲಾಗದು. ಇದೊಂದು ಪ್ರಾಕೃತಿಕ ಸಂಬಂಧದ ರಚನೆ. ಪ್ರದೇಶ, ಪ್ರಕೃತಿ, ಸಮಾಜದ ಆಧಾರದ ಮೇಲೆ ಅದು ಸೃಷ್ಟಿಯಾಗುತ್ತದೆ. ಇದು ವಾಸ್ತವವನ್ನು ತಿಳಿಸುವ ಕನ್ನಡಿಯಲ್ಲ; ಸದಾ ಸುತ್ತಿಗೆ ಹಿಡಿದು ಹೊಸ ಆಕೃತಿಯನ್ನು ನಿರ್ಮಿಸುವ ಕಲಾವಿದ ಇದ್ದಂತೆ. ಜನರ ನಡವಳಿಕೆ, ಸುತ್ತಲಿನ ವಾತಾವರಣವನ್ನು ಸಂದರ್ಭಕ್ಕೆ ತಕ್ಕಂತೆ ಪರಿವರ್ತಿಸಿ, ಸುಧಾರಿಸಲು ಒಕ್ಕೂಟ ವ್ಯವಸ್ಥೆ ಪ್ರೇರಕ ಶಕ್ತಿಯಾಗಿ ನಿಲ್ಲುತ್ತದೆ. ಇದೊಂದು ಅತ್ಯಂತ ಸೂಕ್ಷ್ಮ ಮತ್ತು ಸೂಚ್ಯ ವಿಚಾರ. ರಾಜಕೀಯದಲ್ಲಿ ಸ್ಥಿರತೆ ಮತ್ತು ಜನಪರವಾದ ಆಡಳಿತವನ್ನು ನೀಡಲು ಒಕ್ಕೂಟ ವ್ಯವಸ್ಥೆ ಸುಭದ್ರ ಅಡಿಪಾಯ ಒದಗಿಸುವುದು.

### ವೈವಿಧ್ಯತೆಯ ಆಚರಣೆ

ನಾವು ವೈವಿಧ್ಯತೆಗಳನ್ನು ಒಳಗೊಂಡ ಭೂಮಂಡಲದಲ್ಲಿ ವಾಸಿಸುತ್ತಿದ್ದೇವೆ. ಇಲ್ಲಿರುವುದು ವೈವಿಧ್ಯಮಯ ಜೀವನ. ವೈವಿಧ್ಯತೆಯು ಮನುಷ್ಯನನ್ನು ಕಿರಿದಾಗಿಸಿ, ಮನುಷ್ಯನ ಗುರುತನ್ನು ಕಡೆಗಣಿಸಿ, ವೈಯಕ್ತಿಕವಾಗಿ ಅಸ್ತಿತ್ವವನ್ನು ರೂಪಿಸಿಕೊಳ್ಳುವ ವಿಭಿನ್ನತೆ ಇದರಲ್ಲಿದೆ ಎನ್ನುತ್ತಾರೆ ನೊಬೆಲ್ ಪ್ರಶಸ್ತಿ ಪುರಸ್ಕೃತ ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್. ಈ ಧೋರಣೆ ಇಂದು ಜಗತ್ತನ್ನು ಆತಂಕಕ್ಕೆ ತಳ್ಳಿರುವ ಅಸಮಾಧಾನ, ಹಿಂಸೆ, ಭಯೋತ್ಪಾದನೆಯಂತಹ ಸಮಾಜಘಾತಕ ಶಕ್ತಿಗಳ ಹುಟ್ಟು ಮತ್ತು ಪ್ರೇರಣೆಗೂ ಕಾರಣವಾಗುತ್ತಿದೆ ಎಂಬ ಆತಂಕವೂ ಇದೆ.

ವೈವಿಧ್ಯತೆ ಎಂಬುದು ಸ್ಥಿರಾಸ್ತಿ. ಇದು ಉತ್ತರದಾಯಿತ್ವ ಅಥವಾ ಹೊಣೆಗಾರಿಕೆ ಅಲ್ಲ. ಆಪತ್ತು ತರುವ ವೈವಿಧ್ಯಮಯ ಪಾಕ ವಿಧಾನವೂ ಅಲ್ಲ. ಇದನ್ನು ಕಾಲ್ಪನಿಕವಾಗಿ ನಿರ್ವಹಿಸಿದರೆ ಅದ್ಭುತ ಶಕ್ತಿಯಾಗಿ ಹೊರಹೊಮ್ಮುತ್ತದೆ. ವೈವಿಧ್ಯತೆಗೆ ಮನ್ನಣೆ ನೀಡಿದರೆ ದೇಶದಲ್ಲಿ ಏಕತೆ ಮೂಡುವುದು. ರಾಜ್ಯ ಒಂದು, ದೇಶ ಹಲವು; ವೈವಿಧ್ಯತೆಯು ಸ್ಪರ್ಧಾತ್ಮಕ ಸಾಮರ್ಥ್ಯ ಹೊಂದಿದ್ದು, ಹೊಸತನ್ನು ಪುರಸ್ಕರಿಸಿ, ಪ್ರೋತ್ಸಾಹಿಸುತ್ತದೆ.

ಬಹುಸಂಸ್ಕೃತಿಯ ಸಮಾಜಕ್ಕೆ 21ನೇ ಶತಮಾನದಲ್ಲಿ ಮಹತ್ವದ ಸ್ಥಾನ ಸಿಕ್ಕಿದೆ. ಹೆಚ್ಚುತ್ತಿರುವ ಜಾಗತೀಕರಣ, ವೇಗವಾಗಿರುವ ಸಂವಹನ, ಜನರ ವಲಸೆ, ಬಹುರೂಪತೆ ಪಡೆದ ನಂಬಿಕೆ, ವಿಚಾರಗಳು, ಇತ್ಯಾದಿ.. ಇವೆಲ್ಲವೂ ಭವಿಷ್ಯದಲ್ಲಿ ಭೂಖಂಡದ ಮೇಲಿರುವ ವಿಶ್ವದ ಎಲ್ಲ ವರ್ಗದ ಜನರನ್ನು ಒಗ್ಗೂಡಿಸುವ ಲಕ್ಷಣಗಳನ್ನು ವ್ಯಕ್ತಪಡಿಸುತ್ತಿವೆ. ಈ ಬದಲಾವಣೆಯ ಪರ್ವಕಾಲವನ್ನು ಸೂಚಿಸುತ್ತದೆ. ಪ್ರೊ. ಭಿಖು ಪರೇಖ್ ಅವರ ಪ್ರಕಾರ, 'ಮಾನವಶಾಸ್ತ್ರೀಯ ವಿಜ್ಞಾನದ ಪ್ರಕಾರ ಏಕರೂಪದ ಸಾಂಸ್ಕೃತಿಕ ವಿಚಾರ, ನಂಬಿಕೆಯನ್ನು ಒಳಗೊಂಡ ಸಮಾಜದ ಸದಸ್ಯರಲ್ಲಿ ನಡೆಯುವ ಎಲ್ಲ ಪ್ರಯೋಗಗಳು ಏಕತಾನತೆ ಪಡೆಯುತ್ತವೆ. ಆಗ ಅದನ್ನು ಯಾಂತ್ರಿಕವಾಗಿ ವಿನಿಮಯ ಮಾಡಿಕೊಳ್ಳುವಂತಾಗುತ್ತದೆ'.

ಜನರ ಹೋರಾಟ, ಜಾಗತೀಕರಣ ನೀತಿಯು ಒಕ್ಕೂಟ ಜೀವನಕ್ಕೆ ಹೊಸ ಆಯಾಮ ನೀಡಿವೆ. ಬಹುಸಂಸ್ಕೃತಿಯ ಸಮಾಜವು ಇದನ್ನು ಅರಿಯದೇ ಹೋದರೆ ಭಯಾನಕ ಪರಿಣಾಮ ಎದುರಿಸುವುದು ಅನಿವಾರ್ಯವಾಗುತ್ತದೆ. ನವಪೀಳಿಗೆಯ ಸಮುದಾಯ ಬಹುಸಂಸ್ಕೃತಿಯ ಸಮಾಜದ ಬಗ್ಗೆ ತಿಳಿಸಬೇಕಾಗಿದೆ. ಕೆಲವು ಸಮಾಜದ ಬಹುಸಂಸ್ಕೃತಿಯ ಗುಂಪುಗಳು ಬಹುಕಾಲ ಬದುಕಿದ್ದರೆ, ಇನ್ನೊಂದೆಡೆ ಸಮಾಜದ ಕೆಲವು ಸಾಂಸ್ಕೃತಿಕ ಗುಂಪುಗಳು ವಲಸೆಯಾಗುತ್ತಿವೆ. ಇನ್ನು ಕೆಲವಡೆ ಅವು ಅಸ್ತಿತ್ವವನ್ನೇ ಕಳೆದುಕೊಂಡಿವೆ. ಕೆಲ ದೇಶಗಳಲ್ಲಿ ಬಹುಸಂಸ್ಕೃತಿಯ ಸಮಾಜಗಳು ಶಾಂತಿಯುತವಾಗಿ ಸೌಹಾರ್ದದಿಂದ ಜೀವನ



ನಡೆಸುತ್ತಿದ್ದರೆ, ಮತ್ತೊಂದೆಡೆ ಹಿಂಸಾತ್ಮಕ ಘರ್ಷಣೆಯಲ್ಲಿ ತೊಡಗಿವೆ. ಇವೆಲ್ಲದರ ನಡುವೆ ಭಾರತದ ಮಧ್ಯಯುಗದ ಭಾರತ, ಆಧುನಿಕಪೂರ್ವ ರೋಮನ್, ಒಟ್ಟಾಮಾನ್ ಸಾಮ್ರಾಜ್ಯ ಸೇರಿದಂತೆ ಹಲವು ರಾಷ್ಟ್ರಗಳು ಸಾಂಸ್ಕೃತಿಕ ವೈವಿಧ್ಯತೆಯಲ್ಲಿ ಏಕತೆಯನ್ನು ಕಂಡುಕೊಂಡಿವೆ ಎಂಬುದನ್ನು ಇತಿಹಾಸ ಹೇಳುತ್ತದೆ.

ತಮ್ಮ ವೈವಿಧ್ಯತೆಯನ್ನು ಮರೆಮಾಚಲು ಅನೇಕ ಸಮಾಜಗಳು ಯತ್ನಿಸುತ್ತಿವೆ. ಆದರೂ ಭಿನ್ನರೂಪದ ಸಾಂಸ್ಕೃತಿಕ ಸ್ವರೂಪವನ್ನು ಸ್ವೀಕರಿಸಲು ಅವುಗಳಿಗೆ ಸಾಧ್ಯವಾಗುತ್ತಿಲ್ಲ. ಜನಸಂಖ್ಯೆಯ ವಲಸೆಯಿಂದ ಭಿನ್ನತೆ ಪರಿಹರಿಸಿಕೊಳ್ಳುವ ಪ್ರಯತ್ನ ನಡೆಯುತ್ತಿದ್ದರೆ, ಮತ್ತೆ ಕೆಲವು ಸಮಾಜಗಳು ಸಮ್ಮಿಳಿತ ಕೂಡಿಕೆಯ ನೀತಿಯ ಮೂಲಕ ಸಮಸ್ಯೆ ಪರಿಹರಿಸಿಕೊಳ್ಳಲು ಮುಂದಾಗಿವೆ. ಸ್ವಂತ ಮತ್ತು ಸಂಯೋಜಿತ ನಿಯಮಗಳ ಒಗ್ಗೂಡಿಕೆಯ ಸ್ವರೂಪವೇ ವೈವಿಧ್ಯತೆಯ ನಿರ್ವಹಣೆಯ ಮಾರ್ಗ.

ವೈವಿಧ್ಯತೆಯ ಆಚರಣೆಯು ಸಮಾಜ ಮತ್ತು ರಾಷ್ಟ್ರದ ಶಕ್ತಿಯಾಗಿದೆ. ಬಹುಸಂಸ್ಕೃತಿಯ ಸಮಾಜಗಳು ಒಕ್ಕೂಟ ವ್ಯವಸ್ಥೆಯ ಆಕರ್ಷಕ ಆಯ್ಕೆ. ವೈವಿಧ್ಯತೆ ಮತ್ತು ಏಕತೆಗಳ ಸಂಯೋಜನೆಯು ಬಹುಸಂಸ್ಕೃತಿಯ ಸಮಾಜಕ್ಕೆ ಬಲ ನೀಡುತ್ತವೆ. ವಿವಿಧ ಭಾಷೆ, ಧರ್ಮ, ಸಂಸ್ಕೃತಿಗಳನ್ನು ಒಪ್ಪಿಕೊಂಡು, ಪ್ರಯೋಜನಗಳನ್ನು ಸಕಾರಾತ್ಮಕವಾಗಿ ಸೆರೆ ಹಿಡಿದು, ಪ್ರಚಾರ ಪಡಿಸಿ, ಮೌಲ್ಯ ಮತ್ತು ಅನುಕೂಲತೆಗಳನ್ನು ಎತ್ತಿ ಹಿಡಿಯಲು ಪೂರಕವಾಗಿದೆ.

### ಭಾರತದ ಬಹುತ್ವದ ವಿಶಿಷ್ಟತೆ

ಯಾವುದೇ ರೀತಿಯ ಏಕಪಕ್ಷೀಯ ಆಯ್ಕೆಯ ಒತ್ತಡವನ್ನು ಭಾರತವು ಒಂದು ರಾಷ್ಟ್ರವಾಗಿ, ಸಮಾಜವಾಗಿ ಸಾರಾಸಗಟಾಗಿ ವಿರೋಧಿಸುತ್ತದೆ. ಹಿರಿಯ ಸಾಹಿತಿ ದಿ॥ ಯು.ಆರ್. ಅನಂತಮೂರ್ತಿ ಹೇಳಿದಂತೆ,

"ಭಾರತದ 12ನೇ ಶತಮಾನವಿರಲಿ, 21ನೇ ಶತಮಾನವಿರಲಿ ಅಥವಾ ಈ ನಡುವಿನ ಯಾವುದೇ ಶತಮಾನದ ವ್ಯಕ್ತಿಯ ಜೀವನ ಶೈಲಿಯು ವೈವಿಧ್ಯತೆಯಲ್ಲಿ ಏಕರೂಪದ್ದಾಗಿದೆ. ಭಾರತದ ಸಾಂಸ್ಕೃತಿಕ ಪರಂಪರೆ ಎಲ್ಲ ರೀತಿಯಿಂದಲೂ ವೈವಿಧ್ಯತೆಯನ್ನು ಒಳಗೊಂಡ ಸಂಕೀರ್ಣ ಸ್ವರೂಪದ್ದು. ಭಾರತದ ಬಹುಮುಖಿ ಸಂಸ್ಕೃತಿಯನ್ನು ಒಂದೇ ದೃಷ್ಟಿಯಿಂದ ಅರ್ಥೈಸಲಾಗದು' ಎಂದಿದ್ದಾರೆ. 1896ರಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ಅಮೆರಿಕದ ಬರಹಗಾರ ಮಾರ್ಕ್ ಟ್ವೈನ್, "ದೇವರು ಅಥವಾ ಮನುಷ್ಯ ಏನು ಮಾಡಬಹುದೋ ಅದನ್ನು ಈ ಭೂಮಿ (ಭಾರತ) ಮಾಡುತ್ತದೆ" ಎಂದಿದ್ದಾರೆ.

"ಭಾರತವು ವೈವಿಧ್ಯಮಯ ಸಂಸ್ಕೃತಿ ಮತ್ತು ಧರ್ಮಗಳ ವಿಚಾರದಲ್ಲಿ ದಿಗ್ಭ್ರಮೆ ಮೂಡಿಸುವ ಭೂಮಿ. ಇಲ್ಲಿಯ ಜನ, ಸಂಸ್ಕೃತಿ, ಭಾಷೆ ಮತ್ತು ಧರ್ಮಗಳಲ್ಲೂ ವಿವಿಧತೆ ಇದೆ. ಇಲ್ಲಿಯ ವಿವಿಧ ಸಮುದಾಯಗಳ ಸಾಂಸ್ಕೃತಿಕ ಲಕ್ಷಣಗಳು ಯಾವುದೋ ಒಂದು ಕಲ್ಲಿನಂತಿಲ್ಲ. ಅದು ಸಮಯ, ಸ್ಥಳ, ಸಂದರ್ಭಕ್ಕೆ ತಕ್ಕಂತೆ ಘನೀಕೃತವಾಗಿಲ್ಲ ಎಂಬುದರ ವಿಶಿಷ್ಟ ಅನುಭವವಾಯಿತು. ವಿವಿಧ ಸಮುದಾಯಗಳ ಜನ ವಿಭಿನ್ನ ತತ್ವ, ಗುರುತು ಹೊಂದಿದ್ದರೂ ಸಾಮಾಜಿಕ ಅಸ್ತಿತ್ವ ಬರಿದಾಗಿಲ್ಲ. ಭಾರತದ ವೈವಿಧ್ಯತೆಗಳು ಸಾಂಖ್ಯಿಕವಾಗಿ ಮಾತ್ರವಲ್ಲ; ಜೀವಂತಿಕೆ ಮತ್ತು ಅವುಗಳ ಅನುಷ್ಠಾನದಲ್ಲಿಯೂ ವಿವಿಧತೆಯನ್ನು ಪಡೆದಿವೆ". ಬ್ರಿಟಿಷ್ ಇತಿಹಾಸಜ್ಞ ಇ.ಪಿ. ಥಾಮಸ್ಸ್ ಒಂದೆಡೆ ಹೀಗೆ ದಾಖಲಿಸಿದ್ದಾರೆ. ಹೀಗೆ ಹಲವು ದಾರ್ಶನಿಕರ ಪ್ರಭಾವ ಇಲ್ಲಿಯ ಸಮಾಜದ ಮೇಲೆ ಭಾರತೀಯರ ಮನದಲ್ಲಿಯೂ ಪೂರ್ವ ಅಥವಾ ಪಶ್ಚಿಮದ ಚಿಂತನೆ, ಸಂಸ್ಕೃತಿಯ ಭೇದವಿಲ್ಲದೆ ಆಚರಣೆಯಲ್ಲಿದೆ. ಹೀಗಾಗಿ ಬಹುಶಃ ಭಾರತವು ಭವಿಷ್ಯದ ಜಗತ್ತಿನಲ್ಲಿ ಅತ್ಯಂತ



ಪ್ರಬಲ ರಾಷ್ಟ್ರವಾಗಿ ಗುರುತಿಸಿಕೊಳ್ಳಲಿದೆ". "ವೈವಿಧ್ಯಮಯ ಆಚರಣೆಗಳು ಭೇದವಿಲ್ಲದೆ ಆಧುನಿಕ ಭಾರತದಲ್ಲಿ ವಿಸ್ತಾರಗೊಳ್ಳುತ್ತಿವೆ. ಭಾರತವು ವೈವಿಧ್ಯತೆಯ ಸಂಕೀರ್ಣವನ್ನು ಒಳಗೊಂಡ ಏಕತೆಯ ದೃಷ್ಟಾಂತವಾಗಿದೆ. ದೇಶದ ವೈವಿಧ್ಯತೆಯು ವಿವಿಧ ದಿಕ್ಕುಗಳಿಂದ, ವಿಭಿನ್ನ ಸಮಯದಲ್ಲಿ ಜನಸಮುದಾಯವನ್ನು ಸೆಳೆಯುತ್ತಿದೆ. ಭಾರತದ ಬೃಹತ್ ಜನಸಂಖ್ಯೆಯಲ್ಲಿರುವ ಸಮ್ಮಿಶ್ರ ಜನಾಂಗೀಯ ಆಚರಣೆಗಳು ವಿವಿಧ ಸ್ತರಗಳಲ್ಲಿ ವಿಭಿನ್ನವಾಗಿ ಪ್ರತಿನಿಧಿಸುತ್ತಿವೆ. ಸ್ಥಳ, ಸಂಸ್ಕೃತಿಯ ವೈವಿಧ್ಯಮ ಪ್ರವೃತ್ತಿಗಳು, ಸಾಂಸ್ಕೃತಿಕ ಅಂಶಗಳನ್ನು ಒಪ್ಪಿ, ಹೊಸತನಕ್ಕೆ ಒಗ್ಗಿಕೊಂಡು ಎಲ್ಲ ಆಚರಣೆಗಳಿಗೆ ಭಾರತವು ಪ್ರೇರಣೆಯಾಗಿದೆ.

ಸಂಸ್ಕೃತಿ ಎಂಬುದು ಇತಿಹಾಸವಲ್ಲ. ಅದು ಸಂಪ್ರದಾಯ, ಆಚರಣೆಯನ್ನು ನೆನಪಿಸುವ ವಾಹಕವೂ ಅಲ್ಲ. ಸಮಾಜದಲ್ಲಿ ಉದಾತ್ತವಾಗಿ ಹರಡಿಕೊಂಡಿರುವ ಸಂಸ್ಕೃತಿ, ಧರ್ಮ, ಭಾಷೆ, ಸಂಪ್ರದಾಯಗಳ ವೈವಿಧ್ಯಮಯ ಆಚರಣೆಯ ಮೌಲ್ಯ. ಪಾಲ್ಗೊಳ್ಳುವಿಕೆ, ಅಸಕ್ತಿ, ಸಬಲೀಕರಣದಲ್ಲಿ ವೈವಿಧ್ಯತೆಯ ನಿಜವಾದ ಅರ್ಥ ಅಡಗಿದೆ. ಭಾರತವು ಬಹುಸಂಸ್ಕೃತಿಯ ಜಾತ್ಯತೀತ ರಾಷ್ಟ್ರ. ಟಿ.ಎನ್. ಮದನ್ ಹೇಳುವಂತೆ, "ಭಾರತದ ಬಹುತ್ವದಲ್ಲಿ ಜಾತ್ಯತೀತ ಇದೆ. ಬಹು ಸಂಸ್ಕೃತಿಯತೆ ಎಂಬುದು ಕೇವಲ ಕಲ್ಪನೆಯಾಗಿದೆ. ಅದರಲ್ಲಿ ವಿಭಿನ್ನ ಅಂಚುಗಳಿವೆ. ಜನರು ತರ್ಕಬದ್ಧವಾಗಿ ಹುಡುಕಾಟ ನಡೆಸುತ್ತಿದ್ದಾರೆ. ಪರಸ್ಪರ ಅರ್ಥೈಸಿಕೊಳ್ಳುವ, ಸಹಾನುಭೂತಿ ಹೊಂದಿದ ಮತ್ತು ಪರಸ್ಪರ ವ್ಯುತ್ಪತ್ತಿಯ ಸಾಮರ್ಥ್ಯವನ್ನು ಒಳಗೊಂಡಿದೆ. ಕಾಲ ಮತ್ತು ಸನ್ನಿವೇಶಗಳ ನಡುವಿನ ಸಂಸ್ಕೃತಿಯನ್ನು ಅಂತರ ಸಂಸ್ಕೃತಿ ಪ್ರಕ್ರಿಯೆಯಾಗಿ ಪುರುಷ ಮನುಜ ಏನೇ ಮಾಡಿದರೂ ಇಡೀ ಸಮುದಾಯವನ್ನು ಒಳಗೊಂಡು ಸಾಮಾನ್ಯವಾಗಿರುತ್ತದೆ ಮತ್ತು ಅವನು ಸಂಬಂಧಗಳ ಸೇತುವೆಯಾಗಿ ವರ್ತಿಸುತ್ತಾನೆ. (ಇಸಾಯ್ ಬರ್ಲಿನ್, ದಿ. ಪ್ರಾಪರ್ ಸ್ಟಡಿ ಆಫ್ ಮ್ಯಾನ್‌ಕೈಂಡ್, 1997).

ಹೊಂದಾಣಿಕೆ ಮತ್ತು ಮೆಲ್ಟಿಂಗ್ ಪಾಟ್ ಮಾದರಿಯ ತತ್ವಗಳು ಭಾರತಕ್ಕೆ ಒಪ್ಪುವುದಿಲ್ಲ. ಆದರೆ ಪ್ರತಿ ಜನಾಂಗೀಯ ಅಥವಾ ಸಾಂಸ್ಕೃತಿಕ ಭಿನ್ನತೆಯ ಅಂಶಗಳನ್ನು ಒಳಗೊಂಡ ಸಲಾಡ್ ಬೌಲ್ ಅಥವಾ ಗ್ಲೋರಿಯಸ್ ಮೊಸಾಯಿಕ್ ರೂಪಕ



ಸಮರ್ಪಕವಾಗಿ ಅನ್ವಯವಾಗುವುದು. ಮಹಾತ್ಮಾ ಗಾಂಧೀಜಿ ಅವರ ವೈವಿಧ್ಯತೆಯಲ್ಲಿ ಏಕತೆ ಎಂಬ ಸಾಲುಗಳ ಮೂಲ ತತ್ವ ಎಲ್ಲವನ್ನೂ ಸೆಳೆಯುತ್ತದೆ. ಮುಚ್ಚಿದ ಕಿಡಕಿ–ಬಾಗಿಲುಗಳ ಮನೆಯಲ್ಲಿ ವಾಸಿಸುವುದಕ್ಕೆ ಇಷ್ಟವಾಗದು. ಜಗತ್ತಿನ ಎಲ್ಲ ಸಂಸ್ಕೃತಿಗಳನ್ನು ಪ್ರತಿಬಿಂಬಿಸುವ, ಎಲ್ಲದಕ್ಕೂ ಮುಕ್ತವಾಗಿರುವ ವಾತಾವರಣದ ಮನೆಯಲ್ಲಿ ವಾಸಿಸಲು ಇಚ್ಛಿಸುತ್ತೇನೆ. ಇದರಲ್ಲಿ ಯಾವುದೇ ಅಡ್ಡಿಯನ್ನೂ ಸಹಿಸುವುದಿಲ್ಲ" ಎನ್ನುತ್ತಾರೆ ಎಸ್. ಕಾಪ್ಸ್ (ಎಸ್. ಕಾಪ್ಸ್, ಆನ್ ದಿ ಕಲ್ಚರಲ್ ರ್‍ಯಾಂಪರ್ಟ್ಸ್, ಇಂಟರ್‌ನ್ಯಾಷನಲ್ ಹೆರಾಲ್ಡ್ ಟ್ರಿಬ್ಯುಟ್, 17, ನವೆಂಬರ್ 1998).

## ವಿವಿಧತೆಯಲ್ಲಿ ಏಕತೆ

ಒಂದು ಕಾಲದಲ್ಲಿ ಹೊಸದಾಗಿ ಸ್ವತಂತ್ರಗೊಂಡ ರಾಷ್ಟ್ರಗಳಲ್ಲಿ ವಿವಿಧತೆಯಲ್ಲಿ ಏಕತೆಯ ಮಂತ್ರ ಅನೂಚಾನವಾಗಿ ಪಠಣವಾಗುತ್ತಿತ್ತು. ಪ್ರತಿಯೊಂದು ಜಾಹಿರಾತು, ಕಾರ್ಯಕ್ರಮಗಳಲ್ಲಿ ಇದೇ ಧ್ಯೇಯ ವಾಕ್ಯವಾಗಿತ್ತು. ವಿವಿಧತೆಯ ಮೂಲಕ ಏಕತೆಯ ಎಂಬ ನುಡಿ ಕೆಲವು ದೇಶಗಳ ಸಂವಿಧಾನದ ತತ್ವಗಳಲ್ಲಿ ಅಡಕವಾಗಿತ್ತು. ಭಾರತದಲ್ಲಿ ವೈವಿಧ್ಯತೆಯಲ್ಲಿ ಏಕತೆ ಎಂದು ಬಣ್ಣಿಸಲಾಗುತ್ತಿದೆ. ಭಾರತವು ಮೌಲ್ಯಗಳಲ್ಲಷ್ಟೇ ಅಲ್ಲ; ಸಾಂಸ್ಕೃತಿಕ ವೈವಿಧ್ಯತೆಯಲ್ಲೂ ಬೆಳಗುತ್ತಿದೆ. ದೇಶದ ಸಾಂಸ್ಕೃತಿಕ, ಧಾರ್ಮಿಕ ಲಕ್ಷಣ, ಆಲೋಚನೆ, ತತ್ವಗಳ ನಿರಂತರ ವಿನಿಮಯ, ಧಾರ್ಮಿಕ ಆಚರಣೆ, ಭಾಷೆ ಹೀಗೆ ಎಲ್ಲದರಲ್ಲೂ ಸಮನ್ವಯದ ವಿಶಿಷ್ಟ ಕೊಡುಗೆಯನ್ನು ಗುರುತಿಸಬಹುದು. ಭಾರತದ ಯಶಸ್ಸಿನ ಗುಟ್ಟೇನು? ಎಂಬ ಇನ್ನೊಂದು ಪ್ರಶ್ನೆಯೂ ಎದುರಾಗುವುದು ಸಹಜ. ಭಾರತದ ಪ್ರಜಾಪ್ರಭುತ್ವದ ಭವನವೇ ಒಕ್ಕೂಟ ವ್ಯವಸ್ಥೆಯ ತಳಹದಿಯ ಮೇಲೆ ನಿರ್ಮಾಣವಾಗಿದ್ದು ಯಶಸ್ಸಿನ ಮೂಲ ಗುಣ. ಸ್ವಸ್ಥ ರೂಪ ಮತ್ತು ರಾಷ್ಟ್ರೀಯ ಆಕಾಂಕ್ಷೆಗಳ ಮೂಲಕ ಭಾರತದ ವೈವಿಧ್ಯತೆಯ ವಿಶಿಷ್ಟ

ಮತ್ತು ವೈಭವದ ಮೂಲಕ ಒಕ್ಕೂಟ ವ್ಯವಸ್ಥೆಯನ್ನು ಗುರುತಿಸಲಾಗುತ್ತಿದೆ. ವೈವಿಧ್ಯಮಯ ಸಮಾಜದಲ್ಲಿ ವಿಶೇಷತೆ ಮತ್ತು ಅನೇಕತ್ವಗಳ ಸಂರಕ್ಷಣೆಯಲ್ಲಿ ದೇಶದ ಯಶಸ್ಸಿನ ಗುಟ್ಟು ಅಡಗಿದೆ. ದೇಶದ ಸಾಂಸ್ಕೃತಿಕ ಮತ್ತು ಒಕ್ಕೂಟ ವ್ಯವಸ್ಥೆ ಮೇಲೆ ಯಾವುದೇ ಒಂದು ಸಮುದಾಯವು ಪ್ರಭುತ್ವ ಸಾಧಿಸಿಲ್ಲ ಎಂಬುದೂ ಭಾರತದ ಯಶಸ್ಸಿನಲ್ಲಿ ಬಹುಮುಖ್ಯ ಪಾತ್ರವಹಿಸಿದೆ. ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಗಾಂಧೀಜಿ ಹೇಳಿದ ಒಂದು ಮಾತು ನೆನಪಾಗುತ್ತದೆ. "ಬಹುಸಂಖ್ಯಾತರ ಅಥವಾ ಅಲ್ಪಸಂಖ್ಯಾತರ ಯಾವುದೇ ಗುಂಪು ದೇಶದ ಧರ್ಮ, ಭಾಷೆ, ಸಾಮಾಜಿಕ– ಸಾಂಸ್ಕೃತಿಕ ವ್ಯವಸ್ಥೆಯ ಕಾರ್ಯಸೂಚಿಗಳ ಮೇಲೆ ಯಾವುದೇ ಒಂದು ಸಮುದಾಯದ ಮೇಲೆ ಒತ್ತಡ ಹೇರಿ, ಪ್ರಭಾವ ಬೀರಿ ಹಿಡಿತ ಸಾಧಿಸಲು ಅವಕಾಶ ನೀಡುವುದಿಲ್ಲ" ಎಂದಿದ್ದರು.

ಭಾರತದ ಮಟ್ಟಿಗೆ ವಿವಿಧತೆಯಲ್ಲಿ ಏಕತೆ ಎಂಬುದು ಕೇವಲ ಘೋಷಣೆಯಲ್ಲ. ಅದು ಶಾಂತಿ, ಸಮಾಧಾನ, ಜಾತ್ಯತೀತ ತತ್ವಗಳನ್ನು ಒಳಗೊಂಡ ಜೀವನದ ಸತ್ಯವನ್ನು ಆಧರಿಸಿದ ಪ್ರಜಾಪ್ರಭುತ್ವದ ಒಕ್ಕೂಟ ವ್ಯವಸ್ಥೆ. ಭಾರತದ ನಾಗರಿಕತೆಯು ಬಹುಸಂಸ್ಕೃತಿಯನ್ನು ಹೊಂದಿದೆ. ಅದು ವೈದಿಕ ಕಾಲ, ನಂತರ ಹುಟ್ಟಿದ ಬೌದ್ಧ, ಜೈನರ ಕಾಲದಲ್ಲಿ ಉನ್ನತವಾಗಿ ಬೆಳೆಯಿತು. ಮಧ್ಯಯುಗದಲ್ಲಿ ಮತ್ತು ಭಕ್ತಿ ಚಳವಳಿ ನಂತರ ಮತ್ತಷ್ಟು ಪ್ರಬಲವಾಗಿ ಬೆಳೆದು ಒಕ್ಕೂಟ ತತ್ವಗಳನ್ನು ಆಧರಿಸಿದ ಭಾರತೀಯ ನಾಗರಿಕತೆ ಉನ್ನತವಾಗಿ ವಿಕಾಸ ಹೊಂದಿದೆ.

ಭಾರತದ ಅನನ್ಯ ಸಮನ್ವಯ ಸಂಸ್ಕೃತಿಯನ್ನು ಉಲ್ಲೇಖಿಸಿರುವ ಮೆಕ್ಸಿಕೋದ ನೊಬೆಲ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಒಕ್ಟಾವಿಯಾ ಪಾಜ್, "ಹಿಂದೂತ್ವ ಮತ್ತು ಇಸ್ಲಾಂ ಒಂದೇ ಪ್ರದೇಶದ ನಾಗರಿಕತೆಯಲ್ಲಿ ಸಮ್ಮಿಳಿತವಾಗಿದೆ ಅಥವಾ ಎರಡೂ ಧರ್ಮಗಳಿಂದ ಒಂದೇ ನಾಗರಿಕತೆ ನಿರ್ಮಾಣವಾಗಿದೆಯೇ ಎಂಬುದನ್ನು ಹೇಳುವುದು ಕಷ್ಟ" ಎಂದು ಅಚ್ಚರಿ ವ್ಯಕ್ತಪಡಿಸುತ್ತಾರೆ. ಆದರೆ ಭಾರತವು ಇತರ ಸಾಂಸ್ಕೃತಿಕ, ಸಾಮಾಜಿಕ ವ್ಯವಸ್ಥೆಗಳಿಗಿಂತ ಭಿನ್ನವಾಗಿದೆ. ಭಾರತ ಅಪ್ಪಟ ಒಕ್ಕೂಟ ವ್ಯವಸ್ಥೆಯ ಬಹುಸಂಸ್ಕೃತಿಯ ಸಮಾಜವನ್ನು ಒಳಗೊಂಡ ರಾಷ್ಟ್ರ. ಬಹುಸಂಸ್ಕೃತಿ ಮತ್ತು ಒಕ್ಕೂಟ ವ್ಯವಸ್ಥೆಯಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಬಹುಸಂಸ್ಕೃತಿಕ ಸಮಾಜ ಏಕೀಕೃತ ರಾಜ್ಯವೂ ಆಗಿರಬಹುದು. ಆದರೆ ಭಾರತದ ಒಕ್ಕೂಟ ವ್ಯವಸ್ಥೆಯ ರಾಜಕೀಯ ಆಡಳಿತ, ಅಧಿಕಾರ ವಿಕೇಂದ್ರೀಕರಣ ನೀತಿ, ನಾಗರಿಕರ ಹಕ್ಕುಗಳ ಪೋಷಣೆ ಮತ್ತು ಬಹು ಸಂಸ್ಕೃತಿಯ ಸಮಾಜದ ಸಹಭಾಗಿತ್ವ ಯಶಸ್ಸಿನ ಹಾದಿಯ ಮೆಟ್ಟಲಾಗಿದೆ.

### ಭಾಷೆ ಮತ್ತು ಅಲ್ಪಸಂಖ್ಯಾತರ ಹಕ್ಕುಗಳು

ಭಾರತದ ಸಂವಿಧಾನದ ಚೌಕಟ್ಟಿನ ವ್ಯಾಪ್ತಿಯಲ್ಲಿಯೇ ದೇಶದ ಜನರ ಧಾರ್ಮಿಕ ಸ್ವಾತಂತ್ರ್ಯದ ಹಕ್ಕುಗಳೂ ಸೇರಿದಂತೆ ನಾಗರಿಕರ ಮೂಲಭೂತ ಹಕ್ಕುಗಳ ರಕ್ಷಣೆಯನ್ನು ನೀಡಲಾಗಿದೆ. ಇದು ಜಾತ್ಯತೀತ ರಾಷ್ಟ್ರ ಎಂಬುದನ್ನು ಸಂವಿಧಾನ ಸ್ಪಷ್ಟಪಡಿಸುತ್ತದೆ. ಎಲ್ಲ ಧಾರ್ಮಿಕ ವಿಚಾರಗಳನ್ನು ಶ್ರದ್ಧಾ ಭಕ್ತಿಯನ್ನು, ಧಾರ್ಮಿಕ ಆಚರಣೆ, ಅವರ ಧರ್ಮಗಳ ಪ್ರಸಾರ ಮಾಡುವ ಧಾರ್ಮಿಕ ಸ್ವಾತಂತ್ರ್ಯದ ಹಕ್ಕುಗಳೂ ಸಂವಿಧಾನದಲ್ಲಿಯೇ ಅಡಕವಾಗಿವೆ. 1930ರಷ್ಟು ಹಿಂದೆಯೇ ಭಾರತದಲ್ಲಿ ಅಲ್ಪಸಂಖ್ಯಾತರಿಗೆ ವಿಶೇಷ ಸ್ಥಾನಮಾನ ನೀಡಿ ಪೋಷಿಸಲಾಗಿದೆ.

ಯಾವುದೇ ಸಂದರ್ಭದಲ್ಲಿ ದೇಶದ ಅಲ್ಪ ಸಂಖ್ಯಾತರ ಮೇಲೆ ದೌರ್ಜನ್ಯ ದಬ್ಬಾಳಿಕೆ ನಡೆಯದಂತೆ ತಡೆಯಲು ಕಾನೂನು ರಕ್ಷಣೆ ನೀಡಿ, ಶಾಶ್ವತವಾದ ಸ್ಥಿರ ಜಾತ್ಯತೀತ ರಾಷ್ಟ್ರವಾಗಿ ಉಳಿಸುವ ನಿಟ್ಟಿನಲ್ಲಿ ಶ್ರಮಿಸಿದ್ದಾರೆ. ಅಲ್ಪ ಸಂಖ್ಯಾತರ ಸ್ವಾಂತಂತ್ರ್ಯ ಮತ್ತು ಅವರ ಮೇಲೆ ಯಾವುದೇ ಸಂದರ್ಭದಲ್ಲಿ ನಡೆಯಬಹುದಾದ ದಬ್ಬಾಳಿಕೆ ಅಥವಾ ಧಮನಕಾರಿ ಧೋರಣೆಯನ್ನು ನಿಯಂತ್ರಿಸುವ ರಕ್ಷಣಾತ್ಮಕ ನಿಯಮಗಳನ್ನೂ ಇವೆ. ದೇಶದ ಜನರು, ಇಲ್ಲಿಯ ಸಂಸ್ಕೃತಿ ಮತ್ತು ರಾಷ್ಟ್ರೀಯ ತತ್ವಗಳು ಜಾತ್ಯತೀತವಾಗಿದ್ದರಿಂದ ಭಾರತವು ಜಾತ್ಯತೀತ ರಾಷ್ಟ್ರವಾಗಿ ಗುರುತಿಸಿಕೊಂಡಿದೆ. ಜಾತ್ಯತೀತವು ಭಾರತದ ಭರವಸೆಯ ಕುರುಹಾಗಿದೆ. ಜಾತ್ಯತೀತ ರಾಷ್ಟ್ರವಾದ ಭಾರತದಲ್ಲಿ ಇಲ್ಲಿಯ ಜನರ ಧಾರ್ಮಿಕ ನಿಲುವು ಅಥವಾ ಆಚರಣೆಯಲ್ಲಿ ಜಾತ್ಯತೀತ ತತ್ವಗಳು ಎಂದಿಗೂ ಅಡ್ಡಿಯಾಗಿಲ್ಲ. ದೇಶದ ಸಾಮಾಜಿಕ ರಚನೆಯು ಧರ್ಮದ ಸುತ್ತ ಹೆಣೆದುಕೊಂಡಿದೆ. ಅದಕ್ಕಾಗಿಯೇ ಎಲ್ಲ ಧರ್ಮೀಯರ ಧಾರ್ಮಿಕ ಆಚರಣೆಗೂ ಭಾರತದಲ್ಲಿ ರಜೆ ಸಿಗುತ್ತಿದೆ. ಆದರೆ ಇತರ ಜಾತ್ಯತೀತ ರಾಷ್ಟ್ರಗಳಲ್ಲಿ ಇಂಥ ಆಚರಣೆಗೆ ಯಾವ ಸೌಲಭ್ಯವೂ ಸಿಗುವುದಿಲ್ಲ.



ಆದರೆ ಕಳೆದ ಕೆಲ ವರ್ಷಗಳಿಂದೀಚೆಗೆ ದೇಶದಲ್ಲಿ ಜಾತ್ಯತೀತ ಪರಿಕಲ್ಪನೆ ಕೆಲಮಟ್ಟಿಗೆ ಸ್ಪರ್ಧಾತ್ಮಕ ಎನಿಸಿಕೊಳ್ಳುತ್ತಿದೆ. ಇಲ್ಲಿಯ ಕೆಲವು ರಾಜ್ಯ ಅಥವಾ ಪ್ರದೇಶಗಳಲ್ಲಿ ಜಾತ್ಯತೀತ ಆಚರಣೆಗೆ ತೊಡಕಾಗುತ್ತಿದೆ ಎಂದು ಕೆಲವರು ಹೇಳಿದರೆ, ಮತ್ತೊಂದೆಡೆ ಇನ್ನು ಕೆಲವು ರಾಜ್ಯಗಳಲ್ಲಿ ತೋರಿಕೆಯ ಜಾತ್ಯತೀತ ಪ್ರತಿಪಾದನೆ ಆಗುತ್ತಿದೆ, ಅಲ್ಪಸಂಖ್ಯಾತರನ್ನು ಕಡೆಗಣಿಸಿ, ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲಾಗುತ್ತಿದೆ ಎಂದು ಜಾತ್ಯತೀತವಾದಿ ಚಿಂತಕರು ಆರೋಪಿಸುವರು. ಆದರೆ ಭಾರತದ ಪ್ರಜಾಪ್ರಭುತ್ವದಲ್ಲಿ ಜಾತ್ಯತೀತ ತತ್ವಗಳು ಅಂತರ್ಗತವಾಗಿವೆ. ಏನೇ ಆರೋಪಗಳಿದ್ದರೂ, ಯಾವುದೇ ರೀತಿಯ ಚರ್ಚೆ ನಡೆಯುತ್ತಿದ್ದರೂ, ಎಷ್ಟೇ ಮಿತಿ ಹೇರಿದರೂ ಭಾರತದ ಜಾತ್ಯತೀತ ನಿಲುವಿನಲ್ಲಿ ವ್ಯತ್ಯಾಸ ಕಾಣಲು ಸಾಧ್ಯವಿಲ್ಲ.

ಇತ್ತೀಚಿನ ದಿನಗಳಲ್ಲಿ ಜಾಗತೀಕರಣದ ಪ್ರಭಾವ ಹಲವು ಆತಂಕಗಳನ್ನು ಸೃಷ್ಟಿಸಿದೆ. ವಿವಿಧ ಸಂಸ್ಕೃತಿಗಳ ಏಕತಾನತೆ ಹೆಚ್ಚಾಗಿ, ವೈವಿಧ್ಯತೆ ಕಡಿಮೆಯಾಗುತ್ತಿದೆ. ವಾಸ್ತವ ಮತ್ತು ಗ್ರಹಿಕೆಯ, ಅಲ್ಪಸಂಖ್ಯಾತರ ಗುಂಪುಗಳ ದಾರಿ ಬದಲಾಗುತ್ತಿದೆ. ಅಳಿವಿನ ಅಂಚಿನಲ್ಲಿರುವ ಸಮುದಾಯಗಳು, ಭಾಷೆಯ ಅಳಿವುಗಳಿಂದಾಗಿ ಸಾಂಸ್ಕೃತಿಕ ಅವನತಿ ಆತಂಕವಿದೆ. ಸಂಪ್ರದಾಯಸ್ಥ ಜನ, ಇತಿಹಾಸ ಮತ್ತು ಧಾರ್ಮಿಕ ಆಚರಣೆಗಳು ವಿಘಟನೆಯತ್ತ ಸಾಗುತ್ತಿರುವ ಭೀತಿ ಕಾಡುತ್ತಿದೆ. ಆದರೆ ಭಾರತೀಯ ಸಂಸ್ಕೃತಿಗೆ ಬಾಹ್ಯ ಸಂಸ್ಕೃತಿಗಳ ಪ್ರಭಾವದ ದಟ್ಟ ಅಲೆಗಳನ್ನು ಎದುರಿಸಿ, ಪುಷ್ಟೀಕರಿಸಿಕೊಂಡು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಚೈತನ್ಯ ಪಡೆಯುವ ಶಕ್ತಿಯನ್ನು ಹೊಂದಿದೆ. ಭಾರತಕ್ಕೆ ಇದು ಪುನರುಜ್ಜೀವನ ಮತ್ತು ನವಯೌವನದ ನಿರಂತರ ಪ್ರಕ್ರಿಯೆ. ವಿವಿಧತೆಯಲ್ಲಿ ಏಕತೆಯೊಂದಿಗೆ ಒಟ್ಟಿಗೆ ದೀರ್ಘ ಕಾಲ ಬಾಳುವ ಜೀವನದ



ಅನುಭವ ಸಾರವನ್ನು ಭಾರತ ಇಡೀ ಜಗತಿಗೆ ತಿಳಿಸಿಕೊಡುವ ಸಾಮರ್ಥ್ಯವನ್ನು ಹೊಂದಿದೆ. ಯಾವುದೇ ಬಿಕ್ಕಟ್ಟುಗಳು ಎದುರಾದರೂ ದೇಶದ ವೈವಿಧ್ಯಮಯ ಸಂಸ್ಕೃತಿ, ಸಾಮಾಜಿಕ ಜೀವನ ವ್ಯವಸ್ಥೆ ಬದಲಾಗಿಲ್ಲ. ದೇಶದಲ್ಲಿ ಆರ್ಥಿಕ ಅಸಮಾನತೆ, ಧಾರ್ಮಿಕ ಮೂಲಭೂತವಾದಿತ್ವ ಮತ್ತು ಜನಾಂಗೀಯ ಘರ್ಷಣೆಗಳಂತಹ ಆತಂಕ ಗಂಭೀರವಾಗಿ ಕಾಡುತ್ತಿದ್ದರೂ; ಸಂಸ್ಕೃತಿ, ಧರ್ಮ, ಭಾಷೆ ಮತ್ತು ಜನಾಂಗೀಯ ಹೆಸರಿನಲ್ಲಿ ಘರ್ಷಣೆ, ಹಿಂಸಾಚಾರ ನಡೆಯುತ್ತಿದ್ದರೂ ದೇಶದ ವಿವಿಧತೆಯಲ್ಲಿ ಏಕತೆಯ ತತ್ವಕ್ಕೆ ಧಕ್ಕೆಯಾಗಿಲ್ಲ. ಹೀಗಾಗಿ ಭಾರತವು ಜಾತ್ಯತೀತ ವಿಚಾರದಲ್ಲಿ ಜಗತ್ತಿನ ಇತರ ರಾಷ್ಟ್ರಗಳಿಗೆ ಮಾದರಿಯಾಗಿ ನಿಂತಿದೆ.

ಆಧುನಿಕ ಸಮಾಜದಲ್ಲಿ ಬಹುಸಂಸ್ಕೃತಿಯಲ್ಲಿ ಸಾಕಷ್ಟು ಬದಲಾವಣೆ ಕಂಡು ಬರುತ್ತಿದೆ. ಸಮಾಜದಲ್ಲಿ ಪ್ರಬಲ ಗುಂಪುಗಳ ನಡವಳಿಕೆಯೂ ಬದಲಾವಣೆಯ ಹಂತದಲ್ಲಿದೆ. ಅಲ್ಪಸಂಖ್ಯಾತ ಕೋಮುವಾದವನ್ನು ಇಂದು ಖಂಡಿತವಾಗಿಯೂ ಸಮರ್ಥಿಸಿಕೊಳ್ಳದು. ಪ್ರೊ. ಶಿವ ವಿಶ್ವನಾಥನ್ ಹೇಳುವಂತೆ "ಅಲ್ಪಸಂಖ್ಯಾತರು ವಿವಿಧ ಹಂತಗಳಲ್ಲಿ ಬಹುಸಂಖ್ಯಾತರನ್ನು ಮೀರಿ ಮುನ್ನಡೆಯುವರೆಂಬ ಪೂರ್ವಾಗ್ರಹಪೀಡಿತ ವಿಚಾರದ ಧೋರಣೆಗಳು ಜಾತ್ಯತೀತತೆ ಅಲ್ಲ' ಎನ್ನುತ್ತಾರೆ.

ಭಾರತದ ಭಾಷಾ ವಿಭಿನ್ನತೆಯೂ ಆಕರ್ಷಕವಾದುದು. ಭಾಷಾ ಸಂಸ್ಕೃತಿ ಸಮುದಾಯದ ಅಸ್ತಿತ್ವವನ್ನು ಪ್ರತಿನಿಧಿಸುವ ಪ್ರಬಲ ಸಂಕೇತವಾಗಿದೆ. ಬಹುಭಾಷಾ ಸಂಸ್ಕೃತಿ ಭಾರತದ ಭವ್ಯ ಭವಿಷ್ಯದ ಲಕ್ಷಣವೂ ಆಗಿದೆ. ದೇಶದ ಬಹುತೇಕ ಸಾಹಿತಿ, ಬರಹಗಾರರು ತಾವು ಬರೆಯುವ ಭಾಷೆಯನ್ನೇ ಅವರು ಮಾತನಾಡದಿರುವುದು ವಿಶೇಷ. ಒಬ್ಬ ವ್ಯಕ್ತಿ ವಿವಿಧ ಸಂದರ್ಭಗಳಲ್ಲಿ, ವಿವಿಧ ಉದ್ದೇಶಗಳಿಗೆ ಆಯಾ ಸನ್ನಿವೇಶಕ್ಕೆ ತಕ್ಕಂತೆ ವಿಭಿನ್ನ ಭಾಷೆಯನ್ನು ಬಳಸಿ ಅನುಸಂಧಾನ ಮಾಡುವ ವಿಶಿಷ್ಟ ಲಕ್ಷಣವನ್ನು ಒಳಗೊಂಡ ಸಾಮಾಜಿಕ ವ್ಯವಸ್ಥೆ ಭಾರತದಲ್ಲಿದೆ. ಇದಕ್ಕೆ ಉದಾಹರಣೆ ಎಂದರೆ ಈಶಾನ್ಯ ಭಾರತದ ರಾಜ್ಯವೊಂದರ ಖಾಸಿ ಜನಾಂಗದ ಮಹಿಳೆಯು ಇನ್ನೊಬ್ಬ ಮಹಿಳೆಯ ಜೊತೆ ಮಾತನಾಡುವ ಶೈಲಿ, ಪುರುಷರ ಜೊತೆ ಮಾತನಾಡುವಾಗ ಬೇರೆಯೇ ಆಗಿರುತ್ತದೆ. ದೇಶದ ವಿವಿಧೆಡೆ ಇತ್ತೀಚೆಗೆ ಭಾಷಾ ಚಳವಳಿಗಳು ನಡೆಯುತ್ತಿವೆ. ಇದು ಭಾರತದ ಏಕತೆ ಮತ್ತು ಸಮಗ್ರತೆಗೆ ಗಂಭೀರ ಆತಂಕ ನಡೆಸಿದೆ. ಆದರೆ ದೇಶದ ರಾಜಕೀಯ ನಾಯಕತ್ವದ ದೂರದೃಷ್ಟಿತ್ವ, ಸಮಯೋಚಿತ ನಿರ್ಧಾರ, ಪೂರ್ವಾಲೋಚನೆಯಿಂದಾಗಿ ಭಾಷಾವಾರು ರಾಜ್ಯಗಳನ್ನು ರಚಿಸುವ ಮೂಲಕ ಆತಂಕ ಸ್ಪಷ್ಟ ಮಟ್ಟಿಗೆ ನಿವಾರಣೆಯಾಗಿದೆ. ದೊಡ್ಡ ಭಾಷೆಗಳಷ್ಟೇ ಅಲ್ಲ; ಅಳಿವಿನ ಅಂಚಿನಲ್ಲಿರುವ ಸಣ್ಣಪುಟ್ಟ ಭಾಷೆಗಳಿಗೂ ದೇಶವು ಗುರುತಿಸಿ ಮನ್ನಣೆ ನೀಡಲಾಗಿದೆ. ಭಾರತದ ವಿವಿಧತೆಯಲ್ಲಿ ಏಕತೆ, ಮುಕ್ತತೆ ಹಾಗೂ ಪಾಲ್ಗೊಳ್ಳುವಿಕೆಯ ಇತಿಹಾಸವನ್ನು ಅರ್ಥ ಮಾಡಿಕೊಳ್ಳಲು ಇದೀಗ ಪರೀಕ್ಷಾ ಕಾಲ. ಭಾರತದ ಸಂವಿಧಾನದ ಜಾತ್ಯತೀತ ಚೌಕಟ್ಟಿನೊಳಗೆ ಆರ್ಥಿಕ ಅಭಿವೃದ್ಧಿ, ಸಾಮಾಜಿಕ ಮತ್ತು ರಾಜಕೀಯ ಸಬಲೀಕರಣದ ಕಾನೂನು



ಮತ್ತು ಮಾನವನ ಮೂಲಭೂತ ಹಕ್ಕುಗಳ ಅನುಷ್ಠಾನಕ್ಕೆ ಆದ್ಯತೆ ನೀಡಿದೆ. ಭಾರತದ ಈ ಪ್ರಯೋಗದ ಯಶಸ್ಸು ಜಗತ್ತಿನ ಇತರ ರಾಷ್ಟ್ರಗಳಿಗೆ ಮಾದರಿಯಾಗಿದೆ. ಬಹುಶಃ ಭಾರತವು ಬಹುಸಂಸ್ಕೃತಿಯ ಮಹಾನ್ ಪ್ರಯೋಗಶಾಲೆ ಎನ್ನಬಹುದು. ಯುಎನ್‌ಡಿಪಿ 2004ರಲ್ಲಿ ಪ್ರಕಟವಾದ ಒಂದು ವರದಿಯಂತೆ "ಸಾಂಸ್ಕೃತಿಕ ವೈವಿಧ್ಯತೆ ನಾಗರಿಕ ಸಮುದಾಯಗಳ ನಡುವಿನ ಘರ್ಷಣೆಗೂ ಕಾರಣವಾಗುತ್ತದೆ ಎಂಬ ಕಲ್ಪನೆ ನಿರಾಧಾರ. ಇದು ವಿವಿಧತೆ ಮತ್ತು ಅಲ್ಪಸಂಖ್ಯಾತರ ಹಕ್ಕುಗಳ, ಅಭಿವೃದ್ಧಿ ಪಥದ ನಿರ್ಣಾಯಕ ಹಂತ. ಇದಕ್ಕಿಂತ ಮುಖ್ಯವಾಗಿ ಬಡ ಮತ್ತು ವೈವಿಧ್ಯತೆಗಳನ್ನು ಒಳಗೊಂಡ ರಾಷ್ಟ್ರಗಳಲ್ಲಿ ಬಹುಸಂಸ್ಕೃತಿಯ ಕಾರ್ಯಸೂಚಿಗಳನ್ನು ಸಮರ್ಪಕವಾಗಿ ಆಚರಿಸಬಹುದು ಎಂಬುದನ್ನು ನಾನು ನನ್ನ ಅನುಭವದ ಮೂಲಕ ಕಂಡುಕೊಂಡಿದ್ದೇನೆ. ಯಾವುದೇ ಒಂದು ಸಂಸ್ಕೃತಿ ಪರಿಪೂರ್ಣ ಅಥವಾ ಅತ್ಯುತ್ತಮ ಜೀವನವನ್ನು ಪ್ರತಿನಿಧಿಸುವುದಿಲ್ಲ ಎಂಬುದಕ್ಕೆ ಭಾರತದ ಸಾಂಸ್ಕೃತಿಕ ನೆಲೆಗಟ್ಟು ಸ್ಪಷ್ಟ ಉದಾಹರಣೆಯಾಗಿ ನಿಲ್ಲುತ್ತದೆ. ಸಂವಾದ, ಚರ್ಚೆ, ವಿಮರ್ಶೆಯ ಜೊತೆಗೆ ಮೂಲಕ ವಿವಿಧ ದೇಶಗಳು, ಸಮಾಜಗಳು ವಿವಿಧತೆಯಲ್ಲಿ ಏಕತೆಯ ಸಾಂಸ್ಕೃತಿಕ ಪ್ರಯೋಜನ ಪಡೆಯಬಹುದು". ❑


# ಯೋಜನಾ ಚಂದಾದಾರರಲ್ಲಿ ಕೋರಿಕೆ

**ಯೋಜನಾ ಪತ್ರಿಕೆಯ ಚಂದಾದಾರರು ಹಾಗೂ ಹೊಸದಾಗಿ ಚಂದಾ ಬಯಸುವವರು ಜಿಲ್ಲೆ ಹಾಗೂ ಅಂಚೆ ಪಿನ್‌ಕೋಡ್ ಸಂಖ್ಯೆ ಸೇರಿದಂತೆ ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಒದಗಿಸಬೇಕು. ಈಗಾಗಲೇ ಹಣ ಸಂದಾಯ ಮಾಡಿದವರು ದೂರವಾಣಿ ಮೂಲಕವೂ ಈ ವಿವರ ನೀಡಿ ದೃಢಪಡಿಸಿಕೊಳ್ಳಬಹುದಾಗಿದೆ. ದೂರವಾಣಿ ಸಂಖ್ಯೆ : 080 25537244**

ವಿಶೇಷ ಲೇಖನ

ಝುಂಝುಣ

# ಚಲನಶೀಲ ಮಾರುಕಟ್ಟೆ – ಹಣಕಾಸು ಸಂಸ್ಥೆಗಳು

**ಅಲೋಕ್ ಶೀಲ್**
**ಕನ್ನಡಕ್ಕೆ : ಶಿವಕುಮಾರ ಸ್ವಾಮಿ**



**ಭಾರತವೂ ಸೇರಿದಂತೆ ಸಾಕಷ್ಟು ಅಭಿವೃದ್ಧಿಶೀಲ ರಾಷ್ಟ್ರಗಳು, ತಮ್ಮ ಬೃಹತ್ ಅಭಿವೃದ್ಧಿಯ ಅದರಲ್ಲೂ ಮೂಲಭೂತ ಅವಶ್ಯಕತೆಗಳಿಂದಾಗಿ ಇಂದು ವಿಶ್ವಬ್ಯಾಂಕಿನ ಬೃಹತ್ ಸಾಲಗಾರ ರಾಷ್ಟ್ರಗಳಾಗಿ ಉಳಿದುಕೊಂಡಿವೆ. ಹಲವು ಅಭಿವೃದ್ಧಿಶೀಲ ರಾಷ್ಟ್ರಗಳ ಭೌತಿಕ ಮೂಲಸೌಕರ್ಯಗಳಲ್ಲಿ ಮತ್ತು ಸಾಮಾಜಿಕ ಸೇವೆಗಳಲ್ಲಿ ಸಾರ್ವಜನಿಕ ಬಂಡವಾಳದ ಹೂಡಿಕೆ ಮುಂದುವರಿದಿದ್ದರೂ ಈ ರಾಷ್ಟ್ರಗಳಿಗೆ ಬಂಡವಾಳದ ತರಂಗ ಮೂಲಭೂತವಾಗಿ ಖಾಸಗಿ ಸ್ವರೂಪದ ಬಂಡವಾಳವಾಗಿದೆ.**

ವಿಶ್ವದ ಎರಡನೇ ಮಹಾಯುದ್ಧದ ತರುವಾಯ ಅಮೆರಿಕ ಸಂಯುಕ್ತ ಸಂಸ್ಥಾನದ ಬ್ರೆಟನ್ ವುಡ್ಸ್‌ನಲ್ಲಿ ನಡೆದ ಸಮ್ಮೇಳನದ ಒಪ್ಪಂದದಂತೆ ವಿಶ್ವಬ್ಯಾಂಕು ಮತ್ತು ಅಂತಾರಾಷ್ಟ್ರೀಯ ಹಣಕಾಸು ನಿಧಿ ಸ್ಥಾಪಿಸಲ್ಪಟ್ಟವು. ಈ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳನ್ನು ಬ್ರೆಟನ್ ವುಡ್ಸ್ ಸಂಸ್ಥೆಗಳು ಎಂದೇ ಕರೆಯಲಾಗುತ್ತಿದೆ.

ಅಮೆರಿಕದ ಸಂಪನ್ಮೂಲಗಳನ್ನು ಯುದ್ಧದಿಂದ ತತ್ತರಿಸಿದ ಯೂರೋಪ್ ರಾಷ್ಟ್ರಗಳ ಪುನರ್ ನಿರ್ಮಾಣಕ್ಕೆ ಬಳಸುವುದು ವಿಶ್ವಬ್ಯಾಂಕ್‌ನ ಉದ್ದೇಶವಾಗಿತ್ತು. ಚಿನ್ನದ ಪ್ರಮಿತಿಯು ನಿಂತು ಹೋಗುವುದರೊಂದಿಗೆ 1930 ರ ಮಹಾ ಆರ್ಥಿಕ ಮುಗ್ಗಟ್ಟಿನ ಕಾರಣದಿಂದಾಗಿ ಕ್ರಮವಿಲ್ಲದಿರುವ ಅಂತಾರಾಷ್ಟ್ರೀಯ ಹಣಕಾಸು ವ್ಯವಸ್ಥೆಯನ್ನು ಸ್ಥಿಮಿತಗೊಳಿಸುವುದು ಅಂತಾರಾಷ್ಟ್ರೀಯ ಹಣಕಾಸು ನಿಧಿಯ ಉದ್ದೇಶವಾಗಿತ್ತು.

1971 ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನವು ಚಿನ್ನದ ಪ್ರಮಿತಿಯ ಬೆನ್ನು ಹತ್ತಿದ ನಂತರ ಯೂರೋಪ್‌ನ ತೀವ್ರ ರೀತಿಯ ಪುನರ್ ನಿರ್ಮಾಣ ಮತ್ತು ಪ್ರಮುಖ ವಿನಿಮಯ ನಾಣ್ಯಗಳ ಪರಸ್ಪರ ವ್ಯತ್ಯಾಸದ ಕಾರಣಗಳಿಂದ ವಿಶ್ವಬ್ಯಾಂಕು ಮತ್ತು ಅಂತಾರಾಷ್ಟ್ರೀಯ ಹಣಕಾಸು ನಿಧಿಗಳು ಅಭಿವೃದ್ಧಿಶೀಲ ರಾಷ್ಟ್ರಗಳ ಅವಶ್ಯಕತೆಗಳಿಗೆ ಆಹಾರವನ್ನು ಒದಗಿಸಲು ಪ್ರಾರಂಭಿಸಿದವು.

ಅಭಿವೃದ್ಧಿಶೀಲ ರಾಷ್ಟ್ರಗಳ ಬಂಡವಾಳ ಕೊರತೆಯ ದೀರ್ಘಾವಧಿಯ ಬಿಕ್ಕಟ್ಟು ಎರಡು ಪ್ರತ್ಯೇಕವಾದ ರಚನಾತ್ಮಕ ಕೊರತೆಗಳಿಗೆ ದಾರಿಮಾಡಿಕೊಟ್ಟಿತು. ಅವುಗಳೆಂದರೆ ಚಾಲ್ತಿ ಖಾತೆ ಕೊರತೆ ಮತ್ತು ವಿತ್ತೀಯ ಕೊರತೆ. ಹೂಡಿಕೆಗೆ ದೇಶಿಯ ಉಳಿತಾಯ ಸಂಬಂಧ ಮತ್ತು ಒಟ್ಟು ಉಳಿತಾಯಗಳಿಗೆ ಸಾರ್ವಜನಿಕ ಉಳಿತಾಯ ಸಂಬಂಧ – ಈ ಅವಳಿ ಕೊರತೆಗಳು ಅಭಿವೃದ್ಧಿಶೀಲ ರಾಷ್ಟ್ರಗಳ ಬೆಳವಣಿಗೆಗೆ ಪ್ರಮುಖ ಸಮಸ್ಯೆಗಳಾಗಿ ಪರಿಗಣಿಸಲ್ಪಟ್ಟಿವೆ.

ಅಭಿವೃದ್ಧಿಶೀಲ ರಾಷ್ಟ್ರಗಳಿಂದ ಹರಿವು ಮಿತವಾಗಿರುವ ಕಾರಣದಿಂದ ಈ ರಾಷ್ಟ್ರಗಳು ಅಂದರೆ ಅಭಿವೃದ್ಧಿಶೀಲ ರಾಷ್ಟ್ರಗಳು ಉಳಿತಾಯ–ಹೂಡಿಕೆಯ ಕೊರತೆ ನೀಗಿಸಿಕೊಳ್ಳಲು ವಿಶ್ವಬ್ಯಾಂಕು ಮತ್ತು ಎಡಿಬಿ, ಐಎಡಿಬಿ, ಮತ್ತು ಎ ಎಫ್ ಡಿ ಬಿ ಗಳಂತಹ ಪ್ರಾದೇಶಿಕ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಮೂಲಕ ಬಂದಿತ್ತು. ದ್ವಿಮುಖ ಮತ್ತು ಬಹುಮುಖ ಮೃದುಸಾಲಗಳ ಮೇಲೆ ನಂಬಿಕೆ ಇಟ್ಟಿವೆ. ವಿಶ್ವಬ್ಯಾಂಕು ಭೌತಿಕ ಮತ್ತು ಸಾಮಾಜಿಕ ಮೂಲಸೌಕರ್ಯಗಳಿಗೂ ವಿತ್ತೀಯ ಬೆಂಬಲ ಒದಗಿಸಿದೆ.

ದೇಶಿಯ ನಾಣ್ಯದ ರೂಪದಲ್ಲಿ ಸಾಲದ ಅಗತ್ಯಇದ್ದರೂ ಸಹ ವಿಶ್ವಬ್ಯಾಂಕು ತನ್ನ ಕಠಿಣ ನಾಣ್ಯದ ಮೂಲಕ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಸಾಲ ನೀಡುತ್ತಿತ್ತು. ಈ ರಾಷ್ಟ್ರಗಳು ತಮ್ಮ ಪಾವತಿಶುಲ್ಕದ ಕೊರತೆಯನ್ನು ತುಂಬಿಸಿಕೊಳ್ಳಲು ಈ ರೀತಿಯ ಸಾಲವನ್ನು ಪಡೆಯುತ್ತಿದ್ದವು. ಅಂತಾರಾಷ್ಟ್ರೀಯ ಹಣಕಾಸು ನಿಧಿಯು ತುರ್ತು ಪಾವತಿಶಿಲ್ಕಿನ ಬೆಂಬಲಕ್ಕೆ ಆದ್ಯತೆ ನೀಡುವುದರ ಮೂಲಕ ಕೊಡುಗೆ ನೀಡುತ್ತಿದೆ. 1991 ರ ಕೊಲ್ಲಿ

ಆರ್ಥಿಕ ನೀತಿನಿರೂಪಕರು. email : aloksheel@aloksheel.com

ಯುದ್ಧದ ಕಾರಣದಿಂದಾಗಿ ಭಾರತದ ವಿದೇಶಿ ವಿನಿಯಮದ ಮೀಸಲು ಕೇವಲ 1 ಬಿಲಿಯನ್ ಡಾಲರ್‌ಗೆ ಇಳಿಯಿತು. ಭಾರತದ ವಿದೇಶಿ ನಾಣ್ಯದ ಚಲಾವಣೆ ಸಾಲದ ದರವು ಕೆಳ ಮಟ್ಟಕ್ಕೆ ಬಂದ ಪರಿಣಾಮ ಸೇವೆಗಳ ಸಾಮರ್ಥ್ಯ ಮತ್ತು ಬಾಹ್ಯ ಸಾಲದ ಮರುಪಾವತಿಯಲ್ಲಿ ಅಂತಾರಾಷ್ಟ್ರೀಯ ವಿಶ್ವದ ನಷ್ಟದ ಜೊತೆಗೆ ಪಾವತಿಶಿಲ್ಕಿನ ಬಿಕ್ಕಟ್ಟು ಉಂಟಾಯಿತು. ಇದರ ಪರಿಣಾಮವಾಗಿ ಭಾರತ ಅಂತಾರಾಷ್ಟ್ರೀಯ ಹಣಕಾಸು ನಿಧಿಯೊಂದಿಗೆ ಕೆಲವು ಷರತ್ತಿನೊಂದಿಗೆ ಒಡಂಬಡಿಕೆ ಮಾಡಿಕೊಂಡಿತು. ಇದು ಭಾರತದ ಆರ್ಥಿಕ ನೀತಿಗಳನ್ನು ಸಂಪೂರ್ಣವಾಗಿ ಪುನರ್ ರಚಿಸುವುದು ಮತ್ತು ಉದಾರೀಕರಿಸುವುದಾಗಿತ್ತು.

ಈ ಸಮಯದಲ್ಲಿ ಆರ್ಥಿಕ ವ್ಯವಹಾರಗಳ ವಿಭಾಗದ ಬಾಹ್ಯ ಹಣಕಾಸಿನ ರಕ್ಷೆಯ ಕೇಂದ್ರೀಕರಣವು ದ್ವಿಮುಖ ಮತ್ತು ಬಹು ಮುಖ ಮಾರ್ಗದ ಮೂಲಕ ಕೊರತೆ ವಿದೇಶಿ ವಿನಿಮಯದ ಸಂಗ್ರಹಣೆ ಮತ್ತು ಅದರ ನಿರ್ವಹಣೆಯ ಮೇಲೆ ಇತ್ತು. ವಿನಿಮಯ ದರವು ಆಡಳಿತಾತ್ಮಕವಾಗಿತ್ತು ಮತ್ತು ಅಲ್ಲಿ ಪ್ರತ್ಯೇಕ ವಿದೇಶಿ ವಿನಿಮಯ ಬಜೆಟ್ ಇತ್ತು. ಅದರ ಮೂಲಕ ಕೊರತೆ ವಿದೇಶಿ ವಿನಿಮಯದ ಹಂಚಿಕೆಯನ್ನು ಆದ್ಯತೆಗೊಳಿಸಲಾಗಿತ್ತು. ತೈಲದ ಆಮದಿಗಾಗಿ ತುಂಬ ಸತ್ವ ಪೂರ್ಣವಾದ ವಿದೇಶಿ ಕರೆನ್ಸಿ ಅಗತ್ಯತೆಯ ದೃಷ್ಟಿಯಿಂದ ಆರ್ಥಿಕ ವ್ಯವಹಾರಗಳ ವಿಭಾಗದಲ್ಲಿ ಪ್ರತ್ಯೇಕವಾದ ವಿಭಾಗವಿತ್ತು (ಪೆಟ್ರೋಲಿಯಂ ತೈಲದ ಲುಬ್ರಿಕೆಂಟ್ಸ್). ವಿದೇಶಿ ವ್ಯಾಪಾರ ವಿಭಾಗದ ಕೇಂದ್ರೀಕರಣವು ವಿದೇಶಿ ವಿನಿಮಯದ ರಕ್ಷಣೆ ಮತ್ತು ಆಮದು ಬದಲೀಕರಣದ ಮೇಲೆ ಇತ್ತು. ಆರ್ಥಿಕ ವ್ಯವಹಾರಗಳ ವಿಭಾಗದ ಅತಿ ಸಂದಿಗ್ಧ ವಿಭಾಗವೆಂದರೆ ನಿಧಿ ಬ್ಯಾಂಕು. ಇದು ವಿಶ್ವ ಬ್ಯಾಂಕಿನಿಂದ ಗರಿಷ್ಠ ಕಠಿಣ ನಾಣ್ಯದ ಸಾಲಪಡೆಯಲು ಪ್ರಯತ್ನಿಸಿತು. ದ್ವಿಮುಖ ನೆರವು ವಿಭಾಗವು ವೈಯಕ್ತಿಕ



ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಂದ ಬರುವ ಸಹಾಯವನ್ನು ಪರೀಕ್ಷಿಸುವುದು. ಮತ್ತು ಬಾಹ್ಯ ವಾಣಿಜ್ಯ ಸಾಲಪಡೆಯುವಿಕೆಯು ನೀತಿಗಳನ್ನು ರೂಪಿಸುವುದು ಮತ್ತು ಬಾಹ್ಯ ಸಾಲ ಮಾರುಕಟ್ಟೆಗಳ ಬಿಗಿ ನಿಯಂತ್ರಣದೊಳಗೆ ಸಾಲ ಪಡೆಯುವುದಕ್ಕೆ ಅನುಮೋದನೆ ನೀಡುವುದಾಗಿದೆ. ಮುಚ್ಚಿದ ಬಂಡವಾಳ ಮಾರುಕಟ್ಟೆಗಳಿಂದಾಗಿ ವಿದೇಶಿ ಹೂಡಿಕೆ ಹರಿವುಗಳು ಅಸ್ತಿತ್ವದಲ್ಲಿರಲಿಲ್ಲ.

1991 ರ ಪಾವತಿಶುಲ್ಕದ ಬಿಕ್ಕಟ್ಟಿನ ನಿವಾರಣೆಗೆ ಭಾರತದಲ್ಲಿ ಉದಾರೀಕರಣ ಮತ್ತು ಮುಕ್ತ ಆರ್ಥಿಕತೆಯನ್ನು ಅಳವಡಿಸಿಕೊಂಡ ಕಾರಣ, ವಿದೇಶಿ ವಿನಿಮಯ ಕೊರತೆಯು ದೀರ್ಘಾವಧಿಯ ಸಮಸ್ಯೆಯಾಗಲಿಲ್ಲ. ವಿದೇಶಿ ವಿನಿಮಯ ಮತ್ತು ಪೆಟ್ರೋಲಿಯಂ ತೈಲ ಲುಬ್ರಿಕೇಟ್ಸ್ ಬಜೆಟ್‌ಗಳು ಇತಿಹಾಸಕ್ಕೆ ಸರಿದವು. ಆರ್ಥಿಕ ವ್ಯವಹಾರಗಳ ವಿಭಾಗದಲ್ಲಿ ವಿದೇಶಿ ಹೂಡಿಕೆ ವಿಭಾಗವು ಶ್ರೇಷ್ಠ ಸ್ಥಾನದಲ್ಲಿದ್ದರೂ ವಿದೇಶಿ ವಾಣಿಜ್ಯ ಸಾಲ ನಿರ್ವಹಣೆಯನ್ನು ಕೇಂದ್ರ ಬ್ಯಾಂಕಿಗೆ ನಿಯೋಜಿಸಲಾಯಿತು. ವಿಶ್ವ ವ್ಯಾಪಾರ ಸಂಘಟನೆಯ ಜೊತೆಗೆ ವಾಣಿಜ್ಯ ವಿಭಾಗದ ಮಾತುಕತೆಗಳ ಪ್ರಭಾವ ಹೆಚ್ಚಾದ ಕಾರಣದಿಂದಾಗಿ ವಿದೇಶಿ ವ್ಯಾಪಾರ ವಿಭಾಗವು ವ್ಯಾಪಾರ ನೀತಿಯಲ್ಲಿ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿತು. ದ್ವಿಮುಖ ಮತ್ತು ಬಹುಮುಖ ವಿಭಾಗಗಳ ಅಸ್ತಿತ್ವ ಮುಂದುವರಿದಿದೆ. ಆದರೆ ವಿದೇಶಿ ನೆರವಿನೊಂದಿಗೆ ಮುಂಚೆ ಇದ್ದಂತಹ ಮಹತ್ವವನ್ನು ಕಳೆದು ಕೊಂಡಿದೆ.

ಈ ಬದಲಾವಣೆಗಳು ಇತ್ತೀಚಿನ ವರ್ಷಗಳಲ್ಲಿನ ವ್ಯಾಪಕ ಜಾಗತಿಕ ಆರ್ಥಿಕ ಬದಲಾವಣೆಗಳನ್ನು ಪ್ರತಿಬಿಂಬಿಸುತ್ತಿದೆ. ಕಳೆದ ಶತಮಾನದ ಕೊನೆಯಲ್ಲಿ ಉಂಟಾದ ಪ್ರಮುಖ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿನ ಬೆಳವಣಿಗೆಯಿಂದಾಗಿ ಅವುಗಳು ಈಗ ಚಲನಶೀಲ ಮಾರುಕಟ್ಟೆಗಳೆಂದು ಪ್ರಸಿದ್ಧಿಯಾಗಿವೆ. ಅವುಗಳು ತಮ್ಮ ಆರ್ಥಿಕತೆಗಳನ್ನು ಮುಕ್ತ ಗೊಳಿಸಿದ್ದರಿಂದಾಗಿ ಮತ್ತು ಬಾಹ್ಯ ಬೇಡಿಕೆ ಹೆಚ್ಚಾದ ಪರಿಣಾಮವಾಗಿ ಅವುಗಳ ಅಭಿವೃದ್ಧಿಯ ಮಂತ್ರ ಹೆಚ್ಚಾಗಿ ದೊಡ್ಡ ಪ್ರಮಾಣದ ಚಾಲ್ತಿ ಖಾತೆ ಹೆಚ್ಚುವರಿ ಉಂಟಾಗಲು ಪ್ರಾರಂಭವಾಯಿತು. ತದನಂತರ ಬಂಡವಾಳವನ್ನು ಆಮದು ಮಾಡಿಕೊಳ್ಳುವುದಕ್ಕೆ ಬದಲಾಗಿ ಅದರ



ರಫ್ತುಗಳನ್ನು ಹೆಚ್ಚಿಸಿದ್ದರಿಂದ ಅವುಗಳು ನಿವ್ವಳ ಉಳಿತಾಯಗಾರರಾದವು. ಇದರ ಪರಿಣಾಮ ದೊಡ್ಡ ಪ್ರಮಾಣದ ವಿದೇಶಿ ವಿನಿಮಯ ಮೀಸಲು ಸಂಗ್ರಹವಾಯಿತು. ಅಂತಹ ಚಲನಶೀಲ ಮಾರುಕಟ್ಟೆಗಳಲ್ಲಿ ಭಾರತದಂತಹ ರಾಷ್ಟ್ರದಲ್ಲಿ ಉಳಿತಾಯ–ಹೂಡಿಕೆಯ ಅಂತರ ವಿವಿಧ ಕಾರಣಗಳಿಂದಾಗಿ ಮುಂದುವರಿದಿದೆ. ಇದರ ಪರಿಣಾಮವಾಗಿ ಅಂತಾರಾಷ್ಟ್ರಿಯ ಹಣಕಾಸು ನಿಧಿಯು ಪ್ರಮುಖ ಗ್ರಾಹಕರನ್ನು ಬಿಟ್ಟು ತನ್ನ ಓಟವನ್ನು ಪ್ರಾರಂಭಿಸಿತು.

ಕಡಿಮೆ ಆದಾಯವನ್ನು ಹೊಂದಿದ ರಾಷ್ಟ್ರಗಳನ್ನು ಹೊರತುಪಡಿಸಿ ಎಲ್ಲಾ ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕತೆಗಳ ವಿದೇಶಿ ನಾಣ್ಯದ ಕೊರತೆಯನ್ನು ಖಾಸಗಿ ಬಂಡವಾಳದ ಹರಿವು ನೀಗಿಸಿದ್ದರಿಂದಾಗಿ ಬೇಡಿಕೆ ಭಾಗದ ಸಮಸ್ಯೆಯಿಂದ ಐಎಂಎಫ್ ನ ಸಾಲ ನೀಡಿಕೆಯಲ್ಲಿ ಇಳಿಕೆ ಉಂಟಾಯಿತು. ಆದರೆ ವಿಶ್ವಬ್ಯಾಂಕಿನ ವಿವಿಧ ಕಾರಣಗಳಿಂದಾಗಿ ಸಾಲ ನೀಡಿಕೆಯಲ್ಲಿ ಪೂರೈಕೆ ಭಾಗದ ಸಮಸ್ಯೆ ಇದೆ.

ವಿಶ್ವಬ್ಯಾಂಕು ತನ್ನ ಕೇಂದ್ರೀಕರಣವನ್ನು ಏಕೆ ಮೂಲಭೂತ ಸೌಕರ್ಯಗಳಿಂದ ಸಾಮಾಜಿಕ ವಲಯದ ಮೂಲಕ ಬಡತನಕ್ಕೆ ಗುರಿಗೊಳಿಸಿದೆ ಎಂಬುದು ಹೆಚ್ಚಾಗಿ ಸ್ಪಷ್ಟವಾಗಿಲ್ಲ. ಮೆಹಬೂಬ್ ವುಲ್ ಹಕ್ (1970 ರ ವಿಶ್ವಬ್ಯಾಂಕಿನ ನೀತಿ ಯೋಜನೆ ವಿಭಾಗದ ನಿರ್ದೇಶಕರು ಮತ್ತು ಮಾನವ ಅಭಿವೃದ್ಧಿ ವರದಿಯ ಸಂಸ್ಥಾಪಕರು) ರಾಬರ್ಟ್ ಆಶರ್ ಗೆ 1982 ಡಿಸೆಂಬರ್ 3 ರಲ್ಲಿ ವಿಶ್ವಬ್ಯಾಂಕಿನ ಮೌಖಿಕ ಇತಿಹಾಸ ಯೋಜನೆಯ ಭಾಗವಾಗಿ ಸಂದರ್ಶನ ನೀಡಿ, ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅಸಮಾನತೆಯು

ಹೆಚ್ಚಾಗುತ್ತಿದ್ದು ಇದನ್ನು ಬೆಳವಣಿಗೆಯ ಲಾಭಗಳು ಕಡಿಮೆ ಮಾಡುವ ಕಾಳಜಿ ಹೊಂದಿಲ್ಲ. ಬಡವರ ಆದಾಯವನ್ನು ಅವರ ಉತ್ಪಾದಕತೆಯನ್ನು ಉತ್ತಮ ಪಡಿಸುವ ಮೂಲಕ ಹೆಚ್ಚಿಸಲು ಸಾಮಾಜಿಕ ವಲಯ ಮತ್ತು ಜೀವನ ಕ್ರಮದ ಯೋಜನೆಗಳ ಮೂಲಕ ನೇರ ಪಾಲ್ಗೊಳ್ಳುವಿಕೆಯ ಅವಶ್ಯಕತೆ ಇತ್ತು. ಈ ದಿನಗಳಲ್ಲಿ ಇಂತಹ ಕಾಳಜಿಗಳು ಸ್ಥಿರವಾಗಿರಬೇಕು. ಹಾಗೆಯೇ ಅವರು ಭಾರತದ ಹಿಂದಿನ ಸರ್ಕಾರ ತನ್ನ ಆರ್ಥಿಕ ನೀತಿಯಲ್ಲಿ ಬೆಳವಣಿಗೆಯಿಂದ ಸಾಮಾಜಿಕ ಸುರಕ್ಷತಾ ಜಾಲಕ್ಕೆ ಮತ್ತು ಮರು ಹಂಚಿಕೆಯ ಕಡೆಗೆ ಗಮನ ಕೇಂದ್ರೀಕರಿಸಿದ್ದನ್ನು ತಿಳಿಸಿದ್ದಾರೆ.

ಬಡತನವು ಕೆಳಮಟ್ಟದ ಕಾರ್ಮಿಕ ಉತ್ಪಾದಕತೆಗೆ ಮತ್ತೊಂದು ಹೆಸರಾಗಿರುವುದರಿಂದ ಬಾಳಿಕೆಬರುವ ಉತ್ಪಾದಕತೆಯ ಕೇಂದ್ರೀಕರಿಸುವಿಕೆ ವರ್ಗಾಯಿಸಲ್ಪಟ್ಟಿದೆ. ಆದರೆ ಭಾರತದಲ್ಲಿ ಈಗ ತಿಳಿದ ಮಟ್ಟಿಗೆ ಭೌತಿಕ ಮೂಲ ಸೌಕರ್ಯಗಳಲ್ಲಿನ ಕೊರತೆಯು ಬಂಡವಾಳದ ಉತ್ಪಾದಕತೆಯನ್ನು ಕಡಿಮೆಗೊಳಿಸುತ್ತದೆ. ಸಾಮಾಜಿಕ ಮೂಲ ಸೌಕರ್ಯಗಳಲ್ಲಿನ ಕೊರತೆಯು ಶ್ರಮಿಕರ ಉತ್ಪಾದಕತೆಯನ್ನು ಕಡಿಮೆಗೊಳಿಸುತ್ತದೆ. ಸಾಮಾಜಿಕ ಸುರಕ್ಷ ಜಾಲದ ಯೋಜನೆಗಳಂತೆ ಜೀವನಕ್ರಮದ ಯೋಜನೆಗಳು ಸಹ ಪರಿಣಾಮಕಾರಿಯಾಗಬಹುದು. ಆದರೆ ಅವು ಸಣ್ಣ ಉತ್ಪಾದಕರು ಕೈಗಾರಿಕೆ ಮತ್ತು ಜಾಗತಿಕ ಪ್ರಪಂಚದಲ್ಲಿ ಸ್ಪರ್ಧಾಳುವಾಗಿ ಉಳಿಯುವುದು ಕಷ್ಟ ಎಂದು ತಿಳಿದಿವೆ.

ಇತ್ತೀಚಿನ ವರ್ಷಗಳಲ್ಲಿ ಭಾರತದ ಬೆಳವಣಿಗೆ ಕೆಳಗೆ ಇಳಿದಿದೆ. ಇದು ಹೂಡಿಕೆಯಲ್ಲಿ ಆದಂತಹ ಇಳಿಕೆಯಿಂದಲ್ಲ. ಆದರೆ ಮೂಲಭೂತ ಸೌಕರ್ಯಗಳ ಮತ್ತು ಸರ್ಕಾರದ ಸಮಸ್ಯೆಯ ಕಾರಣದಿಂದಾಗಿ ಮತ್ತು ಹೂಡಿಕೆಯಿಂದ ಬಂದಂತಹ



ಉತ್ಪನ್ನದ ಇಳಿಕೆಯಿಂದಾಗಿ ಎಂದು ಹೇಳಬಹುದು.

ಅಭಿವೃದ್ಧಿ ಹೊಂದಿದ ಆರ್ಥಿಕತೆಗಳು, ಪ್ರಮುಖ ಷೇರುದಾರರು ಮತ್ತು ಬ್ರೆಟನ್ ವುಡ್ಸ್ ಸಂಸ್ಥೆಗಳಿಗೆ ಸಂಪನ್ಮೂಲ ಒದಗಿಸುವುದು ಹೆಚ್ಚು ನಿಧಾನವಾಗಿ ಬೆಳದದ್ದು ಮತ್ತು ಅಧಿಕ ವಿತ್ತೀಯ ಕೊರತೆಗಳನ್ನು ಒಡ್ಡಿದ್ದರಿಂದ ಬ್ರೆಟನ್ ವುಡ್ಸ್ ಸಂಸ್ಥೆಗಳಲ್ಲಿ ಸಂಪನ್ಮೂಲದ ಜಿಗಿತ ಮಹತ್ವವಾಗಿತ್ತು. ಅವು ಅಸಮರ್ಥತೆಯನ್ನು ಹೆಚ್ಚು ಮಾಡಿ ಕೊಳ್ಳುತ್ತಿದ್ದವು ಮತ್ತು ಇದು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಅನುಕೂಲ ಒದಗಿಸಬಹುದೆಂದು ತಿಳಿದು ಅವು ಬ್ರೆಟನ್ ವುಡ್ಸ್ ಸಂಸ್ಥೆಗಳ ಸಂಪನ್ಮೂಲಗಳ ವಿಸ್ತರಣೆಗೆ ಇಷ್ಟಪಡುತ್ತಿರಲಿಲ್ಲ. ಭಾರತವು ವಿಶ್ವಬ್ಯಾಂಕಿನಿಂದ ಪೂರ್ಣಗೊಳಿಸಲು ಸಾಧ್ಯವಿಲ್ಲದ ದೊಡ್ಡ ಪ್ರಮಾಣದ ಯೋಜನೆಗಳನ್ನು ಯಾವಾಗಲೂ ಹೊಂದಿತ್ತು. ಆಗಿದ್ದರೂ ಸಹ ಬ್ರೆಟನ್ ವುಡ್ಸ್ ಸಂಸ್ಥೆಗಳು ಅಭಿವೃದ್ಧಿಶೀಲ ರಾಷ್ಟ್ರಗಳ ಅಗತ್ಯತೆಗಳನ್ನು ಪರಿಗಣಿಸಿದ್ದವು.

ಜಿ 20 ರಾಷ್ಟ್ರಗಳ ಇತ್ತೀಚಿನ ಜಾಗತಿಕ ಬಿಕ್ಕಟ್ಟು ಪ್ರತಿಕ್ರಿಯೆ ತಕ್ಷಣ ಐಎಂಎಫ್ ನ ಪಾತ್ರ ಮತ್ತು ಸಂಪನ್ಮೂಲಗಳನ್ನು ವಿಸ್ತರಿಸಿದೆ. ಚಲನಶೀಲ ಮಾರುಕಟ್ಟೆಗಳಲ್ಲಿ ದೊಡ್ಡದಾದ ಮೀಸಲು ಸಂಗ್ರಹವಿರುವುದರಿಂದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳೊಂದಿಗೆ ಅವಶ್ಯಕವಾಗಿ ದ್ವಿಮುಖ ಸಂಬಂಧವನ್ನು ಹೊಂದಲು ಇಚ್ಛಿಸುವುದಿಲ್ಲ. ಚಲನಶೀಲ ಆರ್ಥಿಕತೆಗಳು ಈಗ ಐಎಂಎಫ್ ನ ಸಂಪನ್ಮೂಲಗಳ ಕೊಡುಗೆದಾರ ರಾಷ್ಟ್ರಗಳಾಗಿವೆ. ಅದರಲ್ಲೂ ಚೈನಾ ದೇಶವು ಐಎಂಎಫ್ ನಲ್ಲಿರುವುದಕ್ಕಿಂತ ಹೆಚ್ಚಿನ ವಿದೇಶಿ ಮೀಸಲು ಸಂಗ್ರಹ ಹೊಂದಿದೆ.

ವಿಶ್ವಬ್ಯಾಂಕಿನ ಸಾಲ ನೀಡುವಿಕೆ ವಿಸ್ತರಿಸಿದೆ. ಆದರೆ ತಾತ್ಕಾಲಿಕವಾಗಿ ಬಿಕ್ಕಟ್ಟಿನ ಸಮಯದಲ್ಲಿ ಪ್ರತ್ಯಕ್ಷವಾಗಿ ಖಾಸಗಿ ಬಂಡವಾಳವನ್ನು ಹಿಂಪಡೆಯುವ ಮೂಲಕ ಹೂಡಿಕೆಯ ಅಂತರವನ್ನು ತುಂಬಿದೆ. ಜಿ 20 ರಾಷ್ಟ್ರಗಳು ಸಾಕಷ್ಟು ಮರುಬಂಡವಾಳೀಕರಣದ ಮೂಲಕ ವಿಶ್ವಬ್ಯಾಂಕಿನ ಸಾಲ ಪಡೆಯುವಿಕೆಯ ಸಾಮರ್ಥ್ಯದ ಹೆಚ್ಚಳ ತಂತ್ರವನ್ನು ತಪ್ಪಿಸಿಕೊಂಡವು. ಇದು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಹೆಚ್ಚಿನ ಬೆಳವಣಿಗೆ ದರ



ಸ್ಥಗಿತಗೊಳ್ಳಲು ಕಾರಣವಾಯಿತು. ಇದು ಜಾಗತಿಕ ಆರ್ಥಿಕತೆಯನ್ನು ಕೆಳಮಟ್ಟದ ಬೆಳವಣಿಗೆ ವ್ಯವಹಾರಗಳಿಂದ ಮೇಲ್ಮಟ್ಟಕ್ಕೆ ಎಳೆಯಲು ಬೆಳವಣಿಗೆಯ ಯಂತ್ರವನ್ನು ಒದಗಿಸಿತು. ಆದುದರಿಂದ ಜಿ 20 ರಾಷ್ಟ್ರಗಳ ಕೆಲವು ಪ್ರಯತ್ನಗಳ ಅಡಿಯಲ್ಲಿ ವಿಶ್ವಬ್ಯಾಂಕು ಮೂಲಭೂತ ಸೌಕರ್ಯಗಳಿಗೆ ಹಣಕಾಸು ಒದಗಿಸುವುದು ಸ್ವಾಗತಾರ್ಹವಾಗಿತ್ತು. ಇದು ಈ ಉದ್ದೇಶದ ಪರಿಣಾಮಕಾರಿಗೆ ಸಂಪನ್ಮೂಲಗಳನ್ನು ಒದಗಿಸಲು ಸಾಧನೋಪಾಯವಾಗಲಿಲ್ಲ. ಬ್ರೆಟನ್ ವುಡ್ಸ್ ಸಂಸ್ಥೆಗಳ ಸಂಬಂಧದಲ್ಲಿ ಇಂದು ಅಭಿವೃದ್ಧಿಶೀಲ ರಾಷ್ಟ್ರಗಳು ಎಲ್ಲಿ ನಿಂತಿವೆ?

ಭಾರತವು ಸೇರಿದಂತೆ ಸಾಕಷ್ಟು ಅಭಿವೃದ್ಧಿಶೀಲ ರಾಷ್ಟ್ರಗಳು, ತಮ್ಮ ಬೃಹತ್ ಅಭಿವೃದ್ಧಿಯ ಅದರಲ್ಲೂ ಮೂಲಭೂತ ಅವಶ್ಯಕತೆಗಳಿಂದಾಗಿ ಇಂದು ವಿಶ್ವಬ್ಯಾಂಕಿನ ಬೃಹತ್ ಸಾಲಗಾರ ರಾಷ್ಟ್ರಗಳಾಗಿ ಉಳಿದುಕೊಂಡಿವೆ. ಹಲವು ಅಭಿವೃದ್ಧಿಶೀಲ ರಾಷ್ಟ್ರಗಳು ಭೌತಿಕ ಮೂಲಸೌಕರ್ಯಗಳು ಮತ್ತು ಸಾಮಾಜಿಕ ಸೇವೆಗಳಲ್ಲಿ ಸಾರ್ವಜನಿಕ ಬಂಡವಾಳದ ಹೂಡಿಕೆ ಮುಂದುವರಿದಿದ್ದರೂ ಈ ರಾಷ್ಟ್ರಗಳಿಗೆ ಬಂಡವಾಳದ ತರಂಗ ಮೂಲಭೂತವಾಗಿ ಖಾಸಗೀ ಸ್ವರೂಪದ ಬಂಡವಾಳವಾಗಿದೆ. ಆಗಿದ್ದರೂ ಅವುಗಳು ದೇಶಿಯ ಸಾಲವನ್ನು ತೆಗೆದುಕೊಳ್ಳುವ ಮೂಲಕ ಅವುಗಳ ಅಭಿವೃದ್ಧಿ ಉದ್ದೇಶಗಳನ್ನು ಸಾಧಿಸಬಹುದು. ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಸಮನ್ವಯತೆ ಮತ್ತು ಗಡಿರೇಖೆ ಮೂಲಭೂತ ಯೋಜನೆಗಳಲ್ಲಿ ಇನ್ನೂ ಕೂಡ ಸಂದಿಗ್ಧತೆಯ ಪಾತ್ರವಹಿಸಿದೆ. ಪ್ರಮುಖ ಚಲನಶೀಲ ಮಾರುಕಟ್ಟೆ ಆರ್ಥಿಕತೆಗಳಲ್ಲಿ ದೇಶಿಯ ಮೂಲಗಳಿಗೆ ವಿಶ್ವಬ್ಯಾಂಕಿನ ಸಾಲ ಪಡೆಯುವಿಕೆಯ ಪ್ರಮಾಣವು ಸೀಮಾಂತದಲ್ಲಿ ಉಳಿಯುವ ನಿರೀಕ್ಷೆ ಇದೆ. ಇದು ಏಕೆಂದರೆ ಐಎಂಎಫ್ ನ ಪ್ರಮಾಣದಲ್ಲಿ ವಿಶ್ವಬ್ಯಾಂಕಿನ ಸಂಪನ್ಮೂಲಗಳನ್ನು ವೃದ್ಧಿಸುವುದು ಜಿ 20

ರಾಷ್ಟ್ರಗಳ ಒಂದು ಸಣ್ಣ ಅಪೇಕ್ಷೆಯಾಗಿದೆ. ಅವುಗಳ ದೃಷ್ಟಿಯಲ್ಲಿ ಇದು ರಭಸವಾಗಿ ಬೆಳೆಯುತ್ತಿರುವ ಬೃಹತ್ ಚಲನಶೀಲ ಮಾರುಕಟ್ಟೆಗಳಿಗೆ ಹರಿವು ಇರಬಹುದು. ಈ ಆರ್ಥಿಕತೆಗಳು ವಿತ್ತೀಯವಾಗಿ ಸಾಂಪ್ರದಾಯಿಕ ಕೊಡುಗೆದಾರರಿಗಿಂತ ಹೆಚ್ಚು ಉತ್ತಮ ಸ್ಥಾನದಲ್ಲಿವೆ ಮತ್ತು ಸಾಕಷ್ಟು ಮೀಸಲನ್ನು ಹೊಂದಿವೆ. ಮತ್ತೊಂದರಲ್ಲಿ ಭಾರತವು ಒಳಗೊಂಡಂತೆ ಚಲನಶೀಲ ಮಾರುಕಟ್ಟೆಗಳ ಆರ್ಥಿಕತೆಗಳು ಬೃಹತ್ ಅಭಿವೃದ್ಧಿ ಅವಶ್ಯಕತೆಗಳನ್ನು ಹೊಂದಿರುವುದರಿಂದ ಬ್ಯಾಂಕಿನ ಸಂಪನ್ಮೂಲ ಕ್ರೋಢೀಕರಣ ಪ್ರಯತ್ನದಲ್ಲಿ ಪ್ರಾಮುಖ್ಯವಾದ ಕೊಡುಗೆದಾರರಾಗಿ ಇರಲು ಇಚ್ಛಿಸುತ್ತಿಲ್ಲ. ಇದು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸರ್ಕಾರಗಳಿಗೆ ಕಷ್ಟಕರವಾಗಬಹುದು.

ಇದೇ ವಾದವು ಐಎಂಎಫ್ ನ ಸಂಪನ್ಮೂಲಗಳಿಗೆ ನಮ್ಮ ಕೊಡುಗೆಗೂ ಅನ್ವಯಿಸುತ್ತದೆ. ಚಲನಶೀಲ ಮಾರುಕಟ್ಟೆ ಆರ್ಥಿಕತೆಗಳಿಗಿಂತ ಅಧಿಕ ತಲಾ ಆದಾಯ ಹೊಂದಿರುವ ಅಭಿವೃದ್ಧಿ ಹೊಂದಿದ ಯುರೊ ವಲಯದ ರಾಷ್ಟ್ರಗಳಿಗೆ ಐಎಂಎಫ್‌ನ ಸಂಪನ್ಮೂಲಗಳು ಬಳಕೆಯಾಗಿರುವುದರಿಂದ ಮೇಲಿನ ವಾದವು ಅನ್ವಯವಾಗುತ್ತದೆ. ಭಾರತವು ವಿದೇಶಿ ನಾಣ್ಯದ ಮೀಸಲನ್ನು ಬೃಹತ್ ಪ್ರಮಾಣದಲ್ಲಿ ಹೊಂದಿದೆ. ದೀರ್ಘಾವಧಿಯಲ್ಲಿ ಭಾರತದ ನಿವ್ವಳ ಬಂಡವಾಳದ ಒಳಹರಿವು ಚಾಲ್ತಿ ಖಾತೆ ಕೊರತೆಗಿಂತ ಹೆಚ್ಚಾಗುವ ನಿರೀಕ್ಷೆ ಇದೆ. ಭಾರತವು ಬಂಡವಾಳದ ಒಳಹರಿವನ್ನು ಪಡೆದುಕೊಳ್ಳುವ ಪ್ರಮುಖ ರಾಷ್ಟವಾಗಲಿದೆ ಎಂಬ ನಿರೀಕ್ಷೆ ಇದೆ. ಸಂಕ್ಷಿಪ್ತ ಪಥದಲ್ಲಿ ಭಾರತವು ಐಎಂಎಫ್‌ನ ಒಂದು ಪ್ರಮುಖ ಕೊಡುಗೆದಾರ ರಾಷ್ಟ್ರವಾಗಲಿದೆ ಎಂಬುದಾಗಿದೆ. ಈಗಾಗಲೇ ಕೆಲವು ವರ್ಷಗಳಿಂದ ಭಾರತವು ಇತರೇ ಹಲವು ಚಲನಶೀಲ ಮಾರುಕಟ್ಟೆಗಳ ಆರ್ಥಿಕತೆಗಳೊಂದಿಗೆ ನಿರ್ದಿಷ್ಟ ಮೊತ್ತವನ್ನು ಐಎಂಎಫ್ ಗೆ ನೀಡಲು ನಿಗದಿಯಾಗಿದೆ. ಆದುದರಿಂದ ಭಾರತವು ಸೇರಿದಂತೆ ಹೆಚ್ಚಿನ ಬೃಹತ್ ಅಭಿವೃದ್ಧಿಶೀಲ ರಾಷ್ಟ್ರಗಳು ಎರಡೂ ಬ್ರೆಟನ್ ವುಡ್ಸ್ ಸಂಸ್ಥೆಗಳಲ್ಲಿ ತುಂಬ ವಿಭಿನ್ನವಾಗಿ ಕಾಲಿಡುವ ನಿರೀಕ್ಷೆ ಇದೆ. ಮತದಾನದ ಅಧಿಕಾರದಲ್ಲಿ ಸಮಾನತೆ ಮತ್ತು ಹಿರಿಯ ಕಾರ್ಯ ನಿರ್ವಾಹಕ ಅಧಿಕಾರದಂತಹ ಆಡಳಿತಾತ್ಮಕ ವಿಷಯಗಳಲ್ಲಿ ಎಲ್ಲಾ ಅಭಿವೃದ್ಧಿಶೀಲ ರಾಷ್ಟ್ರಗಳಿಗೂ ಪ್ರಮುಖವಾದವುಗಳು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಸಂಘಟನೆಯ ವಿಷಯದಲ್ಲಿ ಆಡಳಿತಾತ್ಮಕ ಕಾಳಜಿ ಮಾತ್ರ ಹೆಚ್ಚಾಗಿ ಇದೆ. ಚಲನಶೀಲ ಮಾರುಕಟ್ಟೆಗಳ ಆರ್ಥಿಕತೆಗಳಲ್ಲಿ ಹೆಚ್ಚಿನ ವಿಶ್ವಾಸ ಮೂಡುವಂತಹ ರೀತಿಯಲ್ಲಿ ಐಎಂಎಫ್ ತನ್ನ ಆಡಳಿತಾತ್ಮಕ ಸುಧಾರಣೆಯನ್ನು ತರಬೇಕಾಗಿದೆ.

ವಿಶ್ವಬ್ಯಾಂಕಿನ ವಿಚಾರದಲ್ಲಿ ಬಹುತೇಕ ಅಭಿವೃದ್ಧಿಶೀಲ ರಾಷ್ಟ್ರಗಳು ತಮ್ಮ ದೇಶದ ನಿರ್ದಿಷ್ಟ(ಅ) ದ್ವಿಮುಖ ಕೇಂದ್ರೀಕರಣಕ್ಕೆ ಹೊಸ ಯೋಜನೆಗಳ ಮಂಜೂರು, ಯೋಜನಾ ನಿರ್ವಹಣೆಯ ವಿಷಯಗಳಿಂದಾಗಿ ಮುಂದುವರಿಯಬಹುದು. ಐಎಂಎಫ್ ನ ವಿಚಾರದಲ್ಲಿ ಈ ರಾಷ್ಟ್ರಗಳು ಬಹುಮುಖ ವ್ಯವಹಾರದಲ್ಲಿ ತೊಡಗುವ ಅವಶ್ಯಕತೆ ಇದೆ. ಆದುದರಿಂದ ಬ್ರೆಟನ್ ವುಡ್ಸ್ ನ ಸಂಸ್ಥೆಗಳ ಮೇಲ್ವಿಚಾರಣೆ ಮತ್ತು ನೀತಿ ರಚನೆಗಳು ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಕೇಂದ್ರೀಕರಿಸಲ್ಪಟ್ಟಿದ್ದವು. ಏಕೆಂದರೆ ಆ ರಾಷ್ಟ್ರಗಳು ಪ್ರಮುಖ ಸಾಲ ಪಡೆಯುವ ರಾಷ್ಟ್ರಗಳಾಗಿದ್ದವು.

ಐಎಂಎಫ್ ನ ಸಾಲದ ಖಾತೆಯಲ್ಲಿ ಯುರೋಪ್ ರಾಷ್ಟ್ರಗಳ ಪ್ರಭಾವ ಹೆಚ್ಚಾಗಿರುವ ಕಾರಣ ಐಎಂಎಫ್ ನ ವಿಚಾರದಲ್ಲಿ ಇದು ಬದಲಾಗುವ ಅವಶ್ಯಕತೆ ಇದೆ. ಪಾವತಿಶಿಲ್ಕಿನ ಸಮಸ್ಯೆಗಳು, ವಿತ್ತೀಯಕೊರತೆಗಳು, ಸಾಂಪ್ರದಾಯಿಕ ಅಭಿವೃದ್ಧಿಶೀಲ ರಾಷ್ಟ್ರಗಳ ವಿಚಾರಗಳು, ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಹೆಚ್ಚಾಗಿ ಶಿಸ್ತು ನೋಡಿಕೊಳ್ಳುವ ಅವಶ್ಯಕತೆಯಾಗಬಹುದು. ಈಗ ಅವುಗಳು ಅಭಿವೃದ್ಧಿಶೀಲ ರಾಷ್ಟ್ರಗಳಾಗಿ ರಚನಾತ್ಮಕ ಹೊಂದಾಣಿಕೆ ಮತ್ತು ಸುಧಾರಣೆಯ ಅವಶ್ಯಕತೆ ಹೆಚ್ಚಾಗಬೇಕು. ಭಾರತವು ಒಳಗೊಂಡಂತೆ ಬ್ರಿಕ್ಸ್ ನ ರಾಷ್ಟ್ರಗಳು ಜಿ



20 ರಾಷ್ಟ್ರಗಳಲ್ಲಿ ಈ ತಂತ್ರಗಳನ್ನು ತರಲು ಪ್ರಾರಂಭಿಸಿವೆ. ಚಲನಶೀಲ ಮಾರುಕಟ್ಟೆ ಆರ್ಥಿಕತೆಗಳು ಸಹ ಮೇಲ್ವಿಚಾರಣೆ, ಜಾಗತಿಕ ಮತ್ತು ಪ್ರಾದೇಶಿಕ ಬೆಳವಣಿಗೆಯ ನಕ್ಷೆ ಮುಂತಾದ ವಿಷಯಗಳಲ್ಲಿ ಹೆಚ್ಚಾಗಿ ತೊಡಗಿಕೊಳ್ಳುವ ಅವಶ್ಯಕತೆ ಇದೆ. ಇವೆಲ್ಲವು ನಿಧಿಯ ಸಂಪನ್ಮೂಲಗಳ ಅವಶ್ಯಕತೆ ಮತ್ತು ಅಭಿವೃದ್ಧಿಯನ್ನು ಫಲದೊರಕಿಸುವಂತಾಗಬೇಕು. ಈ ಕೇಂದ್ರೀಕರಣ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳೆರಡನ್ನು ಸೇರಲ್ಪಡಬೇಕು.

ಜಾಗತಿಕ, ರಾಜಕೀಯ, ಆರ್ಥಿಕತೆಯ ಬದಲಾವಣೆಗಳಿಗೆ ತಕ್ಕಂತೆ ಬ್ರೆಟನ್ ವುಡ್ಸ್ ಸಂಸ್ಥೆಗಳ ಆಡಳಿತದ ರಚನೆಯು ಬದಲಾಗಿಲ್ಲ. ಬ್ರಿಕ್ಸ್ ರಾಷ್ಟ್ರಗಳ ಮತದಾನದ ಪಾಲು, ಆರ್ಥಿಕ ಅಧಿಕಾರದ ಏರಿಕೆ, ಈಗ ತಾನೇ ಅವುಗಳ ಜಾಗತಿಕ ಜಿಡಿಪಿಯಲ್ಲಿನ ಅರ್ಧಕ್ಕಿಂತ ಹೆಚ್ಚಿನ ಪಾಲು ಮತ್ತು ಕೊಂಡುಕೊಳ್ಳುವ ಸಮತೆಯಲ್ಲಿ ಕೇವಲ ಮೂರಕ್ಕೆ ಮೇಲಿರುವುದು – ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿಗಾಗಿ ಸಂಘಟನಾ ರಾಷ್ಟ್ರಗಳು ಚಲನಶೀಲ ಮಾರುಕಟ್ಟೆ ಆರ್ಥಿಕತೆಗಳೊಂದಿಗೆ ಮಾಲೀಕತ್ವದ ಪಾಲು ಹೊಂದಲು ಇಷ್ಟವಿಲ್ಲದಿರುವುದು – ಈ ಅಂಶಗಳು ಬ್ರೆಟನ್ ವುಡ್ಸ್ ಪ್ರಸ್ತುತತೆ ಕಳೆದುಕೊಳ್ಳುತ್ತಿದೆ ಎಂದು ತೋರಿಸುತ್ತಿವೆ. ಬ್ರೆಟನ್ ವುಡ್ಸ್ ಅವಳಿ ಸಂಸ್ಥೆಗಳು ಸ್ಪಷ್ಟ ಪಡಿಸುವಂತೆ ಚಲನಶೀಲ ಮಾರುಕಟ್ಟೆಗಳು ಅವುಗಳ ಸ್ವಯಂ ಹೆಚ್ಚಳದ ಉಳಿತಾಯಗಳಿಗೆ (ಚಿಯಾಂಗ್ ಮಯ್ ಇನಿಸಿಯಟಿವ್), ಪೂರ್ವ ಏಷ್ಯದಲ್ಲಿನ ಏಷಿಯನ್ ಮೂಲಸೌಕರ್ಯಗಳ ಬಂಡವಾಳ ಬ್ಯಾಂಕು, ಬ್ರಿಕ್ಸ್ ರಾಷ್ಟ್ರಗಳ ನ್ಯೂಡೆವಲಪ್‌ಮೆಂಟ್ ಬ್ಯಾಂಕು ಮತ್ತು ಕಾಂಟಿಜೆನ್ಸಿ ರಿಸರ್ವ್ ಆರೆಂಜ್‌ಮೆಂಟ್ ಗಳಂತಹ ಪರ್ಯಾಯ ಸಂಸ್ಥೆಗಳನ್ನು ತರಲು ಪ್ರಯತ್ನಿಸಬೇಕು. ❑

# ಆಡಳಿತ ಸುಧಾರಣೆಗೆ ಡಿಜಿಟಲ್ ಇಂಡಿಯಾ

* ಯೋಗೇಶ್ ದ್ವಿವೇದಿ
** ನೃಪೇಂದ್ರ ರಾಣಾ
*** ಆಂಟೋನಿಸ್ ಸಿಮಿಂತಿರಸ್
**** ಬನಿತಾ ಲಾಲ್
ಕನ್ನಡಕ್ಕೆ : ಡಾ. ಶ್ರೀಪಾದ ಭಟ್



**ಹೊಸ ಆರ್ಥಿಕತೆಯಲ್ಲಿ ಯೋಜನೆ ನಿಗದಿತ ಗುರಿ ಸಾಧಿಸಿದರೆ ಭಾರತ ಭೌಗೋಳಿಕ ಸ್ಪರ್ಧೆಗೆ ಅತ್ಯಂತ ಅನಿವಾರ್ಯವಾದ ಸುಸ್ಥಿರ ಗುಣಾತ್ಮಕ ರಾಷ್ಟ್ರೀಯ ಅಭಿವೃದ್ಧಿ ಸಾಧಿಸುವ ಖಚಿತ ಸ್ಥಾನವನ್ನು ಪಡೆಯುತ್ತದೆ. ಡಿಐಪಿಯ ಮಹತ್ವಾಕಾಂಕ್ಷೆ ಹೇಳುವಂತೆ ಭಾರತದ ಭವಿಷ್ಯ ಉಜ್ವಲವಾಗಿದೆ.**

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ಐಸಿಟಿ)ಗಳಿಂದ ಸಶಕ್ತ ಸಾರ್ವಜನಿಕ ಆಡಳಿತ ಸುಧಾರಣೆಗೆ ವಿವಿಧ ಭಾಗೀದಾರರಿಗೆ ಲಾಭವನ್ನೂ ಅವಕಾಶವನ್ನೂ ಒದಗಿಸುವ ಸಾಮರ್ಥ್ಯವಿದೆ ಎಂದು ವಾದಿಸಲಾಗುತ್ತದೆ. ದಕ್ಷತೆ; ಜವಾಬ್ದಾರಿ; ಪರಿಣಾಮಕಾರಿ ಕಾರ್ಯನಿರ್ವಹಣೆ; ಪಾರದರ್ಶಕತೆಯನ್ನು ತರುವ, ಆಡಳಿತಶಾಹಿಯನ್ನು ಕಡಿಮೆಮಾಡುವುದು; ಉತ್ತಮ ಸಂವಹನ ಹಾಗೂ ಸಂಯೋಜನೆ ರೂಪಿಸುವುದು ಹಾಗೂ ಬಹಳ ಮುಖ್ಯವಾಗಿ ಪ್ರಜಾಕೇಂದ್ರಿತ ಐಸಿಟಿ ಶಕ್ತ ಸರ್ಕಾರಿ ಸೇವೆಗಳನ್ನು ಎಲ್ಲಿಂದ ಯಾವಾಗಲಾದರೂ ಪಡೆಯಲು ಅನುಕೂಲ ಮಾಡಿಕೊಟ್ಟು ಸಾರ್ವಜನಿಕ ಸಂಘಟನೆಗಳಲ್ಲಿ ಪರಿವರ್ತನೆ ತರುವುದು ಈ ಉದಾಹರಣೆಗಳಲ್ಲಿ ಸೇರಿದೆ

ಇ ಆಡಳಿತ ಸ್ವರೂಪದಲ್ಲಿ ಇಂಥ ಸುಧಾರಣೆಯನ್ನು ಭಾರತ1990ರ ದಶಕದ ಕೊನೆಯಲ್ಲಿ ಆರಂಭಿಸಿದರೂ 2006ರಲ್ಲಿ ಜಾರಿಯಾದ ರಾಷ್ಟ್ರೀಯ ಇ ಆಡಳಿತ ಯೋಜನೆ (ಎನ್‌ಇಜಿಪಿ)ಯ ಮೂಲಕ ಮತ್ತಷ್ಟು ವೇಗ ಪಡೆಯಿತು. ಇಷ್ಟಾದರೂ ಭಾರತ ಜಾಗತಿಕ ಇ ಆಡಳಿತ ಅಭಿವೃದ್ಧಿ ಸೂಚಿ (ವಿಶ್ವಸಂಸ್ಥೆಯ ಇ ಆಡಳಿತ ಸಮೀಕ್ಷೆ, 2014)ಯಲ್ಲಿ 117 ದೇಶಗಳಿಗಿಂತ ಹಿಂದಿದೆ. ಭಾರತ ನ್ಯಾಯಸಮ್ಮತ ಮಾಹಿತಿ ಸಮಾಜ ಹಾಗೂ ಜ್ಞಾನಾಧಾರಿತ ಅರ್ಥವ್ಯವಸ್ಥೆಯಾಗುವ ಪ್ರಯತ್ನಕ್ಕೆ ಅಡ್ಡಿಯಾಗಿರುವ ಅನೇಕ ಕಾರಣಗಳನ್ನು ಗುರುತಿಸಲಾದ ಕಾರಣಗಳಲ್ಲಿ–ಕೇಂದ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟಗಳ ಐಸಿಟಿ ಆಧಾರಿತ ವ್ಯವಸ್ಥೆಯಲ್ಲಿನ ವಿಘಟನೆ; ವ್ಯವಸ್ಥೆಯಲ್ಲಿನ ಏಕಸೂತ್ರತೆಯ ಕೊರತೆ; ಕೊನೆಯ ಹಂತದಲ್ಲಿನ ಅಡಚಣೆ; ಸಾಕಷ್ಟು ಸಂಖ್ಯೆಯಲ್ಲಿಲ್ಲದ ಸ್ಥಳೀಯ ಸಾಮಾನ್ಯ ಸೇವೆ ಕೇಂದ್ರ(ಸಿಎಸ್‌ಸಿ)ಗಳು; ಇ ಆಡಳಿತ ಸೇವೆಗಳ ಬಳಕೆ, ಲಭ್ಯತೆ ಮತ್ತು ಜಾಗೃತಿಯ ಕೊರತೆ; ಡಿಜಿಟಲ್ ಅನಕ್ಷರತೆ; ಪ್ರಾದೇಶಿಕ ಭಾಷೆಗಳಲ್ಲಿ ಇ ಆಡಳಿತ ಸೇವೆಯ ಅಲಭ್ಯತೆ; ನಂಬಿಕೆಯ ಕೊರತೆ ಅಂತೆಯೇ ಭದ್ರತೆ ಹಾಗೂ ಖಾಸಗಿತನದ ಕಾಳಜಿ ಮೊದಲಾದವು ಸೇರಿವೆ.

ಇದಕ್ಕೆ ಪೂರಕವಾಗಿ ಈ ದಾಖಲೆ ಅನೇಕ ಶಿಫಾರಸುಗಳನ್ನು ಕೂಡ ಉಲ್ಲೇಖಿಸಿತ್ತು. ಇವುಗಳಲ್ಲಿ–ಈಗಾಗಲೇ ಇರುವ ವ್ಯವಸ್ಥೆಯ ನಕಾಶೆ ತಯಾರಿ; ಹೊಸ ವ್ಯವಸ್ಥೆಗಳನ್ನು ಕ್ರೋಢೀಕರಿಸುವುದು ಹಾಗೂ ಏಕಸೂತ್ರತೆಗೆ ತರುವುದು; ಸೇವೆಯೊದಗಿಸಲು ಮೊಬೈಲ್ ಬಳಕೆ; ಧ್ವನಿ ಆಧರಿತ ಮೊಬೈಲ್ ಆನ್ವಯಿಕತೆಯ ಅಭಿವೃದ್ಧಿ; ಸಾಕಷ್ಟು ಐಸಿಟಿ ಕೌಶಲವುಳ್ಳ ಜನರನ್ನು ಸಿದ್ಧಗೊಳಿಸಲು ಪೂರಕ ವ್ಯವಸ್ಥೆಯ ಏರ್ಪಾಟು; ಎಲ್ಲ ಗ್ರಾಮೀಣ ಪ್ರದೇಶಗಳನ್ನು ತಲುಪುವಂತೆ ಸಾಕಷ್ಟು ಸಿಎಸ್‌ಸಿಗಳ ಸ್ಥಾಪನೆ; ಪ್ರಾದೇಶಿಕ ಭಾಷೆಗಳಲ್ಲಿ ಇ ಆಡಳಿತ ಸೇವೆ ನೀಡುವುದು; ಭಾರತೀಯ ಸಂದರ್ಭಕ್ಕೆ ಸರಿಹೊಂದುವಂತೆ ಐಸಿಟಿ ಆಧಾರಿತ ಸಾರ್ವಜನಿಕ ಪರಿಣಾಮಕಾರಿ ಸೇವೆ ಒದಗಿಸಲು

* ಮುಖ್ಯಸ್ಥರು, ಮ್ಯಾನೇಜ್‌ಮೆಂಟ್ ಮತ್ತು ಸಿಸ್ಟಂಸ್ ವಿಭಾಗ ** ಪ್ರಾಧ್ಯಾಪಕರು, *** ಪ್ರಾಧ್ಯಾಪಕರು, ಸ್ವಾನ್‌ಸೀ ವಿಶ್ವವಿದ್ಯಾನಿಲಯ, ಯುಕೆ
* email : y.k.dwivedi@swansea.ac.uk ** email : n.p.rana@swansea.ac.uk *** email : a.c.simintiras@swansea.ac.uk
**** ಹಿರಿಯ ಪ್ರಾಧ್ಯಾಪಕಿ, ನಾಟಿಂಗ್‌ಹ್ಯಾಮ್ ಟ್ರೆಂಟ್ ವಿವಿ, ಯುಕೆ email : banita.lal@ntu.ac.uk

ಸಾಧ್ಯವಾಗುವಂತೆ ಜನರಲ್ಲಿ ನಂಬಿಕೆ ಹಾಗೂ ಭದ್ರತೆಯ ಭಾವನೆ ಉಂಟಾಗುವ ವಾತಾವರಣ ನಿರ್ಮಿಸುವ ಅಗತ್ಯಗಳನ್ನು ಹೇಳಲಾಗಿತ್ತು.

ಈಚೆಗೆ ಭಾರತ ಸರ್ಕಾರ ಅನುಕರಣೀಯ ಎನಿಸುವ ಹೊಸ ಉಪಕ್ರಮ ಘೋಷಿಸಿದ್ದು ಇದರಲ್ಲಿ ಮೇಲೆ ಹೇಳಿದ ಅಂಶಗಳಲ್ಲಿ ಬಹುತೇಕ ಸಂಗತಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಸರಿಯಾಗಿ ಜಾರಿಯಾದರೆ ಭಾರತದ ಸಾಮಾಜಿಕ, ಆರ್ಥಿಕ ಅಭಿವೃದ್ಧಿ ಹಾಗೂ ಸಾರ್ವಜನಿಕ ಆಡಳಿತ ಸುಧಾರಣೆಯಲ್ಲಿ ಗಮನಾರ್ಹ ಮತ್ತು ಗುಣಾತ್ಮಕ ಪರಿಣಾಮ ಬೀರಬಲ್ಲ 'ಡಿಜಿಟಲ್ ಭಾರತ ಕಾರ್ಯಕ್ರಮ' ಎಂದು ಕರೆಯಲಾದ ಈ ಯುಗಪ್ರವರ್ತಕ ಪ್ರಯತ್ನದ ಸ್ಥೂಲ ನೋಟವನ್ನು ಈ ಲೇಖನ ಒದಗಿಸುತ್ತದೆ.

### ಡಿಜಿಟಲ್ ಭಾರತ ರೂಪರೇಖೆ

ಡಿಜಿಟಲ್ ಇಂಡಿಯಾ ಕಾರ್ಯಕ್ರಮ (ಡಿಐಪಿ) ಎಂಬುದು ಭಾರತವನ್ನು ಡಿಜಿಟಲ್ ಸಶಕ್ತ ಹಾಗೂ ಸಶಕ್ತ ಮಾಹಿತಿ ಸಮಾಜ ಮತ್ತು ಜ್ಞಾನಾಧಾರಿತ ಆರ್ಥಿಕ ವ್ಯವಸ್ಥೆಯಾಗಿ ಪರಿವರ್ತಿಸುವ ಗುರಿಯುಳ್ಳ ಅಂತರ್ ಸಚಿವಾಲಯ ಪ್ರಯತ್ನವಾಗಿದೆ. ಈ ಕಾರ್ಯಕ್ರಮವು ಭಾರತ ಸರ್ಕಾರದ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆ (ಡಿಇಐಟಿವೈ) ಯೋಜಿಸಿದ, ಬೃಹತ್ತಾದ, ಹಿಂದಿನ ಎನ್‌ಇಜಿಪಿ ಯೋಜನೆಯ ವಿಸ್ತೃತ ರೂಪದಂತೆ ಕಾಣಿಸುತ್ತದೆ. ಇದನ್ನು ಯಶಸ್ವಿಯಾಗಿ ಜಾರಿಗೊಳಿಸಲು ಒಂದು ಲಕ್ಷಕೋಟಿ ರೂ. ಗಳನ್ನು ಮೀಸಲಾಗಿಡಲಾಗಿದೆ. 20 ಆಗಸ್ಟ್ 2014ರಂದು ಸಚಿವ ಸಂಪುಟ ಡಿಐಪಿಯನ್ನು ಅನುಮೋದಿಸಿದ್ದು 2018ರ ವೇಳೆಗೆ ಯೋಜನೆಯನ್ನು ಪೂರ್ಣಗೊಳಿಸುವ ಮಹತ್ವಾಕಾಂಕ್ಷಿ ಗುರಿ ಹಾಕಿದೆ. ಆಡಳಿತ ಪ್ರಕ್ರಿಯೆಯನ್ನು ಕ್ರಾಂತಿಕಾರಕವಾಗಿ ಮರುವಿನ್ಯಾಸಗೊಳಿಸುವುದು ಹಾಗೂ ಡಿಜಿಟೈಸ್ ಮಾಡುವುದು, ವಿದ್ಯುನ್ಮಾನದ ಮೂಲಕ ಸರ್ಕಾರಿ ಸೇವೆ ಲಭಿಸುವಂತೆ ಎಲ್ಲರನ್ನೂ ತಲುಪುವಂತೆ ಮಾಡುವುದು, ಅಂತೆಯೇ ಹೊಸ ಔದ್ಯೋಗಿಕ ಪೀಳಿಗೆಯನ್ನು ರೂಪಿಸುವಂತೆ ಮಾಡುವುದು ಆಮೂಲಾಗ್ರ ಪರಿವರ್ತನೆಯ ಈ ಪ್ರಯತ್ನದ ಪ್ರಮುಖ ಗುರಿಯಾಗಿದೆ.

**ಚಿತ್ರ : 1 – ಡಿಜಿಟಲ್ ಇಂಡಿಯಾ ಕಾರ್ಯಕ್ರಮ**




ಡಿಐಪಿಯ ಮುನ್ನೋಟ ಮೂರು ಮುಖ್ಯ ಕ್ಷೇತ್ರಗಳ ಸುತ್ತ ಕೇಂದ್ರಿತವಾಗಿದೆ: 1. ಪ್ರತಿಯೊಬ್ಬ ನಾಗರಿಕನಿಗೂ ಉಪಯುಕ್ತವಾಗುವ ಮೂಲಸೌಕರ್ಯ; 2. ಕೇಳಿದ ಕೂಡಲೇ ಆಡಳಿತ ಹಾಗೂ ಸೇವೆ; ಹಾಗೂ 3. ಸಶಕ್ತ ಡಿಜಿಟಲ್ ನಾಗರಿಕರನ್ನು ರೂಪಿಸುವುದು (ಡಿಐ ಪ್ರಸ್ತುತಿ, 2014; ಪಿಐಬಿ 2014).ಚಿತ್ರ 1 ರಲ್ಲಿ ಈ ಮೂರು ಕ್ಷೇತ್ರಗಳನ್ನು ಚಿತ್ರಿಸಲಾಗಿದ್ದು, ಮುಂದೆ ಇನ್ನಷ್ಟು ವಿವರಿಸಲಾಗಿದೆ.

ಡಿಜಿಟಲ್ ಸಶಕ್ತ ನಾಗರಿಕರನ್ನು ಸಿದ್ಧಗೊಳಿಸುವ ದೃಷ್ಟಿಯಿಂದ ಎಲ್ಲಾ ಗ್ರಾಮ ಪಂಚಾಯ್ತಿ ಮಟ್ಟದಲ್ಲೂ ಅತಿವೇಗದ ಅಂತರಜಾಲ ಸಂಪರ್ಕ ಒದಗಿಸುವುದು; ಎಲ್ಲ ನಾಗರಿಕರಿಗೂ ಮಹತ್ವದ ಡಿಜಿಟಲ್ ಗುರುತನ್ನು (ಅಂದರೆ ಅನನ್ಯ, ಜೀವಮಾನ ಪರ್ಯಂತ, ಆನ್‌ಲೈನ್ ಹಾಗೂ ಅಧಿಕೃತವಾದ) ನೀಡುವುದು; ಸಮಾಜೋ–ಆರ್ಥಿಕ ಸಬಲೀಕರಣಕ್ಕಾಗಿ ಮೊಬೈಲ್ ಹಾಗೂ ಬ್ಯಾಂಕ್‌ಖಾತೆಗಳ ಮೂಲಕ ಡಿಜಿಟಲ್ ಹಾಗೂ ಆರ್ಥಿಕ ಅವಕಾಶದಲ್ಲಿ ಎಲ್ಲರೂ ಪಾಲ್ಗೊಳ್ಳುವಂತೆ ಮಾಡುವುದು; ಸ್ಥಳೀಯವಾಗಿರುವ, ಬಹುಕಾರ್ಯ ನಿರ್ವಹಿಸಿ ನಾಗರಿಕರಿಗೆ ಸೇವೆ ನೀಡುವಂತೆ ಸಿಎಸ್‌ಸಿಗಳು ಸುಲಭವಾಗಿ ಲಭ್ಯವಾಗುವಂತೆ ಅವಕಾಶ ಒದಗಿಸುವುದು; ಸಾರ್ವಜನಿಕ ಸೇವಾಜಾಲದಲ್ಲಿ ಮಾಹಿತಿ ಹಂಚಿಕೊಳ್ಳುವಂತೆ ಖಾಸಗಿ ಅವಕಾಶ ದೊರಕಿಸುವುದು; ವಿದ್ಯುನ್ಮಾನ ಸೇವೆಗಳ ವ್ಯಾಪಕ ಬಳಕೆ ಮತ್ತು ಅಳವಡಿಕೆಗೆ ಅನುವು ಮಾಡಿಕೊಡುವ ಸುರಕ್ಷಿತ ಮತ್ತು ಸುಭದ್ರ ಸೈಬರ್ ವ್ಯವಸ್ಥೆ ಸ್ಥಾಪಿಸುವುದು– ಇವೆಲ್ಲ ಪ್ರತಿಯೊಬ್ಬ ನಾಗರಿಕನಿಗೂ ಉಪಯುಕ್ತವಾಗುವ ಮೂಲಸೌಕರ್ಯ ನೀಡುವ ಮೊದಲನೆಯ ಪ್ರಮುಖ ಕ್ಷೇತ್ರದಲ್ಲಿ ಸೇರಿವೆ.

ಎರಡನೆಯ ಪ್ರಮುಖ ಕ್ಷೇತ್ರವಾದ ಕೇಳಿದ ಕೂಡಲೇ ಆಡಳಿತ ಹಾಗೂ ಸೇವೆಯಲ್ಲಿ ಕೆಳಕಂಡ ಸಂಗತಿಗಳು ಸೇರುತ್ತವೆ: ವಿವಿಧ ಭಾಗೀದಾರರಿಗೆ ವಿವಿಧ ಸರ್ಕಾರಿ ಸೇವೆಗಳನ್ನು ಸುಲಭವಾದ ಏಕಗವಾಕ್ಷಿ ವಿಧಾನದ ಮೂಲಕ ಒದಗಿಸಲು ಇಲಾಖೆ ಅಥವಾ ವ್ಯಾಪ್ತಿಗಳ ನಡುವೆ ಯಾವುದೇ ಅಡ್ಡಿ ಇಲ್ಲದ ಸಮನ್ವಯತೆ ತರಬೇಕು; ಆನ್‌ಲೈನ್ ಮತ್ತು ಮೊಬೈಲ್ ಸಾಧನಗಳನ್ನು ಬಳಸುವ ಮೂಲಕ ವಾಸ್ತವ ಕಾಲಾವಧಿಯಲ್ಲೇ

ಸರ್ಕಾರಿ ಸೇವೆ ದೊರಕುವಂತೆ ಮಾಡಬೇಕು. ಸುಲಭವಾಗಿ ಮಾಹಿತಿ ದೊರೆಯುವಂತೆ ಮಾಡುವ ದೃಷ್ಟಿಯಿಂದ ಪ್ರತಿಯೊಬ್ಬ ನಾಗರಿಕನ ವಿವಿಧ ಹಕ್ಕುದಾರಿಕೆಗಳು ಸಾರ್ವಜನಿಕ ಸೇವಾಜಾಲದಲ್ಲಿ ದೊರೆಯಬೇಕು. ಅಲ್ಲದೇ, ವ್ಯಾಪಾರ ನಿರ್ವಹಣೆಯ ಸುಲಭಸಾಧ್ಯತೆಯನ್ನು ಖಚಿತಪಡಿಸಬೇಕಲ್ಲದೇ ನಗದು ಹಣಕಾಸು ವ್ಯವಹಾರದ ಬದಲಾಗಿ ವಿದ್ಯುನ್ಮಾನ ವ್ಯವಸ್ಥೆಗೆ ಅನುವುಮಾಡಿಕೊಡುವ ಸರ್ಕಾರಿ ಸೇವೆಗಳನ್ನು ಡಿಜಿಟಲೀಕರಣಗೊಳಿಸುವ ಮೂಲಕ ವ್ಯಾಪಾರ ವಹಿವಾಟಿಗೆ ಅನುಕೂಲ ಮಾಡಿಕೊಡಬೇಕು. ಕೊನೆಯದಾಗಿ ಪೂರಕ ನಿರ್ಧಾರ ಹಾಗೂ ಅಭಿವೃದ್ಧಿಗಾಗಿ ಸಂಯೋಜಿತ ವಿದ್ಯುನ್ಮಾನ ಸರ್ಕಾರಿ ಸೇವೆಗಳ ಬಳಕೆಯಾಗಬೇಕು. ಸಶಕ್ತ ಡಿಜಿಟಲ್ ನಾಗರಿಕರನ್ನು ರೂಪಿಸುವ ಮೂರನೆಯ ಪ್ರಮುಖ ಕ್ಷೇತ್ರದಲ್ಲಿ ದೇಶದ ನಾಗರಿಕರಲ್ಲಿ ಡಿಜಿಟಲ್ ಸಾಕ್ಷರತೆ ತರುವುದು; ಡಿಜಿಟಲ್ ಸಂಪನ್ಮೂಲ ವ್ಯಾಪಕವಾಗಿ ಲಭಿಸುವಂತೆ ಮಾಡುವುದು; ಸುಲಭವಾಗಿಯೂ ಎಲ್ಲೆಡೆಯೂ ಲಭಿಸಲು ಸೇವಾಜಾಲದಲ್ಲಿ ಎಲ್ಲ ಸರ್ಕಾರಿ ದಾಖಲೆಗಳು/ಪ್ರಮಾಣ ಪತ್ರಗಳು ದೊರೆಯುವಂತೆ ಮಾಡಬೇಕು; ಡಿಜಿಟಲ್ ಸಂಪನ್ಮೂಲದ ವ್ಯಾಪಕ ಅಳವಡಿಕೆ ಮತ್ತು ಬಳಕೆಯನ್ನು ಉತ್ತೇಜಿಸಲು ಎಲ್ಲ ಪ್ರಾದೇಶಿಕ ಭಾಷೆಗಳಲ್ಲೂ ಸೇವೆ ದೊರೆಯುವಂತೆ ಮಾಡಬೇಕು; ಪಾಲ್ಗೊಳ್ಳುವಿಕೆಯ ಆಡಳಿತ ಸಂಸ್ಕೃತಿ ರೂಪಿಸಲು ಪಾಲುದಾರಿಕೆಯ ಡಿಜಿಟಲ್ ವೇದಿಕೆಯ ಅವಕಾಶ ಒದಗಿಸಬೇಕು; ಪ್ರತಿಯೊಬ್ಬರ ಎಲ್ಲ ಹಕ್ಕುದಾರಿಕೆಯನ್ನು ಜಾಲದ ಮೂಲಕ ಒಯ್ಯುವಂತಾಗಬೇಕು.

ಮೇಲ್ಕಾಣಿಸಿದ ಪ್ರಮುಖ ಕ್ಷೇತ್ರಗಳಲ್ಲಿ ಯಶಸ್ಸು ಸಾಧಿಸಲು ಅಗತ್ಯವಾದ ಒಂಬತ್ತು ಸ್ತಂಭಗಳನ್ನು ಕೂಡ ಡಿಐಪಿ ಗುರುತಿಸಿದೆ. ಇವುಗಳೆಂದರೆ: 1. ಬ್ರಾಡ್‌ಬ್ಯಾಂಡ್ ಹೈವೇಗಳು; 2. ಮೊಬೈಲ್ ಸಂಪರ್ಕಕ್ಕೆ ಸರ್ವತ್ರ ಲಭ್ಯತೆ; 3. ಸಾರ್ವಜನಿಕ ಅಂತರಜಾಲ ಲಭ್ಯತೆಯ ಕಾರ್ಯಕ್ರಮ; 4. ಇ ಆಡಳಿತ: ತಂತ್ರಜ್ಞಾನದ ಮೂಲಕ ಆಡಳಿತದ ಸುಧಾರಣೆ; 5. ಇ ಕ್ರಾಂತಿ– ಸೇವೆಗಳ ವಿದ್ಯುನ್ಮಾನ ರವಾನೆ; 6. ಎಲ್ಲರಿಗೂ ಮಾಹಿತಿ; 7. ಇಲೆಕ್ಟ್ರಾನಿಕ್ಸ್ ಉತ್ಪಾದನೆ; 8. ಉದ್ಯೋಗಕ್ಕಾಗಿ ಮಾಹಿತಿ ತಂತ್ರಜ್ಞಾನ; ಹಾಗೂ 9. ಶೀಘ್ರ ಫಲ ನೀಡುವ ಕಾರ್ಯಕ್ರಮಗಳು.

ಸ್ತಂಭವಾಗಿ ಬ್ರಾಡ್‌ಬ್ಯಾಂಡ್ ಹೈವೇ ಎಲ್ಲ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಎಲ್ಲರಿಗೂ ಬ್ರಾಡ್‌ಬ್ಯಾಂಡ್ ಅನುಕೂಲ ಒದಗಿಸುತ್ತದೆ ಹಾಗೂ ರಾಷ್ಟ್ರೀಯ ಮಾಹಿತಿ ಮೂಲಸೌಕರ್ಯದ ಸಮನ್ವಯ ಸಾಧಿಸುತ್ತದೆ. ಅಡ್ಡಿಇಲ್ಲದ ಮೊಬೈಲ್ ಸಂಪರ್ಕ ಮೂಲಸೌಕರ್ಯ ಸೃಷ್ಟಿಸುವಿಕೆಯತ್ತ ಎರಡನೆಯ ಸ್ತಂಭ ಗಮನಹರಿಸುತ್ತದೆ. ಮೂರನೆಯ ಸ್ತಂಭ ಮಾರ್ಚ್ 2017ರೊಳಗೆ ಸಾಕಷ್ಟು ಸಂಖ್ಯೆಯಲ್ಲಿ (ಒಟ್ಟು 2,50,000 ಹಳ್ಳಿಗಳಿಗೆ) ಸ್ಥಳೀಯ ಸಿಎಸ್‌ಸಿಗಳ ಸ್ಥಾಪನೆಯ ಜೊತೆಗೆ ಮುಂದಿನ ಎರಡು ವರ್ಷಗಳಲ್ಲಿ 1,50,000 ಅಂಚೆ ಕಚೇರಿಗಳು ಬಹುಸೇವಾ ಕೇಂದ್ರಗಳಾಗುವಂತೆ ನೋಡಿಕೊಳ್ಳುತ್ತದೆ. ನಾಲ್ಕನೆಯ ಸ್ತಂಭ ವ್ಯಾಪಾರ ಪ್ರಕ್ರಿಯೆ ಮರುವಿನ್ಯಾಸ (ಬಿಪಿಆರ್)ದೊಂದಿಗೆ ಒಡಗೂಡಿದ ತಂತ್ರಜ್ಞಾನ (ಅಂದರೆ, ಇ ಆಡಳಿತ)ವನ್ನು ಸುಧಾರಿಸಬೇಕು ಎಂದು ಸರ್ಕಾರ ಯೋಜಿಸಿದೆ. ಇದರಲ್ಲಿ: ಅರ್ಜಿಗಳ ಸರಳೀಕರಣ; ಆನ್‌ಲೈನ್‌ಅರ್ಜಿ ಹಾಗೂ ಶೋಧನೆ; ಆನ್‌ಲೈನ್ ಕೋಶಿಗಳ ಬಳಕೆ; ಸೇವೆ ಹಾಗೂ ವೇದಿಕೆಗಳ ಸಮನ್ವಯತೆ; ಕಾರ್ಯಪ್ರವಾಹದ ಸ್ವಯಂಚಾಲನೆ; ಹಾಗೂ ನಾಗರಿಕರ ಸಮಸ್ಯೆಗಳ ಪರಿಹಾರಕ್ಕೆ ಸ್ವಯಂಚಾಲಿತ ಸಾರ್ವಜನಿಕ ಸಮಸ್ಯಾ ನಿವಾರಣಾ ವ್ಯವಸ್ಥೆಗಳು ಸೇರುತ್ತವೆ. ನಾಗರಿಕರು ಸರ್ಕಾರಿ ಸೇವೆಗಳನ್ನು ಪಡೆಯುವ ಸಂಪರ್ಕ ಸ್ಥಾನಗಳನ್ನು ಐದನೆಯ ಸ್ತಂಭ ಒದಗಿಸಿಕೊಡುತ್ತದೆ. ಇ–ಕ್ರಾಂತಿಯನ್ನು ಬಳಸುವ ಮೂಲಕ ವಿದ್ಯುನ್ಮಾನ ಸೇವೆ ನೀಡುವ ಬಗ್ಗೆ ಇದು ಕಾಳಜಿವಹಿಸುತ್ತದೆ. ಇ–ಶಿಕ್ಷಣ, ಇ–ಆರೋಗ್ಯ, ಜಿಐಎಸ್ ಆಧಾರಿತ ತೀರ್ಮಾನ ಕೈಗೊಳ್ಳುವ ತಂತ್ರಜ್ಞಾನ, ರೈತರು ಆನ್‌ಲೈನ್ ವ್ಯವಸ್ಥೆ ಬಳಸುವ ತಂತ್ರಜ್ಞಾನ, ಭದ್ರತಾ ತಂತ್ರಜ್ಞಾನ, ಮೊಬೈಲ್ ಬ್ಯಾಂಕಿಂಗ್ ಮತ್ತು ಮೈಕ್ರೊಎಟಿಎಂ ಕಾರ್ಯಕ್ರಮ ಬಳಕೆಯ ಮೂಲಕ ಆರ್ಥಿಕ ಒಳಗೊಳಿಸುವಿಕೆ, ಇ–ನ್ಯಾಯಾಲಯ, ಇ–ಪೊಲೀಸ್ ಹಾಗೂ ಇ–ವಿಚಾರಣೆ ಮೊದಲಾದ ರೀತಿಯಲ್ಲಿ ಇ–ಕ್ರಾಂತಿ ವಿಭಜನೆಯಾಗುತ್ತದೆ. ಎಲ್ಲರಿಗೂ ಮಾಹಿತಿ ಎಂಬುದು ಆರನೆಯ ಸ್ತಂಭ.ಇದರಲ್ಲಿ ಸರ್ಕಾರ ಮಾಹಿತಿ ಮತ್ತು ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಲಭ್ಯವಾಗುವಂತೆ ಮಾಡುತ್ತದೆ. ಅಂತೆಯೇ ವಿವಿಧ ಮಹತ್ವದ ಮಾಹಿತಿ ನಾಗರಿಕರಿಗೆ



ಕಾಲಕಾಲಕ್ಕೆ ತಿಳಿಯುವಂತೆ ಮಾಡುವುದಕ್ಕಾಗಿ ಸರ್ಕಾರ ಸ್ವತಃ ಸಾಮಾಜಿಕ ಮಾಧ್ಯಮಗಳಲ್ಲಿ ಪಾಲ್ಗೊಳ್ಳುತ್ತದೆ (ಈಉದ್ದೇಶಕ್ಕಾಗಿ MyGov.in ಪೋರ್ಟಲ್ಲನ್ನು ಈಗಾಗಲೇ ಪ್ರಾಯೋಗಿಕವಾಗಿ ಆರಂಭಿಸಲಾಗಿದೆ), ಹಾಗೂ ವಿಶೇಷ ಸಂದರ್ಭಗಳಲ್ಲಿ ನಾಗರಿಕರಿಗೆ ಆನ್‌ಲೈನ್ ಸಂದೇಶಗಳನ್ನು ಕಳುಹಿಸಲಾಗುತ್ತದೆ.

ಏಳನೆಯ ಸ್ತಂಭ 2020 ರವೇಳೆಗೆ ಇಲೆಕ್ಟ್ರಾನಿಕ್ಸ್ ಉತ್ಪನ್ನಗಳ ಆಮದನ್ನು ಅಕ್ಷರಶಃ ಇಲ್ಲವಾಗಿಸುವ ಸರ್ಕಾರದ ಗುರಿಗೆ ಅನುಗುಣವಾಗಿ ಅಗತ್ಯ ಇಲೆಕ್ಟ್ರಾನಿಕ್ಸ್ ಸಾಧನಗಳ ಉತ್ಪಾದನೆಯನ್ನು ಒಳಗೊಳ್ಳುತ್ತದೆ.ಆದರೂ ಈ ಉದ್ದೇಶ ಈಡೇರಿಕೆಗೆ ಈಗಾಗಲೇ ಇರುವ ಸಂರಚನೆ ಸಾಕಾಗುವುದಿಲ್ಲ. ಅಲ್ಲದೇ ಈ ಮಹತ್ವದ ಹೆಗ್ಗುರುತನ್ನುಸಾಧಿಸಲು ನಿರಂತರ ಸಾಗುತ್ತಲೇ ಇರುವ ಬಹಳಷ್ಟು ಕಾರ್ಯಕ್ರಮಗಳನ್ನು ಸರಿಹೊಂದಿಸಿಕೊಳ್ಳಬೇಕಾಗುತ್ತದೆ.ಐಸಿಟಿ ಆಧಾರಿತ ಉದ್ಯೋಗ ಸೃಷ್ಟಿ ಡಿಐಪಿಯ ಬಹಳ ಮುಖ್ಯವಾದ ಹಾಗೂ ಎಂಟನೆಯ ಸ್ತಂಭ. ಈ ಗುರಿ ಸಾಧಿಸಲು ಸರ್ಕಾರ ಸಣ್ಣ ಪಟ್ಟಣ ಮತ್ತು ಹಳ್ಳಿಗಳಲ್ಲಿ ಮಾಹಿತಿ ತಂತ್ರಜ್ಞಾನಉದ್ಯೋಗ ತರಬೇತಿ ನೀಡುವುದು, ಸುಸ್ಥಿರ ವಾಣಿಜ್ಯ ನಿರ್ವಹಣೆಯ ಮಾಹಿತಿ ತಂತ್ರಜ್ಞಾನ ಸೇವೆಯೊದಗಿಸುವ ಸೇವಾಕರ್ತರಿಗೆ ತರಬೇತಿನೀಡುವ ನಿಟ್ಟಿನಲ್ಲಿ ಈಶಾನ್ಯ ರಾಜ್ಯಗಳಲ್ಲಿ ಮಾಹಿತಿ ತಂತ್ರಜ್ಞಾನಾಧಾರಿತ ಸೇವಾ ಕೇಂದ್ರ ಸ್ಥಾಪಿಸುವುದು (ಐಟಿಇಎಸ್) ಹಾಗೂ ಗ್ರಾಮೀಣ ಕಾರ್ಯಪಡೆಯವರು ಸ್ವಂತ ಶಕ್ತಿಯ ಮೇಲೆ ಕೆಲಸ ನಿರ್ವಹಿಸುವಂತೆ ದೂರಸಂಪರ್ಕ ಸೇವಾದಾರರು ತರಬೇತಿ ನೀಡುವುದನ್ನು ಖಾತರಿ ಪಡಿಸಿಕೊಳ್ಳಬೇಕಾಗುತ್ತದೆ. ಕೊನೆಯದಾಗಿ, ಒಂಬತ್ತನೆಯ ಸ್ತಂಭ. ಶೀಘ್ರಫಲ ನೀಡುವ ಕಾರ್ಯಕ್ರಮಗಳು ಇದರಲ್ಲಿ ಸೇರುತ್ತವೆ. ಸಂದೇಶಗಳಿಗೆ ಮಾಹಿತಿ

ತಂತ್ರಜ್ಞಾನ ವೇದಿಕೆ ಹೊಂದುವುದು, ಇ–ಶುಭಾಶಯ ಪತ್ರದ ಮೂಲಕ ಸರ್ಕಾರಿ ಶುಭಾಶಯಕೋರುವುದು, ಸರ್ಕಾರಿ ಕಚೇರಿಗಳಲ್ಲಿ ಬಯೋಮೆಟ್ರಿಕ್ ಹಾಜರಾತಿಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಈಗಾಗಲೇ ಇದು ಆರಂಭವಾಗಿದೆ. ಶೀಘ್ರ ಫಲ ನೀಡುವ ಕಾರ್ಯಕ್ರಮಗಳ ಆರಂಭಿಕ ಹಂತವನ್ನು ಈಗಾಗಲೇ ಸಾಧಿಸಲಾಗಿದೆ.

**ಉಪಸಂಹಾರ ಹಾಗೂ ಶಿಫಾರಸುಗಳು**

ಈ ಲೇಖನದಲ್ಲಿ ಡಿಜಿಟಲ್ ಭಾರತ ಪ್ರಯತ್ನಗಳಿಗೆ ಎಚ್ಚರದಿಂದಲೇ 'ಅನುಕರಣೀಯ' ಮತ್ತು 'ಹೆಗ್ಗುರುತು' ಎಂಬ ಪದಗಳನ್ನು ಬಳಸಲಾಗಿದೆ. ನಮ್ಮ ದೃಷ್ಟಿಯಲ್ಲಿ ಇದು 'ಸಮಗ್ರ' ಹಾಗೂ 'ಎಲ್ಲರನ್ನೂ ಒಳಗೊಳ್ಳುವ' ಸ್ವರೂಪದ್ದಾಗಿದೆಯಲ್ಲದೇ ದೀರ್ಘಕಾಲಿಕ ಸುಸ್ಥಿರ ಮುನ್ನೋಟವನ್ನು ಆಧರಿಸಿದೆ. ಸಮಗ್ರ ಎಂಬುದನ್ನು ಮೂಲಸೌಕರ್ಯ ಅಭಿವೃದ್ಧಿ, ಸಂಯೋಜಿತ ಮತ್ತು ವ್ಯವಸ್ಥಿತ ವಿದ್ಯುನ್ಮಾನ ಸೇವೆಗಳು ಹಾಗೂ ನಾಗರಿಕರಿಗೆ ಡಿಜಿಟಲ್ ಸಾಕ್ಷರತೆ ನೀಡುವ ಡಿಐಪಿಯ ಎಲ್ಲ ಬಗೆಯ ಅಗತ್ಯ ಮತ್ತು ಅಂತರ್ ಸಂಬಂಧಿ ದೃಷ್ಟಿಕೋನವನ್ನು ಗಮನಿಸಿ ಹೇಳಲಾಗಿದೆ. ಯಾವುದೇ ಒಂದರಲ್ಲಿ ದೌರ್ಬಲ್ಯವಿದ್ದರೂ ಅದು ಭಾರತವನ್ನು ಡಿಜಿಟಲ್ ಭಾರತವಾಗಿ ಪರಿವರ್ತಿಸುವಲ್ಲಿ ಅಡ್ಡಿಯಾಗುವುದರಿಂದ ಚಿತ್ರ 1 ರಲ್ಲಿ ವಿವರಿಸಿರುವಂತೆ ಆಡಳಿತದೊಂದಿಗೆ ಸೇರಿಕೊಂಡ ಮೂಲಸೌಕರ್ಯ ಹಾಗೂ ವ್ಯವಸ್ಥಿತ ವಿದ್ಯುನ್ಮಾನ ಸೇವೆಗಳೆರಡೂ ನಾಗರಿಕರು ಡಿಜಿಟಲ್ ಸಶಕ್ತರು ಎಂಬುದನ್ನು ವಾಸ್ತವಗೊಳಿಸಲು ಅಗತ್ಯ. ಡಿಜಿಟಲ್ ಸಾಕ್ಷರತೆ ಮತ್ತಷ್ಟು ಮುಖ್ಯವಾದುದು. ಏಕೆಂದರೆ ತಮಗೆ ಯಾವ ಸೇವೆ ಲಭ್ಯವಿದೆ ಎಂಬುದು ಬಳಕೆದಾರರಿಗೆ ಅರಿವಿಲ್ಲದಿದ್ದರೆ ಅಂತೆಯೇ ಅಗತ್ಯ ಕೌಶಲ ಮತ್ತು ಐಸಿಟಿ ಆಧರಿತ ವ್ಯವಸ್ಥೆಗಳನ್ನು ಬಳಸುವ ಆತ್ಮ ವಿಶ್ವಾಸ ಇಲ್ಲದಿದ್ದಲ್ಲಿ ಮೂಲಸೌಕರ್ಯ ಹಾಗೂ ವ್ಯವಸ್ಥಿತ ವಿದ್ಯುನ್ಮಾನ ಸೇವೆಗಳೆರಡೂ ಅರ್ಥ ಕಳೆದುಕೊಳ್ಳುತ್ತವೆ. ನಗರ ಪ್ರದೇಶಕ್ಕೆ ಮಾತ್ರ ಸೀಮಿತವಾಗಿಲ್ಲದ ಕಾರಣ ಡಿಐಪಿ ಎಲ್ಲರನ್ನೂ ಒಳಗೊಳ್ಳುತ್ತದೆ. ಅಲ್ಲದೇ ನಗರದಷ್ಟೇ ಅಥವಾ ಅದಕ್ಕಿಂತ ಹೆಚ್ಚಾಗಿ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಒತ್ತು ನೀಡುತ್ತದೆ. ಯೋಜಿಸಿದಂತೆಯೇ ಯಶಸ್ವಿಯಾಗಿ ಜಾರಿಯಾದರೆ ನಗರ ಮತ್ತು ಗ್ರಾಮೀಣ ಜನರ ನಡುವಿನ ಅಂತರಜಾಲ (ಬ್ರಾಡ್‌ಬ್ಯಾಂಡ್, ಮೊಬೈಲ್ ಮತ್ತು ಸಾರ್ವಜನಿಕ ಅಂತರಜಾಲ ಸಂಪರ್ಕ ಕೇಂದ್ರಗಳ ಮೂಲಕ) ಸಂಪರ್ಕ ವ್ಯವಸ್ಥೆಯ ಅಂತರಕ್ಕೆ ಸೇತುವೆ ನಿರ್ಮಾಣವಾಗುತ್ತದೆ ಹಾಗೂ ಸಮಗ್ರ ಹಾಗೂ ನಿರಾತಂಕ ಸೇವೆಯ ಮಾಹಿತಿಯುಕ್ತ ಸಮಾಜ ಮತ್ತು ಜ್ಞಾನಾಧಾರಿತ ಆರ್ಥಿಕತೆ ಸೃಷ್ಟಿಯಾಗುತ್ತದೆ.

ಡಿಐಪಿಯ ಪ್ರಮಾಣ (ವ್ಯಾಪ್ತಿ, ಹಣಕಾಸು, ಲಾಭ ಹಾಗೂ ಪೂರ್ಣ ಜಾರಿಗೆ ಹಾಕಿದ ಕಾಲಾವಧಿಯ ಮಹತ್ವಗಳನ್ನು ದೃಷ್ಟಿಸಿ), ಪರಿವರ್ತಿಸುವ ಅದರ ಸ್ವರೂಪ, ಅಂತೆಯೇ ಕೌಶಲ್ಯಾಭಿವೃದ್ಧಿಗೆ ಮತ್ತು 1.7 ಕೋಟಿ ಪ್ರತ್ಯಕ್ಷ ಹಾಗೂ 8.5 ಕೋಟಿ ಅಪ್ರತ್ಯಕ್ಷ ಉದ್ಯೋಗ ಸೃಷ್ಟಿಸುವುದಾಗಿ ಡಿಐಪಿಯು ಯೋಜಿಸಿರುವುದರಿಂದ ಬೃಹತ್ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಗೆ ಅದು ನೀಡುವ ಕೊಡುಗೆಗಳನ್ನು ಗಮನಿಸಿ ಹೆಗ್ಗುರುತು ಎಂದು ಹೇಳಲಾಗಿದೆ. ದೇಶದ ಹಿಂದಿನ ಯಾವುದೇ ಡಿಜಿಟಲ್ ಪ್ರಯತ್ನವೂ ಡಿಐಪಿಯ ಪ್ರಮಾಣಕ್ಕೆ ಸಮಾನವಾಗದು. ಈ ಪ್ರಯತ್ನಕ್ಕೆ ಪ್ರಪಂಚದ ಬೃಹತ್ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು (ಗೂಗಲ್, ಮೈಕ್ರೋಸಾಫ್ಟ್‌ನಂಥವು) ಆಸಕ್ತಿ ಹೊಂದಿರುವುದು ಮತ್ತು ನಾಸ್ಕಾಂನಂಥ ಸಂಸ್ಥೆಗಳು ಸಹಯೋಗ ಹೊಂದಿರುವುದು ಅದರ ಹೆಗ್ಗುರುತಿನ ಸ್ವರೂಪವನ್ನು ಸ್ಪಷ್ಟವಾಗಿ ತೋರಿಸುತ್ತದೆ. ಇಷ್ಟಲ್ಲದೇ ಇಲೆಕ್ಟ್ರಾನಿಕ್ಸ್ ವಹಿವಾಟು (ಇದನ್ನು ಡಿಜಿಟಲ್ ಮತ್ತು ಸಾಮಾಜಿಕ ವಾಣಿಜ್ಯ ಎನ್ನಬಹುದು) ಮತ್ತು ಡಿಜಿಟಲ್ ಮಾರುಕಟ್ಟೆಗಳು ವ್ಯಾಪಕವಾಗಿ ಪಸರಿಸುವುದರಿಂದ ಗ್ರಾಮೀಣ ಪ್ರದೇಶಗಳಲ್ಲಿನ ಗ್ರಾಹಕ ವಹಿವಾಟಿನ ಸಂಚಲನೆ ಮತ್ತು ಸ್ವರೂಪಗಳ ಮೇಲೆ ಗಮನಾರ್ಹ ಪ್ರಭಾವ ಬೀರುವುದರಿಂದಲೂ ಇದನ್ನು ಹೆಗ್ಗುರುತಿನ ಪ್ರಯತ್ನ ಎಂದು ಹೇಳಬಹುದಾಗಿದೆ. ಡಿಐಪಿಯ ಅನುಕರಣೀಯ ಮತ್ತು ಹೆಗ್ಗುರುತಿನ ಸ್ವರೂಪವನ್ನು ಗಮನಿಸಿದ ಉದ್ಯಮ ಕ್ಷೇತ್ರದ ಮುಖಂಡರು ಅಂತೆಯೇ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಾಧ್ಯಮಗಳು ಮುಕ್ತಕಂಠದಿಂದ ಇದನ್ನು ಪ್ರಶಂಸಿಸಿವೆ.

ಪಾರ್ಶ್ವಿಕ ಅಥವಾ ಪೂರ್ಣ ಪ್ರಮಾಣದಲ್ಲಿ ಜಾರಿಯಾದಾಗ ಮಾತ್ರವೇ



ಡಿಐಪಿ ಕಾರ್ಯಕ್ರಮದ ನಿರೀಕ್ಷಿತ ಲಾಭದ ಚಿತ್ರಣ ಅರಿವಾಗುತ್ತದೆ. ದೇಶದಲ್ಲಿ ಸದ್ಯ ಬಲಿಷ್ಠ ಮತ್ತು ಸುಭದ್ರ ಸರ್ಕಾರ ಇರುವುದರಿಂದ ಅಲ್ಲದೇ ಈಗಾಗಲೇ ಕೆಲವಾರು ಅಂಶಗಳು ಪ್ರಾಯೋಗಿಕವಾಗಿಯೋ ಆಂಶಿಕವಾಗಿಯೋ ಜಾರಿಯಾಗಿರುವುದರಿಂದ, ಯೋಜನೆಯ ಬಹುತೇಕ ಅಂಶಗಳು ಯೋಜಿಸಿದ ರೀತಿಯಲ್ಲೇ ಜಾರಿಯಾಗುತ್ತವೆ (ಅದರಲ್ಲೂ ತಾಂತ್ರಿಕ ಮತ್ತು ಮೂಲಸೌಕರ್ಯದ ಸಂಗತಿಗಳು) ಎಂದು ಭಾವಿಸಬಹುದು. ಉದಾಹರಣೆಗೆ, ಹಂತ ಹಂತವಾಗಿ ಉದ್ಯೋಗಿಗಳ ಹಾಜರಾತಿಯನ್ನು ಬಯೋಮೆಟ್ರಿಕ್ ವ್ಯವಸ್ಥೆಗೆ ತರಲಾಗುತ್ತಿದೆ. ಆದರೆ ಎಲ್ಲರನ್ನೂ ತಲಪಬೇಕಾದ್ದರಿಂದ, ಕೌಶಲ ಮತ್ತು ಜಾಗೃತಿ ಮೂಡಬೇಕಾದ್ದರಿಂದ ಡಿಜಿಟಲ್ ಸಾಕ್ಷರತೆ ಮತ್ತು ಮಾನವ ಅಭಿವೃದ್ಧಿಯ ಸಂಗತಿಗಳು ಸ್ವಲ್ಪ ಹೆಚ್ಚು ಕಾಲಾವಧಿಯನ್ನು ಬೇಡಬಹುದು. ಜನರ ಮನೋಧರ್ಮ ಬದಲಿಸುವುದು ದೊಡ್ಡ ಸವಾಲು ಮಾತ್ರವಲ್ಲ, ಬಹಳ ಸಂಕೀರ್ಣವಾದ್ದರಿಂದ ಇದರ ಪರಿಣಾಮಕಾರಿ ಜಾರಿಗೆ ವರ್ಷಗಳೇ ಹಿಡಿಯಬಹುದು. ವಿಶೇಷವಾಗಿ ಗ್ರಾಮೀಣ ಜನರಲ್ಲಿ ಡಿಜಿಟಲ್ ಸಾಕ್ಷರತೆಯನ್ನು ಉತ್ತೇಜಿಸುವ ಮತ್ತು ಬೆಳೆಸುವ ಸ್ಪಷ್ಟ, ವ್ಯವಸ್ಥಿತ ಹಾಗೂ ಉದ್ದಿಷ್ಟ ದೃಷ್ಟಿಕೋನವನ್ನು ಇಲ್ಲಿ ಶಿಫಾರಸು ಮಾಡುತ್ತಿದ್ದೇವೆ.

ನಿರ್ದಿಷ್ಟ ಮತ್ತು ಸೀಮಿತ ಕಾಲಾವಧಿಯಲ್ಲಿ ಎಲ್ಲರಲ್ಲೂ ಡಿಜಿಟಲ್ ಸಾಕ್ಷರತೆಯನ್ನು ತರುವ ಮಂತ್ರದಂಡವಿಲ್ಲದಿದ್ದರೂ ಮಾರುಕಟ್ಟೆ ಕೇಂದ್ರಿತ ಅಂತರ್ವಿಭಾಗ ಮತ್ತು ನಿರ್ದಿಷ್ಟ ಕಾರ್ಯತಂತ್ರಗಳನ್ನು ಅಳವಡಿಸಿ ಕೊಳ್ಳುವುದರಿಂದ ಹೆಚ್ಚು ಪರಿಣಾಮಕಾರಿ ರೀತಿಯಲ್ಲಿ ಯೋಜನೆಯನ್ನು ಜಾರಿಮಾಡಬಹುದು. ಡಿಜಿಟಲ್ ಸಾಕ್ಷರತೆಯ ಪರಿಣಾಮಕಾರಿ ಉತ್ತೇಜನಕ್ಕೆ ನೆರವಾಗುವ ಮಾರುಕಟ್ಟೆ ಕೇಂದ್ರಿತ ನಾಗರಿಕ

ತೊಡಗಿಸಿಕೊಳ್ಳುವಿಕೆಯ ಚೌಕಟ್ಟನ್ನು (ಸಿಟಿಜನ್ ಎಂಗೇಜ್‌ಮೆಂಟ್ ಫ್ರೇಂವರ್ಕ್–ಸಿಇಎಫ್) ಚಿತ್ರ–2 ವಿವರಿಸುತ್ತದೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಐಸಿಟಿ ಸಾಕ್ಷರತೆ, ಐಸಿಟಿ ಶಕ್ತ ಸೇವೆಗಳನ್ನು ಬಳಸುವ ವರ್ತನೆಯ ವಿವಿಧ ಹಂತಗಳ ಆಧಾರದಲ್ಲಿ ನಾಗರಿಕರನ್ನು ಅಂತರ್ವಿಭಜನೆ ಮಾಡಬೇಕೆಂದು ಸಿಇಎಫ್ ವಾದಿಸುತ್ತದೆ. 1. ಬಳಸದಿರುವವರನ್ನು ಬಳಕೆದಾರರನ್ನಾಗಿಸಲು; 2. ಸ್ವಲ್ಪ ಬಳಸುವವರನ್ನು ಹೆಚ್ಚು ಬಳಸುವವರನ್ನಾಗಿ ಹಾಗೂ 3. ಬಿಡುವಿದ್ದಾಗ ಬಳಸುವವರನ್ನು ನಿರಂತರ ಬಳಕೆದಾರರನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ನೇರ ಕಾರ್ಯತಂತ್ರಕ್ಕಾಗಿ ಮೂರು ಹಂತಗಳ ಬಳಕೆ ವರ್ತನೆ (ಅಂದರೆ, ಬಳಸದವರು, ಸ್ವಲ್ಪ ಬಳಸುವವರು ಹಾಗೂ ಹೆಚ್ಚು ಬಳಸುವವರು) ಮತ್ತು ಎರಡು ಬಗೆಯ ತೊಡಗಿಸಿಕೊಳ್ಳುವಿಕೆಯನ್ನು (ಅಂದರೆ, ಬಿಡುವಿದ್ದಾಗ ತೊಡಗಿಸಿಕೊಳ್ಳುವವರು ಮತ್ತು ನಿರಂತರ ತೊಡಗಿಸಿಕೊಳ್ಳುವವರು) ಸಿಇಎಫ್ ಶಿಫಾರಸು ಮಾಡುತ್ತದೆ. ಸರ್ಕಾರಿ ಸೇವೆಗಳನ್ನು ಪಡೆಯಲು ಸಿಎಸ್‌ಸಿಗಳ ಅವಕಾಶ ಮತ್ತು ಅಂತರಜಾಲ ಸಂಪರ್ಕ ಹೊಂದಲು ಡಿಐಪಿ ವಿವಿಧ ದೃಷ್ಟಿಕೋನಗಳನ್ನು (ಬ್ರಾಡ್‌ಬ್ಯಾಂಡ್, ಮೊಬೈಲ್, ಸಾರ್ವಜನಿಕ ಅಂತರಜಾಲ ಕೇಂದ್ರ) ಅಳವಡಿಸಿಕೊಂಡಿದೆ. ಡಿಜಿಟಲ್ ಅಂತರಕ್ಕೆ ಸೇತುವೆ ನಿರ್ಮಿಸುವಲ್ಲಿ ಹಾಗೂ ಅಂತಿಮವಾಗಿ ಡಿಜಿಟಲ್ ಒಳಗೊಳ್ಳುವಿಕೆಗೆ ಅನುವುಮಾಡಿಕೊಡುವಲ್ಲಿ ಇವು ಪರಿಣಾಮಕಾರಿ ದೃಷ್ಟಿಕೋನಗಳಾಗಿವೆ. ಆದರೂ ಬಹುದೊಡ್ಡ ಸವಾಲೊಂದಿದ್ದು ಅದನ್ನು ಇಲ್ಲಿಯೇ ಗಮನಿಸಬೇಕಿದೆ.

**ಚಿತ್ರ : 2 – ಪರಿಣಾಮಕಾರಿ ಡಿಜಿಟಲ್ ಸಾಕ್ಷರತೆಯ ಉತ್ತೇಜನಕ್ಕೆ ನಾಗರಿಕ ತೊಡಗಿಸಿ ಕೊಳ್ಳುವಿಕೆಯ ಚೌಕಟ್ಟು**




ದೇಶದ ಬಹುತೇಕ ಹಳ್ಳಿಗಳಿಗೆ ಇನ್ನೂ ವಿದ್ಯುತ್ ಸಂಪರ್ಕವೇ ಇಲ್ಲ, ವಿದ್ಯುತ್ ಕಡಿತವೂ ದೇಶದಲ್ಲಿ ಹೊಸದಲ್ಲ. ಹೀಗಿರುವಾಗ ನಿರಂತರ ವಿದ್ಯುತ್ ಸರಬರಾಜು ಇಲ್ಲದಿದ್ದಲ್ಲಿ ಗೃಹ ಅಂತರಜಾಲ ಸಂಪರ್ಕ, ಸಿಎಸ್‌ಸಿಗಳು ಹಾಗೂ ಸಾರ್ವಜನಿಕ ಅಂತರಜಾಲ ಕೇಂದ್ರಗಳಿಂದ ಉಪಯೋಗವಿಲ್ಲ (ಹೀಗಾಗಿ ಇವುಗಳ ಮೇಲಿನ ಹೂಡಿಕೆ ಸದುಪಯೋಗವಾಗುವುದಿಲ್ಲ). ಈ ಸಮಸ್ಯೆಯಿಂದ ಹೊರಬರಲು ಸಿಎಸ್‌ಸಿಗಳು ಮತ್ತು ಸಾರ್ವಜನಿಕ ಅಂತರಜಾಲ ಕೇಂದ್ರಗಳು ಪರ್ಯಾಯ ವಿದ್ಯುತ್ ಮೂಲಗಳಾದ ಸೌರ ಅಥವಾ ಪವನ ವಿದ್ಯುತ್ ಶಕ್ತಿಯ ಮೂಲದ ಸಂಪರ್ಕ ಪಡೆಯಬೇಕು. ಸಿಎಸ್‌ಸಿಗಳ ಗರಿಷ್ಠ ಪ್ರಯೋಜನ ಪಡೆಯಲು ಹಾಗೂ 24/7 ಆಧಾರದಲ್ಲಿ ಸರ್ಕಾರಿ ಸೇವೆಯನ್ನು ಒದಗಿಸಲು ಪ್ರತಿ ಸಿಎಸ್‌ಸಿ ಸಾಕಷ್ಟು ಸಾಮರ್ಥ್ಯದ ಸೌರ ಫಲಕಗಳನ್ನು ಹೊಂದಿರಬೇಕು. ಇದರಿಂದ ಡಿಐಪಿಯ ಯೋಜನೆಗೆ ಸುಸ್ಥಿರತೆ ಮತ್ತು ನಿರಂತರತೆ ದೊರಕುವುದು ಮಾತ್ರವಲ್ಲದೇ ಪರ್ಯಾಯ ಶಕ್ತಿಮೂಲದ ಬಗ್ಗೆ ಸಾರ್ವಜನಿಕರಲ್ಲಿ ಆಸಕ್ತಿಯೂ ಜಾಗೃತಿಯೂ ಮೂಡಲು ನೆರವಾಗುತ್ತದೆ. ಇನ್ನೂ ಪ್ರಯೋಗಕ್ಕೊಳಗಾಗಬೇಕಾದ ಹಾಗೂ ವ್ಯಾಪಕವಾಗಿ ಅಳವಡಿಸಿಕೊಳ್ಳಬೇಕಾದ ಹೊಚ್ಚ ಹೊಸ ಪ್ರಯತ್ನವೆನಿಸಿದ ಬೃಹತ್ ಆನ್‌ಲೈನ್ ಮುಕ್ತ ಕೋರ್ಸು (ಎಂಒಒಸಿಎಸ್)ಗಳ ಪ್ರಾಯೋಗಿಕತೆ ಮತ್ತು ಅಭಿವೃದ್ಧಿಗೆ ಡಿಐಪಿ ಅವಕಾಶ ಕಲ್ಪಿಸುತ್ತದೆ. ಇದರ ವ್ಯಾಪಕ ಅವಳಡಿಕೆಗೆ ಮನೋಧರ್ಮದ ಬದಲಾವಣೆ ಅಗತ್ಯ. ಇದಕ್ಕಾಗಿ ಇದರ ಅಭಿವೃದ್ಧಿಯ ಕೆಲಸದಲ್ಲಿ ಬಳಕೆದಾರರನ್ನು ಸೇರಿಸಿಕೊಳ್ಳಬೇಕಾಗುತ್ತದೆ. ಅಲ್ಲದೇ ದೊಡ್ಡ ಪ್ರಮಾಣದಲ್ಲಿ ಸಮಾಜದ ಸಂಶೋಧನೆಯ ಜೊತೆಗೂಡಿದ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಬೇಕಾಗುತ್ತದೆ. ಭಾರತದಂಥ ತೀರಾ ಮುಂದುವರೆದಿರದ ದೇಶಗಳ ಸರ್ಕಾರಿ ಶಾಲೆಗಳ ಪರಿಸ್ಥಿತಿ ಅಷ್ಟೇನೂ ಉತ್ತಮವಾಗಿಲ್ಲ. ಸರಿಯಾದ ತರಬೇತಿ ಇಲ್ಲದ ಶಿಕ್ಷಕರಿದ್ದು, ಇವರಲ್ಲಿ ಡಿಜಿಟಲ್ ತಂತ್ರಜ್ಞಾನ ಬಳಸಿಕೊಳ್ಳುವ ಕೌಶಲ ತೃಪ್ತಿದಾಯಕವಾಗಿಲ್ಲ. ಈ ಹಿನ್ನೆಲೆಯಲ್ಲಿ ಶಾಲೆಗಳಿಗೆ ಸುಮ್ಮನೇ ಬ್ರಾಡ್‌ಬ್ಯಾಂಡ್ ಸಂಪರ್ಕ ಕಲ್ಪಿಸುವುದರಿಂದ ಉಪಯೋಗವಿಲ್ಲ. ಡಿಜಿಟಲ್ ತಂತ್ರಜ್ಞಾನದ ಮೂಲಕ ವಿದ್ಯಾರ್ಥಿಗಳನ್ನು ಮತ್ತು ಅವರ ಪಾಲಕರನ್ನು ತೊಡಗಿಸಿಕೊಂಡು ಉತ್ತಮ ಶಿಕ್ಷಣ ಹೇಗೆ ನೀಡುವುದೆಂಬ ತರಬೇತಿಯನ್ನು ಮೊದಲು ಶಿಕ್ಷಕರಿಗೆ ನೀಡಬೇಕು. ಬ್ರಾಡ್‌ಬ್ಯಾಂಡ್ ಬಳಕೆಯಲ್ಲಿ ಪ್ರಪಂಚದಲ್ಲೇ ಮುಂಚೂಣಿಯಲ್ಲಿರುವ ದಕ್ಷಿಣ ಕೊರಿಯದಲ್ಲಿ ಈ ಕುರಿತ ಗಮನಾರ್ಹ ಅಧ್ಯಯನ ನಡೆದಿದ್ದು, ಇದು ಉಪಯುಕ್ತವಾಗಬಲ್ಲದು. ವಿಶ್ವಸಂಸ್ಥೆ ಈಚೆಗೆ ನಡೆಸಿದ ಇ–ಆಡಳಿತ ಅಭಿವೃದ್ಧಿ ಸಮೀಕ್ಷೆಯ ಸೂಚಿಯಲ್ಲಿ ಸದ್ಯ ಮೊದಲ ಸ್ಥಾನದಲ್ಲಿರುವ ದಕ್ಷಿಣ ಕೊರಿಯದಲ್ಲಿ ಬ್ರಾಡ್‌ಬ್ಯಾಂಡ್ ಸಂಪರ್ಕದ ವ್ಯಾಪಕ ಅಳವಡಿಕೆಯ ಉತ್ತೇಜನದಲ್ಲಿ ಶಾಲೆಗಳು ಮಹತ್ವದ ಪಾತ್ರವಹಿಸಿವೆ (ವಿಶ್ವಸಂಸ್ಥೆಯ ಇ–ಆಡಳಿತ ಸಮೀಕ್ಷೆ, 2014). ದೇಶದ ಶಾಲಾ ಮಟ್ಟದಲ್ಲಿ ಬ್ರಾಡ್‌ಬ್ಯಾಂಡ್ ಸಂಪರ್ಕ, ಲಭ್ಯತೆ ಮತ್ತು ಇ–ಪುಸ್ತಕಗಳ ಬಳಕೆ ಮತ್ತು ಐಸಿಟಿ ಕೌಶಲ ಹೊಂದುವಿಕೆ ಅತ್ಯಂತ ಮಹತ್ವದ್ದಾಗಿದ್ದು, 'ಡಿಜಿಟಲ್ ದೇಸಿಗರನ್ನು' ಸೃಷ್ಟಿಸಿ ಮುಂದಿನ 20 ವರ್ಷಗಳಲ್ಲಿ ಡಿಜಿಟಲ್ ಅಂತರವನ್ನು ಇಲ್ಲವಾಗಿಸಲು ನೆರವಾಗುತ್ತದೆ. ಲಭ್ಯ ಮಾಹಿತಿಯ ಆಧಾರದಲ್ಲಿ ಡಿಐಪಿಯಲ್ಲಿ ಪೂರ್ಣಗೊಂಡ ವಿವಿಧ ಯೋಜನೆಗಳ ಮೌಲ್ಯಮಾಪನ ವಿಧಾನದ ಕೊರತೆ ಇದೆ. "ನಿಗದಿತ ಗುರಿಯನ್ನು ತಲುಪಲಾಗಿದೆಯೇ ಇಲ್ಲವೇ ಎಂದು ತಿಳಿಯಲು ಹಾಗೂ ಭವಿಷ್ಯದ ವಿದ್ಯುನ್ಮಾನ ಸೇವೆಗೆ ಒದಗುವಂತೆ ಏನಾದರೂ ಕಲಿಯುವಂಥದ್ದಿದೆಯೇ ಎಂಬುದನ್ನು ಅರಿಯಲು ಮೌಲ್ಯಮಾಪನ ಅತ್ಯಗತ್ಯ.

(51ನೇ ಪುಟಕ್ಕೆ)

# ಒಕ್ಕೂಟ ಮತ್ತು ರಾಜ್ಯಗಳ ಸಂಬಂಧ

ನ್ಯಾಯಮೂರ್ತಿ ಕೋ. ಚೆನ್ನಬಸಪ್ಪ



"ಈ ಸಂವಿಧಾನ
ಅತ್ಯಂತ ಶ್ರೇಷ್ಠವಾದದ್ದು
ಎಂದು ಗೌರವಾನ್ವಿತ
ಕೆಲವು ಸದಸ್ಯರು ಹೇಳಿದರು.
ಕೆಲವರು ಇದು ಯಾತಕ್ಕೂ ಬಾರದ
ಸಂವಿಧಾನ ಎಂದು ಹೇಳಿದರು.
ಒಂದು ಸಂವಿಧಾನ
ಒಳ್ಳೆಯದ್ದೆ ಕೆಟ್ಟದ್ದೆ ಎಂಬುದು
ಅದರಲ್ಲಿ ಏನು ಬರೆದಿದೆ
ಎಂದು ಅವಲಂಬಿಸುವುದಿಲ್ಲ.
ಅದನ್ನು ಆಚರಣೆಯಲ್ಲಿ
ತರುವ ಜನ ಒಳ್ಳೆಯವರಾದರೆ
ಈ ಸಂವಿಧಾನ ಒಳ್ಳೆಯದು.
ಅವರು ಅನರ್ಹರಾದರೆ
ಇದು ಕೆಟ್ಟ ಸಂವಿಧಾನ".

– ಡಾ|| ಅಂಬೇಡ್ಕರ್

ಒಕ್ಕೂಟ ಮತ್ತು ಒಕ್ಕೂಟದಲ್ಲಿರುವ ರಾಜ್ಯಗಳಿಗೂ ಇರಬೇಕಾದ ಹಾಗೂ ಇರುವ ಸಂಬಂಧಗಳನ್ನು ಕುರಿತು ಯೋಚಿಸುವಾಗ, ಬರೆಯುವಾಗ ಸ್ವಾತಂತ್ರ್ಯಾನಂತರ ನಮ್ಮ ದೇಶ ಎದುರಿಸಿದ ಅಗಾಧವಾದ ಮತ್ತು ಉತ್ತರಿಸಲಾಗದ ಬೃಹತ್ ಸಮಸ್ಯೆಯನ್ನು ನೆನಪಿಸಿಕೊಳ್ಳಬೇಕು. ಬಹುಶಃ ಈಗಿನ ಪೀಳಿಗೆ ಅದಕ್ಕಿಂತ ಮುಂಚೆ ಇದ್ದ ಪೀಳಿಗೆ ಆ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲಾರರು. ಅಂಥ ಕ್ಲಿಷ್ಟ ಮತ್ತು ಉತ್ತರಿಸಲಾಗದ ಆ ಸಮಸ್ಯೆ ಏನು? ಆ ಸಮಸ್ಯೆ ನಮ್ಮ ದೇಶಕ್ಕೆ ಮಾತ್ರ ಸೀಮಿತವಾದ ಕಷ್ಟ. 1956 ರಲ್ಲಿ ಪೂರ್ವ ಏಷ್ಯಾ ಖಂಡದ ದೇಶಗಳ ಮುಖಂಡರ ಸಮ್ಮೇಳನವು ನೆಹರೂ ನೇತೃತ್ವದಲ್ಲಿ ಬಾಂಡಂಗ್‌ನಲ್ಲಿ ಸೇರಿತ್ತು. ನೆಹರೂ ಆ ಸಭೆಯಲ್ಲಿ ಮಾತನಾಡಿದಮೇಲೆ ಪತ್ರಕರ್ತರೊಬ್ಬರು, 'ನಿಮ್ಮ ದೇಶ ಸ್ವತಂತ್ರವಾದಮೇಲೆ ನೀವು ಎದುರಿಸಿದ ಅತ್ಯಂತ ಕ್ಲಿಷ್ಟ ಸಮಸ್ಯೆ ಏನು?' ಎಂದು ಕೇಳಿದರು. ಅದಕ್ಕೆ ನೆಹರೂ ಒಂದುಕ್ಷಣ ಯೋಚಿಸಿ, 'ಜಾತಿ–ಮತ ಪ್ರಧಾನವಾಗಿರುವ ಭರತ ಖಂಡದಲ್ಲಿ ಜಾತ್ಯತೀತ ದೇಶವನ್ನು ಕಟ್ಟುವುದೇ ನಾನು ಎದುರಿಸುವ ಅತ್ಯಂತ ಕಠಿಣ ಸಮಸ್ಯೆ' ಎಂದರು. ಇದಲ್ಲದೆ ಈ ದೇಶದಲ್ಲಿ ನೆಲೆಸಿರುವ ಬಹುಮುಖೀ ಸಂಸ್ಕೃತಿಯಲ್ಲಿ ಐಕ್ಯವನ್ನು ಸಾಧಿಸಿ ವೈರುಧ್ಯಗಳಲ್ಲಿ, ವೈವಿಧ್ಯತೆಯಲ್ಲಿ ಏಕತೆಯನ್ನು ಕೂಡಿಬಾಳುವ ಮಹತ್ತರವಾದ ಸಮಸ್ಯೆ. ನಮ್ಮ ದೇಶದ ಭೌಗೋಲಿಕ ರಚನೆಯಿಂದಲೊ, ದೈವೀ ಸೃಷ್ಟಿಯಿಂದಲೋ ಇಲ್ಲಿ ಜನಾಂಗೀಯ (Ethnic), ಧಾರ್ಮಿಕ(Religious), ಭಾಷಿಕ(Linguistic), ಸಾಂಸ್ಕೃತಿಕ (Cultural) ಇತ್ಯಾದಿ ವೈವಿಧ್ಯತೆ ಸಹಸ್ರಾರು ವರ್ಷಗಳಿಂದ ಭದ್ರವಾಗಿ ಬೇರುಬಿಟ್ಟಿವೆ. ಆ ವೈವಿಧ್ಯತೆಯನ್ನು ಯಾವ ಅಣುವೈಜ್ಞಾನಿಕ ಶಕ್ತಿಯಿಂದಲೂ ತೊಡೆಯುವುದು ಸಾಧ್ಯವಾಗಿಲ್ಲ. ಇಂಥ ಪರಿಸ್ಥಿತಿಯನ್ನು ಜಗತ್ತಿನ ಇನ್ಯಾವ ದೇಶವೂ ಎದುರಿಸುತ್ತಿಲ್ಲ. ಆದ್ದರಿಂದಲೆ ಇಷ್ಟು ಭಿನ್ನ–ಭೇದಗಳು, ವೈವಿಧ್ಯತೆ ಇದ್ದರೂ ಇಲ್ಲಿಯ ಜನ ಸಾಧ್ಯವಾದಷ್ಟುಮಟ್ಟಿಗೆ ಒಂದಾಗಿ ಬಾಳಿದ್ದಾರೆ. ಈಗಲೂ ಬಹುಮಟ್ಟಿಗೆ ಬಾಳುತ್ತಿದ್ದಾರೆ. ಈ ದೇಶದ ಈ ವೈಶಿಷ್ಟ್ಯ ಜಗತ್ತಿನ ಇನ್ನಾವುದೇ ದೇಶದಲ್ಲೂ ಕಂಡುಬಂದಿಲ್ಲ. ಇದೊಂದು ಪವಾಡ ಸದೃಶ ಆಶ್ಚರ್ಯ ಎಂಬುದಾಗಿ ನೆಹರೂ ತಮ್ಮದೊಂದು ಗ್ರಂಥದಲ್ಲಿ ಬರೆದಿದ್ದಾರೆ. ಇಂಥ ಜೀವನಕ್ಕೆ ಈ ದೇಶದ ಮಹದ್ ಅದ್ಭುತ ಪವಾಡವನ್ನು ಜಗತ್ತು ವಿಸ್ಮಯದಿಂದ ನೋಡುತ್ತಿದೆ. ಇಂತಹ ಬಹುಮುಖಿ ವೈವಿಧ್ಯಮಯ ಸಂಸ್ಕೃತಿಗಳನ್ನುಳಿಸಿ ಒಗ್ಗಟ್ಟನ್ನು ಸಾಧಿಸುವ ಬಹು ಕ್ಲಿಷ್ಟ ಸಮಸ್ಯೆಯನ್ನು ನಮ್ಮ ದೇಶ ಸ್ವತಂತ್ರವಾದಮೇಲೆ ಎದುರಿಸಬೇಕಾಯಿತು. ಹೊಂದಿಕೊಂಡು ಹೋಗುವಂಥ ಸಂವಿಧಾನವನ್ನು ರಚಿಸಬೇಕಾಗಿತ್ತು. ನಮ್ಮ ಸಂವಿಧಾನ ರಚನಾ ಸಭೆ (Constituent Assembly) ಸೇರಿದಾಗ ನಮ್ಮ ದೇಶಕ್ಕೆ ಎಂಥ ಸಂವಿಧಾನ ಬೇಕು ಎಂಬುದಕ್ಕೆ ಹಿಂದಿನ ಯಾವ ನಿದರ್ಶನಗಳು ಇರಲಿಲ್ಲ. ಅಮೆರಿಕಾ, ಕೆನಡಾ, ಆಸ್ಟ್ರೇಲಿಯಾ, ಸ್ವಿಜ್ಜರ್‌ಲ್ಯಾಂಡ್, ರಷ್ಯಾ ಅಥವಾ ಇನ್ನಾವುದೇ ದೇಶದ ಮಾದರಿಗಳನ್ನು ನಾವು ಅನಾಮತ್ತಾಗಿ ಅನುಸರಿಸುವಂತಿರಲಿಲ್ಲ. ಆದ್ದರಿಂದ ನಮ್ಮ ಸಂವಿಧಾನ ಪಿತೃ (Founding Fathers) ಗಳು ಸಂವಿಧಾನ ಶಾಸನ ತಜ್ಞರಾದ ಮಹಾಮೇಧಾವಿಗಳ ಒಂದು ಮಾರ್ಗದರ್ಶಕ ಸಣ್ಣ ಸಮಿತಿಯನ್ನು ರಚಿಸಿದರು. ಆ ಸಮಿತಿಯಲ್ಲಿದ್ದ ಮೇಧಾವಿಗಳು, ಸಂವಿಧಾನ ತಜ್ಞರು ಜಗತ್ತಿನ ಅಗಾಧವಾದ ಪಾಂಡಿತ್ಯದ ಮಹದ್‌ವ್ಯಕ್ತಿಗಳು, ನಮ್ಮ ದೇಶಕ್ಕೆ ಎಂಥ

ನಿವೃತ್ತ ನ್ಯಾಯಾಧೀಶರು.

ಸಂವಿಧಾನ ಬೇಕೆಂಬುದನ್ನು ನಿರ್ಧರಿಸಿ ಸಂವಿಧಾನ ರಚನಾ ಸಭೆಯ ಮುಂದೆ ಸೂಚನೆಯನ್ನು ಇಟ್ಟರು. ಆ ಮಹದ್‌ವ್ಯಕ್ತಿಗಳು ಸೂಚಿಸಿದಂತೆ, ನಮ್ಮ ದೇಶಕ್ಕೆ ಒಕ್ಕೂಟ ವ್ಯವಸ್ಥೆ (Federal ಮಾದರಿಯ) ಆ ಸೂಚನೆಯ ತಳಹದಿ ಜೀವಾಜೀವಾಳ ಈ ದೇಶದಲ್ಲಿರುವ ರಾಜ್ಯಗಳೂ ತಮ್ಮ ವೈವಿಧ್ಯತೆಗಳನ್ನು ಉಳಿಸಿಕೊಳ್ಳಲು ಹಾಗೂ ಆ ರಾಜ್ಯಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಒಕ್ಕೂಟದ ಅಂಕೆಯಲ್ಲಿ ಒಂದರ್ಥದಲ್ಲಿ ಅಧೀನವಾಗಿ ಬಾಳಬೇಕು. ಅಂದರೆ ರಾಜ್ಯಗಳು ತಮ್ಮ ತಮ್ಮ ಭಾಷೆ, ಲಿಪಿ, ಧರ್ಮ, ಸಂಸ್ಕೃತಿ– ಇವುಗಳಿಗೆ ಮುಕ್ತ ಅವಕಾಶ ಇರಬೇಕು. ಕೇಂದ್ರ ಒಕ್ಕೂಟ ರಾಜ್ಯವ್ಯವಸ್ಥೆ ರಾಜ್ಯಗಳಿಗೆ ಸ್ವಾಯತ್ತತೆ(Autonomy)ಯನ್ನು ಕೊಟ್ಟು ತನ್ನ ಪರಮಾಧಿಕಾರ(Sovereignty) ಸ್ಥಾಪಿಸಬೇಕು. ಈ ದೇಶದ ರಾಜ್ಯಾಡಳಿತೆ ಕೇಂದ್ರ ಸರ್ಕಾರದ ಪರಮಾಧಿಕಾರವನ್ನು ಉಳಿಸಿಕೊಂಡು ರಾಜ್ಯಗಳಿಗೆ ತಮ್ಮ ವೈಶಿಷ್ಟ್ಯಗಳಿಗೆ ತಕ್ಕಂತೆ ಸೀಮಿತ ಸ್ವತಂತ್ರ ಆಡಳಿತೆಯೂ ಇರಬೇಕು. ಒಂದುವೇಳೆ ರಾಜ್ಯಗಳು ಅಂಕೆಮೀರಿ ನಡೆದುಕೊಂಡರೆ ಕೇಂದ್ರ ಸರ್ಕಾರ ಕೂಡಲೇ ತನ್ನ ಪರಮಾಧಿಕಾರ ಪ್ರಯೋಗದಿಂದ ಒಕ್ಕೂಟವನ್ನು ಕಾಪಾಡಿಕೊಳ್ಳುವ ಶಕ್ತಿಯನ್ನು ಸ್ಥಾಪಿಸುತ್ತದೆ. ಈ ಗುರಿಯನ್ನು ನಮ್ಮ ಸಂವಿಧಾನ ಹೇಗೆ ಸಾಧಿಸಿದೆ? ಎಂಬುದನ್ನು ಸಂವಿಧಾನದ I List, II Listಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಉದಾಹರಣೆಗೆ ಕೇಂದ್ರ ಸರ್ಕಾರ ರಕ್ಷಣೆ, ವಿದೇಶಿ ಧೋರಣೆ, ಕರೆನ್ಸಿ, ಸಾರಿಗೆ– ಇವುಗಳ ವಿಚಾರದಲ್ಲಿ ರಾಜ್ಯ ಸರ್ಕಾರಗಳು ಯಾವ ಶಾಸನಗಳನ್ನೂ ಮಾಡುವಂತಿಲ್ಲ. 2ನೆಯ ಪಟ್ಟಿಯಲ್ಲಿ ರಾಜ್ಯಗಳು ಯಾವ ಯಾವ ವಿಷಯಗಳಲ್ಲಿ ಶಾಸನವನ್ನು ರಚಿಸಿಕೊಳ್ಳಬಹುದು ಎಂಬುದನ್ನು ಪಟ್ಟಿ ಮಾಡಲಾಗಿದೆ. ಉದಾಹರಣೆಗೆ ಸಂವಿಧಾನದ 72, 73 ರ ತಿದ್ದುಪಡಿಯಾಗುವುದಕ್ಕಿಂತ ಮುಂಚೆ, ಗ್ರಾಮ ಪಂಚಾಯತಿ, ಶಿಕ್ಷಣ, ಅರಣ್ಯ ಸಂರಕ್ಷಣೆ, ಆರೋಗ್ಯ– ಈ ವಿಷಯಗಳ ಬಗ್ಗೆ ರಾಜ್ಯಗಳು ತಮಗೆ ಬೇಕಾದಂತೆ ಶಾಸನಗಳನ್ನು ರೂಪಿಸಿಕೊಳ್ಳುವ ಅಧಿಕಾರವಿತ್ತು. ಈ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರ ಯಾವ ಶಾಸನವನ್ನು ದೇಶಕ್ಕೆಲ್ಲ ಅನ್ವಯಿಸುವಂತೆ ರಚಿಸಲಾಗುತ್ತಿರಲಿಲ್ಲ. ಆದರೆ 1974ರ ತುರ್ತು ಪರಿಸ್ಥಿತಿಯ ಕಾಲಕ್ಕೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳ ವಿಷಯದಲ್ಲಿಯೂ ಶಾಸನ ಮಾಡುವ ಅಧಿಕಾರವನ್ನು ಪಡೆದುಕೊಂಡಿತು. ಆ ತರುವಾಯ 1984ರಲ್ಲಿ ಸ್ಥಳೀಯ ಸಂಸ್ಥೆಗಳಿಗೂ ಕೇಂದ್ರ ಸರ್ಕಾರವೇ ಶಾಸನ ರಚಿಸಬಹುದಾದ ಅಧಿಕಾರವನ್ನು ಪಡೆದುಕೊಂಡಿತು. ಈ ಸಂವಿಧಾನ ತಿದ್ದುಪಡಿಯಾಗುವುದಕ್ಕಿಂತ ಮುಂಚೆ ಕೇಂದ್ರ ಮತ್ತು ರಾಜ್ಯ ಶಾಸನಗಳು ಎರಡೂ ಶಾಸನ ಮಾಡಬಹುದಾದ ಅಧಿಕಾರವಿತ್ತು. ಅದನ್ನು ಸಂವಿಧಾನದ III Listನಲ್ಲಿ ನಮೂದಿಸಲಾಗಿದೆ. ಯಾವಾಗ ಒಕ್ಕೂಟದ ಭದ್ರತೆಗೆ ಅಪಾಯವುಂಟಾಗಬಹುದಾದ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರವೇ ರಾಜ್ಯ ಸರ್ಕಾರವನ್ನು ವಹಿಸಿಕೊಳ್ಳುವಂಥ Emergency Power ಸರ್ವಾಧಿಕಾರವನ್ನು ಪಡೆದುಕೊಳ್ಳುವ ಏರ್ಪಾಟಿದೆ. ಆಗ ರಾಜ್ಯಪಾಲರೆ ರಾಷ್ಟ್ರಪತಿಗಳ ಪ್ರತಿನಿಧಿಗಳಾಗಿ ಆಡಳಿತ ನಡೆಸುತ್ತಾರೆ. ಕೇಂದ್ರ ಸರ್ಕಾರ III Listನಲ್ಲಿ ಈ ವಿಷಯವನ್ನು ಸೇರಿಸಿ, ರಾಜ್ಯ ಸರ್ಕಾರಗಳ ಅನಿರ್ಬಂಧ ಕರ್ತವ್ಯ ನಿರ್ವಹಣೆಗೆ ನಿರ್ಬಂಧನೆಗಳನ್ನು ಮಾಡುವ ಅಧಿಕಾರ ಪಡೆದುಕೊಂಡಿತು. ಉದಾಹರಣೆಗೆ ಭೂಸುಧಾರಣೆ, ಅರಣ್ಯ, ಗಣಿಗಾರಿಕೆ, ವಿದ್ಯೆ, ಸ್ಥಳೀಯ ಸಂಸ್ಥೆಗಳು, ಆರೋಗ್ಯ ಮೊದಲು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿದ್ದವು.

1974ರಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಭೂ ಸುಧಾರಣಾ ಕಾಯಿದೆಯನ್ನು ಜಾರಿಗೆ ತಂದಮೇಲೆ ಆ ಕಾಯಿದೆಯನ್ನು ಯಾವ ನ್ಯಾಯಾಲಯವೂ ಪ್ರಶ್ನಿಸಲಾಗದಂತೆ 1984ರಲ್ಲಿ ರಾಜೀವಗಾಂಧಿ ಪ್ರಧಾನ ಮಂತ್ರಿಗಳಾದಾಗ ಸಂವಿಧಾನದ 9ನೇ ಷೆಡ್ಯೂಲ್‌ಗೆ (ಪರಿಶಿಷ್ಟIX) ಸೇರಿಸಲಾಯಿತು. ಹೀಗೆ ರಾಜ್ಯ ಮತ್ತು ಒಕ್ಕೂಟ ಸರ್ಕಾರಗಳು ಒಂದು ವಿಶಿಷ್ಟ ಬಗೆಯ ಸಂವಿಧಾನ ರೂಪಿಸಿತ್ತು. ಅದನ್ನು ಕೇವಲ ಒಕ್ಕೂಟ ಸಂವಿಧಾನ ಎಂದು ಹೇಳಲಿಕ್ಕೆ ಬರುವುದಿಲ್ಲ. ಅಥವಾ ಅದು ಶುದ್ಧ ಸ್ವತಂತ್ರ ರಾಜ್ಯಗಳ ಒಂದು ಸಡಿಲ ಸಂವಿಧಾನವೂ ಅಲ್ಲ. ಅದನ್ನು 'Co-Operative Federalism' ಎಂಬ ವಿಶಿಷ್ಟ ಹೆಸರಿನಿಂದ ಸಂವಿಧಾನ ತಜ್ಞರು ಕರೆದಿದ್ದಾರೆ. ಈ ಮೇಲ್ಕಂಡ ಉದ್ದೇಶವನ್ನು ಸಾಧಿಸಲು ಅಗತ್ಯವಾದ ಕೇಂದ್ರ ರಾಜ್ಯಾಡಳಿತೆ ವ್ಯವಸ್ಥೆ ಈ ದೇಶದಲ್ಲಿರುವ ವಿವಿಧ ರಾಜ್ಯಗಳ ಆಡಳಿತ ವ್ಯವಸ್ಥೆ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ, ಇತ್ಯಾದಿ ವಿವರಗಳನ್ನು ನಮ್ಮ ಸಂವಿಧಾನದಲ್ಲಿ ರೂಪಿಸಲಾಗಿದೆ. ಹಾಗೆಯೆ ದೇಶದ ಎಲ್ಲ ನಾಗರಿಕರಿಗೂ ಅನ್ವಯಿಸುವ ಮೂಲಭೂತ ಹಕ್ಕುಗಳು ರಾಜ್ಯಾಡಳಿತೆಯನ್ನು



ನಡೆಸುವ ನಿರ್ದೇಶಕ ಸೂತ್ರಗಳು ಧಾರ್ಮಿಕ, ಭಾಷಿಕ, ಅಲ್ಪಸಂಖ್ಯಾತ ರಕ್ಷಣೆ, ಹಿಂದುಳಿದವರ ಮತ್ತು ಅನುಸೂಚಿತ ಜಾತಿ ಮತ್ತು ಪಂಗಡಗಳ ಹಿತರಕ್ಷಣೆ ಇತ್ಯಾದಿ ಸಮಸ್ಯೆಗಳಿಗೆ ಅನುಗುಣವಾದ ಸಂವಿಧಾನ ಶಾಸನವನ್ನು ರಚಿಸಲಾಗಿದೆ. ಅವುಗಳನ್ನೆಲ್ಲ ಈ ಚಿಕ್ಕ ಪ್ರಬಂಧದಲ್ಲಿ ಸ್ಥೂಲವಾಗಿಯಾದರೂ ನಿರೂಪಿಸುವುದು ಕಷ್ಟಸಾಧ್ಯ. ಆದ್ದರಿಂದ ನಮ್ಮ ಸಂವಿಧಾನ ಜಗತ್ತಿನಲ್ಲಿಯೇ ಅತ್ಯಂತ ದೀರ್ಘವಾದ 395 ಆರ್ಟಿಕಲ್‌ಗಳುಳ್ಳ ಲಿಖಿತ ಸಂವಿಧಾನವನ್ನು ರೂಪಿಸಲಾಗಿದೆ. ಈ ಸಂವಿಧಾನ ಅತ್ಯಂತ ಶ್ರೇಷ್ಠವಾದುದು ಎಂದು ನಮ್ಮ ಸಂವಿಧಾನ ರಚನಾ ಪಿತೃಗಳು ಹೇಳಿದ್ದಾರೆ. ಈ ಮಾತನ್ನು ವಿದೇಶಗಳಲ್ಲೂ ಒಪ್ಪಿಕೊಂಡಿದ್ದಾರೆ. ಈ ಸಂವಿಧಾನವನ್ನು 'ಸಂವಿಧಾನ ರಚನಾಸಭೆ'(Constituent Assembly) ಅಂಗೀಕರಿಸಿದ ದಿನ 26 ನವೆಂಬರ್ 1949 ರಂದು. ಡಾ. ಅಂಬೇಡ್ಕರ್ ಈ ಸಂವಿಧಾನವನ್ನು ಕುರಿತು ಒಂದು ಶಾಶ್ವತ ಸತ್ಯವನ್ನು ಹೀಗೆ ಘೋಷಿಸಿದರು. "ಈ ಸಂವಿಧಾನ ಅತ್ಯಂತ ಶ್ರೇಷ್ಠವಾದದ್ದು ಎಂದು ಗೌರವಾನ್ವಿತ ಕೆಲವು ಸದಸ್ಯರು ಹೇಳಿದರು.

ಕೆಲವರು ಇದು ಯಾತಕ್ಕೂ ಬಾರದ ಸಂವಿಧಾನ ಎಂದು ಹೇಳಿದರು. ಒಂದು ಸಂವಿಧಾನ ಒಳ್ಳೆಯದ್ದೆ ಕೆಟ್ಟದ್ದೆ ಎಂಬುದು ಅದರಲ್ಲಿ ಏನೂ ಬರೆದಿದೆ ಎಂದು ಅವಲಂಬಿಸುವುದಿಲ್ಲ. ಅದನ್ನು ಆಚರಣೆಯಲ್ಲಿ ತರುವ ಜನ ಒಳ್ಳೆಯವರಾದರೆ ಈ ಸಂವಿಧಾನ ಒಳ್ಳೆಯದು. ಅವರು ಅನರ್ಹರಾದರೆ ಇದು ಕೆಟ್ಟ ಸಂವಿಧಾನ". ಆದ್ದರಿಂದ ನಮ್ಮ ದೇಶದ ಜನ ಈ ಸಂವಿಧಾನವನ್ನು ಅಂಗೀಕರಿಸಿ 65 ವರ್ಷಗಳಿಂದ ಈ ಸಂವಿಧಾನವನ್ನು ಅನುಸರಿಸಿ ರಾಜ್ಯಾಡಳಿತೆ ನಡೆಸುತ್ತಿದ್ದಾರೆ. ಇದನ್ನು ಕಾಪಾಡಿಕೊಂಡುಹೋಗುವ ಹೊಣೆ ಪ್ರಜಾಸತ್ತಾತ್ಮಕ ರಾಜ್ಯಾಡಳಿತೆಯನ್ನು ಒಪ್ಪುವ ಜನ, ಈ ಸಂವಿಧಾನವನ್ನು ರಕ್ಷಿಸುವ ಹೊಣೆ ಪ್ರಜೆಗಳದು. ಇದಕ್ಕೆ ಭಂಗ ತಂದರೆ ಪ್ರಜಾಸತ್ತೆಗೆ ಬಹುದೊಡ್ಡ ಅಪಾಯ. ಸರ್ವಾಧಿಕಾರ ಖಡ್ಗಕ್ಕೆ ಬಲಿಯಾದಂತೆಯೆ. ❑

# ಭಾರತದಲ್ಲಿ ಸಂಘೀಯ ವ್ಯವಸ್ಥೆ

ಪ್ರೊ. ಆರ್. ಎಲ್ ಎಂ. ಪಾಟೀಲ



**ನಮ್ಮ ಸಂಘೀಯ ಸರಕಾರ ವ್ಯವಸ್ಥೆಯು ಒಂದು ನಿರ್ದಿಷ್ಟ ಉಪಯುಕ್ತತೆಯನ್ನು ಹೊಂದಬೇಕೆಂದು ಅಪೇಕ್ಷೆ ಪಟ್ಟಲ್ಲಿ, ಸದ್ಯದ ವ್ಯವಸ್ಥೆಯು ನಿಜಕ್ಕೂ ಅಸಮಾಧಾನಕರವಾಗಿದೆ. ಇದು ಸಮಾಧಾನಕಾರಕವಾಗಬೇಕೆಂದಲ್ಲಿ ವಿಸ್ತ್ರತ ಬದಲಾವಣೆಯನ್ನು ಮಾಡಲೇಬೇಕು.**

ಭಾರತದ ರಾಜಕೀಯ ಪ್ರಣಾಲಿಯಲ್ಲಿ ಸಂಘೀಯ ವ್ಯವಸ್ಥೆಯು ವಿಶಿಷ್ಟಸ್ಥಾನ ಹೊಂದಿದೆ. ವಿಶ್ವದಲ್ಲಿರುವ ಯಾವುದೇ ಸಂಘಟನಾ ಸರಕಾರಗಳಿಂದ ಅತಿ ಭಿನ್ನವಾದಂತಹ ವ್ಯವಸ್ಥೆ ಇದಾಗಿದೆ. ಇತ್ತ ಪೂರ್ತಿಯಾಗಿ ಏಕಾತ್ಮ ಸರಕಾರವೂ ಅಲ್ಲ, ಅತ್ತ ಪೂರ್ತಿಯಾಗಿ ಸಂಘೀಯ, ಸರಕಾರವೂ ಅಲ್ಲವೆಂಬಂತೆ ಇದೊಂದು 'ವಿಶಿಷ್ಟಾದ್ವೈತ' ಸರಕಾರವಾಗಿದೆ.

1919ರಲ್ಲಿ ಬ್ರಿಟಿಷರು ನೀಡಿದ ಸಂವಿಧಾನದಲ್ಲಿ ಮೊದಲ ಬಾರಿಗೆ ಸಂಘೀಯ ವ್ಯವಸ್ಥೆಯು ರೂಪುಗೊಂಡಿತ್ತು. ಇದನ್ನೇ 1935ರ ಸಂವಿಧಾನದಲ್ಲೂ ಮುಂದುವರೆಸಿಕೊಳ್ಳಲಾಯಿತು. 1949ರ ಸ್ವತಂತ್ರ ಭಾರತದ ಸಂವಿಧಾನದಲ್ಲಿ ಕೂಡ ಇದನ್ನೇ ಬಳಸಲಾಯಿತು. ದೇಶದ ವಿಭಜನೆಯಾಗಿ ಪಾಕಿಸ್ತಾನವು ನಿರ್ಮಾಣವಾಗದೇ ಹೋಗಿದ್ದರೆ, ಪ್ರಾಂತಸರಕಾರಗಳು ಹೆಚ್ಚು ಶಕ್ತಿಶಾಲಿಯಾಗಿ ಕೇಂದ್ರ ಸರಕಾರವು ಬಲಹೀನವಾಗಿ ಹೊರಹೊಮ್ಮುವ ಸಂಭವವು ಜಾಸ್ತಿಯಿತ್ತು. ಹಾಗೆಂದು 1946 ಡಿಸೆಂಬರ್‌ನಲ್ಲಿ ಪ್ರಪ್ರಥಮ ಬಾರಿಗೆ ಸಂವಿಧಾನ ಸಭೆಯು ನಿರ್ಣಯವೊಂದನ್ನು (Objective Resolution) ಕೈಗೊಂಡಿತ್ತು. ಆದರೆ ದೇಶದ ವಿಭಜನೆಯಾಗುತ್ತಿದ್ದಂತೆ ಸಂವಿಧಾನ ನಿರ್ಮಾಪಕರು ರಾಷ್ಟ್ರದ ಏಕತೆ ಹಾಗೂ ದೃಢತೆಯತ್ತ ಪೂರ್ತಿ ಗಮನ ಹರಿಸಿದರು. ಆದ್ದರಿಂದ ನವಭಾರತದ ಸಂವಿಧಾನದ ಮೊದಲ ವಾಕ್ಯದಲ್ಲಿಯೇ ಫೆಡರೇಶನ್ ಶಬ್ದದ ಬದಲು ಯೂನಿಯನ್ ಆಫ್ ಸ್ಟೇಟ್ಸ್ ಎಂಬ ಪದವನ್ನು ಬಳಸಲಾಯಿತು. ಡಾ॥ ಬಾಬಾ ಸಾಹೇಬ ಅಂಬೇಡ್ಕರರು ಈ ಆಯ್ಕೆಯನ್ನು ಚೆನ್ನಾಗಿ ಸಮರ್ಥಿಸಿಕೊಳ್ಳುತ್ತ ವಿವರಣೆ ನೀಡಿದ್ದು ಹೀಗೆ – ಅಮೆರಿಕದಲ್ಲಿ ವಿವಿಧ ಸ್ವತಂತ್ರ ರಾಜ್ಯ (ಪ್ರಾಂತ)ಗಳು ತಮ್ಮೆಲ್ಲರ ಸಾಮಾನ್ಯ ಏಳಿಗೆ ಹಾಗೂ ಅನುಕೂಲಕ್ಕಾಗಿ ಸಂಘೀಯ ಸರಕಾರವನ್ನು ಆವಿಷ್ಕಾರ ಮಾಡಿದರು. ಅಲ್ಲಿ ರಾಜ್ಯಗಳು ಅವಿನಾಶಿ. ಆದರೆ ಇಲ್ಲಿಯ ಪರಿಸ್ಥಿತಿ ಹಾಗಿಲ್ಲ. ಸ್ಥಿರತೆ ಹಾಗೂ ಭದ್ರತೆಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ದೇಶದ ಐಕ್ಯ ಹಾಗೂ ಸಮಗ್ರತೆಗೆ ಚ್ಯುತಿ ಬಾರದಂತೆ ನಾವು ಒಕ್ಕೂಟ ಸರಕಾರವೊಂದನ್ನು ನಿರ್ಮಾಣ ಮಾಡುತ್ತಿದ್ದೇವೆ. ಇದರಡಿ ರಾಜ್ಯಗಳಿಗೆ ಸ್ವಂತ ಸ್ಥಾನವಿದ್ದರೂ ಅವು ಕೇಂದ್ರದಿಂದ ಬೇರ್ಪಡುವ ಹಕ್ಕು ಹೊಂದಲಾರವು. ಅವು ಸದಾ ಕೇಂದ್ರದ ಜೊತೆಗೇನೇ ಇರಬೇಕು. ಎರಡೂ ಸರಕಾರಗಳೂ ಪರಸ್ಪರ ಪೂರಕವಾಗಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಕ್ಷಮವಾಗಿ ಕಾರ್ಯನಿರ್ವಹಿಸಬೇಕು. ಸಾಮಾನ್ಯವಾಗಿ ಎರಡೂ ಸರಕಾರಗಳು ಫೆಡರಲ್ ಮಾದರಿಯಲ್ಲಿ ಕೆಲಸಮಾಡುತ್ತವೆ. ಆದರೆ ವಿಪರೀತ ಸಂದರ್ಭದಲ್ಲಿ ಏಕಾತ್ಮ ಸರಕಾರದ ಮಾದರಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. (ಸಂವಿಧಾನ ಸಭೆಯಲ್ಲಿ ನವೆಂಬರ್ 4, 1948).

ಡಾ॥ ಅಂಬೇಡ್ಕರ್‌ರವರ ಹೇಳಿಕೆ ಸಂಕೀರ್ಣತೆಯಿಂದ ಕೂಡಿದ್ದು, ನಮ್ಮ ಸಂಘೀಯ ವ್ಯವಸ್ಥೆಯ ನೈಜರೂಪವನ್ನು ಗ್ರಹಿಸುವುದು ಸುಲಭ ಸಾಧ್ಯವಾಗಿಲ್ಲ. ಅಂದಿನಿಂದ ಇಂದಿನವರೆಗೂ ವಿದ್ವಾಂಸರಲ್ಲಿ ಹಾಗೂ ರಾಜಕಾರಣಿಗಳಲ್ಲಿ ಈ ಬಗ್ಗೆ ಒಮ್ಮತ ಮೂಡಿಲ್ಲ. ವಿವಾದಕ್ಕೆ ಆಸ್ಪದ ಕೊಡಲು ಸಾಕಷ್ಟು ಅಂಶಗಳಿವೆ. ಸಂವಿಧಾನದಲ್ಲಿಯೇ ನಿರೂಪಿತವಾದಂತೆ ಹೊರನೋಟಕ್ಕೆ ನಮ್ಮದು

ಮಾಜಿ ಮುಖ್ಯಸ್ಥರು, ರಾಜಕೀಯ ಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ.

ಫೆಡರಲ್ ವ್ಯವಸ್ಥೆಯೇ ಎನ್ನುವ ಹಾಗೆ ಈ ಅಂಶಗಳಿವೆ.

1. ಎರಡೆರಡು ಸರಕಾರಗಳ ಅಸ್ತಿತ್ವ (ಒಂದು ಕೇಂದ್ರದಲ್ಲಿ, ಅಂಗಗಳಾಗಿ ರಾಜ್ಯಗಳಲ್ಲಿ)
2. ದೇಶದ ಸಮಗ್ರ ರಾಜಕೀಯ ಶಕ್ತಿಗಳನ್ನು ಇವೆರಡೂ ಸ್ತರಗಳಲ್ಲಿಯ ಸರಕಾರಗಳ ಮಧ್ಯೆ ಸ್ಪಷ್ಟವಾದಂತಹ ವಿಭಜನೆ ಮಾಡಿರುವುದು.
3. ರಾಜಸ್ವದ ಮೂಲಗಳ ವಿಭಜನೆ.
4. ರಾಜ್ಯಗಳ ಭೌಗೋಳಿಕ / ಕ್ಷೇತ್ರೀಯ ವಿಂಗಡಣೆ ಹಾಗೂ
5. ಎರಡು ಸ್ತರಗಳ ಸರಕಾರಗಳ ಮಧ್ಯ ವಿವಾದವುಂಟಾದಲ್ಲಿ ಬಗೆಹರಿಸಲು ಸಮರ್ಥವಾದ ನ್ಯಾಯಾಂಗ.

ಜನರ ಮನಸ್ಸಿನಲ್ಲೂ ಕೂಡ, ಎರಡು ಸರಕಾರಗಳ ಅಸ್ತಿತ್ವದ ಬಗ್ಗೆ ಸರಿಯಾದ, ಸ್ಪಷ್ಟವಾದ ಕಲ್ಪನೆಯಿದೆ. ಕೇಂದ್ರ ಸರಕಾರವೆಂದರೇನು? ಕರ್ನಾಟಕ ಸರಕಾರವೆಂದರೇನು? ತಮಿಳ್ನಾಡು, ಆಂಧ್ರ, ಮಹಾರಾಷ್ಟ್ರ, ಉತ್ತರ ಪ್ರದೇಶ ಮುಂತಾದ ರಾಜ್ಯಗಳೆಂದರೇನು ಎಂಬುದನ್ನು ಜನರು ಅರ್ಥಮಾಡಿಕೊಂಡಿದ್ದಾರೆ.

ರಾಜ್ಯಪಾಲರು, ಮುಖ್ಯಮಂತ್ರಿಗಳು, ರಾಜ್ಯ ವಿಧಾನಸಭೆಗಳು, ಸರಕಾರಿ ಅಧಿಕಾರಿಗಳು, ರಾಜ್ಯದ ಕಾನೂನುಗಳು, ಇವೆಲ್ಲ ಕಲ್ಪನೆ ಅವರಿಗೆ ಇದೆ. ಜೊತೆಗೇನೇ ಕೇಂದ್ರದ / ರಾಷ್ಟ್ರದ ಪ್ರಧಾನಮಂತ್ರಿ, ರಾಷ್ಟ್ರಪತಿ, ಕೇಂದ್ರದ ಅಧಿಕಾರಗಳು ಹಾಗೂ ಅಧಿಕಾರಿಗಳು, ಕೇಂದ್ರದ ಕಾನೂನುಗಳು, ಕೇಂದ್ರದ ಸಂಸತ್ತು ಇತ್ಯಾದಿ ವಿಷಯಗಳನ್ನೂ ತಿಳಿದವರಾಗಿದ್ದಾರೆ. ಎಮ್.ಪಿ. ಮತ್ತು ಎಮ್.ಎಲ್.ಎ.ಗಳ ನಡುವಿನ ವ್ಯತ್ಯಾಸವನ್ನು ಹಾಗೆಯೇ ಮುಖ್ಯಮಂತ್ರಿ ಪ್ರಧಾನಮಂತ್ರಿಯ ನಡುವಿನ ವ್ಯತ್ಯಾಸವನ್ನೂ ಬಲ್ಲವರಾಗಿದ್ದಾರೆ. ಆದರೆ, ವಾಸ್ತವದಲ್ಲಿ ಹೊರನೋಟಕ್ಕೂ ಆಂತರಿಕ ನೋಟಕ್ಕೂ ತುಂಬ ವ್ಯತ್ಯಾಸಗಳಿವೆ. ವಿಶ್ವದ ಯಾವುದೇ ಸಂಘಸರಕಾರಗಳಲ್ಲಿರದ ಅನೇಕ ಮಹತ್ವದ ಅಂಶಗಳು ನಮ್ಮ ಮಾದರಿಯಲ್ಲಿ ನುಸುಳಿವೆ. ವಿಶೇಷವಾಗಿ ಸಂಘ ಸರಕಾರಗಳಲ್ಲಿ ಇರಬಾರದ ಲಕ್ಷಣಗಳೂ ನಮ್ಮಲ್ಲಿ ಕಂಡುಬರುತ್ತವೆ. ಅವುಗಳನ್ನು ಈ ರೀತಿ ವಿವರಿಸಬಹುದಾಗಿದೆ.

1. ರಾಜ್ಯಗಳಿಗೆ ಅಂದರೆ ಅಂಗಸಂಸ್ಥೆಗಳಿಗೆ ಪ್ರತ್ಯೇಕವಾದ ಸಂವಿಧಾನಗಳಿಲ್ಲ. ಎಲ್ಲರಿಗೂ ಒಂದೇ ಸಂವಿಧಾನವಿದ್ದು, ಅದೂ ಕೂಡ ರಾಜ್ಯಗಳಿಂದ ಮಾರ್ಪಾಡಾಗುವಂತಿಲ್ಲ, ಕೇಂದ್ರ ಸರಕಾರಕ್ಕೆ ಅದರ ಮೇಲೆ ಹಿಡಿತವಿದೆ.
2. ರಾಜ್ಯಗಳ ಅಸ್ತಿತ್ವವೇ ರಾಜ್ಯಗಳ ಕೈಯಲ್ಲಿಲ್ಲ. ತನಗೆ ಬೇಕೆಂದಂತೆ ರಾಜ್ಯಗಳ ಕ್ಷೇತ್ರ, ಹೆಸರು, ಸೀಮೆಗಳನ್ನು ಕೇಂದ್ರ ಸರಕಾರವು ಬದಲಿಸಬಹುದಾಗಿದೆ.
3. ರಾಜ್ಯ ಸರಕಾರದ ಸರ್ವೋಚ್ಚ ಪದಾಧಿಕಾರಿಯಾದ ರಾಜ್ಯ ಪಾಲರನ್ನು ಕೇಂದ್ರಸರಕಾರವೇ ನಿಯುಕ್ತಿ ಮಾಡುತ್ತದೆ ಹಾಗೂ ವಜಾಗೊಳಿಸುತ್ತದೆ. ರಾಜ್ಯ ಸರಕಾರಗಳಿಗೆ ಅಥವಾ ಜನತೆಗೆ ತಮ್ಮನ್ನು ಪ್ರತಿನಿಧಿಸುವ ರಾಜ್ಯಪಾಲರನ್ನು ನೇಮಿಸುವ ಅಧಿಕಾರವಿಲ್ಲ, ಅವರ ಮೇಲೆ ನಿಯಂತ್ರಣವೂ ಇವರಿಗಿಲ್ಲ!
4. ವಿಶ್ವದ ಯಾವುದೇ ಸಂಘೀಯ ಸರಕಾರದಲ್ಲಿದ್ದಂತೆ ಇಲ್ಲಿ ದ್ವಿಪೌರತ್ವವಿಲ್ಲ. ದೇಶದ ಜನತೆಗೆ 'ಭಾರತೀಯ' ಎಂಬ ಒಂದೇ ನಾಗರಿಕತ್ವವಿದ್ದು, ಕನ್ನಡಿಗ, ಬೆಂಗಾಲಿ, ಪಂಜಾಬಿ, ತಮಿಳು, ಗುಜರಾತಿಯೆಂಬ ಪ್ರಾದೇಶಿಕ ನಾಗರಿಕತ್ವವಿರುವುದಿಲ್ಲ.
5. ಸರಕಾರಿ ಅಧಿಕಾರಿಗಳಲ್ಲಿ ಸಂಪೂರ್ಣವಾದ ವಿಭಜನೆಯಿಲ್ಲ. ಕೇಂದ್ರ ಸರಕಾರದ ಅಧಿಕಾರಿಗಳು ಕೇಂದ್ರಸರಕಾರಕ್ಕೂ ಹಾಗೆಯೇ ರಾಜ್ಯ ಸರಕಾರಗಳಿಗೂ ಸೇವೆ ಸಲ್ಲಿಸುತ್ತಾರೆ. ಹಾಗೆಯೇ ರಾಜ್ಯಸರಕಾರದ ಅಧಿಕಾರಿಗಳು ರಾಜ್ಯ ಹಾಗೂ ಕೇಂದ್ರಸರಕಾರಗಳಿಗೆ ಸೇವೆ ಸಲ್ಲಿಸುತ್ತಾರೆ. ಈ ತರಹದ ವ್ಯವಸ್ಥೆಯು ಇನ್ನೆಲ್ಲೂ ಕಾಣದು ಮತ್ತು ರಾಜ್ಯ ಸರಕಾರದ ಅಧಿಕಾರಿಗಳ ಮೇಲೆ ಕೇಂದ್ರದವರ ನಿಯಂತ್ರಣವಿದ್ದು, ಕೇಂದ್ರದ ಅಧಿಕಾರಿಗಳ ಮೇಲೆ ರಾಜ್ಯಗಳ ನಿಯಂತ್ರಣವಿರುವುದಿಲ್ಲ. ಇದು ನಿಜಕ್ಕೂ ವಿಪರ್ಯಾಸದಿಂದ ಕೂಡಿದ ಸಂಘೀಯ ವ್ಯವಸ್ಥೆ!



6. ಕೇಂದ್ರ ಹಾಗೂ ರಾಜ್ಯ ಸರಕಾರಗಳೆರಡಕ್ಕೂ ಒಂದೇ ನ್ಯಾಯಾಂಗ ವ್ಯವಸ್ಥೆಯಿದೆ. ಇದೂ ಕೂಡ ಬೇರೆ ಸಂಘ ಸಹಕಾರಗಳಲ್ಲಿ ಕಾಣಬರದು. ಅಮೆರಿಕ, ಆಸ್ಟ್ರೇಲಿಯ ಮುಂತಾದ ರಾಷ್ಟ್ರಗಳಲ್ಲಿ ಕೇಂದ್ರಕ್ಕೂ, ರಾಜ್ಯಗಳಿಗೂ ಬೇರೆ ಬೇರೆ ನ್ಯಾಯಾಂಗಗಳಿವೆ. ಆದರೆ ನಮ್ಮಲ್ಲಿ ಒಂದೇ ಸಾಮಾನ್ಯ ವ್ಯವಸ್ಥೆಯಿದೆ. ಅಷ್ಟೇ ಅಲ್ಲ. ನ್ಯಾಯಾಂಗದ ಉಚ್ಚ ಸ್ತರಗಳಲ್ಲಿ ರಾಜ್ಯಗಳಿಗೆ ಯಾವುದೇ ನೇಮಕ ಮಾಡುವ ಹಾಗೂ ವಜಾಗೊಳಿಸುವ ಅಧಿಕಾರಗಳಿಲ್ಲ. ಕೇಂದ್ರಸರಕಾರವೇ ಈ ಪ್ರಮುಖ ವಿಷಯದಲ್ಲೂ ಸಂಪೂರ್ಣ ಅಧಿಕಾರ ಹೊಂದಿದೆ.
7. ಆಡಳಿತಾತ್ಮಕ ವಿಷಯಗಳ ವಿಂಗಡನೆ ಸಂವಿಧಾನದಲ್ಲಿದೆ. ಆದರೂ ವಾಸ್ತವದಲ್ಲಿ ಕೇಂದ್ರ ಸರಕಾರವು ಹೆಚ್ಚು ಹೆಚ್ಚು ಹಿಡಿತವನ್ನು ರಾಜ್ಯ ಸರಕಾರಗಳ ಮೇಲೆ ಸಾಧಿಸುತ್ತದೆ. ಇದಕ್ಕೆ ಕಾರಣಗಳು ಸಾಕಷ್ಟು ಇದ್ದು, ಅವುಗಳ ವರ್ಣನೆ ಸದ್ಯಕ್ಕೆ ಅಪ್ರಸ್ತುತ. ಧನದ ರಾಶಿಯಲ್ಲೂ ಹಿರಿದಾದ ಪಾಲುಗಾರಿಕೆ ಹಾಗೂ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಮೇಲೆ ಕೇಂದ್ರದ ಸಂಪೂರ್ಣ ನಿಯಂತ್ರಣಾಧಿಕಾರ – ಇವು ಮುಖ್ಯ ಕಾರಣಗಳೆನ್ನಬಹುದಾಗಿದೆ.
8. ರಾಜ್ಯಸರ್ಕಾರಗಳು ಸಂವಿಧಾನದ ಪ್ರಕಾರ ಕೆಲಸಮಾಡುತ್ತಿವೆಯೆ/ ಇಲ್ಲವೆ ಎಂಬುದನ್ನು ಕೇಂದ್ರ ಸರ್ಕಾರವು ಏಕಪಕ್ಷೀಯವಾಗಿ ನಿರ್ಧರಿಸಿ, ರಾಜ್ಯ ಸರಕಾರವನ್ನು ವಜಾಗೊಳಿಸಿ ಕೇಂದ್ರದ ಆಡಳಿತವನ್ನು ರಾಜ್ಯದಲ್ಲಿ ಜಾರಿಗೊಳಿಸುವ ಅವಕಾಶವನ್ನು ನಮ್ಮ ಸಂಘೀಯ ವ್ಯವಸ್ಥೆ ಹೊಂದಿದೆ. ಇದು ಅತಿಶಯವಾದ ರಾಜಕೀಯ ಚೆಲ್ಲಾಟದ ಮನೋಭಾವನೆಗೆ ಎಡೆ ಮಾಡಿ ಕೊಡುತ್ತದೆಯೋ ಎಂದು

ಸಂದೇಹವನ್ನು ಮೂಡಿಸುತ್ತದೆ. ಕೇಂದ್ರದಿಂದ ಇಂತಹ ದುರುಪಯೋಗದ ಪ್ರಕರಣಗಳಿಗೆ ಉದಾಹರಣೆಗಳಿಲ್ಲದಿಲ್ಲ. ಇದೊಂದು ಅಂಶ ಸಂಘೀಯ ಸರಕಾರ ವ್ಯವಸ್ಥೆಗೆ ಮಾರಕವಾಗಿದೆಯೆಂದು ತಜ್ಞರ ಹೇಳಿಕೆ.

9. ರಾಷ್ಟ್ರವಿಡೀ ಅಥವಾ ರಾಷ್ಟ್ರದ ಭಾಗವೊಂದರಲ್ಲಿ ತುರ್ತು ಪರಿಸ್ಥಿತಿಯೊಂದು ಉದ್ಭವವಾಗಿದೆ ಯೆಂದು ಘೋಷಿಸಿ ರಾಜ್ಯಗಳ ಅಧಿಕಾರ / ಸರಕಾರಗಳನ್ನು ಮೊಟಕುಗೊಳಿಸುವ ಅಧಿಕಾರವನ್ನು ಕೇಂದ್ರಸರ್ಕಾರ ಹೊಂದಿದೆ. ಇದು ಕೂಡ ಸಂಘ ಸಂಸ್ಥೆಯ ತತ್ವಕ್ಕೆ ವಿರೋಧವಾದುದು ಎಂದು ತಜ್ಞರು ಸಾಮಾನ್ಯವಾಗಿ ಅಭಿಪ್ರಾಯ ಪಡುತ್ತಾರೆ.

10. ಅಂತಾರಾಷ್ಟ್ರೀಯ ಒಡಂಬಡಿಕೆ ಮಾಡಿಕೊಳ್ಳುವ ಸಂಪೂರ್ಣ ಅಧಿಕಾರವನ್ನು ನಮ್ಮ ಸಂವಿಧಾನವು ಕೇಂದ್ರ ಸರ್ಕಾರಕ್ಕೆ ನೀಡಿದೆ. ಯಾವುದೇ ವಿಷಯಕ್ಕೆ ಇಂತಹ ಒಡಂಬಡಿಕೆ ಸಂಬಂಧಿಸಿರಬಹುದು. ರಾಜ್ಯಗಳಿಗೆ ಸಂಬಂಧಿಸಿರಲೂಬಹುದು. ಡಬ್ಲ್ಯೂ.ಟಿ.ಓ.ದಂತಹ ಒಡಂಬಡಿಕೆಯಲ್ಲಿ ರಾಜ್ಯದ ಅನೇಕ ವಿಷಯಗಳು ಇವೆ. ಆದರೆ ರಾಜ್ಯಗಳಿಗೆ ಯಾವುದೇ ಪಾತ್ರ ಅಥವಾ ಹೊಣೆಗಾರಿಕೆ ಕೊಡಲ್ಪಟ್ಟಿಲ್ಲ. ಇಂತಹ ಪ್ರಮುಖ ಅಂಶವನ್ನು ಸಂವಿಧಾನ ಸಭೆಯಲ್ಲಿ ಚರ್ಚಿಸಲೂ ಇಲ್ಲ. ಹೀಗಾಗಿ, ಕೇಂದ್ರಸರ್ಕಾರಕ್ಕೆ ಇನ್ನಿಲ್ಲದ ಅಧಿಕಾರವನ್ನು ಕೊಟ್ಟು ರಾಜ್ಯಗಳನ್ನು ಕಡೆಗಣಿಸಲಾಗಿದೆಯೆಂದು ಹಲವೆಡೆ ಅಭಿಪ್ರಾಯ ಪಡೆಯಲಾಗಿದೆ.

ಸಂಘೀಯ ಸರಕಾರ ವ್ಯವಸ್ಥೆಯು ದೇಶದ ರಾಜಕೀಯ ಮಹಾವ್ಯವಸ್ಥೆಯ ಒಂದು ಅಂಗವಾಗಿದೆ. ಸಮಗ್ರ ರಾಜಕೀಯಶಕ್ತಿಯನ್ನು ಸಮರ್ಥವಾಗಿ ಪ್ರಯೋಗಿಸುವಲ್ಲೂ ಅದು ಒಂದು ಕುಶಲತಂತ್ರವಾಗಿ ಕೆಲಸಮಾಡುತ್ತದೆ. ಘರ್ಷಣೆಗೆ ಆಸ್ಪದಗಳನ್ನು ಕಡಿಮೆ ಮಾಡಿ, ಸರಕಾರದ ಆಡಳಿತವನ್ನು ಸುಲಭವಾಗಿ ವರ್ಗೀಕರಿಸಿ, ಎರಡೂ ಸರಕಾರಗಳಿಗೆ ಸಾಕಷ್ಟು ಮಹತ್ವದ ಅಧಿಕಾರ ನೀಡಿ, ಅವೆರಡು ಸರಕಾರಗಳ ಮೇಲೂ ನ್ಯಾಯಯುತ ನಿಯಂತ್ರಣ ಸಾಧಿಸಿ ಎಲ್ಲರಿಗೂ ಸಮಾಧಾನಕರವಾದ ಆಡಳಿತ ಒದಗಿಸುವ ಯೋಜನೆ ಅದಾಗಿದೆ. ಆದರೆ ಇಂತಹ ಯಾವ ಯೋಜನೆಯೂ ಸಂಪೂರ್ಣವಾಗಿ ಯಶಸ್ವಿಯಾಗುವುದು ಅಸಾಧ್ಯ. ಅಧಿಕಾರ ವಿಭಜನೆ, ಕಾರ್ಯಾಚರಣೆ ಹಾಗೂ ಕ್ಲಿಷ್ಟಕರ ಆರ್ಥಿಕ ತಾಂತ್ರಿಕ – ಸಾಮಾಜಿಕ – ರಾಜಕೀಯ ಬೆಳವಣಿಗೆಗಳು ಯಾವುದೇ ನಿರ್ದಿಷ್ಟ ತಾತ್ಕಾಲಿಕ ವ್ಯವಸ್ಥೆಯನ್ನು ನಿರುಪಯೋಗಗೊಳಿಬಹುದು.

ಹೊಸ ಬೆಳವಣಿಗೆಗಳು, ಹೊಸ ವಿವಾದಗಳು, ಹೊಸ ತಂತ್ರಾಂಶಗಳು ರಾಜಕೀಯದ ಮೇಲೆ ನಿಶ್ಚಿತ ಪ್ರಭಾವ ಬೀರುತ್ತವೆ. ಸಂಘೀಯ ವ್ಯವಸ್ಥೆಯು ಕೂಡ ಇದಕ್ಕೆ ಹೊರತಾಗಿಲ್ಲ. ಭಾರತದ ಸಂಘೀಯ ವ್ಯವಸ್ಥೆ ತಾತ್ವಿಕವಾಗಿ ಸಂದಿಗ್ಧವಾಗಿದೆಯಲ್ಲದೇ ಕಾಲಕ್ರಮೇಣ ಜರುಗಿದ ಅನೇಕ ಘಟನೆಗಳಿಂದ ಪ್ರಭಾವಿತವಾಗಿದೆ. ಪರಿಣಾಮವಾಗಿ ನಮ್ಮ ಸಂಘೀಯ ವ್ಯವಸ್ಥೆಯು ಅನೇಕ ವಿವಾದಗಳಿಗೆ ಆಸ್ಪದ ನೀಡಿದೆ. ಕೇಂದ್ರ ಹಾಗೂ ರಾಜ್ಯಗಳ ಮಧ್ಯೆ ಅಪೇಕ್ಷಿತವಲ್ಲದ ಬೆಳವಣಿಗೆಗಳು ಕಂಡುಬಂದಿವೆ. ಬಿಮ್ಮು–ಬಿಗುಮಾನಗಳಿಗೆ ಕಾರಣವಾಗಿದೆ. ಕೇಂದ್ರ–ರಾಜ್ಯಗಳ ಮಧ್ಯ ಸಾಮರಸ್ಯ ಹೆಚ್ಚಿಸಬೇಕಿದ್ದ ತಂತ್ರವು ಪ್ರತಿಕೂಲವಾದ ವಾತಾವರಣವನ್ನು ಸೃಷ್ಟಿಸುತ್ತಿದೆ. ಹೀಗಾಗಿ, ವಿದ್ವಾಂಸರು ಹಾಗೂ ರಾಜಕೀಯ ಪರಿಣಿತರು ಅಸಮತೋಲನಗೊಂಡ ಸಂಘೀಯ ವ್ಯವಸ್ಥೆಗೆ ಪರ್ಯಾಯ ಇಲ್ಲವೆ ಪರಿಹಾರಗಳನ್ನು ಹುಡುಕುತ್ತಿದ್ದಾರೆ.

ಕೆಲವರು, ನಿರ್ದಿಷ್ಟವಾದ ವಿವಾದಾತ್ಮಕ ಅಂಶಗಳನ್ನು ಗುರುತಿಸಿ ಸಂವಿಧಾನದಲ್ಲಿ ಮಾರ್ಪಾಡು ತರಬೇಕೆಂದು ಸಲಹೆ ನೀಡುತ್ತಾರೆ. ಒಂದು ಉದಾಹರಣೆಯೆಂದರೆ ವಿಧಿ 356ರನ್ನು ಬದಲಾಯಿಸುವುದು.

ಇಂಟರ್ ಸ್ಟೇಟ್ ಕೌನ್ಸಿಲ್‌ನ್ನು ಬಲಪಡಿಸುವುದು ಇನ್ನೊಂದು. ಈ ದಿಶೆಯಲ್ಲಿ ರಾಜಮನ್ನಾರ ಆಯೋಗ, ಕೆಂಗಲ್ ಹನುಮಂತಯ್ಯನವರ ಆಡಳಿತ ಸುಧಾರಣಾ ಆಯೋಗ, ಸರಕಾರಿಯ ಆಯೋಗ, ನ್ಯಾಯಮೂರ್ತಿ ವೆಂಕಟಾಚಲಯ್ಯ ಕಮಿಶನ್ ಮುಖಾಂತರ ಪ್ರಯತ್ನಗಳು ನಡೆದಿವೆ. ಆದರೂ ವಿಶೇಷವಾದ ಸುಧಾರಣೆಗಳು ಆಗಿಲ್ಲವೆಂಬುದು ಸತ್ಯ. ಒಬ್ಬ ರೋಗಿಗೆ



ಆಗಿರುವ ರೋಗ ಯಾವುದು ಎಂದು ತಜ್ಞ ಡಾಕ್ಟರರಿಗೆ ತಿಳಿದಿದ್ದರೂ ಅದಕ್ಕೆ ಔಷಧಿ ಯಾವುದು ಎಂಬುದರ ಬಗ್ಗೆ ಒಮ್ಮತವಿಲ್ಲ ಅಥವಾ ಆ ರೋಗದ ಬಗೆಗೇ ವಿಭಿನ್ನ ತಜ್ಞರಲ್ಲಿ ನಿರ್ದಿಷ್ಟವಾದ ನಿಲುವಿಲ್ಲವೆಂಬಂತೆ ಆಗಿದೆ ಈ ಸಂಘೀಯ ಸಮಸ್ಯೆ!

ಇನ್ನು ಕೆಲವರು ಇಂತಹ ಸಮಸ್ಯೆಗಳಿಗೆ ಇಂತಹದೇ ಪರಿಹಾರಗಳೆಂದು ಇರುವುದಿಲ್ಲ. ಬದಲಾಗಿ ಸಮಸ್ಯೆಗಳೇ ಉದ್ಭವವಾಗದಂತೆ ನೋಡಿಕೊಳ್ಳಬೇಕು. ಇದಕ್ಕಾಗಿ ನಮ್ಮ ದೇಶದ ರಾಜಕಾರಣಿಗಳು ಸತ್ ಸಂಪ್ರದಾಯ, ಧನಾತ್ಮಕ ನಿಲುವುಗಳನ್ನು ರೂಢಿಸಿಕೊಳ್ಳಬೇಕು ಎಂದೆಲ್ಲ ಹೇಳುತ್ತಾರೆ. ಇದು ಪಲಾಯನವಾದದಂತೇ ಕಾಣುತ್ತದೆ.

ಹೀಗಾಗಿ, ಪ್ರಸ್ತುತ ಲೇಖನದಲ್ಲಿ ಪ್ರಚುರಪಡಿಸಬಹುದಾದ ಒಂದು ಸಲಹೆಯೇನೆಂದರೆ : ನಮ್ಮ ಸಂವಿಧಾನದಲ್ಲಿ ನಿರೂಪಿಸಿರುವ ರಾಜ್ಯಸಭೆಯನ್ನು ಪುನಾರಚಿಸಬೇಕೆಂಬುದು. ಈಗ ಇದ್ದಂತೆ ರಾಜ್ಯಸಭೆಯು ಯಾವುದೇ ನಿರ್ದಿಷ್ಟ ಉದ್ದೇಶವನ್ನೂ ಪೂರೈಸುತ್ತಿಲ್ಲ. 1919ರಿಂದ ಇದುವರೆಗೂ ಅದು ಅಬಾಧಿತವಾಗಿ ನಡೆದು ಬಂದ ನಿರ್ಲಕ್ಷಿತ ಸಂಸ್ಥೆಯಾಗಿದೆ. ಸಂವಿಧಾನ ನಿರ್ಮಾಣ ಕಾಲದಲ್ಲಿ ಅದನ್ನು ನಿರ್ಲಕ್ಷದಿಂದಲೇ ಮುಂದುವರೆಸಿದರು. ಈಗಲಾದರೂ ಅದರಲ್ಲಿ ಮಹತ್ವದ ಬದಲಾವಣೆ ತಂದು ಅದನ್ನು ಸಂಘೀಯ ಸರಕಾರದ ಮೇಲ್ವಿಚಾರಕನನ್ನಾಗಿ ರೂಪಿಸಬಹುದು. ಅಮೆರಿಕ ಹಾಗೂ ಸ್ವಿಡ್ಜರ್‌ಲೆಂಡ್‌ದಲ್ಲಿರುವಂತೆ ರಾಜ್ಯಸಭೆಯನ್ನು ನಿಜವಾದ ಅರ್ಥದಲ್ಲಿ ರಾಜ್ಯಗಳ ಪ್ರತಿನಿಧಿ ಸಭೆಯನ್ನಾಗಿ ಪರಿವರ್ತಿಸಬಹುದು. ಎಲ್ಲಾ ರಾಜ್ಯಗಳಿಗೂ ಅದರಲ್ಲಿ ಸಮಾನ ಪ್ರತಿನಿಧಿತ್ವ ಕೊಟ್ಟು ಅವರ ಮೇಲೆ ರಾಜ್ಯಗಳಷ್ಟೇ ಹಿಡಿತ ನೀಡಬಹುದಾಗಿದೆ. ಎರಡನೆಯದಾಗಿ, ಸಂಘೀಯ ಸರಕಾರಕ್ಕೆ ಸಂಬಂಧಬರುವಂತಹ ಯಾವುದೇ ಸಮಸ್ಯೆಗೂ ರಾಜ್ಯಸಭೆಯು

ನಿರ್ಣಾಯಕ ಸ್ಥಾನದಲ್ಲಿ ನಿಂತು, ಕೇಂದ್ರಸರ್ಕಾರಕ್ಕೆ ಕಡ್ಡಾಯಕರ ಸಲಹೆ – ಸೂಚನೆ ನೀಡುವಂತಾಗಬೇಕು. ರಾಜ್ಯಪಾಲರ ನಿಯೋಜನೆ – ವಜಾ ಮಾಡುವಿಕೆ, ರಾಜ್ಯದ ಮುಖ್ಯ ಮಂತ್ರಿಯ ವಜಾ ಅಥವಾ ರಾಜ್ಯ ವಿಧಾನ ಸಭೆಯ ಭಂಗ, ರಾಜ್ಯ ಕಾನೂನುಗಳಿಗೆ ಕೇಂದ್ರದಿಂದ ಮನ್ನಣೆ, ಸುಪ್ರೀಂಕೋರ್ಟ್ – ಹೈಕೋರ್ಟ್ ನ್ಯಾಯಮೂರ್ತಿಗಳ ನೇಮಕ, ಸಂಘೀಯ ಚುನಾವಣಾ ಆಯೋಗ, ಪಬ್ಲಿಕ್ ಸರ್ವೀಸ್ ಕಮಿಷನ್, ಫೈನಾನ್ಸ್ ಕಮಿಷನ್, ಸಿಎಜಿ ಇತ್ಯಾದಿ ಸಂಸ್ಥೆಗಳಿಗೆ ಸದಸ್ಯರ ನೇಮಕಗಳಲ್ಲಿ ಕಡ್ಡಾಯವಾಗಿ ರಾಜ್ಯಸಭೆಯ ಅನುಮೋದನೆಯನ್ನು ಪಡೆಯುವುದು ಮುಂತಾದ ಅಂಶಗಳನ್ನು ಸಂವಿಧಾನದಲ್ಲೂ ಸಂಶೋಧನೆಯ ಮೂಲಕ ಸೇರಿಸುವ ಪ್ರಯತ್ನವಾಗಬೇಕು. ಲೋಕಸಭೆಯು ಮಾಡುತ್ತಿರುವ ಅನೇಕ ಮಹತ್ವದ ಕೆಲಸಗಳನ್ನೇ ರಾಜ್ಯಸಭೆಯು ಪುನರಾವರ್ತಿಸುವ ಬದಲು ತನ್ನದೇ ಆದ ವಿಶಿಷ್ಟ ಕೆಲಸಗಳನ್ನು ಅದು ಹೊಂದಬೇಕು ಮತ್ತು ಅದು ರಾಜ್ಯಗಳ ಹಿತಾಸಕ್ತಿಗಳ ರಕ್ಷಣೆಯಾಗಿರಬೇಕು.

ನಮ್ಮ ಸಂಘೀಯ ಸರಕಾರ ವ್ಯವಸ್ಥೆಯು ಒಂದು ನಿರ್ದಿಷ್ಟ ಉಪಯುಕ್ತತೆಯನ್ನು ಹೊಂದಬೇಕೆಂದು ಅಪೇಕ್ಷೆ ಪಟ್ಟಲ್ಲಿ, ಸದ್ಯದ ವ್ಯವಸ್ಥೆಯು ನಿಜಕ್ಕೂ ಅಸಮಾಧಾನಕರವಾಗಿದೆ. ಇದು ಸಮಾಧಾನಕಾರಕವಾಗಬೇಕೆಂದಲ್ಲಿ ವಿಸ್ತೃತ



ಬದಲಾವಣೆಯನ್ನು ಮಾಡಲೇಬೇಕು. ಇದಕ್ಕಾಗಿ ಸಂವಿಧಾನದಲ್ಲಿ ರಾಜ್ಯಸಭೆಯ ಪಾತ್ರ, ಸಂಯೋಜನೆ ಹಾಗೂ ಸ್ಥಾನಮಾನ ಕುರಿತ ತ್ವರಿತವಾದ ಸಂಶೋಧನೆ ಅಗತ್ಯವಾಗಿದೆ. ❑

(14ನೇ ಪುಟದಿಂದ)

## ವಿತ್ತೀಯ ಒಕ್ಕೂಟ ವ್ಯವಸ್ಥೆ ಮತ್ತು ನೀತಿ ಆಯೋಗ



ನಡೆಸಿ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ಬಂದು 68 ವರ್ಷ ಕಳೆದರೂ ನಮ್ಮ ಪ್ರಧಾನ ಮಂತ್ರಿ ಸ್ವಚ್ಛ ಭಾರತ ಯೋಜನೆ ಹೆಸರಲ್ಲಿ ಕಸಬರಿಗೆ ಹಿಡಿದುಕೊಂಡು ಕಸಮುಕ್ತ ಪ್ರದೇಶವನ್ನಾಗಿಸುವ ಸಂದೇಶ ನೀಡುವ ಸ್ಥಿತಿ ಆತ್ಮಾವಲೋಕನಕ್ಕೆಡೆ ಮಾಡುವ ಸಂಗತಿ. ಹೀಗಾಗಿ ನಮ್ಮ ಆದ್ಯತೆಯ ಬೆಳವಣಿಗೆಗಳು ಯಾವ ರೀತಿಯದ್ದಾಗಿತ್ತು, ಅದರಿಂದಾಗಿ ದೇಶದ ಸ್ಥಿತಿ ಏನಾಯಿತು ಎಂಬ ವಿಚಾರ ಗೊತ್ತಾಗುತ್ತದೆ.

ಇಲ್ಲಿ ಮುಖ್ಯವಾಗಿ ಚರ್ಚೆಯಲ್ಲಿರುವ ವಿಚಾರವೇನೆಂದರೆ ಪಂಚಾಯತ್ ವ್ಯವಸ್ಥೆಯನ್ನು ಇನ್ನಷ್ಟು ಬಲಗೊಳಿಸಿ, ಅವುಗಳ ಆಡಳಿತ ವ್ಯವಸ್ಥೆಯನ್ನು ಚುರುಕಾಗಿಸಬೇಕಾಗಿದೆ. ಈ ಮೂಲಕ ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯ ಆಶಯವನ್ನು ಜಾರಿಗೊಳಿಸಬೇಕು. ಅದರ ಪ್ರಕಾರ ಪ್ರತಿ ಪ್ರಜೆಗೆ ಕುಡಿವ ನೀರು, ಶೌಚಾಲಯ, ನೈರ್ಮಲ್ಯ, ವಸತಿ, ವಿದ್ಯುತ್, ಸಂಪರ್ಕ (ರಸ್ತೆ ಮತ್ತು ಅಂತರ್ಜಾಲ) ಮತ್ತು ಇತರ ಮೂಲ ಸೌಲಭ್ಯಗಳನ್ನು ಒದಗಿಸಬೇಕು. ಅದಕ್ಕಾಗಿ ಸ್ಥಳೀಯ ಆಡಳಿತ ತನ್ನ ಆದಾಯದ ಮೂಲವನ್ನು ಕಂಡುಕೊಳ್ಳುವಂತೆ ಪ್ರೋತ್ಸಾಹಿಸಬೇಕು. ಪಂಜಾಬ್, ಹರ್ಯಾಣ ಮತ್ತು ರಾಜಸ್ತಾನಗಳಲ್ಲಿ ಸ್ಥಳೀಯ ಸಂಸ್ಥೆಗಳು ಆಸ್ತಿ ತೆರಿಗೆಯ ಮೂಲಕ ಶೇ.80ರಷ್ಟು ಆದಾಯ ಸಂಗ್ರಹಿಸುತ್ತಿದ್ದವು. ಆದರೆ ಅದನ್ನು ಈಗ ರದ್ದುಮಾಡಲಾಗಿದೆ. ಇದರ ಜತೆಗೆ ವಿಶ್ವದ ಶೇ.80ರಷ್ಟು ರಾಷ್ಟ್ರಗಳಲ್ಲಿನ ಸ್ಥಳೀಯ ಆಡಳಿತ ಸಂಸ್ಥೆಗಳ ಆಡಳಿತದಲ್ಲಿ ಇದೇ ರೀತಿಯ ಪರಿಸ್ಥಿತಿ ಇದೆ.

ಹೀಗಾಗಿ ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ತಮ್ಮದೇ ಆದ ಆರ್ಥಿಕ ಸಂಪನ್ಮೂಲಗಳನ್ನು ಕಂಡುಹಿಡಿಯುವಂತೆ ಮಾಡುವ ಕೆಲಸ ಜರೂರಾಗಿ ಆಗಬೇಕಿದೆ. ಈ ಮೂಲಕ ಅವುಗಳು ಹಣಕಾಸಿನ ಸ್ವಾತಂತ್ರ್ಯ ಪಡೆಯುವಂತಾಗಬೇಕು. ಇದರಿಂದಾಗಿ ದೆಹಲಿಯಲ್ಲಿನ ಜನರಿಗೆ ಹೇಗೆ ಅಗತ್ಯ ಸೌಲಭ್ಯ ಮತ್ತು ಅವರಿಗೆ ಯಾವ ರೀತಿಯ ಆಧುನಿಕ ಸೌಕರ್ಯಗಳು ಸಿಗುತ್ತವೆಯೋ ಅದೇ ರೀತಿ ಬುಡಕಟ್ಟು ಜನರಿಗೂ ಅವರ ಬದುಕು ಹಸನಾಗುವ ಸ್ಥಿತಿ ನಿರ್ಮಾಣ ಮಾಡಿದಂತಾಗುತ್ತದೆ. ಕೆನಡಾ ಮತ್ತು ಆಸ್ಟ್ರೇಲಿಯಾಕ್ಕೆ ಹೋಲಿಕೆ ಮಾಡಿದರೆ ನಮ್ಮ ದೇಶದಲ್ಲಿ ಸರ್ಕಾರಗಳ ನಡುವಿನ (ಕೇಂದ್ರ ಮತ್ತು ರಾಜ್ಯ) ಹಣಕಾಸು ಅಸಮತೋಲನ ಹೆಚ್ಚು. ಈ ನಿಟ್ಟಿನಲ್ಲಿ ನೀತಿ ಆಯೋಗ ಮತ್ತು ಕೇಂದ್ರ ಹಣಕಾಸು ಆಯೋಗ (ಯುಎಫ್‌ಸಿ)ಹೆಚ್ಚಿನ ಗಮನ ಹರಿಸುವುದು ಉತ್ತಮ. ಒಂದು ವೇಳೆ ರಾಜ್ಯ ಸರ್ಕಾರಗಳು ಜನರಿಗೆ ಮೂಲ ಸೌಕರ್ಯಗಳನ್ನು ಒದಗಿಸದಿದ್ದರೆ ಅಥವಾ ವಿತ್ತೀಯ ಶಿಸ್ತು ಪಾಲಿಸದೇ ಇದ್ದರೆ ಅವುಗಳ ವಿರುದ್ಧ ಕಠಿಣ ಕ್ರಮ ವಿಧಿಸುವುದು ಸಂವಿಧಾನ ವಿರೋಧಿ ಕ್ರಮವೇನೂ ಆಗಲಾರದು.

ಕೊನೆಯದಾಗಿ, ನಮ್ಮ ದೇಶದ ಒಕ್ಕೂಟದಲ್ಲಿ ವಿಶೇಷ ಸಹಕಾರ ವ್ಯವಸ್ಥೆ ಇದೆ. ಸ್ಥಳೀಯ ಆಡಳಿತ ವ್ಯವಸ್ಥೆ ನಮ್ಮ ಸರ್ಕಾರಿ ವ್ಯವಸ್ಥೆಯ ಆಮೂಲಾಗ್ರ ಭಾಗವೇ ಆಗಿರುವುದರಿಂದ ತಳಮಟ್ಟದಿಂದ ಯೋಜನಾ ವ್ಯವಸ್ಥೆ ರೂಪಿಸುವುದು ಕಷ್ಟವೇನೂ ಅಲ್ಲ. ಈ ಹಿಂದೆ ಸುವರ್ಣಾವಕಾಶ ಇದ್ದರೂ ಬಳಸಿಕೊಳ್ಳಲಾಗಿರಲಿಲ್ಲ. ಆದರೆ ಈಗ ಮತ್ತೆ ಅಂಥ ಅವಕಾಶ ಬಂದಿದೆ. ಅಭಿವೃದ್ಧಿಯಿಂದ ವಂಚಿತರು ಮತ್ತು ಹಿಂದುಳಿದವರು ಸಮಾಜದ ಮುಖ್ಯ ವಾಹಿನಿಗೆ ಸೇರ್ಪಡೆಯಾದಾಗ ಮಾತ್ರ ಸಾಮಾಜಿಕ ಸೇರ್ಪಡೆ ಎಂಬ ಶಬ್ದಕ್ಕೆ ಹೆಚ್ಚು ಅರ್ಥ ಬರುತ್ತದೆ.ಈ ನಿಟ್ಟಿನಲ್ಲಿ ಸ್ಥಳೀಯ ಸರ್ಕಾರಗಳನ್ನು ಮತ್ತಷ್ಟು ಬಲಪಡಿಸಬೇಕಿದೆ. ಆ ಕರ್ತವ್ಯವೇ ನಮ್ಮ ಮೂಲ ಉದ್ದೇಶ ಸಾಧಿಸುವ ಗುರಿಯಾಗಲಿ. ❑

# ಮಗಳನ್ನು ರಕ್ಷಿಸಿ ಮಗಳನ್ನು ಓದಿಸಿ




ಪ್ರತಿ ಸಾವಿರ ಗಂಡು ಮಕ್ಕಳಿಗೆ ಹೋಲಿಸಿದಲ್ಲಿ ಹೆಣ್ಣು ಮಕ್ಕಳ ಪ್ರಮಾಣ (ಮಗು ಲಿಂಗಾನುಪಾತ) ಅತಿ ಕಡಿಮೆ, ಅಂದರೆ 918ಕ್ಕೆ ಕುಸಿದಿರುವುದು 2011ರ ಜನಗಣತಿಯಲ್ಲಿ ವ್ಯಕ್ತವಾಗಿದೆ. ಹೆಣ್ಣು ಮಕ್ಕಳ ಪ್ರಮಾಣ ಇಷ್ಟು ತೀವ್ರಪ್ರಮಾಣದಲ್ಲಿ ಕುಸಿಯುತ್ತಿರುವುದರಿಂದ ಹೆಣ್ಣು ಮಗುವಿನ ರಕ್ಷಣೆಗೆ ಮುಂದಾಗುವುದು ಇಂದಿನ ತುರ್ತು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ದೇಶಾದ್ಯಂತ ಸಮೂಹ ತಿಳಿವಳಿಕೆ ಆಂದೋಲನ ನಡೆಸಲು ಕೇಂದ್ರ ಸರ್ಕಾರ ಬೇಟಿ ಬಚಾವೊ, ಬೇಟಿ ಪಢಾವೊ (ಬಿಬಿಬಿಪಿ) ಕಾರ್ಯಕ್ರಮ ಹಮ್ಮಿಕೊಂಡಿದೆ; ಹೆಣ್ಣು ಮಕ್ಕಳ ಸಂಖ್ಯೆ ತೀವ್ರ ಕ್ಷೀಣಿಸಿರುವ ದೇಶದ ನೂರು ಜಿಲ್ಲೆಗಳನ್ನು ಗುರುತಿಸಿ, ಇಲ್ಲಿ ಬಹು ವಿಧ ಕ್ರಮಗಳ ಮೂಲಕ ಪರಿಸ್ಥಿತಿ ಸುಧಾರಣೆಗೆ ಮುಂದಾಗಿದೆ. 2011 ಜನಗಣತಿ ಪ್ರಕಾರ ಪ್ರತಿ ರಾಜ್ಯ / ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಗುಲಿಂಗಾನುಪಾತ ಕಡಿಮೆ ಇರುವ ಕನಿಷ್ಠ ಒಂದು ಜಿಲ್ಲೆಯಂತೆ ಆಯ್ದುಕೊಂಡು ಒಟ್ಟು ನೂರು ಜಿಲ್ಲೆಗಳನ್ನು ಗುರುತಿಸಲಾಗಿದೆ. ಅ) ರಾಷ್ಟ್ರೀಯ ಸರಾಸರಿಗಿಂತ, ಹೆಣ್ಣು ಮಗುವಿನ ಸಂಖ್ಯೆ ಕಡಿಮೆ ಇರುವ ಜಿಲ್ಲೆ (23 ರಾಜ್ಯಗಳ 87 ಜಿಲ್ಲೆಗಳು). ಬ) ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಿರುವ ಆದರೆ, ಕುಸಿತ ಪ್ರವೃತ್ತಿ ತೋರುತ್ತಿರುವ ಜಿಲ್ಲೆ (8 ರಾಜ್ಯಗಳ 8 ಜಿಲ್ಲೆಗಳು). (ಕ) ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಿರುವ ಮತ್ತು ಏರಿಕೆ ಪ್ರವೃತ್ತಿ (5 ರಾಜ್ಯಗಳ 5 ಜಿಲ್ಲೆಗಳು) ಜಿಲ್ಲೆಗಳನ್ನು ಆಯ್ದುಕೊಳ್ಳಲಾಗಿದೆ. ಮುಂಗಡ ಪತ್ರದಲ್ಲಿ ಇದಕ್ಕಾಗಿ ನೂರು ಕೋಟಿ ರೂಪಾಯಿ ಪ್ರಕಟಿಸಲಾಗಿದ್ದು 12ನೆಯ ಯೋಜನೆಯಲ್ಲಿ ಹೆಣ್ಣುಮಗುವಿನ ಕಾಳಜಿ ಮತ್ತು ರಕ್ಷಣೆಗಾಗಿ – ಬಹುವಿಧ ಕ್ರಿಯಾ ಯೋಜನೆಯಡಿ ನೂರು ಕೋಟಿ ರೂಪಾಯಿಯನ್ನು ಒದಗಿಸಲಾಗಿದೆ. ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಕಂಪನಿಗಳ ಸಾಮಾಜಿಕ ಜಬಾಬ್ದಾರಿಗಳಡಿ ಹೆಚ್ಚುವರಿ ಹಣಕಾಸನ್ನು ಒಟ್ಟುಗೂಡಿಸಿಕೊಳ್ಳಬಹುದಾಗಿದೆ. ಒಟ್ಟು 200 ಕೋಟಿ ರೂಪಾಯಿ ಮೊತ್ತದ ಪೈಕಿ ಪ್ರಸಕ್ತ 2014–15ನೇ ಸಾಲಿನಲ್ಲಿ (ಆರು ತಿಂಗಳು) 115 ಕೋಟಿ ರೂ.ಗಳನ್ನು ಹಾಗೂ 2015–16 ಮತ್ತು 2016–17ರಲ್ಲಿ ಅನುಕ್ರಮವಾಗಿ 45ಕೋಟಿ ರೂ. ಮತ್ತು 40 ಕೋಟಿ ರೂ. ಒದಗಿಸಲು ಉದ್ದೇಶಿಸಲಾಗಿದೆ.

* ಈ ಯೋಜನೆಯ ಒಟ್ಟಾರೆ ಉದ್ದೇಶ ಹೆಣ್ಣು ಮಗುವಿನ ಹುಟ್ಟನ್ನು ಸಂಭ್ರಮಿಸುವಂತೆ ಮಾಡುವುದು ಮತ್ತು ಆಕೆಗೆ ಶಿಕ್ಷಣ ದೊರಕುವಂತೆ ಮಾಡುವುದು. ಲಿಂಗ ಆಯ್ಕೆ ತಡೆಗಟ್ಟುವ ಮೂಲಕ ಲಿಂಗತಾರತಮ್ಯ ತೊಲಗಿಸುವುದು, ಹೆಣ್ಣು ಮಗುವನ್ನು ಉಳಿಸಿ, ರಕ್ಷಿಸಿ, ಶಿಕ್ಷಣ ಕೊಡಿಸುವುದು.
* ಈ ಉದ್ದೇಶ ಈಡೇರಿಕೆಗಾಗಿ ಎಂಟು ಅಂಶಗಳ ಬಗ್ಗೆ ಗಮನ ಹರಿಸಲಾಗಿದ್ದು, ಲಿಂಗಸೂಕ್ಷ್ಮ ನೂರು ಜಿಲ್ಲೆಗಳಲ್ಲಿ ಎಸ್‌ಆರ್‌ವಿ ಸುಧಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
* ಐದು ವರ್ಷಗಳಿಗಿಂತ ಕಡಿಮೆ ವಯೋಮಾನದ ಮಕ್ಕಳ ಮರಣಪ್ರಮಾಣದಲ್ಲಿ ಲಿಂಗ ಅಂತರವನ್ನು 2011ರ 8 ರಿಂದ 2017ರ ವೇಳೆಗೆ 4ಕ್ಕಿಳಿಸಲು ಉದ್ದೇಶಿಸಲಾಗಿದೆ.
* ಐದು ವರ್ಷಕ್ಕಿಂತ ಕಡಿಮೆ ವಯೋಮಾನದ ಹೆಣ್ಣುಮಕ್ಕಳಲ್ಲಿ ಅಶಕ್ತ, ಕಡಿಮೆ ತೂಕದವರ ಪ್ರಮಾಣವನ್ನು ಪೌಷ್ಠಿಕಾಂಶ ಪೂರೈಕೆ ಮೂಲಕ ಸುಧಾರಿಸುವುದು (ಎಸ್‌ಎಫ್‌ಹೆಚ್‌ಎಸ್ ಮಟ್ಟ 3) ಐಸಿಡಿಎಸ್ ಸಮಗ್ರ ಶಿಶು (ಅಭಿವೃದ್ಧಿ ಯೋಜನೆಗಳ ಸಾರ್ವತ್ರೀಕರಣ, ಹೆಣ್ಣು ಮಕ್ಕಳ ಶಾಲಾ ಹಾಜರಾತಿ ಮತ್ತು ಐಸಿಡಿಎಸ್, ಎನ್‌ಆರ್‌ಹೆಚ್‌ಎಂ, ತಾಯಿ ಮಗು ರಕ್ಷಣಾ ಚೀಟಿ ಬಳಸಿ, ಗುರಿ ನಿರ್ವಹಣೆ.
* ಪ್ರೌಢಶಿಕ್ಷಣ ಹಂತದಲ್ಲಿ ಹೆಣ್ಣು ಮಕ್ಕಳ ದಾಖಲಾತಿಯನ್ನು 2013–14ರ ಶೇ. 76 ರಿಂದ 2017ರ ವೇಳೆಗೆ ಶೇ. 79ಕ್ಕೆ ಹೆಚ್ಚಿಸುವುದು.
* ಎಲ್ಲ ನೂರು ಸಿಎಸ್‌ಆರ್ ಜಿಲ್ಲೆಗಳ ಪ್ರತಿ ಶಾಲೆಯಲ್ಲಿ ಹೆಣ್ಣು ಮಕ್ಕಳಿಗಾಗಿ ಶೌಚಾಲಯ ಸೌಲಭ್ಯ ಕಲ್ಪಿಸುವುದು
* ಲೈಂಗಿಕ ದೌರ್ಜನ್ಯಗಳ ವಿರುದ್ಧ ಮಕ್ಕಳಿಗೆ ರಕ್ಷಣೆ ಒದಗಿಸುವ 2012ರ ಕಾಯ್ದೆ ಜಾರಿಗೊಳಿಸಿ ಹೆಣ್ಣು ಮಗುವಿಗೆ ರಕ್ಷಣಾ ಪರಿಸರ ಕಲ್ಪಿಸುವುದು ಮತ್ತು
* ಸಿಎಸ್‌ಆರ್ ಸುಧಾರಣೆ ಮತ್ತು ಹೆಣ್ಣು ಮಕ್ಕಳಿಗೆ ಶಿಕ್ಷಣಕ್ಕಾಗಿ ಸಮುದಾಯವನ್ನು ಸಕ್ರಿಯಗೊಳಿಸಲು ಚುನಾಯಿತ ಪ್ರತಿನಿಧಿಗಳು / ತಳಹಂತದ ಕಾರ್ಯ ನಿರ್ವಹಣೆಕಾರರಿಗೆ ತರಬೇತಿ ನೀಡುವುದು.

ಈ ಗುರಿ ಸಾಧನೆಗೆ ಹಮ್ಮಿಕೊಳ್ಳಲಾಗಿರುವ ಇತರ ಕಾರ್ಯಕ್ರಮಗಳೆಂದರೆ.

* ಹೆಣ್ಣುಮಗುವಿಗೆ ಸಮಾನವಾದ ಮೌಲ್ಯ – ಶಿಕ್ಷಣ ಕಲ್ಪಿಸಲು ಸತತ ಸಾಮಾಜಿಕ

**(47ನೇ ಪುಟಕ್ಕೆ)**

# ಕರ್ನಾಟಕದಲ್ಲಿ ಹೆಣ್ಣು ಮಕ್ಕಳ ಶಿಕ್ಷಣ

ಅಕ್ಕಿಮಂಗಲ ಸುರೇಶ



> ಸರ್ಕಾರದಿಂದ ದೊರೆಯುತ್ತಿರುವ ಹತ್ತು ಹಲವು ಸೌಲಭ್ಯಗಳಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಹೆಣ್ಣು ಮಕ್ಕಳೂ ಅಧಿಕ ಸಂಖ್ಯೆಯಲ್ಲಿ ಶಿಕ್ಷಣ ಪಡೆಯಲು ಮುಂದೆ ಬರುತ್ತಿದ್ದಾರೆ. ಒಂದರಿಂದ 10ನೇ ತರಗತಿವರೆಗಿನ ದಾಖಲಾತಿಯ ಅಂಕಿಸಂಖ್ಯೆಗಳನ್ನು ಗಮನಿಸಿದರೆ ಬಾಲಕ – ಬಾಲಕಿಯರ ನಡುವೆ ಅಂತಹ ವ್ಯತ್ಯಾಸ ಕಂಡುಬರುವುದಿಲ್ಲ.

ರಾಜ್ಯದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಸಿಕ್ಕಿದ್ದು, ಪ್ರಾಥಮಿಕ ಹಂತದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ಹೆಣ್ಣು ಮಕ್ಕಳ ದಾಖಲಾತಿ ಪ್ರಮಾಣ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗುತ್ತಿದೆ. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಉತ್ತೇಜನ ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರ ಒಂದನೇ ತರಗತಿಯಿಂದ ಹಿಡಿದು ಪದವಿವರೆಗೆ ಉಚಿತ ಶಿಕ್ಷಣ ನೀಡುತ್ತಿದೆ. ಅವರಿಂದ ಯಾವುದೇ ಶುಲ್ಕವನ್ನು ಪಡೆಯುತ್ತಿಲ್ಲ. ಸರ್ಕಾರಿ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹೆಣ್ಣು ಮಕ್ಕಳಿಗೆ ಈ ಸೌಲಭ್ಯ ಕಲ್ಪಿಸಲಾಗಿದೆ. ಲಕ್ಷಾಂತರ ವಿದ್ಯಾರ್ಥಿನಿಯರು ಪ್ರತಿ ವರ್ಷ ಇದರ ಸದುಪಯೋಗ ಪಡೆಯುತ್ತಿದ್ದಾರೆ. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ದುರ್ಬಲರಾದವರು ಸಹ ಶಿಕ್ಷಣ ಪಡೆಯಲು ಸಾಧ್ಯವಾಗಿದ್ದು, ಇದೊಂದು ಕ್ರಾಂತಿಕಾರಿ ಬೆಳವಣಿಗೆ ಎಂದರೆ ತಪ್ಪಾಗಲಾರದು. ಸರ್ಕಾರಿ ಶಾಲಾ – ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲ ವರ್ಗದ ಹೆಣ್ಣು ಮಕ್ಕಳು ಉಚಿತ ಶಿಕ್ಷಣದ ಸದುಪಯೋಗ ಪಡೆಯಬಹುದು. ಸಾಮಾನ್ಯ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿನಿಯರಿಗೆ ಮಾತ್ರ ಇದು ಅನ್ವಯವಾಗಲಿದೆ. ಎಂಜಿನಿಯರಿಂಗ್, ವೈದ್ಯಕೀಯ ಮತ್ತಿತರ ವೃತ್ತಿಪರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವವರಿಗೆ ಈ ಸೌಲಭ್ಯ ದೊರೆಯುವುದಿಲ್ಲ. ಆರಂಭದಲ್ಲಿ ಸರ್ಕಾರಿ ಶಾಲಾ – ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಹೆಣ್ಣು ಮಕ್ಕಳಿಗೆ ಮಾತ್ರ ಈ ಸೌಲಭ್ಯವಿತ್ತು. ಕ್ರಮೇಣ ಅನುದಾನಿತ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೂ ವಿಸ್ತರಿಸಲಾಗಿದೆ. ಈ ವರ್ಷದಿಂದ ಅನುದಾನಿತ ಪದವಿ ಕಾಲೇಜುಗಳ ವಿದ್ಯಾರ್ಥಿನಿಯರಿಗೂ ಈ ಸೌಲಭ್ಯವನ್ನು ಕಲ್ಪಿಸಲಾಗಿದೆ. ಪದವಿ ಹಂತದಲ್ಲಿ ಯುವಕರಿಗಿಂತ, ಯುವತಿಯರೇ ಅಧಿಕ ಸಂಖ್ಯೆಯಲ್ಲಿ ವ್ಯಾಸಂಗ ಮಾಡುತ್ತಿರುವುದು ಸಂತೋಷದ ವಿಷಯ. ಕಾಲೇಜು ಶಿಕ್ಷಣ ಇಲಾಖೆಯ ಅಂಕಿ ಸಂಖ್ಯೆಗಳ ಪ್ರಕಾರ ಶೇ 54ರಷ್ಟು ಯುವತಿಯರು, ಶೇ 46ರಷ್ಟು ಯುವಕರು ಪದವಿ ಶಿಕ್ಷಣ ಪಡೆಯುತ್ತಿದ್ದಾರೆ. ನಿಜಕ್ಕೂ ಇದು ಸ್ವಾಗತಾರ್ಹ. ರಾಜ್ಯದಲ್ಲಿ 419 ಸರ್ಕಾರಿ ಪದವಿ ಕಾಲೇಜುಗಳಿದ್ದು, ಈ ಪೈಕಿ 46 ಮಹಿಳಾ ಕಾಲೇಜುಗಳಾಗಿವೆ. ಎರಡು ಬಾಲಕರ ಕಾಲೇಜುಗಳಾಗಿದ್ದರೆ, ಉಳಿದ ಕಡೆ ಸಹ ಶಿಕ್ಷಣ ನೀಡಲಾಗುತ್ತಿದೆ. ಹಿಂದೆ ಹೆಣ್ಣುಮಕ್ಕಳನ್ನು ಕಾಲೇಜಿಗೆ ಕಳುಹಿಸಲು ಪೋಷಕರು ಹಿಂಜರಿಯುತ್ತಿದ್ದರು. ಎಸ್ಸೆಸ್ಸೆಲ್ಸಿ ನಂತರ ಮದುವೆ ಮಾಡುತ್ತಿದ್ದರು. ಆದರೆ, ಈಗ ಪರಿಸ್ಥಿತಿ ಬದಲಾಗಿದೆ. ಸಾಕ್ಷರತಾ ಪ್ರಗತಿ ಮಾಧ್ಯಮಗಳ ಪ್ರಭಾವ, ಸಾಮಾಜಿಕ ಅರಿವಿನಿಂದಾಗಿ ಹೆಣ್ಣುಮಕ್ಕಳಿಗೂ ಉನ್ನತ ಶಿಕ್ಷಣ ಕೊಡಿಸಲು ಪೋಷಕರು ಮುಂದಾಗಿದ್ದಾರೆ. ಕನಿಷ್ಠ ಪದವಿಯನ್ನಾದರೂ ಪಡೆಯಬೇಕು ಎಂದು ಬಯಸುವವರ ಸಂಖ್ಯೆ ಹೆಚ್ಚಾಗುತ್ತಿದೆ. ಇದರಿಂದಾಗಿಯೇ ಮಹಿಳಾ ಕಾಲೇಜುಗಳ ಸಂಖ್ಯೆ ಏರುಮುಖವಾಗಿದೆ. ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲಿ ಅಷ್ಟೆ ಅಲ್ಲದೆ ಕೆಲವು ಕಡೆ ತಾಲ್ಲೂಕು ಕೇಂದ್ರಗಳಲ್ಲೂ ಮಹಿಳಾ ಕಾಲೇಜುಗಳಿವೆ.

### ಹಾಜರಾತಿ ಭತ್ಯೆ

ಸರ್ಕಾರಿ ಶಾಲೆಯತ್ತ ಮಕ್ಕಳನ್ನು ಆಕರ್ಷಿಸುವ ಮತ್ತು ಮಗು ಶಾಲೆ

ಶಿಕ್ಷಣ ವಿಷಯ ವಿಶ್ಲೇಷಕರು.



ತೊರೆಯುವುದನ್ನು ತಪ್ಪಿಸುವ ಉದ್ದೇಶದಿಂದ ಹಾಜರಾತಿ ಭತ್ಯೆ ನೀಡುವ ಯೋಜನೆಯನ್ನು 2014ರಲ್ಲಿ ಜಾರಿಗೊಳಿಸಲಾಗಿದೆ. ಸರ್ಕಾರಿ ಶಾಲೆಯ ಒಂದನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿಯೊಂದು ಹೆಣ್ಣುಮಗುವಿಗೆ ದಿನದ ಹಾಜರಾತಿಗೆ ಎರಡು ರೂಪಾಯಿ ಭತ್ಯೆ ನೀಡಲಾಗುತ್ತಿದೆ. 2014ರ ಜನವರಿಯಿಂದ ಈ ಯೋಜನೆ ಜಾರಿಯಾಗಿದ್ದು, ಇದರಿಂದ ಹಾಜರಾತಿ ಪ್ರಮಾಣ ಹೆಚ್ಚಾಗಿರುವುದು ಪ್ರಾಥಮಿಕ ಮಾಹಿತಿಯಿಂದ ಕಂಡುಬಂದಿದೆ. ಈ ಮಧ್ಯೆ ಇದರ ಸಾಧಕ – ಬಾಧಕಗಳ ಬಗ್ಗೆ ಅಧ್ಯಯನ ನಡೆಸಲು ಸಾರ್ವಜನಿಕ ಶಿಕ್ಷಣ ಇಲಾಖೆ ಮುಂದಾಗಿದೆ. ಪ್ರತಿ ವರ್ಷ ಸುಮಾರು ಮೂರು ಲಕ್ಷ ಮಕ್ಕಳು ಇದರ ಸದುಪಯೋಗ ಪಡೆಯುತ್ತಿದ್ದಾರೆ ಎಂದು ನಿರೀಕ್ಷಿಸಲಾಗಿದೆ. ಇದಕ್ಕಾಗಿ ವಾರ್ಷಿಕ 13 ಕೋಟಿ ರೂಪಾಯಿ ವೆಚ್ಚ ಮಾಡಲಾಗುತ್ತಿದೆ. ಹಿಂದಿನ ವರ್ಷದ ಹಣವನ್ನು ಈಗಾಗಲೇ ಪಾವತಿಸಲಾಗಿದೆ. ಸದ್ಯಕ್ಕೆ ಸರ್ಕಾರಿ ಶಾಲೆಯ ಒಂದನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಹೆಣ್ಣು ಮಕ್ಕಳಿಗೆ ಮಾತ್ರ ಈ ಸೌಲಭ್ಯವಿದೆ. ಮುಂದಿನ ದಿನಗಳಲ್ಲಿ ಅನುದಾನಿತ ಶಾಲೆಗಳಿಗೂ ಇದನ್ನು ವಿಸ್ತರಿಸುವ ಸಾಧ್ಯತೆ ಇದೆ. ಕುಟುಂಬ ನಿರ್ವಹಣೆಗೆ ನೆರವಾಗುತ್ತಾರೆ ಎಂಬ ಕಾರಣಕ್ಕೆ

| ಜಾತಿವಾರು ಹೆಣ್ಣು ಮಕ್ಕಳ ದಾಖಲಾತಿ | | |
|---|---|---|
| (1ರಿಂದ 10ನೇ ತರಗತಿ) | | |
| ಪರಿಶಿಷ್ಟ ಜಾತಿ | – | ಶೇ. 18.50 |
| ಪರಿಶಿಷ್ಟ ಪಂಗಡ | – | ಶೇ. 7.70 |
| ಹಿಂದುಳಿದ ವರ್ಗ | – | ಶೇ. 39.26 |
| ಸಾಮಾನ್ಯ | – | ಶೇ. 14.09 |
| ಮುಸ್ಲಿಂ | – | ಶೇ. 3.63 |
| ಇತರೆ | – | ಶೇ. 16.82 |
| **ಒಟ್ಟು** | – | **ಶೇ. 100** |

| ಮಕ್ಕಳ ದಾಖಲಾತಿ ವಿವರ | | | |
|---|---|---|---|
| **ವರ್ಷ** | | **ಬಾಲಕರು** | **ಬಾಲಕಿಯರು** |
| 2006–07 | 1ನೇ ತರಗತಿ | 6.19 ಲಕ್ಷ | 5.71 ಲಕ್ಷ (ಶೇ 47.98) |
| | 1ರಿಂದ 5 | 29.54 | 27.70 (ಶೇ 48.39) |
| | 1ರಿಂದ 7 | 40.45 | 37.81 (ಶೇ 48.31) |
| | 1ರಿಂದ 10 | 53.17 | 49.20 (ಶೇ 48.06) |
| 2013–14 | 1ನೇ ತರಗತಿ | 5.83 | 5.50 (ಶೇ 48.55) |
| | 1ರಿಂದ 5 | 27.62 | 25.89 (ಶೇ 48.38) |
| | 1ರಿಂದ 7 | 38.00 | 35.60 (ಶೇ 48.37) |
| | 1ರಿಂದ 10 | 51.77 | 48.30 (ಶೇ 48.26) |

ದುರ್ಬಲ ವರ್ಗಕ್ಕೆ ಸೇರಿದವರು, ಬಡವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವ ಬದಲು ಕೂಲಿಗೆ ಕಳುಹಿಸುವುದನ್ನು ನಾವು ನೋಡಿದ್ದೇವೆ. ಇದರಿಂದಾಗಿಯೇ ಕೆಲವು ಕಡೆ ಬಾಲ ಕಾರ್ಮಿಕ ಪದ್ಧತಿ ಜೀವಂತವಾಗಿದೆ. ಇದಕ್ಕೆ ಇತಿಶ್ರೀ ಹಾಡಬೇಕು, ಶಾಲೆಗೆ ಹೋಗುವ ವಯೋಮಾನದ ಮಗುವನ್ನು ಬಾಲ್ಯದಲ್ಲೇ ದುಡಿಯುವುದಕ್ಕೆ ಹಚ್ಚುವುದನ್ನು ತಡೆಯಬೇಕು ಎಂಬ ಉದ್ದೇಶದಿಂದ ಹಾಜರಾತಿ ಭತ್ಯೆ ನೀಡಲಾಗುತ್ತಿದೆ. ಇದರಿಂದ ಆರ್ಥಿಕವಾಗಿ ಸ್ವಲ್ಪಮಟ್ಟಿಗೆ ನೆರವಾಗುವುದರ ಜೊತೆಗೆ ಶಾಲೆಯತ್ತ ಮಗುವನ್ನು ಆಕರ್ಷಿಸಿದಂತಾಗುತ್ತದೆ.

**ವಿಶೇಷ ಶಾಲೆ:** ಹೆಣ್ಣು ಮಕ್ಕಳಿಗಾಗಿಯೇ ರಾಜ್ಯದಲ್ಲಿ 71 ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಗಳನ್ನು ಆರಂಭಿಸಲಾಗಿದೆ. ಇಲ್ಲಿ 6ರಿಂದ 8ನೇ ತರಗತಿವರೆಗೆ ವಸತಿ ಸಹಿತ ಶಿಕ್ಷಣ ನೀಡಲಾಗುತ್ತಿದೆ. ಕೇಂದ್ರ ಸರ್ಕಾರದ ನೆರವಿನೊಂದಿಗೆ 2004ರಲ್ಲಿ ಈ ಶಾಲೆಗಳನ್ನು ಆರಂಭಿಸಿದ್ದು ಉಚಿತವಾಗಿ ಶಿಕ್ಷಣ ನೀಡಲಾಗುತ್ತಿದೆ. ಶಾಲೆ ಬಿಟ್ಟವರು, ಅನಾಥರು, ಮಾದಕ ದ್ರವ್ಯವ್ಯಸನಕ್ಕೆ ಒಳಗಾದವರು, ತಂದೆ ಅಥವಾ ತಾಯಿ ಒಬ್ಬರನ್ನೇ ಹೊಂದಿರುವ ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ಈ ಶಾಲೆಗಳನ್ನು ಆರಂಭಿಸಲಾಗಿದೆ. ಈ ವರ್ಗಗಳ ವ್ಯಾಪ್ತಿಯಲ್ಲಿ ಬರುವವರು, ಪರಿಶಿಷ್ಟರು, ಮತ್ತು ಅಲ್ಪಸಂಖ್ಯಾತರೂ ಈ ಮಕ್ಕಳಿಗೆ ಶೇ 75ರಷ್ಟು ಸೀಟುಗಳನ್ನು ಮೀಸಲಿಡಲಾಗುತ್ತದೆ. ಉಳಿದ ಸೀಟುಗಳನ್ನು ಬಿಪಿಎಲ್ ಕುಟುಂಬದ ಮಕ್ಕಳಿಗೆ ನೀಡಲಾಗುತ್ತದೆ.

8300 ಮಕ್ಕಳಿಗೆ ಈ ಶಾಲೆಗಳಲ್ಲಿ ಪ್ರವೇಶ ಕಲ್ಪಿಸಿದ್ದು, ಆಹಾರಕ್ಕಾಗಿ ಪ್ರತಿಯೊಬ್ಬ ವಿದ್ಯಾರ್ಥಿನಿಗೆ ಮಾಸಿಕ 1500 ರೂಪಾಯಿ ವೆಚ್ಚ ಮಾಡಲಾಗುತ್ತಿದೆ. ಇದಲ್ಲದೆ ಮಾಸಿಕ 100 ರೂಪಾಯಿ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ಸರ್ಕಾರದ ವೆಚ್ಚದಲ್ಲೇ ವೈದ್ಯಕೀಯ ತಪಾಸಣೆ ಮಾಡಿಸಿ, ಏನಾದರೂ ಕಾಯಿಲೆ ಇರುವುದು ಕಂಡುಬಂದರೆ ಚಿಕಿತ್ಸೆ ಕೊಡಿಸಲಾಗುತ್ತದೆ. ಸಾಮಾನ್ಯ ಶಿಕ್ಷಣದ ಜೊತೆಗೆ ವಿವಿಧ ವೃತ್ತಿಗಳ ಬಗ್ಗೆ ಕೌಶಲ ತರಬೇತಿ ನೀಡಲಾಗುತ್ತದೆ. ಹೊಲಿಗೆ, ಹಾರ ತಯಾರಿಸುವುದು, ನಿಟ್ಟಿಂಗ್, ಎಂಬ್ರಾಯಿಡರಿ...ಹೀಗೆ ಅವರ ಆಸಕ್ತಿಗೆ ತಕ್ಕಂತೆ ತರಬೇತಿ ನೀಡುವ ವ್ಯವಸ್ಥೆ ಮಾಡಲಾಗಿದೆ. ಇನ್ನು ಹೆಣ್ಣು ಮಕ್ಕಳ ಸುರಕ್ಷತೆ ಮತ್ತು ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಕರಾಟೆ, ಯೋಗವನ್ನು ಕಲಿಸಲಾಗುತ್ತಿದೆ. ಸ್ವರಕ್ಷಣೆಗಾಗಿ ಹೆಣ್ಣು ಮಕ್ಕಳಿಗೆ ಕರಾಟೆ ಕಲಿಸುವ ಅಗತ್ಯವಿದೆ ಎಂಬುದನ್ನು ಮನಗಂಡು ಕಳೆದ ವರ್ಷದಿಂದ ಇದನ್ನು ಜಾರಿಗೊಳಿಸಲಾಗಿದೆ. ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಗಳಲ್ಲಿ ಅಷ್ಟೆ ಅಲ್ಲದೆ ಸಾಮಾನ್ಯ ಶಾಲೆಗಳಲ್ಲಿ (ಪ್ರೌಢಶಾಲೆ) ವ್ಯಾಸಂಗ ಮಾಡುತ್ತಿರುವ ಹೆಣ್ಣುಮಕ್ಕಳಿಗೆ ಕರಾಟೆ ಕಲಿಸಲಾಗುತ್ತಿದೆ. ದೈಹಿಕ ಶಿಕ್ಷಕರಿಗೆ ಇದರ ಜವಾಬ್ದಾರಿ ವಹಿಸಲಾಗಿದೆ. ದೈಹಿಕ ಶಿಕ್ಷಕರು ಇಲ್ಲದ ಕಡೆ ಬೇರೆ ಶಿಕ್ಷಕರನ್ನು ಈ ಕಾರ್ಯಕ್ಕೆ ನಿಯೋಜಿಸಲಾಗಿದೆ. ಕರಾಟೆಯಲ್ಲಿ ತರಬೇತಿ ಪಡೆದವರನ್ನು ಆಯ್ಕೆ ಮಾಡಿಕೊಂಡು ಅವರಿಂದ ತರಬೇತಿ ಕೊಡಿಸುವ ವ್ಯವಸ್ಥೆ ಮಾಡಬೇಕು ಎಂದು

ಆಯಾ ಶಾಲೆಗಳ ಮುಖ್ಯೋಪಾಧ್ಯಾಯರಿಗೆ ಸೂಚಿಸಲಾಗಿದೆ. ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಗಳಲ್ಲಿ 6ರಿಂದ 8ನೇ ತರಗತಿವರೆಗೆ ವ್ಯಾಸಂಗ ಮಾಡಿದ ನಂತರ 9ನೇ ತರಗತಿಗೆ ಬೇರೆ ಕಡೆ ಪ್ರವೇಶ ಪಡೆಯಬೇಕಾಗುತ್ತದೆ. ಆದರೆ, ಅಂತಹ ವಿದ್ಯಾರ್ಥಿನಿಯರಿಗೆ 10ನೇ ತರಗತಿವರೆಗೂ ಬಾಲಿಕಾ ವಿದ್ಯಾಲಯದ ಹಾಸ್ಟೆಲ್‌ನಲ್ಲಿಯೇ ಉಳಿಯಲು ಅವಕಾಶ ಕಲ್ಪಿಸಲಾಗಿದೆ. ಅಲ್ಲಿ ಉಚಿತ ಊಟ, ವಸತಿ ವ್ಯವಸ್ಥೆ ಮಾಡಲಾಗಿದೆ.

### ವಸತಿನಿಲಯ

ಶೈಕ್ಷಣಿಕವಾಗಿ ಹಿಂದುಳಿದ 68 ಬ್ಲಾಕ್‌ಗಳಲ್ಲಿ ಕರ್ನಾಟಕ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ನಿಲಯಗಳನ್ನು ಆರಂಭಿಸಲಾಗಿದೆ. 6800 ವಿದ್ಯಾರ್ಥಿನಿಯರಿಗೆ ಇಲ್ಲಿ ಪ್ರವೇಶ ಪಡೆಯಲು ಅವಕಾಶ ಇದೆ. ಗ್ರಾಮೀಣ ಹಾಗೂ ಬಡ ಕುಟುಂಬಗಳ ಹೆಣ್ಣು ಮಕ್ಕಳ ವ್ಯಾಸಂಗಕ್ಕೆ ಅನುಕೂಲವಾಗಲಿ ಎಂಬುದನ್ನು ಗಮನದಲ್ಲಿಟ್ಟುಕೊಂಡು ಈ ಹಾಸ್ಟೆಲ್‌ಗಳನ್ನು ತೆರೆಯಲಾಗಿದೆ. ಪ್ರತಿಯೊಂದು ಹಾಸ್ಟೆಲ್‌ನಲ್ಲಿ ನೂರು ವಿದ್ಯಾರ್ಥಿನಿಯರ ಪ್ರವೇಶಕ್ಕೆ ಅವಕಾಶ ಇದೆ. ಆದರೆ, ಪೂರ್ಣ ಪ್ರಮಾಣದಲ್ಲಿ ಸೀಟುಗಳು ಭರ್ತಿಯಾಗುತ್ತಿಲ್ಲ. ಸುರಕ್ಷತೆ ಹಾಗೂ ಪೌಷ್ಟಿಕ ಆಹಾರದ ಕೊರತೆಯೇ ಇದಕ್ಕೆ ಕಾರಣ.

ಲೈಂಗಿಕ ಕಿರುಕುಳದಂತಹ ದೂರುಗಳು ಹೆಚ್ಚುತ್ತಿರುವುದರಿಂದ ಪೋಷಕರು ತಮ್ಮ ಮಕ್ಕಳ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡುತ್ತಾರೆ. ಹಾಸ್ಟೆಲ್‌ನಲ್ಲಿ ಮಕ್ಕಳಿಗೆ ಸೂಕ್ತ ರಕ್ಷಣೆ ಇಲ್ಲ ಎಂಬ ಕಾರಣಕ್ಕಾಗಿಯೇ ದಾಖಲಾತಿ ಮಾಡಿಸಲು ಪೋಷಕರು ಹಿಂಜರಿಯುತ್ತಾರೆ. ಇದರಿಂದಾಗಿಯೇ ಸೀಟುಗಳು ಖಾಲಿ ಇವೆ. ಆದ್ದರಿಂದ ಹಾಸ್ಟೆಲ್‌ಗಳಲ್ಲಿ ಮಕ್ಕಳು ಸುರಕ್ಷಿತವಾಗಿ ಇರುತ್ತಾರೆ ಎಂಬ ವಿಶ್ವಾಸ ಮೂಡಿಸುವ ಕೆಲಸವನ್ನು ಮಾಡಬೇಕು. ಆ ನಿಟ್ಟಿನಲ್ಲಿ ಬೇಕಾದ ಸುರಕ್ಷತಾ ಕ್ರಮಗಳನ್ನು ಶಿಕ್ಷಣ ಇಲಾಖೆ ಕೈಗೊಳ್ಳಬೇಕು. ಇಲ್ಲದಿದ್ದರೆ ವಸತಿನಿಲಯ ಸ್ಥಾಪನೆಯ ಉದ್ದೇಶ ಈಡೇರುವುದಿಲ್ಲ.



### ಶಿಕ್ಷಣಕ್ಕೂ ಉತ್ತೇಜನ ನೀಡಿದ ಭಾಗ್ಯಲಕ್ಷ್ಮಿ ಯೋಜನೆ

**ಭಾಗ್ಯಲಕ್ಷ್ಮಿ ಯೋಜನೆ ಮೂಲಕ ಪರೋಕ್ಷವಾಗಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡಲಾಗುತ್ತಿದೆ. ಹೆಣ್ಣುಭ್ರೂಣ ಹತ್ಯೆಯನ್ನು ತಡೆಯುವ ಮತ್ತು ಹೆಣ್ಣು ಮಕ್ಕಳ ವಿವಾಹಕ್ಕೆ ಆರ್ಥಿಕವಾಗಿ ನೆರವು ನೀಡುವ ಉದ್ದೇಶದಿಂದ ರಾಜ್ಯದಲ್ಲಿ ಭಾಗ್ಯಲಕ್ಷ್ಮಿ ಯೋಜನೆಯನ್ನು ಆರಂಭಿಸಲಾಗಿದೆ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ(ಬಿಪಿಎಲ್ ಕುಟುಂಬ) ಇಬ್ಬರು ಹೆಣ್ಣು ಮಕ್ಕಳು ಈ ಯೋಜನೆಯ ಫಲಾನುಭವಿಗಳಾಗಬಹುದು.**

**ಈ ಯೋಜನೆಯ ಸದುಪಯೋಗ ಪಡೆಯಬೇಕಾದರೆ ಕನಿಷ್ಠ 8ನೇ ತರಗತಿವರೆಗೆ ಮಗುವಿಗೆ ಶಿಕ್ಷಣ ಕೊಡಿಸಬೇಕು. 18 ವರ್ಷ ತುಂಬುವವರೆಗೂ ಮದುವೆ ಮಾಡಬಾರದು ಎಂಬುದು ಸೇರಿದಂತೆ ಹಲವು ಷರತ್ತುಗಳನ್ನು ವಿಧಿಸಲಾಗಿದೆ. ಈ ಮೂಲಕ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪರೋಕ್ಷ ಬೆಂಬಲ ನೀಡಿದಂತಾಗಿದೆ.**

**ಮಗುವಿಗೆ ಒಂದು ವರ್ಷ ತುಂಬುವ ಮೊದಲೇ ಭಾಗ್ಯಲಕ್ಷ್ಮಿ ಯೋಜನೆಗೆ ಹೆಸರು ನೋಂದಾಯಿಸಿ ಬಾಂಡ್ ಪಡೆಯಬೇಕು. ಆದರೆ, 18 ವರ್ಷ ತುಂಬಿದ ನಂತರವೇ ಒಂದು ಲಕ್ಷ ರೂಪಾಯಿ ಹಣವನ್ನು ಫಲಾನುಭವಿಗೆ ಪಾವತಿಸಲಾಗುತ್ತದೆ. 18 ವರ್ಷಕ್ಕೂ ಮೊದಲೇ ಹಣ ನೀಡದೆ ಇರುವುದರಿಂದ, ಅಲ್ಲಿಯವರೆಗೂ ಮದುವೆ ಮಾಡುವಂತಿಲ್ಲ. ಉದ್ಯೋಗಕ್ಕೆ ಕಳುಹಿಸುವ ಇಚ್ಛೆ ಇಲ್ಲದವರು ಸಹ ಸಾಮಾನ್ಯವಾಗಿ ಮದುವೆ ಆಗುವವರೆಗೂ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಾರೆ. ಹೀಗಾಗಿ ಮುಂದಿನ ದಿನಗಳಲ್ಲಿ ಸಮಾಜದಲ್ಲಿ ಬದಲಾವಣೆ ತರಲು ಇದು ಸಹಕಾರಿಯಾಗಿದೆ.**

**ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಲು ಹಿಂಜರಿಯುವ ಪೋಷಕರು ಕೂಡ, ಭಾಗ್ಯಲಕ್ಷ್ಮಿ ಯೋಜನೆಯಡಿ ದೊರೆಯುವ ಹಣ ಮತ್ತು ವೈದ್ಯಕೀಯ ಸೌಲಭ್ಯ, ಮತ್ತಿತರ ಸವಲತ್ತುಗಳ ಆಸೆಯಿಂದಾಗಿ ಶಿಕ್ಷಣ ಕೊಡಿಸಲು ಮುಂದೆ ಬಂದಿದ್ದಾರೆ. ಈ ಮೂಲಕವಾದರೂ ಬಡ ಕುಟುಂಬಗಳ ಹೆಣ್ಣು ಮಕ್ಕಳು ಶಿಕ್ಷಣ ಪಡೆದು, ಸಾಮಾಜಿಕವಾಗಿ ಜಾಗೃತರಾಗುತ್ತಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು.**

**ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಸಾಂಪ್ರದಾಯಿಕ ಶಿಕ್ಷಣ ನೀಡುವುದರ ಜೊತೆಗೆ, ಅನಕ್ಷರಸ್ಥ ಮಹಿಳೆಯರನ್ನು ಸಾಕ್ಷರರನ್ನಾಗಿ ಮಾಡಲು ಲೋಕಶಿಕ್ಷಣ ನಿರ್ದೇಶನಾಲಯ ಕಲಿಕಾ ಕೇಂದ್ರಗಳನ್ನು ಆರಂಭಿಸಿದೆ. ರಾಜ್ಯದ 18 ಜಿಲ್ಲೆಗಳಲ್ಲಿ ಈ ಕೇಂದ್ರಗಳು ನಡೆಯುತ್ತಿದ್ದು, ಶೇ 100ರಷ್ಟು ಸಾಕ್ಷರತೆಯ ಗುರಿ ಸಾಧಿಸಲು ಅಧಿಕಾರಿಗಳು ಕಾರ್ಯೋನ್ಮುಖರಾಗಿದ್ದಾರೆ. ಇದಕ್ಕೆ ಸಾರ್ವಜನಿಕರ ಸಂಘ ಸಂಸ್ಥೆಗಳ ಸಹಕಾರಬೇಕು. ಮುಖ್ಯವಾಗಿ ಅನಕ್ಷರಸ್ಥ ಮಹಿಳೆಯರ ಕುಟುಂಬ ವರ್ಗದ ಸಹಕಾರಬೇಕು. ಆಗ ಮಾತ್ರ ಮಹಿಳೆಯರನ್ನು ಸಾಕ್ಷರರನ್ನಾಗಿ ಮಾಡುವ ಕಾರ್ಯದಲ್ಲಿ ಯಶಸ್ಸು ಕಾಣಲು ಸಾಧ್ಯ.**

### ಎಲ್ಲವೂ ಉಚಿತ

ರಾಜ್ಯ ಮತ್ತು ಕೇಂದ್ರ ಸರ್ಕಾರ ಪ್ರತಿ ವರ್ಷ ಶಿಕ್ಷಣಕ್ಕಾಗಿ ಕೋಟ್ಯಂತರ ರೂಪಾಯಿ ವೆಚ್ಚ ಮಾಡುತ್ತಿದೆ. ಸರ್ವ ಶಿಕ್ಷಣ ಅಭಿಯಾನ ಯೋಜನೆ, ರಾಷ್ಟ್ರೀಯ ಮಾಧ್ಯಮಿಕ ಅಭಿಯಾನ ಯೋಜನೆ ಸೇರಿದಂತೆ ವಿವಿಧ ಯೋಜನೆಗಳಡಿ ಉಚಿತವಾಗಿ ಪಠ್ಯಪುಸ್ತಕ, ನೋಟ್‌ಬುಕ್, ಸಮವಸ್ತ್ರ, ಬ್ಯಾಗು, ಸೈಕಲ್, ಮಧ್ಯಾಹ್ನದ ಬಿಸಿಯೂಟ... ಹೀಗೆ ಹಲವಾರು ಸೌಲಭ್ಯಗಳನ್ನು ಕಲ್ಪಿಸಿದೆ. ಕೇವಲ ಹೆಣ್ಣು ಮಕ್ಕಳು ಅಷ್ಟೆ ಅಲ್ಲದೆ ಬಾಲಕರೂ ಈ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಉಚಿತ ಹಾಸ್ಟೆಲ್, ವಿದ್ಯಾರ್ಥಿ ವೇತನ, ಉನ್ನತ ವ್ಯಾಸಂಗಕ್ಕೆ ಸಾಲ ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸಿಕೊಡುವ ಮೂಲಕ ಹೆಣ್ಣು ಮಕ್ಕಳ ವ್ಯಾಸಂಗಕ್ಕೆ ಉತ್ತೇಜನ ನೀಡಲಾಗುತ್ತಿದೆ. ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ಮಧ್ಯದಲ್ಲೇ ಶಾಲೆ ಬಿಡಬಾರದು, ದೂರದ ಶಾಲೆಗೆ ಹೋಗಿ ಬರಲು ಸಹಾಯವಾಗಬೇಕು ಎಂಬ ಉದ್ದೇಶದಿಂದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸೈಕಲ್ ನೀಡಲಾಗುತ್ತಿದೆ. ಆರಂಭದಲ್ಲಿ ಹೆಣ್ಣು ಮಕ್ಕಳಿಗೆ ಮಾತ್ರ ಇದ್ದ ಈ ಯೋಜನೆಯನ್ನು ಕ್ರಮೇಣ ಬಾಲಕರಿಗೂ ವಿಸ್ತರಿಸಲಾಗಿದೆ.

### ಕಡಿಮೆಯಾದ ಅಂತರ

ಸರ್ಕಾರದಿಂದ ದೊರೆಯುತ್ತಿರುವ ಹತ್ತು ಹಲವು ಸೌಲಭ್ಯಗಳಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಹೆಣ್ಣು ಮಕ್ಕಳೂ ಅಧಿಕ ಸಂಖ್ಯೆಯಲ್ಲಿ ಶಿಕ್ಷಣ ಪಡೆಯಲು ಮುಂದೆ ಬರುತ್ತಿದ್ದಾರೆ. ಒಂದರಿಂದ 10ನೇ ತರಗತಿವರೆಗಿನ ದಾಖಲಾತಿಯ ಅಂಕಿಸಂಖ್ಯೆಗಳನ್ನು ಗಮನಿಸಿದರೆ ಬಾಲಕ – ಬಾಲಕಿಯರ ನಡುವೆ ಅಂತಹ ವ್ಯತ್ಯಾಸ ಕಂಡುಬರುವುದಿಲ್ಲ. 2006–7ನೇ ಸಾಲಿನಲ್ಲಿ 1ನೇ ತರಗತಿಗೆ 6.19 ಲಕ್ಷ ಬಾಲಕರು, 5.71 ಲಕ್ಷ ಬಾಲಕಿಯರು ದಾಖಲಾಗಿದ್ದರೆ, 2013–14ನೇ ಸಾಲಿನಲ್ಲಿ 5.83 ಲಕ್ಷ ಬಾಲಕರು, 5.50 ಲಕ್ಷ ಬಾಲಕಿಯರು ದಾಖಲಾಗಿದ್ದಾರೆ. ಮಕ್ಕಳ ಜನನ ಪ್ರಮಾಣ ಕಡಿಮೆ ಆಗುತ್ತಿರುವ ಕಾರಣ ದಾಖಲಾತಿ ಪ್ರಮಾಣವೂ ಎಂಟು ವರ್ಷಗಳಿಂದ ಕಡಿಮೆಯಾಗುತ್ತಿದೆ. ಲಿಂಗಾನುಪಾತದಲ್ಲೇ ಬಾಲಕಿಯರ ಸಂಖ್ಯೆ ಕಡಿಮೆ ಇದೆ. ಹೀಗಾಗಿ ಹೆಣ್ಣುಮಕ್ಕಳ ಸಂಖ್ಯೆಗೆ ಹೋಲಿಸಿದರೆ, ಬಾಲಕ – ಬಾಲಕಿಯರ ದಾಖಲಾತಿ ಪ್ರಮಾಣದಲ್ಲಿ ಹೆಚ್ಚಿನ ಅಂತರ ಇಲ್ಲ. ಸರ್ಕಾರಿ, ಅನುದಾನಿತ, ಖಾಸಗಿ

ಸೇರಿದಂತೆ ಎಲ್ಲ ವರ್ಗದ ಶಾಲೆಗಳನ್ನು ಗಣನೆಗೆ ತೆಗೆದುಕೊಂಡರೆ 2013–14ರಲ್ಲಿ ಒಂದನೇ ತರಗತಿಯಲ್ಲಿ ಹೆಣ್ಣು ಮಕ್ಕಳ ದಾಖಲಾತಿ ಪ್ರಮಾಣ ಶೇ 48.55ರಷ್ಟಿದೆ. 2006–07ರಲ್ಲಿ ಶೇ 47.98ರಷ್ಟಿತ್ತು. ಒಟ್ಟಾರೆ ನೋಡಿದರೆ ಎಂಟು ವರ್ಷಗಳಲ್ಲಿ ಸ್ವಲ್ಪಮಟ್ಟಿಗೆ ಏರಿಕೆ ಆಗಿರುವುದು ಕಂಡುಬಂದಿದೆ.

ರಾಜ್ಯದಲ್ಲಿ ಶೇ 2.03ರಷ್ಟು ಮಾತ್ರ ಹೆಣ್ಣು ಮಕ್ಕಳ ಶಾಲೆಗಳಿವೆ. ಶೇ 2.96ರಷ್ಟು ಬಾಲಕರ ಶಾಲೆಗಳಾಗಿವೆ. ಉಳಿದ ಶಾಲೆಗಳಲ್ಲಿ ಸಹ ಶಿಕ್ಷಣ ನೀಡಲಾಗುತ್ತಿದೆ. ಒಟ್ಟಾರೆ ರಾಜ್ಯದಲ್ಲಿ ಒಂದರಿಂದ 10ನೇ ತರಗತಿವರೆಗೆ 10,006,938 ಮಕ್ಕಳು ವ್ಯಾಸಂಗ ಮಾಡುತ್ತಿದ್ದು, ಇವರಲ್ಲಿ 4,82,9,146 ಮಂದಿ ಬಾಲಕಿಯರು. ಉಳಿದವರು ಬಾಲಕರು. ಎಸ್ಸೆಸ್ಸೆಲ್ಸಿ, ಪಿಯುಸಿ ಸೇರಿದಂತೆ ಪ್ರತಿಯೊಂದು ಪರೀಕ್ಷೆಗಳಲ್ಲೂ ಬಾಲಕಿಯರು ಮೇಲುಗೈ ಸಾಧಿಸುತ್ತಿರುವುದು ಫಲಿತಾಂಶಗಳಿಂದ ಗೊತ್ತಾಗುತ್ತಿದೆ. ಇದು ವ್ಯಾಸಂಗದಲ್ಲಿ ಅವರಿಗೆ ಇರುವ ಆಸಕ್ತಿಯನ್ನು ತೋರಿಸುತ್ತದೆ. ಇಷ್ಟಾದರೂ ಹೆಣ್ಣು ಮಕ್ಕಳಿಗೆ ಏಕೆ ಶಿಕ್ಷಣ ಎಂಬ ಮನೋಭಾವವುಳ್ಳ ಕೆಲ ಪೋಷಕರು ಇದ್ದಾರೆ. ಇದರಿಂದಾಗಿಯೇ ದಾಖಲಾತಿಯಲ್ಲಿ ಶೇ 100ರಷ್ಟು ಗುರಿ ತಲುಪಲು ಸಾಧ್ಯವಾಗಿಲ್ಲ. ಈ ರೀತಿಯ ಮನೋಭಾವದಿಂದ ಪೋಷಕರು ಹೊರ ಬರಬೇಕು. ಬಾಲಕರ ಶಿಕ್ಷಣಕ್ಕೆ ನೀಡುವಷ್ಟೆ ಮಹತ್ವವನ್ನು ಬಾಲಕಿಯರ ಶಿಕ್ಷಣಕ್ಕೂ ನೀಡಬೇಕು. ಆಗ ಮಾತ್ರ ಸಮಾಜ ಮತ್ತು ಕುಟುಂಬದಲ್ಲಿ ಬದಲಾವಣೆಯನ್ನು ಕಾಣಲು ಸಾಧ್ಯ ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು.

ಸರ್ಕಾರ ನೀಡುತ್ತಿರುವ ಸೌಲಭ್ಯಗಳನ್ನು ಸ್ವಲ್ಪಮಟ್ಟಿಗೆ ದುರುಪಯೋಗ ಪಡಿಸಿಕೊಳ್ಳುವವರು ಇದ್ದಾರೆ. ಇದನ್ನು ಕೇವಲ ಶೈಕ್ಷಣಿಕ ಕ್ಷೇತ್ರದಲ್ಲಿ ಅಷ್ಟೆ ಅಲ್ಲದೆ ಎಲ್ಲ ಕ್ಷೇತ್ರಗಳಲ್ಲೂ ಕಾಣಬಹುದು. ದುರುಪಯೋಗ ಆಗುತ್ತಿದೆ ಎಂಬ ಕಾರಣಕ್ಕೆ ಯೋಜನೆಯ ಬಗ್ಗೆ ಟೀಕೆ ಮಾಡುವುದು ಅಥವಾ ಸ್ಥಗಿತಗೊಳಿಸುವುದು ಸರಿಯಲ್ಲ. ಲೋಪದೋಷಗಳನ್ನು ಸರಿಪಡಿಸಿ ಪರಿಣಾಮಕಾರಿಯಾಗಿ ಜಾರಿಗೊಳಿಸುವತ್ತ ಗಮನಹರಿಸಬೇಕು. ಆಗ ಇನ್ನಷ್ಟು ಜನರಿಗೆ ಇಂಥ ಸೌಲಭ್ಯಗಳು ಸದುಪಯೋಗ ಆಗುತ್ತವೆ. ಶಿಕ್ಷಣ ಇಲಾಖೆಯಲ್ಲಿ ಇಂಥ ಕೆಲಸ ತುರ್ತಾಗಿ ಆಗಬೇಕು.

ಶಿಕ್ಷಣ ಮತ್ತು ಆರೋಗ್ಯಕ್ಕೆ ಸರ್ಕಾರ ಹೆಚ್ಚಿನ ಒತ್ತು ನೀಡಿದೆ. ಆದರೂ ನಿರೀಕ್ಷೆ ಪ್ರಮಾಣದಲ್ಲಿ ಬದಲಾವಣೆ ಕಾಣುತ್ತಿಲ್ಲ. ಈಗಲೂ ಎರಡು ಲಕ್ಷಕ್ಕೂ ಅಧಿಕ ಮಕ್ಕಳು ಶಾಲೆಯಿಂದ ಹೊರಗೆ ಉಳಿದಿದ್ದಾರೆ ಎಂಬ ಟೀಕೆಗಳು ಕೇಳಿಬರುತ್ತಿವೆ. ಇದರಲ್ಲಿ ನಿಜಾಂಶವೂ ಇದೆ. ಹಾಗಂತ ಎಲ್ಲವೂ ಸರಿಯಿಲ್ಲ ಎಂದು ಹೇಳಲು ಆಗುವುದಿಲ್ಲ. ಕಳೆದ 10 –12 ವರ್ಷಗಳಿಗೆ ಹೋಲಿಸಿದರೆ ಶಾಲೆ ಬಿಡುವವರ ಪ್ರಮಾಣ ಕಡಿಮೆಯಾಗಿದೆ. ಹಿಂದೆ 10 ಲಕ್ಷಕ್ಕೂ ಅಧಿಕ



ಮಕ್ಕಳು ಶಾಲೆಯಿಂದ ಹೊರಗೆ ಉಳಿದಿದ್ದರು. ಆದರೆ, ಈಗ ಸಾಕಷ್ಟು ಸುಧಾರಣೆ ಆಗಿದೆ ಎಂಬುದಕ್ಕೆ ಅಂಕಿಸಂಖ್ಯೆಗಳೇ ಸಾಕ್ಷಿ. ರಾಜ್ಯದಲ್ಲಿ 34 ಶೈಕ್ಷಣಿಕ ಜಿಲ್ಲೆಗಳಿವೆ. ಕೇವಲ ಹಳೆ ಮೈಸೂರು ಭಾಗದಲ್ಲಿ ಅಷ್ಟೆ ಅಲ್ಲದೆ ಹೈದರಾಬಾದ್ ಕರ್ನಾಟಕ, ಉತ್ತರ ಕರ್ನಾಟಕ ಭಾಗದಲ್ಲೂ ಶಿಕ್ಷಣಕ್ಕೆ ಒತ್ತು ನೀಡಬೇಕು ಎಂಬ ಉದ್ದೇಶದಿಂದ ಗುಲ್ಬರ್ಗ ಮತ್ತು ಧಾರವಾಡದಲ್ಲಿ ಪ್ರತ್ಯೇಕ ಆಯುಕ್ತಾಲಯಗಳನ್ನು ಸ್ಥಾಪಿಸಲಾಗಿದೆ. ಆ ಭಾಗದಲ್ಲಿನ ಶಿಕ್ಷಕರ ಕೊರತೆಯನ್ನು ನೀಗಿಸಲು ಜಿಲ್ಲಾ, ವಿಭಾಗ ಮಟ್ಟದಲ್ಲಿ ನೇಮಕಾತಿ ನಡೆಯುತ್ತಿದ್ದು, ಆ ಭಾಗದಲ್ಲಿ ನೇಮಕವಾದವರಿಗೆ ಬೇರೆ ಕಡೆ ವರ್ಗಾವಣೆಗೆ ಅವಕಾಶ ನೀಡುತ್ತಿಲ್ಲ. ಹೀಗಾಗಿ ಶಿಕ್ಷಕರ ಕೊರತೆ ಸ್ವಲ್ಪಮಟ್ಟಿಗೆ ನೀಗಿದೆ. ಹೆಣ್ಣು ಮಕ್ಕಳು ಸೇರಿದಂತೆ ವಿದ್ಯಾರ್ಥಿಗಳ ಕಲಿಕಾ ಮಟ್ಟದಲ್ಲಿ ಸ್ವಲ್ಪಮಟ್ಟಿಗೆ ಸುಧಾರಣೆ ಆಗಿದೆ. ಮುಖ್ಯವಾಗಿ ಗುಣಮಟ್ಟದ ಶಿಕ್ಷಣದ ಅಗತ್ಯದ ಬಗ್ಗೆ ಅರಿವು ಮೂಡಿದೆ. ಇದನ್ನು ಮುಂದಿನ ದಿನಗಳಲ್ಲಿ ಆಗಬಹುದಾದ ಬದಲಾವಣೆಯ ದಿಕ್ಸೂಚಿ ಎಂದು ವಿಶ್ಲೇಷಿಸಬಹುದು. ❑

(43ನೇ ಪುಟದಿಂದ)

## ಮಗಳನ್ನು ರಕ್ಷಿಸಿ ಮಗಳನ್ನು ಓದಿಸಿ




ಸಂಚಲನೆ, ಸಂವಹನಾ ಆಂದೋಲನ ಕೈಗೊಳ್ಳುವುದು.

* ಸಿಎಸ್ಆರ್ / ಎಸ್ಆರ್‌ಬಿ ಪ್ರಮಾಣದಲ್ಲಿ ಉಂಟಾಗಿರುವ ಕುಸಿತದ ವಿಷಯವನ್ನು ಉತ್ತಮ ಆಡಳಿತೆಯ ಭಾಗವಾಗಿ ಸಾರ್ವಜನಿಕ ಚರ್ಚೆಗೊಳಪಡಿಸುವುದು.
* ಹೆಣ್ಣು ಮಗುವಿನ ಸಂಖ್ಯೆ ಕಡಿಮೆ ಇರುವ ಲಿಂಗಸೂಕ್ಷ್ಮ ಜಿಲ್ಲೆಗಳಲ್ಲಿ ಮತ್ತು ಪಟ್ಟಣಗಳಲ್ಲಿ ಸಿಎಸ್ಆರ್ ಕುರಿತಂತೆ ತೀವ್ರ ಗಮನಕ್ಕಾಗಿ ಸಮಗ್ರ ಕಾರ್ಯಕ್ರಮ ಕೈಗೊಳ್ಳುವುದು.
* ಪಂಚಾಯತ್ ರಾಜ್ ಸಂಸ್ಥೆ / ನಗರ ಸ್ಥಳೀಯ ಸಂಸ್ಥೆ ತಳಹಂತದ ಕಾರ್ಯಕರ್ತರನ್ನು ಒಗ್ಗೂಡಿಸುವುದು, ಅವರು ಸ್ಥಳೀಯ ಸಮುದಾಯ ಮಹಿಳೆ / ಯುವಕ – ಯುವತಿಯ ಗುಂಪುಗಳೊಡಗೂಡಿ ಸಾಮಾಜಿಕ ಬದಲಾವಣೆಗೆ ಕಾರ್ಯ ನಿರ್ವಹಿಸುವಂತೆ ತರಪೇತುಗೊಳಿಸುವುದು.
* ಲಿಂಗ ಮತ್ತು ಮಕ್ಕಳ ಹಕ್ಕು ವಿಷಯಗಳಿಗೆ ಸೂಕ್ತವಾಗಿ ಯೋಜನೆಗಳು ಕಾರ್ಯಕ್ರಮಗಳು ಜಾರಿಗೊಳ್ಳುವುದನ್ನು ಖಾತರಿ ಪಡಿಸುವುದು.
* ಜಿಲ್ಲೆ / ತಾಲ್ಲೂಕು / ತಳಮಟ್ಟದಲ್ಲಿ ಎಲ್ಲ ಅಂತರ ಸಂಸ್ಥೆ ಅಂತರ ಕಾರ್ಯಕ್ರಮಗಳು ಪೂರಕವಾಗಿ ಕಾರ್ಯನಿರ್ವಹಿಸುವುದು. ❑

# ಕೃಷಿಕರನ್ನು ಸಬಲ ಮಾಡುವ 'ನಮ್ಮ ರೈತ'

ಹರತೀಸುತ



ಕರ್ನಾಟಕದಲ್ಲಿ ರೈತರಿಗೆ ವಿವಿಧ ಮಾಹಿತಿಯನ್ನು ಒದಗಿಸುವ ಟ್ಯಾಬ್‌ಗಳನ್ನು ಖಾಸಗಿ ಕಂಪೆನಿಗಳ ಸಹಕಾರದೊಂದಿಗೆ ವಿತರಣೆ ಮಾಡುವ ಕಾರ್ಯಕ್ರಮ ಆರಂಭಿಸಲಾಗಿದೆ. ಅದರೊಂದಿಗೆ ರಾಜ್ಯದ ಕೃಷಿ ಕ್ಷೇತ್ರದಲ್ಲಿ ಗಮನಾರ್ಹ ಬದಲಾವಣೆ ತರುವ ಪ್ರಯತ್ನ ನಡೆದಿದೆ.

ಕೃಷಿ ನಮ್ಮ ದೇಶದ ಬೆನ್ನೆಲುಬು. ದೇಶದ ಆರ್ಥಿಕತೆಯ ಬೆಳವಣಿಗೆಗೆ ಕೃಷಿ ವಲಯ ತನ್ನದೇ ಆದ ಕೊಡುಗೆಯನ್ನು ನೀಡುತ್ತ ಬರುತ್ತಿದೆ. ಜಿಡಿಪಿಯ ಬೆಳವಣಿಗೆಯಲ್ಲೂ ಕೃಷಿ ಕ್ಷೇತ್ರದ ಕೊಡುಗೆ ಗಮನಾರ್ಹವಾದದ್ದು. ಆದರೆ ಇತ್ತೀಚಿನ ಕೆಲವು ವರ್ಷಗಳಿಂದ ಕೃಷಿ ಕ್ಷೇತ್ರದ ಬೆಳವಣಿಗೆ ಕುಂಠಿತವಾಗಿದೆ. ಇದು ಕೃಷಿ ಉತ್ಪಾದನೆಯ ಮೇಲೆ ದೊಡ್ಡ ಪರಿಣಾಮ ಬೀರಿದೆ. ಕೃಷಿಕರಿಗೆ ತಾಂತ್ರಿಕ ಸಹಾಯ ನೀಡುವ ಮೂಲಕ ತಂತ್ರಜ್ಞಾನಕ್ಕೆ ಒಗ್ಗಿಸಿದರೆ ಕೃಷಿ ಕ್ಷೇತ್ರದಲ್ಲಿ ಉತ್ಪಾದಕತೆ ಹೆಚ್ಚಾಗುತ್ತದೆ, ಇದರಿಂದ ಈ ರಂಗದಲ್ಲಿ ಇನ್ನಷ್ಟು ಅಭಿವೃದ್ಧಿ ಸಾಧ್ಯವಾಗುತ್ತದೆ.

ಕೇಂದ್ರ ಸರ್ಕಾರ ಡಿಜಿಟಲ್ ಇಂಡಿಯಾದ ಬಗ್ಗೆ ಈಗ ಚರ್ಚೆ ಆರಂಭ ಮಾಡಿದೆ, ಆದರೆ ಮಾಹಿತಿ ತಂತ್ರಜ್ಞಾನದಲ್ಲಿ ಸಿಲಿಕಾನ್ ಸಿಟಿಯನ್ನು ಹಿಂದಿಕ್ಕುವ ರೀತಿಯಲ್ಲಿ ದಾಪುಗಾಲಿಡುತ್ತಿರುವ ಬೆಳವಣಿಗೆಗಳು ಕರ್ನಾಟಕದಲ್ಲಿ ಸದ್ದಿಲ್ಲದೆ ನಡೆಯುತ್ತಿವೆ. ರಾಜ್ಯ ಸರ್ಕಾರ ತಂತ್ರಜ್ಞಾನವನ್ನು ವಿವಿಧ ರಂಗಗಳಲ್ಲಿ ಅಳವಡಿಸುವ ಕೆಲಸವನ್ನು ದೊಡ್ಡ ಪ್ರಮಾಣದಲ್ಲಿಯೇ ನಡೆಸಿದೆ. ಇದಕ್ಕಾಗಿ ಖಾಸಗಿಯವರ ಬಳಕೆಯನ್ನು ಮಾಡುತ್ತಿದೆ. ಮೊಬೈಲ್ ಮೂಲಕ ಜನರಿಗೆ ಸೇವೆಗಳನ್ನು ಒದಗಿಸುವ ಕರ್ನಾಟಕ ಒನ್ ಮೊಬೈಲ್ ಸೇವೆಗೆ ಇತ್ತೀಚೆಗೆ ರಾಷ್ಟ್ರಪತಿ ಶ್ರೀ ಪ್ರಣಬ್ ಮುಖರ್ಜಿ ಚಾಲನೆ ನೀಡಿದ್ದಾರೆ. ರಾಜ್ಯಾದ್ಯಂತ ಅನೇಕ ನಗರಗಳಲ್ಲಿ ಉಚಿತ ವೈಫೈ ಸೌಲಭ್ಯ ಒದಗಿಸಲಾಗುತ್ತಿದೆ. ಇವು ಮಾಹಿತಿ ತಂತ್ರಜ್ಞಾನ ರಂಗದಲ್ಲಿ ಮೈಲಿಗಲ್ಲು. ಇದೀಗ ಮತ್ತೊಂದು ಹೆಜ್ಜೆಯಾಗಿ ಕೃಷಿಕರನ್ನು ತಂತ್ರಜ್ಞಾನಕ್ಕೆ ಒಗ್ಗಿಸುವ ಪ್ರಯತ್ನಕ್ಕೆ ಚಾಲನೆ ನೀಡಿದೆ. ರೈತರಿಗೆ ಅವರ ಕೆಲಸ ಸುಲಭವಾಗುವ ರೀತಿಯಲ್ಲಿ ಮಾಹಿತಿ ತಂತ್ರಜ್ಞಾನ ಯುಗಕ್ಕೆ ಅವರನ್ನು ಸೆಳೆದು ತರುತ್ತಿದೆ.

ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯ ಸುಮಾರು 20 ಸಾವಿರ ರೈತರು ಇನ್ನು ಮುಂದೆ ಕೃಷಿ ರಂಗದ ದೈನಂದಿನ ಬೆಳವಣಿಗೆಗಳಲ್ಲಿ ಐಟಿಯ ಬಳಕೆ ಮಾಡಿಕೊಳ್ಳಲಿದ್ದಾರೆ. ರೈತರಿಗೆ ವಿವಿಧ ಮಾಹಿತಿಯನ್ನು ಒದಗಿಸುವ ಟ್ಯಾಬ್‌ಗಳನ್ನು ಖಾಸಗಿ ಕಂಪೆನಿಗಳ ಸಹಕಾರದೊಂದಿಗೆ ವಿತರಣೆ ಮಾಡಲಾಗಿದೆ. ಅದರೊಂದಿಗೆ ರಾಜ್ಯದ ಕೃಷಿ ಕ್ಷೇತ್ರದಲ್ಲಿ ಗಮನಾರ್ಹ ಬದಲಾವಣೆ ತರುವ ಪ್ರಯತ್ನ ನಡೆದಿದೆ.

ಮಾಹಿತಿ ತಂತ್ರಜ್ಞಾನ ಸಚಿವ ಶ್ರೀ ಎಸ್. ಆರ್. ಪಾಟೀಲ್ ಅವರು ವಿದೇಶದಲ್ಲಿರುವ ಕೆಲವು ಟೆಕ್ಕಿಗಳನ್ನು ಸಂಪರ್ಕಿಸಿ ಈ ಕಾರ್ಯ ಸಾಧಿಸಿದ್ದಾರೆ.

ತಾಯ್ನಾಡಿನ ಋಣ ತೀರಿಸಲು ಹಾತೊರೆಯುತ್ತಿದ್ದ ಟೆಕ್ಕಿಗಳು ಇ-ಕಿಸಾನ್ ಎಂಬ ಸಂಘಟನೆ ಮಾಡಿಕೊಂಡು "ಮಾಹಿತಿ ತಂತ್ರಜ್ಞಾನ ಬಳಸಿ ರೈತರನ್ನು ಬೆಳಸಿ" ಎಂಬ ಘೋಷವಾಕ್ಯದೊಂದಿಗೆ ರೈತರಿಗೆ ನೆರವಾಗಲು ಮುಂದೆ ಬಂದಿದ್ದಾರೆ. ರಾಜ್ಯದಲ್ಲಿನ ಇನ್‌ಫೋಸಿಸ್, ಬಯೋಕಾನ್ ಫೌಂಢೇಶನ್, ಎಲ್ಸಿಟಾಏರ್‌ಟೆಲ್, ಇಂಟೆಲ್‌ನಂತಹ ಅನೇಕ ಸಂಘಟನೆಗಳು, ಚಂದನ ವಾಹಿನಿ ಇದರಲ್ಲಿ ಕೈಜೋಡಿಸಿವೆ. ಆದ್ದರಿಂದಲೇ ಈ ಪ್ರಯತ್ನ ಈಗ ಯಶಸ್ವಿ ಹೆಜ್ಜೆಯನ್ನಿಟ್ಟಿದೆ.

---

ಹಿರಿಯ ಪತ್ರಕರ್ತರು.



## ಏನೇನು ಮಾಹಿತಿ

ಗ್ರಾಮೀಣ ಭಾಗದ ರೈತರಿಗೆ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನದ ಮೂಲಕ ವಿಶ್ವದಲ್ಲಿ ಕೃಷಿ ಮತ್ತು ತೋಟಗಾರಿಕೆ ಕ್ಷೇತ್ರದಲ್ಲಿ ನಡೆಯುವ ಬೆಳವಣಿಗೆಗಳು, ಒಳ್ಳೆಯ ನಡವಳಿಕೆಗಳನ್ನು ಕಾಲಕಾಲಕ್ಕೆ ರೈತರಿಗೆ ದೊರಕುವಂತೆ ಮಾಡಲಾಗುತ್ತದೆ. ಆಹಾರ ಸಂಸ್ಕರಣೆ, ಮಳೆ ನೀರು ಕೊಯ್ಲು, ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೀಡಲಾಗುತ್ತದೆ. ಹವಾಮಾನ ಮಾಹಿತಿ, ಮಳೆ ಬರುತ್ತದೆಯೇ ಅಥವಾ ಇಲ್ಲವೇ, ಬಿತ್ತನೆ ಬೀಜ ಯಾವುದು ಬಳಕೆ ಮಾಡಬೇಕು, ರಸಗೊಬ್ಬರ ಉಪಯೋಗ ಹೇಗೆ, ಕೀಟನಾಶಕ ಯಾವುದನ್ನು ಬಳಸಿದರೆ ಉತ್ತಮ, ಕೃಷಿ ಮಾರುಕಟ್ಟೆಯ ಕುರಿತು ವರದಿ, ಕೃಷಿ ಪದ್ಧತಿ, ಮಧ್ಯಂತರ ಬೆಳೆಗಳು ಯಾವುವು, ತುರ್ತು ಸಂದರ್ಭದಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಮಾಹಿತಿಯನ್ನು ಟ್ಯಾಬ್ ಮೂಲಕ ರೈತರಿಗೆ ಒದಗಿಸಲಾಗುತ್ತದೆ. ಈ ಎಲ್ಲ ಸೌಲಭ್ಯಗಳು ಸಿಗುವಂತಾಗಲು ಇ–ಕಿಸಾನ್ ಎಂಬ ತಂತ್ರಾಂಶವನ್ನು ಸಿದ್ಧಪಡಿಸಿ ಅದನ್ನು ಟ್ಯಾಬ್‌ಗೆ ಅಳವಡಿಸಲಾಗಿದೆ. ಆದ್ದರಿಂದಲೇ ಈ ಆಪ್ ಬಳಕೆ ಸುಲಭವಾಗಿದೆ.

## ಕಾಲ್ ಸೆಂಟರ್

ರೈತರಿಗೆ ಈ ತಾಂತ್ರಿಕ ಸೌಲಭ್ಯವನ್ನು ಒದಗಿಸುವ ಸಲುವಾಗಿ ಕಾಲ್ ಸೆಂಟರ್‌ವೊಂದನ್ನು ತೆರೆಯಲಾಗುತ್ತದೆ. ರೈತರು ತಮಗೆ ಏನಾದರೂ ಸಂಶಯಗಳು ಬಂದಲ್ಲಿ ಟ್ಯಾಬ್ ಮೂಲಕವೇ ಕಾಲ್ ಸೆಂಟರ್ ಸಂಪರ್ಕಿಸಬಹುದು. ಅಲ್ಲಿಂದ ಮಾಹಿತಿ ಪಡೆಯಬಹುದು. ಕಾಲ್ ಸೆಂಟರ್‌ನಲ್ಲಿರುವವರಿಗೂ ಯಾವುದೇ ಮಾಹಿತಿ ಇಲ್ಲದಿದ್ದರೆ ಅವರು ಯಾವ ವಿಶ್ವವಿದ್ಯಾಲಯವನ್ನು, ಕೃಷಿ ಇಲಾಖೆಯ ಯಾವ ಅಧಿಕಾರಿಯನ್ನು ಸಂಪರ್ಕಿಸಿದರೆ ಉತ್ತರ ದೊರಕಲಿದೆ ಎಂಬ ವಿವರಣೆ ನೀಡಲಿದ್ದಾರೆ. ಕೆಲವೊಮ್ಮೆ ತಾವೇ ತಜ್ಞರನ್ನು ಸಂಪರ್ಕಿಸಿ ಮಾಹಿತಿ ನೀಡಲಿದ್ದಾರೆ. ಆ ರೀತಿಯಲ್ಲಿ ವ್ಯವಸ್ಥೆ ಮಾಡಲಾಗಿದೆ. ಯಾವುದಾದರೂ ಬೆಳೆಗೆ ಪರಿಚಯವಿಲ್ಲದ ಕೀಟಬಾಧೆ ಉಂಟಾದರೆ ಅದರ ಚಿತ್ರಗಳನ್ನು ತೆಗೆದು ಟ್ಯಾಬ್ ಮೂಲಕವೇ ಇ–ಕಿಸಾನ್ ವೆಬ್‌ಸೈಟ್‌ಗೆ ಅಳವಡಿಸಿದರೆ ಸಾಕು, ಅದಕ್ಕೆ ತಕ್ಕ ಮಾಹಿತಿಯನ್ನು ಟ್ಯಾಬ್ ಮೂಲಕವೇ ರೈತರಿಗೆ ಸಿಗುವ ರೀತಿಯಲ್ಲಿ ವ್ಯವಸ್ಥೆ ಮಾಡಲಾಗುತ್ತದೆ. ಒಟ್ಟಾರೆ ಕೂಡಲೇ ಪರಿಹಾರ ದೊರಕುತ್ತದೆ.

## ಕ್ಲಬ್‌ಗಳ ಸ್ಥಾಪನೆ

ರೈತರಿಗೆ ತಂತ್ರಜ್ಞಾನದ ಸೌಲಭ್ಯ ಒದಗಿಸುವ ಈ ಯೋಜನೆ ಯಶಸ್ಸಿಗಾಗಿ ಆರಂಭದಲ್ಲಿ ಪ್ರಾಯೋಗಿಕವಾಗಿ ಸಣ್ಣ ಪ್ರಯತ್ನ ಮಾಡಲಾಗಿತ್ತು. ಕೇವಲ ಬಾಗಲಕೋಟೆಯಲ್ಲಿ ನಡೆದಿದ್ದ ಈ ಪ್ರಯೋಗವನ್ನು ಇದೀಗ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ. ತಲಾ 20 ರಿಂದ 25 ರೈತರಿರುವ ರೈತರ ಕ್ಲಬ್‌ಗಳನ್ನು ರಚನೆ ಮಾಡಲಾಗಿದೆ. ಪ್ರತಿಯೊಂದು ಕ್ಲಬ್‌ಗೆ ಕೇವಲ ಒಂದು ಟ್ಯಾಬ್ ಮಾತ್ರ ವಿತರಣೆ ಮಾಡಲಾಗಿದೆ. ಎರಡು ಜಿಲ್ಲೆಗಳಲ್ಲಿ ಒಟ್ಟಾರೆ 1500 ಕ್ಲಬ್‌ಗಳನ್ನು ಸ್ಥಾಪನೆ ಮಾಡಲಾಗಿದೆ.

ಪ್ರತಿಯೊಂದು ಕ್ಲಬ್‌ನಲ್ಲಿ ಟ್ಯಾಬ್ ಬಳಕೆ ಮಾಡುವಂತಹ ಒಬ್ಬ ವಿದ್ಯಾವಂತ ಯುವಕರಿಗೆ ಜವಾಬ್ದಾರಿಯನ್ನು ನೀಡಲಾಗಿದೆ. ಆದರೆ ಆ ಟ್ಯಾಬ್‌ನಲ್ಲಿ ಬೇರೆ ಯಾವುದೇ ಚಿತ್ರಗಳನ್ನಾಗಲಿ, ಫೇಸ್‌ಬುಕ್‌ನಂತಹ ಸಾಮಾಜಿಕ ಜಾಲತಾಣಗಳನ್ನಾಗಲಿ ನೋಡಲು ಸಾಧ್ಯವಿಲ್ಲದ ರೀತಿಯಲ್ಲಿ ನಿರ್ಬಂಧಿಸಲಾಗಿದೆ. ಪ್ರತಿಯೊಂದು ಟ್ಯಾಬ್ 8 ಜಿಬಿ ಇನ್‌ಬಿಲ್ಟ್ ಸ್ಟೋರೇಜ್ ಸಾಮರ್ಥ್ಯ, 2 ಜಿಬಿ ರ್‍ಯಾಮ್ ಸ್ಪೀಡ್, ವಿಡಿಯೋ ಕ್ಯಾಮರಾ, ಆಡಿಯೋ ರೆಕಾರ್ಡಿಂಗ್ ಸೌಲಭ್ಯವನ್ನು ಹೊಂದಿದೆ. ಸದ್ಯಕ್ಕೆ ಈ ಟ್ಯಾಬ್‌ಗೆ ಏರ್‌ಟೆಲ್ ಕಂಪನಿ 3 ತಿಂಗಳು ಉಚಿತವಾಗಿ ಇಂಟರ್‌ನೆಟ್ ಸೌಲಭ್ಯ ಕಲ್ಪಿಸಿದೆ. ಮುಂದಿನ ದಿನಗಳಲ್ಲಿ ರೈತರೇ ಸ್ವಂತ ಹಣದಿಂದ ಇಂಟರ್‌ನೆಟ್ ಪ್ಯಾಕ್‌ಗಳನ್ನು ಹಾಕಿಸಿಕೊಳ್ಳಬೇಕು. 1500 ಟ್ಯಾಬ್‌ಗಾಗಿ ಒಟ್ಟಾರೆ 2 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಈ ಟ್ಯಾಬ್ ಸೌಲಭ್ಯ ಒದಗಿಸುವುದರಿಂದ ರೈತರನ್ನು ನಾವು ತಾಂತ್ರಿಕವಾಗಿ ಇನ್ನಷ್ಟು



ಎತ್ತರಕ್ಕೆ ತೆಗೆದುಕೊಂಡು ಹೋಗಲು ಸಹಾಯವಾಗುತ್ತದೆ. ಈ ಟ್ಯಾಬ್‌ಗಳನ್ನು ಬಳಸಿಕೊಂಡು ಹೊಸ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರಿಂದ ಕೃಷಿ ಉತ್ಪನ್ನಗಳ ಉತ್ಪಾದಕತೆ ಇನ್ನಷ್ಟು ಹೆಚ್ಚಳವಾಗುವುದರಲ್ಲಿ ಯಾವುದೇ ಅನುಮಾನವೇ ಇಲ್ಲವೆಂಬುದನ್ನು ಕೃಷಿ ತಂತ್ರಜ್ಞರೇ ಹೇಳುತ್ತಾರೆ.

## ಎರಡು ಜಿಲ್ಲೆಗಳಿಗೆ

ಸದ್ಯಕ್ಕೆ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳನ್ನು ಮಾತ್ರ ಆಯ್ಕೆ ಮಾಡಲಾಗಿದೆ. ಇದಕ್ಕೆ ಕಾರಣಗಳು ಇವೆ. ಈ ಎರಡು ಜಿಲ್ಲೆಗಳು ಕರ್ನಾಟಕದ ಪಂಜಾಬ್ ಎಂದೇ ಹೆಸರು ಪಡೆದ ಜಿಲ್ಲೆಗಳು. ಪಂಚ ನದಿಗಳು ಈ ಜಿಲ್ಲೆಯಲ್ಲಿವೆ. ಭತ್ತ, ಕಬ್ಬು, ದ್ರಾಕ್ಷಿ ಸೇರಿದಂತೆ ತೋಟಗಾರಿಕೆ ಜಿಲ್ಲೆಗಳಿಗೆ ಎರಡು ಜಿಲ್ಲೆಗಳು ಹೆಸರುವಾಸಿಯಾಗಿವೆ. ಇಲ್ಲಿಯೇ ಸಮಸ್ಯೆಗಳು ಹೆಚ್ಚು. ಆದ್ದರಿಂದಲೇ ರೈತರಿಗೆ ನೆರವಾಗಲು ಈ ಎರಡು ಜಿಲ್ಲೆಗಳನ್ನು ಸರ್ಕಾರ ಆಯ್ಕೆ ಮಾಡಿಕೊಂಡಿದೆ. ಸರ್ಕಾರ ಇಂತಹದೊಂದು ಹೊಸ ಪ್ರಯತ್ನದ ಮೂಲಕ ರೈತರನ್ನು ಸಬಲಗೊಳಿಸುವ ಪ್ರಯತ್ನವನ್ನು ಆರಂಭಿಸಿದೆ.

ಕೇವಲ ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿರುವ ಈ ಯೋಜನೆಯನ್ನು ಹಣಕಾಸು ಲಭ್ಯತೆಯನ್ನು ಆಧರಿಸಿ ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲಾ ಕಡೆಗೂ ವಿಸ್ತರಣೆ ಮಾಡುವ ಉದ್ದೇಶವನ್ನು ಸರ್ಕಾರ ಹೊಂದಿದೆ. ರಾಜ್ಯದ ಬಯಲುಸೀಮೆ ಪ್ರದೇಶದ ರೈತರು ಒಣಭೂಮಿ ಬೆಳೆಗಳಿಗೆ ಹೆಚ್ಚು ಆಶ್ರಯಿಸಬೇಕಾಗಿದೆ. ಅಂತಹ ರೈತರು ಎದುರಿಸುವ ಸಮಸ್ಯೆಗಳು ಇನ್ನೂ ಹೆಚ್ಚಾಗಿವೆ. ಅಂತಹ ರೈತರಿಗೆ ತಂತ್ರಜ್ಞಾನದ ಸೌಲಭ್ಯ ಹೆಚ್ಚಿನ ಪ್ರಮಾಣದಲ್ಲಿ ಬೇಕಾಗಿದೆ. ಸರ್ಕಾರ ಆ ರೈತರಿಗೂ ಈ ಸೌಲಭ್ಯವನ್ನು ತುರ್ತಾಗಿ ವಿಸ್ತರಣೆ ಮಾಡುವ ಅಗತ್ಯವಿದೆ. ❑

# ಬಯಲು ಬಹಿರ್ದೆಸೆಗೆ 'ಬೈ'

ತುಕಾರಾಂರಾವ್ ಬಿ.ವಿ.



ಸಂಪೂರ್ಣ ಬಯಲು ಬಹಿರ್ದೆಸೆ ಮುಕ್ತವಾಗಿರುವ ಕೆಂಚನಡೋಣಿ ಗ್ರಾಮ, ಇತರೆ ಗ್ರಾಮಗಳಿಗೆ ಮಾದರಿಯಾಗಿದೆ. ಗ್ರಾಮಸ್ಥರು ಮನಸ್ಸು ಮಾಡಿದರೆ, ಗ್ರಾಮವನ್ನು ಸ್ವಚ್ಛ ಹಾಗೂ ನಿರ್ಮಲ ಗ್ರಾಮವನ್ನಾಗಿ ರೂಪಿಸಲು ಸಾಧ್ಯ ಎನ್ನುವುದಕ್ಕೆ ಒಂದು ನಿದರ್ಶನವಾಗಿದೆ.

ಕಳೆದ ಆರು ತಿಂಗಳ ಹಿಂದೆಯಷ್ಟೇ ಗಲೀಜು, ದುರ್ವಾಸನೆಯ ಕಾರಣ ಮೂಗು ಮುಚ್ಚಿಕೊಂಡು ಜನರು ಓಡಾಡುವ ಸ್ಥಿತಿಯಲ್ಲಿದ್ದ ಹಿಂದುಳಿದ ಪ್ರದೇಶದ ಗ್ರಾಮವೊಂದು ಈಗ ಶೇ. 100 ರಷ್ಟು ಸಂಪೂರ್ಣ ಬಯಲು ಬಹಿರ್ದೆಸೆ ಮುಕ್ತ ಗ್ರಾಮವಾಗಿ, ಸ್ವಚ್ಛ ಗ್ರಾಮವಾಗುವ ಕನಸನ್ನು ನನಸಾಗಿಸಿದೆ.

ಕೊಪ್ಪಳ ತಾಲೂಕು ಕಲ್‌ತಾವರಗೇರಾ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೆಂಚನಡೋಣಿ ಗ್ರಾಮವೇ ಈ ಸಾಧನೆ ಮಾಡಿರುವ ಗ್ರಾಮ. ಬಹುತೇಕ ಪರಿಶಿಷ್ಟ ಜಾತಿಯವರೆ ಹೆಚ್ಚಾಗಿರುವ ಈ ಗ್ರಾಮದಲ್ಲಿ 154 ಕುಟುಂಬಗಳು ವಾಸಿಸುತ್ತಿದ್ದು, ಎಲ್ಲ ಕುಟುಂಬಗಳೂ ಶೌಚಾಲಯವನ್ನು ಕಟ್ಟಿಸಿಕೊಂಡಿಸಿರುವುದು ಅಷ್ಟೇ ಅಲ್ಲ ಈ ಊರಲ್ಲೀಗ ಬಯಲು ಬಹಿರ್ದೆಸೆಗೆ ಅಂತ್ಯ ಹಾಡಲಾಗಿದೆ. ಈ ಗ್ರಾಮದ ಗ್ರಾಮಸ್ಥರು ಶೌಚಾಲಯವನ್ನು ಬಳಸಿ, ಶುಚಿತ್ವಕ್ಕೆ ಹೆಚ್ಚಿನ ಮಹತ್ವ ನೀಡುತ್ತಿದ್ದಾರೆ. ಎಲ್ಲ ಕುಟುಂಬಗಳು ವೈಯಕ್ತಿಕ ಶೌಚಾಲಯವನ್ನು ಕಟ್ಟಿಸಿಕೊಳ್ಳುವ ಮೂಲಕ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಬಯಲು ಬಹಿರ್ದೆಸೆ ಮುಕ್ತ ಗ್ರಾಮ ಮಾಡುವ ಯೋಜನೆಯನ್ನು ಸಾಕಾರಗೊಳಿಸಿದ್ದಾರೆ.

ಮಹಿಳೆಯರು ಶೌಚಕ್ಕಾಗಿ ಬಯಲಿಗೆ ಹೋಗುವುದು ಸರಿಯಲ್ಲ, ಇದು ನಮ್ಮ ಹೆಣ್ಣು ಮಕ್ಕಳ ಮಾನ, ಮರ್ಯಾದೆಯ ಪ್ರಶ್ನೆಯಾಗಿದೆ. ಮಹಿಳೆಯರು ಹಗಲು ವೇಳೆಯಲ್ಲಿ ಬಹಿರ್ದೆಸೆಗೆ ಹೋಗುವಂತಿರಲಿಲ್ಲ. ಕತ್ತಲಾಗುವವರೆಗೂ ಕಾಯಬೇಕಾಗಿತ್ತು. ಮಳೆಗಾಲದಲ್ಲಂತೂ ಈ ಸಮಸ್ಯೆ ಹೇಳತೀರದಾಗಿತ್ತು. ಶೌಚಾಲಯದ ಮಹತ್ವದ ಬಗ್ಗೆ ಚರ್ಚಿಸಲು, ಗ್ರಾಮದಲ್ಲಿ ನಾವೆಲ್ಲರೂ ಸಭೆ ಸೇರಿ, ಗ್ರಾಮಸ್ಥರೆಲ್ಲರೂ ತಪ್ಪದೆ ಶೌಚಾಲಯ ಕಟ್ಟಿಸಿಕೊಳ್ಳಲು ನಿರ್ಧರಿಸಿದೆವು. ಇದೀಗ ನಮ್ಮ ಗ್ರಾಮದಲ್ಲಿ ಶೌಚಕ್ಕಾಗಿ ಬಯಲಿಗೆ ಹೋಗುವ ಕಿರಿಕಿರಿ ಇಲ್ಲ. ಎಲ್ಲ ಕುಟುಂಬಗಳೂ ಶೌಚಾಲಯ ಕಟ್ಟಿಸಿಕೊಂಡು, ಬಳಸುತ್ತಿರುವುದರಿಂದ ಗೌರವ ಹಾಗೂ ನೆಮ್ಮದಿಯಿಂದ ಬದುಕುತ್ತಿದ್ದೇವೆ ಎನ್ನುತ್ತಾರೆ ಗ್ರಾಮ ಪಂಚಾಯತಿ ಸದಸ್ಯ ಶ್ರೀ ಚಂದ್ರಪ್ಪ ಅವರು.

ಸಂಪೂರ್ಣ ಬಯಲು ಬಹಿರ್ದೆಸೆ ಮುಕ್ತವಾಗಿರುವ ಕೆಂಚನಡೋಣಿ ಗ್ರಾಮ, ಇತರೆ ಗ್ರಾಮಗಳಿಗೆ ಮಾದರಿಯಾಗಿದೆ. ಗ್ರಾಮಸ್ಥರು ಮನಸ್ಸು ಮಾಡಿದರೆ, ಗ್ರಾಮವನ್ನು ಸ್ವಚ್ಛ ಹಾಗೂ ನಿರ್ಮಲ ಗ್ರಾಮವನ್ನಾಗಿ ರೂಪಿಸಲು ಸಾಧ್ಯ ಎನ್ನುವುದಕ್ಕೆ ಒಂದು ನಿದರ್ಶನವಾಗಿದೆ. 2015 ರ ಒಳಗಾಗಿ ಇಡೀ ಕೊಪ್ಪಳ ಜಿಲ್ಲೆಯನ್ನು ಸಂಪೂರ್ಣ ಬಯಲು ಬಹಿರ್ದೆಸೆ ಮುಕ್ತ ಜಿಲ್ಲೆಯನ್ನಾಗಿಸುವ ಗುರಿ ಹೊಂದಿದೆ. ಜಿಲ್ಲಾ ಪಂಚಾಯತಿ ಅಧ್ಯಕ್ಷರಾಗಿರುವ ಶ್ರೀ ಅಮರೇಶ್ ಕುಳಗಿ ಅವರು ನಿತ್ಯ ಹಲವು ಗ್ರಾಮಗಳಿಗೆ ಭೇಟಿ ಕೊಟ್ಟು, ಶೌಚಾಲಯದ ಮಹತ್ವದ ಬಗ್ಗೆ ಅರಿವು ಮೂಡಿಸುವಲ್ಲಿ ನಿರತರಾಗಿದ್ದಾರೆ. ಇದಕ್ಕೆ ಸಂಸದರು, ಎಲ್ಲ ಶಾಸಕರುಗಳು, ಜಿಲ್ಲಾ ಪಂಚಾಯತಿಯ ಎಲ್ಲ ಸದಸ್ಯರುಗಳು, ತಾಲೂಕು ಪಂಚಾಯತಿ, ಗ್ರಾಮ ಪಂಚಾಯತಿಗಳ ಎಲ್ಲ ಸದಸ್ಯರು, ಶೌಚಾಲಯ ಆಂದೋಲನದಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡಿದ್ದಾರೆ. ❑

ಜಿಲ್ಲಾ ವಾರ್ತಾಧಿಕಾರಿ, ಕೊಪ್ಪಳ.

## ನಿಮಗಿದು ತಿಳಿದಿದೆಯೇ?

**ಸಿಬಿಲ್ ಸ್ಕೋರ್ :** ಸಿಬಿಲ್ ಸ್ಕೋರ್ ದೇಶದ ಮೊಟ್ಟಮೊದಲ ಸಾಲಮಾಹಿತಿ ಕಂಪನಿ (ಸಿಐಸಿ) ಆಗಿದೆ. ಸಾಲ ನೀಡಿಕೆದಾರರಿಗೆ ತಮ್ಮ ವ್ಯಾಪಾರ ನಿರ್ವಹಿಸಲು ಹಾಗೂ ಗ್ರಾಹಕರಿಗೆ ಉತ್ತಮಾವಧಿ ಸಾಲ ದೊರಕಲು ನೆರವಾಗಲು ಈ ಕಂಪನಿ ರಚಿಸಲಾಗಿದೆ. ಸಿಬಿಲ್ ವ್ಯಕ್ತಿಯ ಸಾಲ ಮತ್ತು ಕ್ರೆಡಿಟ್ ಕಾರ್ಡ್ ಹಣ ಪಾವತಿ ವಿವರಗಳನ್ನು ಕ್ರೋಡೀಕರಿಸಿಡುತ್ತದೆ. ಎಲ್ಲ ಸದಸ್ಯ ಬ್ಯಾಂಕುಗಳು ಪ್ರತಿ ತಿಂಗಳು ಸಿಬಿಲ್‌ಗೆ ಈ ದಾಖಲೆಗಳನ್ನು ಸಲ್ಲಿಸುತ್ತವೆ. ಇದನ್ನು ಆಧರಿಸಿ ಸಾಲ ಮಾಹಿತಿ ವರದಿ (ಸಿಐಆರ್) ತಯಾರಿಸಲಾಗುತ್ತದೆ. ನಂತರ ಸಾಲ ಸಂಸ್ಥೆಗಳಿಗೆ, ಗ್ರಾಹಕರ ಸಾಲ ಅರ್ಜಿ ಮೌಲ್ಯೀಕರಿಸಲು ಒದಗಿಸಲಾಗುತ್ತದೆ.

ಕ್ರೆಡಿಟ್ ಸ್ಕೋರ್ ಉತ್ತಮವಾಗಿದ್ದಷ್ಟೂ ಸಾಲ ಮರು ಪರಿಶೀಲನೆ, ಮಂಜೂರಾತಿ ಸುಲಭ. ತೆಗೆದುಕೊಂಡ ಸಾಲವನ್ನು ನಿಗದಿತ ಕಾಲಾವಧಿಯಲ್ಲಿ ಪಾವತಿಸದಿದ್ದರೆ ಸ್ಕೋರು ಕುಸಿಯುತ್ತದೆ.

**ಮೈಕ್ರೊಬಯೋಮ್ :** ನಮ್ಮ ದೇಹದೊಳಗಿನ ಅವಕಾಶ ಅಂದರೆ ಜಠರನಾಳ, ಬಾಯಂಗಳ ಮೊದಲಾದ ಜಾಗದಲ್ಲಿ ಇರುವ ದೇಹಸ್ನೇಹಿ ಸೂಕ್ಷ್ಮಾಣುಗಳನ್ನು ಮೈಕ್ರೊಬಯೋಮ್ ಎಂದು ಕರೆಯಲಾಗುತ್ತದೆ. ಈ ಸೂಕ್ಷ್ಮಾಣುಗಳು ಆಹಾರ ಪಚನ ಕ್ರಿಯೆಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ದೇಹದ ಅಂಗಾಂಗಗಳಲ್ಲಿ ಪಚನವಾಗದ ಕೆಲ ಆಹಾರವನ್ನು ಬುರುಗುಗೊಳಿಸಿ ಹೀರುವ ಮೂಲಕ ಪಚನಕ್ರಿಯೆಗೆ ನೆರವಾಗುತ್ತವೆ. ರೋಗ ತರಬಹುದಾದ ಬ್ಯಾಕ್ಟೀರಿಯಾ, ವೈರಸ್, ವಿಷಜಂತುಗಳ ವಿರುದ್ಧ ಸಹಜ ನಿರೋಧಕವಾಗಿ ಕಾರ್ಯ ನಿರ್ವಹಿಸುತ್ತವೆ. ಒಬ್ಬ ಸಾಮಾನ್ಯ ಮನುಷ್ಯನ ದೇಹದಲ್ಲಿ ನೂರು ಸಹಸ್ರಕೋಟಿಗೂ ಹೆಚ್ಚಿನ ಸಂಖ್ಯೆಯ ಮೈಕ್ರೊ ಬಯೋಮ್‌ಗಳಿರುತ್ತವೆ. ಇವುಗಳ ಒಟ್ಟು ತೂಕ 200 ಗ್ರಾಂ. ಗಳಿಷ್ಟಿರಬಹುದಾಗಿದೆ. ❑

(37ನೇ ಪುಟದಿಂದ)

## ಆಡಳಿತ ಸುಧಾರಣೆಗೆ ಡಿಜಿಟಲ್ ಇಂಡಿಯಾ

ಪರಿಣಾಮಕಾರಿ ಮೌಲ್ಯ ಮಾಪನ ಇಲ್ಲದಿದ್ದಲ್ಲಿ ತಪ್ಪುಗಳು ಮರುಕಳಿಸಬಹುದು" ಎಲ್ಲ ಮಟ್ಟಗಳಲ್ಲೂ ಭ್ರಷ್ಟಾಚಾರ ನೆಲೆಯಾಗಿರುವ ಭಾರತದಂಥ ದೇಶದಲ್ಲಿ ಡಿಐಪಿ ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದೆಯೇ ಇಲ್ಲವೇ ಎಂಬುದರ ಖಾತ್ರಿಗೆ ಮೂರನೆಯ ಕಣ್ಣಿನ ಮೂಲಕ ಮೌಲ್ಯಮಾಪನ ನಡೆಸುವುದು ಅತ್ಯಂತ ಮಹತ್ವದ್ದು. ಇಲ್ಲಿ ಮೂರನೆಯ ಕಣ್ಣು ಅಂದರೆ (ಭಾರತ ಮತ್ತು ವಿದೇಶಿ ಉನ್ನತ ಶಿಕ್ಷಣ ಸಂಸ್ಥೆಯ) ಶೈಕ್ಷಣಿಕ ವಿದ್ವಾಂಸರು ಮತ್ತು ಸಂಶೋಧಕರು ನಡೆಸುವ ಎಲ್ಲ ಬಿಡಿ ಯೋಜನೆಗಳ ತೀವ್ರ ಮತ್ತು ಸ್ವತಂತ್ರ ಅಧ್ಯಯನ. ದುರದೃಷ್ಟವಶಾತ್ ಇಂಥ ಮೌಲ್ಯಮಾಪನಕ್ಕೆ ಸದ್ಯ ಅವಕಾಶವಿಲ್ಲವಾಗಿದೆ.

ವಿವಿಧ ಶಿಸ್ತುಗಳ ಡಾಕ್ಟೊರಲ್ ಸಂಶೋಧನೆಗೆ (ತಂತ್ರಜ್ಞಾನ, ವಾಣಿಜ್ಯ ಮತ್ತು ನಿರ್ವಹಣೆ, ಸಮಾಜವಿಜ್ಞಾನ) ಡಿಐಪಿ ಅನುವುಮಾಡಿಕೊಡುತ್ತದೆ. ಅಂತೆಯೇ ಅಂತರ್‌ಶಿಸ್ತೀಯ ಮತ್ತು ಬಹುಶಿಸ್ತೀಯ ಸಂಶೋಧನೆಗೂ ಪೂರಕ ವಾತಾವರಣ ರೂಪಿಸಿಕೊಡುತ್ತದೆ. ಇದರಿಂದ ಡಿಐಪಿಯ ಯಶಸ್ವಿ ಜಾರಿಗೆ ಮಾತ್ರವಲ್ಲದೇ ಅಂತರ್/ಬಹುಶಿಸ್ತೀಯ ಸಂಶೋಧನ ಕಾರ್ಯಪಡೆ, ಸಂಶೋಧನಾ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸಲೂ ನೆರವಾಗುತ್ತದೆ. ಅಲ್ಲದೇ ಸರ್ಕಾರಿ ಮತ್ತು ಖಾಸಗಿ ಶೈಕ್ಷಣಿಕ ಸಂಸ್ಥೆಗಳ ವಿಭಾಗಗಳು ಪರಸ್ಪರ ಹತ್ತಿರವಾಗಲೂ ಕಾರಣವಾಗುತ್ತದೆ. ಹೀಗಾಗಿಯೇ ಡಿಐಪಿಯಲ್ಲಿ ಈಗ ಲಭ್ಯವಿಲ್ಲದ ಮೌಲ್ಯಮಾಪನ ಅಗತ್ಯ ಎಂದು ನಾವು ಪ್ರತಿಪಾದಿಸುತ್ತಿರುವುದು. ಈಗ ನಾವು 2022ರ ವೇಳೆಗೆ ಭಾರತವನ್ನು ಡಿಜಿಟಲ್ ಭಾರತವಾಗಿ ಪರಿವರ್ತಿಸುವ ಉದ್ದೇಶದ ಪರಿವರ್ತನಾ ಯಾನದ ಬಗ್ಗೆ ಅಂತಿಮ ಚಿಂತನೆಯನ್ನು ನೀಡಬಯಸುತ್ತೇವೆ. ಡಿಜಿಟಲ್ ಭಾರತ ಕಾರ್ಯಕ್ರಮವನ್ನು ಆರಂಭಿಸುವ ಮೂಲಕ ಭಾರತ ಸರ್ಕಾರ ಪರಿವರ್ತನಾ ಯಾನಕ್ಕೆ ಚಾಲನೆ ನೀಡಿದೆ. ಡಿಜಿಟಲ್ ಭಾರತದ ನಿರ್ದಿಷ್ಟ ಗುರಿ ಸಾಧನೆಯ ಮಾರ್ಗ ಸುಲಭವಾಗಿ ಕಂಡರೂ ಅದು ಸರಳವಾಗಿಲ್ಲ, ಜೊತೆಗೆ ಮೇಲ್ಕಾಣಿಸಿದಂತೆ ಸಾಕಷ್ಟು ಅಡ್ಡಿಗಳೂ ಇವೆ.

ಡಿಐಪಿಯ ಮುಂದಿರುವ ಅಡ್ಡಿಗಳನ್ನು ಎದುರಿಸಲು ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್‌ಐಸಿ) ಸಂಪೂರ್ಣ ಸಿದ್ಧವಾಗಿಲ್ಲ. ಹೀಗಾಗಿ ಎನ್‌ಐಸಿಯ ಸಮಗ್ರ ರೂಪಾಂತರ ಅಗತ್ಯ. ಹೀಗಾದಾಗ ಅದು ಡಿಜಿಟಲ್ ಭಾರತದ ಕನಸನ್ನು ನನಸಾಗಿಸಬಲ್ಲುದು. ಆದರೆ ಅಂತಿಮ ಗುರಿ ತಲುಪುವವರೆಗೂ ಯಾನ ನಿಲ್ಲಬಾರದು. ಯಾನದ ಅವಧಿಯಲ್ಲಿ ನಾಗರಿಕರಿಗೆ ಕಾಲಕಾಲಕ್ಕೆ ಸೂಕ್ತ ಮಾಹಿತಿ ನೀಡಬೇಕು. ಅವರನ್ನು ತೊಡಗಿಸಿಕೊಳ್ಳಬೇಕು, ಕೌಶಲ್ಯ/ತರಬೇತಿ ನೀಡಿ ಪರಿವರ್ತಿತ ಡಿಜಿಟಲ್ ಭಾರತದ ರೂಪಾಂತರಕ್ಕೆ ಅಣಿಗೊಳಿಸಬೇಕು. ಡಿಜಿಟಲ್ ಭಾರತ ಕಾರ್ಯಕ್ರಮ ಮತ್ತು ಅಭಿವೃದ್ಧಿ, ಜಾರಿ ಮತ್ತು ಅಳವಡಿಕೆಯೂ ಸೇರಿದಂತೆ ಈ ಕಾರ್ಯಕ್ರಮದ ಎಲ್ಲ ಹಂತಗಳಲ್ಲಿ ಪರಿಗಣಿಸಬೇಕಾದ ವಿವಿಧ ಸಂಗತಿಗಳನ್ನು ಗಮನಿಸಿದಾಗ ಡಿಐಪಿಯನ್ನು ನಿಜಕ್ಕೂ ಪರಿವರ್ತನೆಯ ಪ್ರಯತ್ನ ಅನ್ನಬಹುದಾಗಿದೆ. ಎಲ್ಲರಿಗೂ ಡಿಜಿಟಲ್ ಕೌಶಲ ಹೆಚ್ಚಿಸುವ ಮತ್ತು ಶಿಕ್ಷಣ ನೀಡುವ ಅವಕಾಶ ಒದಗಿಸುವ ಮೂಲಕ ಈ ಕಾರ್ಯಕ್ರಮ ಡಿಜಿಟಲ್ ಯೋಜನೆಗೆ ಮಾತ್ರವಲ್ಲದೇ ಸಮಗ್ರ ಸಾಮಾಜಿಕ ಒಳಗೊಳ್ಳುವಿಕೆಯ ವಾತಾವರಣ ರೂಪಿಸುವಲ್ಲಿಯೂ ಮಹತ್ವದ ಪಾತ್ರ ವಹಿಸುತ್ತದೆ. ಹೀಗಾಗಿ ಇಡೀ ದೇಶಕ್ಕೆ ಡಿಐಪಿ ಕೇವಲ ಆಶಾಕಿರಣವನ್ನು ಮಾತ್ರವಲ್ಲದೇ ಅಪಾರ ಅವಕಾಶವನ್ನೂ ನೀಡುತ್ತದೆ. ಈ ದರ್ಶನ ವಾಸ್ತವವಾಗಿಸುವ ದೃಷ್ಟಿಯಿಂದ ದೇಶದ ಜನರಲ್ಲಿ ಸಾಂಸ್ಕೃತಿಕ ಮತ್ತು ಹವ್ಯಾಸದ ಪರಿವರ್ತನೆಯಾಗಬೇಕಾದ ಅಗತ್ಯವಿದೆ. ಬಹುಶಃ ಇದೇ ಡಿಐಪಿಯ ಮುಂದಿರುವ ಬೃಹತ್ ಸವಾಲು! ಹೊಸ ಆರ್ಥಿಕತೆಯಲ್ಲಿ ಯೋಜನೆ ನಿಗದಿತ ಗುರಿ ಸಾಧಿಸಿದರೆ ಭಾರತ ಭೌಗೋಳಿಕ ಸ್ಪರ್ಧೆಗೆ ಅತ್ಯಂತ ಅನಿವಾರ್ಯವಾದ ಸುಸ್ಥಿರ ಗುಣಾತ್ಮಕ ರಾಷ್ಟ್ರೀಯ ಅಭಿವೃದ್ಧಿ ಸಾಧಿಸುವ ಖಚಿತ ಸ್ಥಾನವನ್ನು ಪಡೆಯುತ್ತದೆ. ಡಿಐಪಿಯ ಮಹತ್ವಾಕಾಂಕ್ಷೆ ಹೇಳುವಂತೆ ಭಾರತದ ಭವಿಷ್ಯ ಉಜ್ವಲವಾಗಿದೆ. ❑

# ವಾರ್ತಾ ವಿಶೇಷ

ಭಾರತ ಹಾಗೂ ಅಮೆರಿಕ ನಾಗರಿಕ ಪರಮಾಣು ಒಪ್ಪಂದಕ್ಕೆ ಸಂಬಂಧಿಸಿದಂತೆ ವಾಣಿಜ್ಯ ಸಹಕಾರದತ್ತ ಮುನ್ನಡೆಯಲು ನಿರ್ಧರಿಸಿವೆ. ನವದೆಹಲಿಯಲ್ಲಿ ಇತ್ತೀಚೆಗೆ ಈ ಬಗ್ಗೆ ಮಾತುಕತೆ ನಡೆಸಿದ ಬಳಿಕ ಭಾರತದ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಹಾಗೂ ಅಮೆರಿಕ ಅಧ್ಯಕ್ಷ ಶ್ರೀ ಬರಾಕ್ ಒಬಾಮಾ ಜಂಟಿಯಾಗಿ ಈ ವಿಷಯ ಪ್ರಕಟಿಸಿದ್ದಾರೆ. ಇದೇ ವೇಳೆ ದೇಶೀಯ ರಕ್ಷಣಾ ಉದ್ದಿಮೆಯನ್ನು ಆಧುನಿಕ ತಂತ್ರಜ್ಞಾನದ ಬಲದಿಂದ ಮೇಲ್ದರ್ಜೆಗೇರಿಸಿ ರಕ್ಷಣಾ ಸಹಕಾರವನ್ನು ಹೊಸ ಸ್ತರಕ್ಕೆ ಕೊಂಡೊಯ್ಯಲು ಉಭಯ ರಾಷ್ಟ್ರಗಳು ನಿರ್ಧರಿಸಿವೆ.

* * *

ಅಮೆರಿಕದ ಬ್ಯಾಂಕುಗಳು ಭಾರತಕ್ಕೆ ರೂ. 24,000 ಕೋಟಿಗಳಷ್ಟು ಸಾಲದ ನೆರವು ನೀಡಲಿವೆ. ರೈಲ್ವೆ, ಬಂದರು, ರಸ್ತೆಜಾಲ, ಶುದ್ಧ ಇಂಧನ ಉತ್ಪಾದನಾ ಘಟಕದಂತಹ ಮೂಲಸೌಕರ್ಯ ನಿರ್ಮಾಣದಲ್ಲಿ ಭಾರತಕ್ಕೆ ಅಮೆರಿಕವು ನೆರವು ನೀಡಲಿದೆ ಎಂದು ಶ್ರೀ ಒಬಾಮಾ ತಿಳಿಸಿದ್ದಾರೆ. ಭಾರತ ಮತ್ತು ಅಮೆರಿಕ ಕಂಪೆನಿಗಳ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು ಇದರಲ್ಲಿ ರೂ. 6,000 ಕೋಟಿಗಳನ್ನು 'ಭಾರತದಲ್ಲೇ ತಯಾರಿಸಿ' ಕರೆಗೆ ಪೂರಕವಾಗಿ ಅಮೆರಿಕದಿಂದ ಸಲಕರಣೆಗಳ ರಫ್ತಿಗೆ ಮೀಸಲಿಡಲಾಗುವುದು. ಇನ್ನು ರೂ. 6,000 ಕೋಟಿಗಳನ್ನು ಸಣ್ಣ, ಮಧ್ಯಮ ಕೈಗಾರಿಕೆಗಳಿಗಾಗಿ ಹಾಗೂ ಉಳಿದ 12,000 ಕೋಟಿಗಳನ್ನು ಶುದ್ಧ ಇಂಧನ ಯೋಜನೆಗಳಿಗಾಗಿ ನಿಗದಿ ಮಾಡಲಾಗುವುದು ಎಂದರು.

ಅಮೆರಿಕವು ತನ್ನ ಒಟ್ಟು ರಫ್ತಿನಲ್ಲಿ ಶೇ. 1 ರಷ್ಟನ್ನು ಮಾತ್ರ ಭಾರತಕ್ಕೆ ರಫ್ತು ಮಾಡುತ್ತಿದ್ದರೆ, ತನ್ನ ಒಟ್ಟು ಆಮದಿನಲ್ಲಿ ಶೇ. 2 ರಷ್ಟನ್ನು ಮಾತ್ರ ಇಲ್ಲಿಂದ ತರಿಸಿಕೊಳ್ಳುತ್ತಿದೆ. ಇದರಲ್ಲಿ ಸಮತೋಲನ ಸಾಧಿಸಲು ಸಾಕಷ್ಟು ಅವಕಾಶಗಳಿವೆ. ಎರಡೂ ರಾಷ್ಟ್ರಗಳು ವ್ಯಾಪಾರ ವಹಿವಾಟನ್ನು ಸುಲಭಗೊಳಿಸಲು ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯವಿದೆ ಎಂದು ಶ್ರೀ ಒಬಾಮಾ ಹೇಳಿದರು. ವ್ಯಾಪಾರೋದ್ಯಮ ನಿಯಂತ್ರಣ ಮತ್ತು ತೆರಿಗೆ ನೀತಿಯನ್ನು 'ಸ್ಥಿರತೆ' ಹಾಗೂ ಇನ್ನಷ್ಟು 'ಸರಳತೆ' ಅಳವಡಿಸಿಕೊಳ್ಳಬೇಕು ಎಂಬ ಶ್ರೀ ಒಬಾಮಾ ಸಲಹೆಗೆ ಸ್ಪಂದಿಸಿದ ಶ್ರೀ ಮೋದಿಯವರು ಮುಕ್ತ ವಾಣಿಜ್ಯ ವಹಿವಾಟು ವಾತಾವರಣ ನಿರ್ವಹಿಸುವ ಭರವಸೆ ನೀಡಿದರು.

* * *

66ನೇ ಗಣರಾಜ್ಯೋತ್ಸವ ಅಂಗವಾಗಿ ಕೇಂದ್ರ ಸರ್ಕಾರ ಒಟ್ಟು 104 ಗಣ್ಯರಿಗೆ ಪದ್ಮ ಪ್ರಶಸ್ತಿಗಳನ್ನು ಪ್ರಕಟಿಸಿದೆ.

ಕರ್ನಾಟಕದವರಾದ ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆ (ಪದ್ಮ ವಿಭೂಷಣ), ಸಿದ್ಧಗಂಗಾಮಠದ ಶ್ರೀ ಶಿವಕುಮಾರ ಸ್ವಾಮೀಜಿ ಮತ್ತು ವಿಜ್ಞಾನಿ ಡಾ. ಖರಗ್ ಸಿಂಗ್‌ವಾಲಿಯಾ (ಪದ್ಮ ಭೂಷಣ), ವಿಜ್ಞಾನಿ ಶ್ರೀ ಎಸ್. ಅರುಣನ್, ಇನ್ಫೋಸಿಸ್ ಸಂಸ್ಥಾಪಕರಲ್ಲಿ ಒಬ್ಬರಾದ ಶ್ರೀ ಮೋಹನ್ ದಾಸ್ ಪೈ (ಪದ್ಮಶ್ರೀ) ಅವರಿಗೆ ಪ್ರಶಸ್ತಿ ಗೌರವ ಲಭಿಸಿದೆ. ❑


## Subscription Coupon

**[For New membership /Renewal/Change of Address]**

I want to subscribe to :

Yojana / Kurukshetra / Ajkal / : 1 yr. Rs.100/-; 2 yrs, Rs.180/- ; 3 yrs, Rs.250/-

Bal Bharati : 1 yr. Rs.80/-; 2 yrs, Rs.150/- ; 3 yrs, Rs.200/-

**(Circle the magazine of your choice and the period of subscription)**

DD/PO/MO No.______________________________ date ______________

Name (in block letters) : ______________________________

Subscriber's profile : Student / Academician / Institution / Others

Address : ______________________________

______________________________

PIN : ______________________

The amount may kindly be sent in the form of D.D. It should be drawn in favour of ADG (I/C), Publications Division, Min. of I & B, GOI and payable at New Delhi. The D.D. along with duly filled cupon may kindly be sent to The Business Manager (Journals), Publications Division, East Block-IV, Level-7, R.K.Puram, New Delhi – 110066. Ph : 011-26100207, 26105590

Please allow us 4 to 6 weeks for the dispatch of the first issue.

P.S. : For Renewal / change in address, please quote your subscription number